www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಕಲಿಕೆಯ ಚಟುವಟಿಕೆಗಳಲ್ಲಿ ಒಂದಾದ ಕಥೆ ಓದಿ ಹೇಳಿದರೆ ಮಕ್ಕಳು ಅದನ್ನು ತಮಾಷೆಯಾಗಿ ಅನುಭವಿಸಿ, ಕಲಿಯುವುದರಲ್ಲೂ ಆಸಕ್ತಿ ತೋರುತ್ತಾರೆ.



ಪ್ರಬಲ ನಾಯಕತ್ವಕ್ಕೆ ಮನ್ನಣೆ: ವಿಜಯನ್‌ಗೆ ವಿಜಯಮಾಲೆ 6
ಆಕ್ಸಿಜನ್ ಕೊರತೆ: ದೆಹಲಿಯ ಎರಡು ಆಸ್ಪತ್ರೆಗಳ ಸಿಬ್ಬಂದಿಯ ಮೊರೆ
ಚುನಾವಣಾ ಪರಿಣತ ಪ್ರಶಾಂತ್ ಕಿಶೋರ್ ನೇಪಥ್ಯಕ್ಕೆ 9
ಜೀವಗಳು ಅಪಾಯದಲ್ಲಿವೆ, ತಕ್ಷಣ ಸ್ಪಂದಿಸಿ 11

ವಿಧಾನಸಭಾ ಚುನಾವಣೆ ಫಲಿತಾಂಶ • ಅಸ್ಸಾಂನಲ್ಲಿ ಅಧಿಕಾರ ಉಳಿಸಿಕೊಂಡ ಬಿಜೆಪಿ • ಎನ್‌.ಆರ್‌. ಕಾಂಗ್ರೆಸ್‌ಗೆ ಪುದುಚೇರಿ

ಸ್ಟಾಲಿನ್, ವಿಜಯನ್, ದೀದಿಗೆ ಗದ್ದುಗೆ

ಜನತಂತ್ರದ ಹಬ್ಬ 2021

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಣಾಂಗಣವೇ ಆಗಿದ್ದ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣಾ ಕಣಕ್ಕೆ ‘ಖೇಲೋ ಹೋಬೆ’ (ಆಟ ಶುರು) ಎನ್ನುತ್ತಾ ನುಗ್ಗಿದ್ದ ಮುಖ್ಯಮಂತ್ರಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಸತತ ಮೂರನೇ ಅವಧಿಗೆ ಅಧಿಕಾರ ಉಳಿಸಿಕೊಂಡಿದ್ದಾರೆ.

ಅಸ್ಸಾಂ ಮತ್ತು ಕೇರಳದಲ್ಲಿ ಕ್ರಮವಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಸಿಪಿಎಂ ನೇತೃತ್ವದ ಎಲ್‌ಡಿಎಫ್ ಸತತ ಎರಡನೇ ಅವಧಿಗೆ ಅಧಿಕಾರ ಉಳಿಸಿಕೊಂಡಿವೆ. ನಾಲ್ಕು ದಶಕಗಳ ಬಳಿಕ ಕೇರಳದಲ್ಲಿ ಎರಡನೇ ಅವಧಿಗೆ ಅಧಿಕಾರಕ್ಕೆ ಬರುವ ಮೂಲಕ ಎಲ್‌ಡಿಎಫ್ ಇತಿಹಾಸ ಸೃಷ್ಟಿಸಿದೆ. ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ, ದಶಕದ ಬಳಿಕ ತಮಿಳುನಾಡಿನಲ್ಲಿ ಎಐಎಡಿಎಂಕೆಯಿಂದ ಅಧಿಕಾರ ಕಸಿದುಕೊಂಡಿದೆ.

ಇಡೀ ದೇಶದ ಗಮನ ಸೆಳೆದು, ಕುತೂಹಲ ಮೂಡಿಸಿದ್ದ ಈ ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ವಿಧಾನಸಭೆ ಚುನಾವಣೆಯ ಫಲಿತಾಂಶವು ರಾಷ್ಟ್ರ ರಾಜಕಾರಣದಲ್ಲಿ ಪರಿಣಾಮ ಬೀರುವ ಸಾಧ್ಯತೆ ದಟ್ಟವಾಗಿದೆ. ‘ಪಶ್ಚಿಮ ಬಂಗಾಳದ ಗೆಲುವಿನ ಬಳಿಕ ದೆಹಲಿಗೆ ಹೋಗುವೆ’ ಎಂದು ಚುನಾವಣಾ ಪ್ರಚಾರ ಸಂದರ್ಭದಲ್ಲಿಯೇ ಮಮತಾ ಅವರು ಹೇಳಿದ್ದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಜೋಡಿಯನ್ನು ಕಟುವಾಗಿ ವಿರೋಧಿಸುವ ನಾಯಕರಾದ ಮಮತಾ ಬ್ಯಾನರ್ಜಿ, ಸ್ಟಾಲಿನ್ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪರವಾಗಿ ಜನಾದೇಶ ಬಂದಿದೆ. ಸಂಪನ್ಮೂಲ, ತಳಮಟ್ಟದಲ್ಲಿ ಕಾರ್ಯಕರ್ತರ ಪಡೆ, ಆರ್‌ಎಸ್‌ಎಸ್‌ನ ಸಂಘಟನಾ ಬಲದೊಂದಿಗೆ

ಪಶ್ಚಿಮ ಬಂಗಾಳ



* ಎರಡು ಕ್ಷೇತ್ರಗಳ ಮತಎಣಿಕೆ ತಡೆಹಿಡಿಯಲಾಗಿದೆ

ತಮಿಳುನಾಡು



ಸ್ಥಾನಗಳು: ಗೆಲುವು ಅಥವಾ ಮುನ್ನಡೆ

ಕೇರಳ



* ಎಲ್ಲಾ ರಾಜ್ಯಗಳದ್ದು ರಾತ್ರಿ 1.10ರವರೆಗಿನ ಮಾಹಿತಿ

ಅಸ್ಸಾಂ



ಪುದುಚೇರಿ



ಕೋವಿಡ್ ಮಾರ್ಗಸೂಚಿ ಅನ್ವಯ ವಿಜಯೋತ್ಸವಕ್ಕೆ ನಿಷೇಧ ಹೇರಿದ್ದರೂ ಪಶ್ಚಿಮಬಂಗಾಳದ ದಕ್ಷಿಣ ದಿನಜ್‌ಪುರದಲ್ಲಿ ಟಿಎಂಸಿ ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಚತುರವಾಗಿ ಚುನಾವಣೆ ಎದುರಿಸುವ ಬಿಜೆಪಿ, ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಇರುವಲ್ಲಿ ಹೆಚ್ಚು ಪರಿಣಾಮಕಾರಿ ಅಲ್ಲ ಎಂಬುದನ್ನು ಈ ಫಲಿತಾಂಶವು ಮತ್ತೊಮ್ಮೆ ಸಾಬೀತು ಮಾಡಿದೆ.

ಪಶ್ಚಿಮ ಬಂಗಾಳ, ಕೇರಳ ಮತ್ತು ತಮಿಳುನಾಡಿನಲ್ಲಿ ಮೋದಿ, ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಂತಹ ಉನ್ನತ ನಾಯಕರು ಹತ್ತಾರು ರ್‍ಯಾಲಿಗಳನ್ನು ನಡೆಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ 200ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರಕ್ಕೆ ಬರುವುದಾಗಿ ಈ ನಾಯಕರು ಹೇಳಿದ್ದರು. ಟಿಎಂಸಿಯ ಹಲವು ಮುಖಂಡರು ಬಿಜೆಪಿ ಸೇರಿದ್ದು ಈ ವಿಶ್ವಾಸಕ್ಕೆ ಕಾರಣವಾಗಿತ್ತು. ಇಲ್ಲಿ ಅಧಿಕಾರಕ್ಕೆ ಏರಲು ಸಾಧ್ಯವಾಗದೇ ಇದ್ದರೂ ಪ್ರಬಲ ಪ್ರತಿಪಕ್ಷವಾಗಿ ಬಿಜೆಪಿ ಹೊಮ್ಮಿದೆ. ಕಳೆದ ಚುನಾವಣೆಯಲ್ಲಿ 3 ಕ್ಷೇತ್ರಗಳಲ್ಲಿ ಮಾತ್ರ ಗೆದ್ದಿದ್ದ ಬಿಜೆಪಿ ಈ ಮಟ್ಟಕ್ಕೆ ಏರಿದ್ದು ಸಣ್ಣ ಸಾಧನೆ ಏನಲ್ಲ.

ಆದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ 120ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ ಮುನ್ನಡೆ ಇತ್ತು. ಹಾಗಾಗಿ, ಈ ಬಾರಿಯ ಫಲಿತಾಂಶವನ್ನು ಬಿಜೆಪಿಯ ಹಿನ್ನಡೆ ಎಂದೂ ಪರಿಗಣಿಸಲು ಸಾಧ್ಯವಿದೆ.

ಪಶ್ಚಿಮ ಬಂಗಾಳದಲ್ಲಿ ಮಾತ್ರವಲ್ಲ, ತಮಿಳುನಾಡು ಬಿಟ್ಟು ಚುನಾವಣೆ ನಡೆದ ಎಲ್ಲೆಡೆಯೂ ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ. ರಾಷ್ಟ್ರ ಮಟ್ಟದಲ್ಲಿ ಮಾತ್ರವಲ್ಲದೆ, ರಾಜ್ಯ ಮಟ್ಟದ ರಾಜಕಾರಣದಲ್ಲಿಯೂ ಕಾಂಗ್ರೆಸ್ ಪಕ್ಷವು ಅಪ್ರಸ್ತುತವಾಗುತ್ತಿದೆಯೇ ಎಂಬ ಪ್ರಶ್ನೆಯನ್ನು ಈ ಫಲಿತಾಂಶವು ಮುಂದಿಟ್ಟಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೇರಳದ ವಯನಾಡ್‌ನ ಸಂಸದ. ಆ ರಾಜ್ಯದಲ್ಲಿ ಅವರು ವ್ಯಾಪಕವಾಗಿ ಪ್ರಚಾರವನ್ನೂ ಮಾಡಿದ್ದಾರೆ. ಎಲ್‌ಡಿಎಫ್, ಯುಡಿಎಫ್ ಮೈತ್ರಿಕೂಟಗಳ ಪರ್ಯಾಯ ಆಡಳಿತವು ನಾಲ್ಕು ದಶಕಗಳಿಂದ ಚಾಲ್ತಿಯಲ್ಲಿತ್ತು. ಈ ಬಾರಿ ಅದನ್ನು ಪುನರಾವರ್ತಿಸಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ. ಈ ಸೋಲಿನ ಹೊಣೆಯನ್ನು ರಾಹುಲ್ ಗಾಂಧಿ ಅವರು ಹೊರಲೇಬೇಕಾಗುತ್ತದೆ.

ಕಾಂಗ್ರೆಸ್ ಅಪ್ರಸ್ತುತಗೊಂಡರೆ ಬಿಜೆಪಿಗೆ ಪರ್ಯಾಯವಾಗಿ ಪ್ರಾದೇಶಿಕ ಪಕ್ಷಗಳೇ ಎದ್ದು ನಿಲ್ಲಲಿವೆ ಎಂಬ ಅಂಶವನ್ನೂ ಈ ಬಾರಿಯ ಫಲಿತಾಂಶವು ತೆರೆದಿಟ್ಟಿದೆ. ಮೋದಿ–ಶಾ ಜೋಡಿಯ ವಿರುದ್ಧ ಆಕ್ರೋಶಗೊಂಡಿರುವ ಮಮತಾ ಅವರು, ಬಿಜೆಪಿ ವಿರುದ್ಧ ಇತರ ಪಕ್ಷಗಳು ಒಂದಾಗಬೇಕು ಎಂದು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕರೆಕೊಟ್ಟಿದ್ದರು. ಶಿವಸೇನಾ, ಸಮಾಜವಾದಿ ಪಕ್ಷ, ಎಎಪಿ, ಡಿಎಂಕೆ ಮುಂತಾದ ಪ್ರಭಾವಿ ಪಕ್ಷಗಳು ಮಮತಾ ಅವರ ಕರೆಗೆ ಸ್ಪಂದಿಸಿದ್ದವು.

ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಬಿಜೆಪಿಯೇತರ ಪಕ್ಷಗಳು ಮಮತಾ ನೇತೃತ್ವದಲ್ಲಿ ಒಟ್ಟಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಮಮತಾ ಅವರೂ ತಮ್ಮ ರಾಷ್ಟ್ರಮಟ್ಟದ ಮಹತ್ವಾಕಾಂಕ್ಷೆಯನ್ನು ಅಡಗಿಸಿಟ್ಟವರಲ್ಲ. ಈ ಫಲಿತಾಂಶ ಮತ್ತು ಒಟ್ಟು ರಾಜಕೀಯ ಸ್ಥಿತಿಯು ಮಮತಾ ಅವರ ಮಹತ್ವಾಕಾಂಕ್ಷೆಯನ್ನು ನೀರೆರೆದು ಪೋಷಿಸಲಿದೆ.

ಇನ್ನಷ್ಟು ಸುದ್ದಿಗಳು 6, 7,9

> **ಕೇರಳ, ಬಂಗಾಳದಲ್ಲಿ ಬಿಜೆಪಿಯು ಏನೂ ಇಲ್ಲದ ಸ್ಥಿತಿಯಿಂದ ಗಮನಾರ್ಹ ಸ್ಥಿತಿಗೆ ತಲುಪಿದೆ. ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆ ಅಭಿನಂದನೆ.**
> **ನರೇಂದ್ರ ಮೋದಿ**
> ಪ್ರಧಾನಿ

> **ಐದು ವಿಧಾನಸಭೆಗಳಲ್ಲಿ ಪಕ್ಷ ಕಳಪೆ ಪ್ರದರ್ಶನ ನೀಡಿದ್ದು, ಜನಾದೇಶಕ್ಕೆ ತಲೆಬಾಗುತ್ತೇವೆ. ನಮ್ಮ ಸಿದ್ಧಾಂತ ಮತ್ತು ಮೌಲ್ಯಗಳಿಗಾಗಿ ಹೋರಾಟ ಮುಂದುವರಿಸುತ್ತೇವೆ**
> **ರಾಹುಲ್ ಗಾಂಧಿ**
> ಕಾಂಗ್ರೆಸ್ ನಾಯಕ

> **ರಾಜ್ಯದಲ್ಲಿ ವ್ಯಾಪಕವಾಗಿರುವ ಕೋವಿಡ್ ಸಾಂಕ್ರಾಮಿಕದ ವಿರುದ್ಧ ಹೋರಾಡುವುದಕ್ಕೆ ಆದ್ಯತೆ. ಇದು ಬಂಗಾಳದ ವಿಜಯ. ಬಂಗಾಳದಲ್ಲಿ ಮಾತ್ರ ಇದು ಸಾಧ್ಯ**
> **ಮಮತಾ ಬ್ಯಾನರ್ಜಿ,** ಟಿಎಂಸಿ ಮುಖ್ಯಸ್ಥೆ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ತಿರುಗುಬಾಣವಾದ ಕೇರಳ ಪ್ರಯೋಗ

ಕೇರಳದಲ್ಲಿ ಗೆಲ್ಲಲೇಬೇಕು ಎಂಬ ಹಂಬಲದಲ್ಲಿ ವಿವಿಧ ಕ್ಷೇತ್ರದ ಗಣ್ಯರನ್ನು ಪಕ್ಷಕ್ಕೆ ಸೇರಿಸಿಕೊಂಡು ಬಿಜೆಪಿ ಭಾರಿ ಪ್ರಚಾರವನ್ನೂ ನಡೆಸಿತ್ತು. ಮೆಟ್ರೊಮ್ಯಾನ್ ಎಂದೇ ಖ್ಯಾತರಾಗಿರುವ ತಂತ್ರಜ್ಞ ಇ. ಶ್ರೀಧರನ್ ಅವರು ಬಿಜೆಪಿ ಸೇರಿದ್ದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. 88 ವರ್ಷದ ಅವರನ್ನು ಪಾಲಕ್ಕಾಡ್ ಕ್ಷೇತ್ರದಿಂದ ಪಕ್ಷವು ಕಣಕ್ಕೆ ಇಳಿಸಿತ್ತು. ಅವರು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಅನಧಿಕೃತವಾಗಿ ಹೇಳಲಾಗಿತ್ತು. ಆದರೆ, ಅವರು ಪರಾಜಿತರಾಗಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡೂ ಕಡೆ ಸೋತಿದ್ದಾರೆ. ಜನಪ್ರಿಯ ನಟ ಮತ್ತು ರಾಜ್ಯಸಭೆ ಸದಸ್ಯ ಸುರೇಶ್ ಗೋಪಿ ಅವರು ತ್ರಿಶ್ಶೂರು ಕ್ಷೇತ್ರದಲ್ಲಿ ಸೋತಿದ್ದಾರೆ. ಕಳೆದ ಬಾರಿ ಪಕ್ಷ ಗೆದ್ದಿದ್ದ ನೇಮಮ್ ಕ್ಷೇತ್ರದಲ್ಲಿ ಈ ಬಾರಿ ಕುಮ್ಮನಂ ರಾಜಶೇಖರನ್ ಸೋತಿದ್ದಾರೆ. ಇದ್ದ ಒಂದು ಕ್ಷೇತ್ರವನ್ನೂ ಬಿಜೆಪಿ ಈ ಬಾರಿ ಕಳೆದುಕೊಂಡಿದೆ.

‘ಬಂಗಾಳದ ಮಗಳಿಗೆ’ ಮನ್ನಣೆ

ಮೋದಿ ಮತ್ತು ದೀದಿ (ಮಮತಾ) ನಡುವಣ ಹಣಾಹಣಿ ಎಂದು ಚುನಾವಣೆಯನ್ನು ಬಿಂಬಿಸಿದ್ದು ಬಿಜೆಪಿ. ಪಶ್ಚಿಮ ಬಂಗಾಳದವರು ಮತ್ತು ಹೊರಗಿನವರ ನಡುವಣ ಸ್ಪರ್ಧೆ ಎಂದು ಮಮತಾ ಬಿಂಬಿಸಿದರು. ಬಿಜೆಪಿಗೆ ಸ್ಥಳೀಯವಾಗಿ ಜನಪ್ರಿಯ ನಾಯಕ ಇರಲಿಲ್ಲ. ಪ್ರಚಾರದ ಮುನ್ನೆಲೆಯಲ್ಲಿ ಮೋದಿ–ಶಾ ಅವರೇ ಇದ್ದರು. ಹಾಗಾಗಿ, ಹೊರಗಿನವರು ಮತ್ತು ಸ್ಥಳೀಯರು ಎಂಬುದು ಜನರ ಮನಸ್ಸಿಗೆ ಇಳಿಯಿತು. ‘ಬಂಗಾಳದ ಮಗಳು’ ಎಂದು ಮಮತಾ ತಮ್ಮನ್ನು ಬಿಂಬಿಸಿಕೊಂಡರು. ಮಮತಾ ಅವರನ್ನು ಬಿಜೆಪಿಯ ನಾಯಕರು ನಿರಂತರವಾಗಿ ಲೇವಡಿ ಮಾಡಿದ್ದು ಕೂಡ ಅವರ ಪರವಾಗಿ ಕೆಲಸ ಮಾಡಿತು ಎಂದು ವಿಶ್ಲೇಷಿಸಲಾಗುತ್ತಿದೆ.

ನಂದಿಗ್ರಾಮದಲ್ಲಿ ಸೋತ ಮಮತಾ

ಪಕ್ಷಕ್ಕೆ ಭಾರಿ ಗೆಲುವು ತಂದುಕೊಟ್ಟ ಮಮತಾ ಬ್ಯಾನರ್ಜಿ ಅವರು, ತೀವ್ರ ಜಿದ್ದಾಜಿದ್ದಿಯ ನಂದಿಗ್ರಾಮದಲ್ಲಿ ಸುವೇಂದು ಅಧಿಕಾರಿ ವಿರುದ್ಧ ಸೋತಿದ್ದಾರೆ. ಚುನಾವಣೆಯ ಹೊಸ್ತಿಲಲ್ಲಿ ಬಿಜೆಪಿ ಸೇರಿದ್ದ ತಮ್ಮ ಒಂದು ಕಾಲದ ಆಪ್ತ ಸುವೇಂದು ಅವರನ್ನು ಸೋಲಿಸುವ ಪಣ ತೊಟ್ಟು ಅವರು ಸ್ಪರ್ಧಿಸಿದ್ದರು. ಮತ ಎಣಿಕೆಯ ಉದ್ದಕ್ಕೂ ಗೆಲುವು ಇಬ್ಬರ ನಡುವೆ ಕಣ್ಣುಮುಚ್ಚಾಲೆ ಆಡುತ್ತಲೇ ಇತ್ತು. ಕೊನೆಗೂ ಸುವೇಂದು ಅವರು 1,956 ಮತಗಳ ಅಂತರದಿಂದ ಗೆದ್ದರು. ಈ ಗೆಲುವನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗುವುದಾಗಿ ಮಮತಾ ಹೇಳಿದ್ದಾರೆ.

ಅಸ್ತಿತ್ವ ಉಳಿಸಿಕೊಂಡ ಎಐಎಡಿಎಂಕೆ

ತಮಿಳುನಾಡು ರಾಜಕಾರಣದ ಇಬ್ಬರು ಪ್ರಭಾವಿ ನಾಯಕರಾದ ಎಂ. ಕರುಣಾನಿಧಿ ಮತ್ತು ಜೆ.ಜಯಲಲಿತಾ ಅವರು ನಿಧನರಾದ ನಂತರ ನಡೆದ ಮೊದಲ ಚುನಾವಣೆ ಇದು. ಜಯಲಲಿತಾ ಅವರ ಅನುಪಸ್ಥಿತಿಯಲ್ಲಿಯೂ ಪ್ರಬಲ ಪ್ರತಿಪಕ್ಷವಾಗಿ ಕಾರ್ಯನಿರ್ವಹಿಸುವಷ್ಟು ಕ್ಷೇತ್ರಗಳಲ್ಲಿ ಗೆಲ್ಲಲು ಎಐಎಡಿಎಂಕೆಗೆ ಸಾಧ್ಯವಾಗಿದೆ. ದಶಕದ ಬಳಿಕ ರಾಜ್ಯದಲ್ಲಿ ಭಾರಿ ಗೆಲುವು ಸಾಧ್ಯವಾಗಬಹುದು ಎಂಬ ಡಿಎಂಕೆಯ ನಿರೀಕ್ಷೆ ಕೈಗೂಡಿಲ್ಲ.

ಎಸ್ಸೆಸ್ಸೆಲ್ಸಿ- ಪಿಯುಸಿ

ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಕೋವಿಡ್: ದೇಶದಲ್ಲಿ 3.50 ಲಕ್ಷ ಪ್ರಕರಣ

ನವದೆಹಲಿ: ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ (ಮಧ್ಯರಾತ್ರಿ 12ರವರೆಗೆ) ಕೋವಿಡ್ ದೃಢಪಟ್ಟವರ ಸಂಖ್ಯೆ 3,50,598 ಆಗಿದ್ದು, 3,071 ಮಂದಿ ಮೃತಪಟ್ಟಿದ್ದಾರೆ.

ಇದೇ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ 47,22,410, ಕೇರಳದಲ್ಲಿ 16,38,779 ಪ್ರಕರಣಗಳು ವರದಿಯಾಗಿವೆ. ದೇಶದಲ್ಲಿ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 34,11,350 ಲಕ್ಷದಷ್ಟಿದೆ. ಒಟ್ಟು ಪ್ರಕರಣಗಳ ಸಂಖ್ಯೆ 1,99,00,371 ಆಗಿದೆ.

ವಾಹನ ಮಾಲೀಕತ್ವ ವರ್ಗಾವಣೆ: ನಿಯಮ ಬದಲು

ನವದೆಹಲಿ (ಪಿಟಿಐ): ವಾಹನ ನೋಂದಣಿ ಪ್ರಮಾಣಪತ್ರದಲ್ಲಿ ಒಬ್ಬರ ನಾಮನಿರ್ದೇಶನ (ನಾಮಿನಿ) ಮಾಡಿ ಹೆಸರು ಸೇರ್ಪಡೆಗೆ ವಾಹನ ಮಾಲೀಕಗೆ ಅವಕಾಶ ನೀಡುವುದು ಸೇರಿದಂತೆ ಕೇಂದ್ರ ಮೋಟಾರು ವಾಹನಗಳ ಕಾಯ್ದೆಯ ನಿಯಮಗಳಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ.

ವಾಹನದ ಮಾಲೀಕರು ಸಾವಿಗೀಡಾದ ಸಂದರ್ಭದಲ್ಲಿ ಆ ವಾಹನವನ್ನು ನಾಮನಿರ್ದೇಶಿತ ವ್ಯಕ್ತಿಯ ಹೆಸರಿನಲ್ಲಿ ನೋಂದಣಿ ಮಾಡಬಹುದು ಇಲ್ಲವೇ ಆ ವ್ಯಕ್ತಿಗೆ ವಾಹನದ ಮಾಲೀಕತ್ವದ ವರ್ಗಾವಣೆಗೆ ನಿಯಮದಲ್ಲಿನ ಬದಲಾವಣೆ ಅವಕಾಶ ಕಲ್ಪಿಸಲಿದೆ.ಈ ಕುರಿತು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಅಧಿಸೂಚನೆಯನ್ನು ಪ್ರಕಟಿಸಿದೆ.

ವಾಹನ ನೋಂದಣಿ ಸಮಯದಲ್ಲಿ ನಾಮಿನಿಯ ಹೆಸರನ್ನು ಪ್ರಮಾಣಪತ್ರದಲ್ಲಿ ಸೇರಿಸಬಹುದು. ಇಲ್ಲವೇ ವಾಹನ ನೋಂದಣಿಯ ಬಳಿಕ ಆನ್‌ಲೈನ್ ಮೂಲಕವೂ ಸೇರ್ಪಡೆ ಮಾಡಬಹುದಾಗಿದೆ.

ಉಪ ಚುನಾವಣೆ: ಬಸವಕಲ್ಯಾಣ ಬಿಜೆಪಿ ಪಾಲು • ಮಸ್ಕಿಯಲ್ಲಿ ಪ್ರಾಬಲ್ಯ ಮೆರೆದ ಕಾಂಗ್ರೆಸ್

ಬೆಳಗಾವಿ: ಬಿಜೆಪಿಗೆ ಪ್ರಯಾಸದ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರ ಹಾಗೂ ಬಸವಕಲ್ಯಾಣ ವಿಧಾನ ಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಆಡಳಿತರೂಢ ಬಿಜೆಪಿ ಜಯಗಳಿಸಿದೆ. ಬೆಳಗಾವಿಯಲ್ಲಿ ಬಿಜೆಪಿ ಅತ್ಯಲ್ಪ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರೆ, ಬಸವಕಲ್ಯಾಣ ಕ್ಷೇತ್ರವನ್ನು ಕಾಂಗ್ರೆಸ್‌ನಿಂದ ಕಸಿದುಕೊಂಡಿದೆ. ಆದರೆ ಮಸ್ಕಿಯಲ್ಲಿ ಕಾಂಗ್ರೆಸ್ ಭಾರಿ ಅಂತರದಲ್ಲಿ ಜಯಗಳಿಸಿದೆ.

ಕೇಂದ್ರ ಸಚಿವರಾಗಿದ್ದ ಸುರೇಶ ಅಂಗಡಿ ಅವರ ನಿಧನದಿಂದ ತೆರವಾಗಿದ್ದ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಅವರ ಪತ್ನಿ ಮಂಗಲಾ ಅಂಗಡಿ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ವಿರುದ್ಧ ಕೇವಲ 5,240 ಮತಗಳ ಅಂತರದಿಂದ ಅತ್ಯಂತ ಪ್ರಯಾಸದ ಗೆಲುವು ಸಾಧಿಸಿದ್ದಾರೆ.

ಭಾನುವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ನಡೆದ ಮತ ಎಣಿಕೆಯಲ್ಲಿ ಹಾವು– ಏಣಿ ಆಟ ನಿರಂತರ ಮುಂದುವರಿದಿತ್ತು. ಇಬ್ಬರಿಗೂ ದೊಡ್ಡ ಮೊತ್ತದ ಮತಗಳ ಮುನ್ನಡೆ ಕೊನೆಯವರೆಗೂ ಲಭಿಸಲೇ ಇಲ್ಲ. ಕೊನೆಯ ಕೆಲವು ಸುತ್ತುಗಳಲ್ಲಿ ದೊರಕಿದ ಅಲ್ಪ ಮತಗಳ ಮುನ್ನಡೆಯೇ ಮಂಗಲಾ ಅವರನ್ನು ಗೆಲುವಿನ ದಡ ಮುಟ್ಟಿಸಿತು.

ಮಂಗಲಾ ಅಂಗಡಿ

ಶರಣು ಸಲಗರ

ಬಸನಗೌಡ ತುರ್ವಿಹಾಳ

ಕಳೆದ ಲೋಕಸಭಾ ಚುನಾವಣೆಯಲ್ಲಿ ಸುರೇಶ ಅಂಗಡಿ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ 3.90 ಲಕ್ಷ ಮತಗಳ ಅಂತರದ ಗೆಲುವು ಪಡೆದಿದ್ದರು. ಬಹುತೇಕ ಎಲ್ಲ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲೂ ಕಾಂಗ್ರೆಸ್‌ನ ಮತ ಗಳಿಕೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ.

ಶಿವಸೇನೆ ಮತ್ತು ಮಹಾರಾಷ್ಟ್ರ ಏಕೀಕರಣ ಸಮಿತಿಗಳ ಬೆಂಬಲಿತ ಪಕ್ಷೇತರ ಅಭ್ಯರ್ಥಿಯಾಗಿದ್ದ ಶುಭಂ ವಿಕ್ರಾಂತ್ ಶೆಳ್ಕೆ 1.17 ಲಕ್ಷಗಳ ಮತ ಗಳಿಸಿದ್ದಾರೆ. ಇದು ಬಿಜೆಪಿಯ ಮತ ಗಳಿಕೆ ಕುಸಿಯಲು ಪ್ರಮುಖ ಕಾರಣ.

> **ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಗಳು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಉತ್ತಮ ಕೆಲಸಗಳನ್ನು ಜನರು ಬೆಂಬಲಿಸಿದ್ದರಿಂದ ಗೆಲುವು ದೊರಕಿದೆ**
> **ನಳಿನ್ ಕುಮಾರ್ ಕಟೀಲ್**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಶಿವಸೇನೆಯ ಪ್ರಮುಖ ಸಂಜಯ್ ರಾವುತ್ ಸೇರಿದಂತೆ ಹಲವರು ಬೆಳಗಾವಿಯಲ್ಲಿ ಪ್ರಚಾರ ನಡೆಸಿ, ಬಿಜೆಪಿಯ ಸಾಂಪ್ರದಾಯಿಕ ಮತಗಳನ್ನು ಚದುರಿಸಲು ಪ್ರಯತ್ನಿಸಿದ್ದರು. ಅದು ಒಂದು ಹಂತಕ್ಕೆ ಯಶ ಕಂಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮಂಗಲಾ ಅಂಗಡಿ 4,40,327 ಮತಗಳನ್ನು ಪಡೆದರೆ, ಸತೀಶ ಜಾರಕಿಹೊಳಿ 4,35,087 ಪಡೆದರು. 5240 ಮತಗಳ ಅಂತರದಿಂದ ಗೆಲವು ಸಾಧಿಸಿದರು.

ಮಸ್ಕಿಯಲ್ಲಿ ಕೈ ಜಯಭೇರಿ: ಮಸ್ಕಿ (ಪರಿಶಿಷ್ಟ ಪಂಗಡಗಳ ಮೀಸಲು) ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ವಿರುದ್ಧ 30,606 ಮತಗಳ ಭಾರಿ ಅಂತರದ ಗೆಲುವು ಸಾಧಿಸಿದ್ದಾರೆ. 2018ರ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದ ಪ್ರತಾಪಗೌಡ, ಆಗ ಬಿಜೆಪಿ ಅಭ್ಯರ್ಥಿಯಾಗಿದ್ದ ಬಸನಗೌಡ ಎದುರು ಈಗ ಸೋಲು ಕಂಡಿದ್ದಾರೆ. ಪ್ರತಾಪಗೌಡ ಪಾಟೀಲ 55,731 ಮತಗಳನ್ನು, ತುರುವಿಹಾಳ 86,337 ಮತಗಳನ್ನು ಪಡೆದಿದ್ದಾರೆ.

> **ಬೆಳಗಾವಿಯಲ್ಲಿ ಕಾಂಗ್ರೆಸ್ ಪಕ್ಷ ಸೋಲಿನಲ್ಲಿ ಗೆಲುವು ಕಂಡಿದೆ. ಈ ಉಪ ಚುನಾವಣೆಯ ಫಲಿತಾಂಶವು ಜನರು ಬಿಜೆಪಿಯ ವಿರುದ್ಧ ಮತ ಚಲಾಯಿಸಿರುವುದಕ್ಕೆ ಸಾಕ್ಷಿ**
> **ಡಿ.ಕೆ. ಶಿವಕುಮಾರ್**
> ಕೆಪಿಸಿಸಿ ಅಧ್ಯಕ್ಷ

> **ಅಪಪ್ರಚಾರ ಮತ್ತು ಹಣ ಬಲ ಬಸವಕಲ್ಯಾಣ ಕ್ಷೇತ್ರದಲ್ಲಿ ನಮ್ಮ ಗೆಲುವನ್ನು ಕಸಿದಿದೆ. ಆದರೆ, ನಮ್ಮ ಅಸ್ತಿತ್ವ ಕಸಿಯಲು ಸಾಧ್ಯವಿಲ್ಲ**
> **ಎಚ್‌.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕೆ.ಆರ್. ಪೇಟೆ ಮತ್ತು ಶಿರಾ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಉಸ್ತುವಾರಿಯಾಗಿದ್ದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಮಸ್ಕಿ ಕ್ಷೇತ್ರದ ಉಸ್ತುವಾರಿಯನ್ನೂ ನೀಡಲಾಗಿತ್ತು. ಕೆ.ಆರ್.ಪೇಟೆ ಮತ್ತು ಶಿರಾದಂತೆ ಮಸ್ಕಿ ಕ್ಷೇತ್ರದಲ್ಲೂ ಮುಖ್ಯಮಂತ್ರಿಯ ಪುತ್ರ ಚಾಣಾಕ್ಷತೆ ಮೆರೆಯುತ್ತಾರೆ ಎಂಬ ನಿರೀಕ್ಷೆ ಬಿಜೆಪಿ ನಾಯಕರಲ್ಲಿತ್ತು. ಆದರೆ, ಭಾರಿ ಅಂತರದ ಸೋಲು ಬಿಜೆಪಿ ವರಿಷ್ಠರ ಲೆಕ್ಕಾಚಾರವನ್ನು ತಲೆಕೆಳಗು ಮಾಡಿದೆ.

ಬಿಜೆಪಿ ತೆಕ್ಕೆಗೆ ಬಸವಕಲ್ಯಾಣ: ಕಾಂಗ್ರೆಸ್ ಶಾಸಕ ಬಿ. ನಾರಾಯಣ ರಾವ್ ನಿಧನದಿಂದ ತೆರವಾಗಿದ್ದ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶರಣು ಸಲಗರ 20,629 ಮತಗಳ ಭಾರಿ ಅಂತರದ ಗೆಲುವು ಪಡೆದಿದ್ದಾರೆ. ಅನುಕಂಪದ ನಿರೀಕ್ಷೆಯಲ್ಲಿ ನಾರಾಯಣ ರಾವ್ ಅವರ ಪತ್ನಿ ಮಾಲಾ ನಾರಾಯಣ ರಾವ್ ಅವರನ್ನೇ ಕಣಕ್ಕಿಳಿಸಿದ್ದ ಕಾಂಗ್ರೆಸ್ ಸೋಲು ಕಂಡಿದೆ. ಮಾಲಾ ಅವರು 50,383 ಮತಗಳನ್ನು ಪಡೆದರೆ, ಶರಣು ಸಲಗರ 71,012 ಮತ ಗಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 4

ರಾಜ್ಯ ಕೋವಿಡ್ ಅಂಕಿ–ಅಂಶ

16,01,865 ▲	ಒಟ್ಟು ಸೋಂಕಿತರು (15,64,132 ನಿನ್ನೆಯ ವಿವರ)
4,21,436 ▲	ಸಕ್ರಿಯ ಪ್ರಕರಣಗಳು
11,64,398 ▲	ಗುಣಮುಖರಾದವರು
16,011 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	37,733	▼
ಗುಣಮುಖ	21,149	▲
ಸಾವು	217	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ವೈದ್ಯ, ನರ್ಸಿಂಗ್ ವಿದ್ಯಾರ್ಥಿಗಳ ಸೇವೆ ಬಳಕೆ

ನವದೆಹಲಿ (ಪಿಟಿಐ): ಕೋವಿಡ್–19 ಪಿಡುಗಿನ ವಿರುದ್ಧ ದೇಶ ನಡೆಸುತ್ತಿರುವ ಹೋರಾಟದಲ್ಲಿ ವೈದ್ಯಕೀಯ ಮತ್ತು ನರ್ಸಿಂಗ್ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿರುವ ಹಾಗೂ ಕೋರ್ಸ್ ಪೂರ್ಣಗೊಳಿಸಿರುವವರನ್ನು ತೊಡಗಿಸಿಕೊಳ್ಳಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. 11

ಕೊರೊನಾ ಕರ್ಫ್ಯೂ: ಚಿಲ್ಲರೆ–ಸಗಟು ದರಗಳಲ್ಲಿ ಅಜಗಜಾಂತರ

ಹಣ್ಣು, ತರಕಾರಿ ದರ ವಿಪರೀತ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಕರ್ಫ್ಯೂ ಹೆಸರಿನಲ್ಲಿ ಕೆಲ ಚಿಲ್ಲರೆ ವ್ಯಾಪಾರಿಗಳು ಹಣ್ಣು ಹಾಗೂ ತರಕಾರಿ ದರಗಳನ್ನು ಮನಬಂದಂತೆ ಏರಿಸಿದ್ದಾರೆ.

ಇದರಿಂದ ದುಬಾರಿಯಾಗಿರುವ ಹಣ್ಣು,ತರಕಾರಿಯನ್ನು ಗ್ರಾಹಕರು ಅನಿವಾರ್ಯವಾಗಿ ಖರೀದಿಸುವ ಸಂಕಷ್ಟದ ಸ್ಥಿತಿ ನಿರ್ಮಾಣವಾಗಿದೆ. ಕರ್ಫ್ಯೂ ವೇಳೆ ಅಗತ್ಯ ಸೇವೆಯಡಿ ಹಣ್ಣು, ತರಕಾರಿ ಖರೀದಿಗೆ ಬೆಳಿಗ್ಗೆ 10 ರವರೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಈಗ ತಳ್ಳುಗಾಡಿ ವ್ಯಾಪಾರಿಗಳು ಸಂಜೆ 6 ಗಂಟೆಯವರೆಗೆ ಹಣ್ಣು, ತರಕಾರಿ ಮಾರಾಟ ಮಾಡಲು ಅವಧಿ ವಿಸ್ತರಿಸಿದೆ.

‘ಹಣ್ಣು,ತರಕಾರಿಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡಬಾರದು’ ಎಂದು ಸರ್ಕಾರ ಆದೇಶದಲ್ಲಿ ಸ್ಪಷ್ಟವಾಗಿ ಸೂಚಿಸಿದೆ. ಆದರೂ ಕೆಲವು ಚಿಲ್ಲರೆ ವ್ಯಾಪಾರಿಗಳು ಪರಿಸ್ಥಿತಿ ದುರ್ಲಾಭ ಪಡೆದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ.

ಬೆಂಗಳೂರಿನ ತರಗುಪೇಟೆಯಲ್ಲಿದ್ದ ತಳ್ಳುಗಾಡಿಯಲ್ಲಿ ಗ್ರಾಹಕರು ಭಾನುವಾರ ಹಣ್ಣುಗಳನ್ನು ಖರೀದಿಸುತ್ತಿದ್ದರು –ಪ್ರಜಾವಾಣಿ ಚಿತ್ರ

ಹಣ್ಣು ಮತ್ತು ತರಕಾರಿಗಳ ಸಗಟು ದರಗಳು ಎಂದಿನಂತೆ ಸ್ಥಿರವಾಗಿವೆ. ಆದರೆ, ಚಿಲ್ಲರೆ ವ್ಯಾಪಾರಿಗಳು ಮಾತ್ರ ದುಬಾರಿ ದರಕ್ಕೇ ಹಣ್ಣು,ತರಕಾರಿಗಳನ್ನು ಮಾರುತ್ತಿದ್ದಾರೆ. ದಾಳಿಂಬೆ ಸಗಟು ದರ ಪ್ರತಿ ಕೆ.ಜಿಗೆ ₹150 ಇದ್ದರೆ, ಚಿಲ್ಲರೆ ಮಾರಾಟಗಾರರು ₹250ರವರೆಗೆ ಮಾರುತ್ತಿದ್ದಾರೆ. ಕಿತ್ತಳೆ ಹಾಗೂ ಮೂಸಂಬಿ ದರ ಸಾಮಾನ್ಯವಾಗಿ ₹70ರ ಗಡಿ ದಾಟುತ್ತಿರಲಿಲ್ಲ, ಈಗ ₹150ರವರೆಗೆ ಏರಿಕೆಯಾಗಿದೆ.

‘ಕೊರೊನಾ ಇರುವುದರಿಂದ ಮೊದಲಿನಂತೆ ನಮಗೆ ವ್ಯಾಪಾರ ನಡೆಯುತ್ತಿಲ್ಲ. ಕರ್ಫ್ಯೂ ಇರುವುದರಿಂದ ಗ್ರಾಹಕರು ನಿದಿತ ಅವಧಿಯಲ್ಲಿ ಮಾತ್ರ ಖರೀದಿಗೆ ಬರುತ್ತಾರೆ. ವಾಹನ ಸಂಚಾರಕ್ಕೆ ನಿರ್ಬಂಧ ಇರುವುದರಿಂದ ಹಣ್ಣು,ತರಕಾರಿ ಪೂರೈಕೆಗೂ ಹೆಚ್ಚು ಖರ್ಚಾಗುತ್ತಿದೆ. ಈಗಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಬೆಲೆಗೆ ಮಾರಿದರೆ ಮಾತ್ರ ನಾವು ಜೀವನ ನಡೆಸಲು ಸಾಧ್ಯ’ ಎಂದು ಚಿಲ್ಲರೆ ವ್ಯಾಪಾರಿಯೊಬ್ಬರು ಸಮರ್ಥಿಸಿಕೊಂಡರು.

‘ಸಗಟು ಮಾರುಕಟ್ಟೆಗೆ ನಿಗದಿಗಿಂತ ಹೆಚ್ಚು ಪ್ರಮಾಣದ ಹಣ್ಣುಗಳು ಆವಕವಾಗುತ್ತಿವೆ. ಸಗಟು ಬೆಲೆಗಳು ಏರಿಕೆ ಕಂಡಿಲ್ಲ. ಆದರೆ, ಕೊಳ್ಳುವವರು ಕಡಿಮೆ. ಈಗಿನ ನಿರ್ಬಂಧಗಳಿಂದ ಮಾರುಕಟ್ಟೆಯಲ್ಲೇ ಉತ್ಪನ್ನ ಉಳಿಯುತ್ತಿವೆ. ಹಾಗಾಗಿ, ಚಿಲ್ಲರೆ ವ್ಯಾಪಾರಿಗಳು ದರ ಏರಿಸಿರಬಹುದು’ ಎಂದು ರಾಜ್ಯ ಸಗಟು ಹಣ್ಣು ಮಾರಾಟಗಾರರ ಅಭಿವೃದ್ಧಿ ಸಂಘದ ಉಸ್ತುವಾರಿ ಸೈಯದ್ ಮೆಹಬೂಬ್ ತಿಳಿಸಿದರು.

9ನೇ ಪುಟ ನೋಡಿ

‘ಹಿತಕರ ಮಟ್ಟದಲ್ಲಿ ಬಡ್ಡಿ ದರ’

ನವದೆಹಲಿ (ಪಿಟಿಐ): ಆರ್ಥಿಕ ಬೆಳವಣಿಗೆಗೆ ಇಂಬು ಕೊಡುವ ಉದ್ದೇಶದಿಂದ ಬಡ್ಡಿ ದರಗಳನ್ನು ಸಾಧ್ಯವಾದಷ್ಟು ದಿನ ಹಿತಕರ ಮಟ್ಟದಲ್ಲಿಯೇ ಇರಿಸಿಕೊಳ್ಳಲು ಯತ್ನಿಸುವುದಾಗಿ ಎಸ್‌ಬಿಐ ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಹೇಳಿದ್ದಾರೆ.

ಕೋವಿಡ್–19 ಹರಡುವುದನ್ನು ತಡೆಯುವ ಉದ್ದೇಶದಿಂದ ಸ್ಥಳೀಯ ಮಟ್ಟದಲ್ಲಿ ಜಾರಿಗೆ ಬರುತ್ತಿರುವ ಲಾಕ್‌ಡೌನ್ ಕ್ರಮಗಳಿಂದಾಗಿ ಬ್ಯಾಂಕ್‌ಗಳ ಎನ್‌ಪಿಎ ಪರಿಸ್ಥಿತಿ ಏನಾಗಬಹುದು ಎಂಬುದನ್ನು ತಕ್ಷಣಕ್ಕೆ ಹೇಳಲು ಸಾಧ್ಯವಿಲ್ಲ ಎಂದಿದ್ದಾರೆ.

‘ಕೋವಿಡ್–19 ಕಾಯಿಲೆಗೆ ತುತ್ತಾದವರಿಗೆ ಚಿಕಿತ್ಸೆ ಒದಗಿಸಲು ತುರ್ತಾಗಿ ವೈದ್ಯಕೀಯ ಸೌಲಭ್ಯ ಒದಗಿಸಲು ಎಸ್‌ಬಿಐ ₹ 30 ಕೋಟಿ ತೆಗೆದಿರಿಸಿದೆ. ನಾವು ಎನ್‌ಜಿಒಗಳು ಹಾಗೂ ಆಸ್ಪತ್ರೆಗಳ ಆಡಳಿತ ಮಂಡಳಿಗಳ ಜೊತೆ ಕೈಜೋಡಿಸುತ್ತಿದ್ದೇವೆ’ ಎಂದು ಕೂಡ ಅವರು ಹೇಳಿದ್ದಾರೆ.

ಆಮ್ಲಜನಕ ಕೈಗಾರಿಕೆಗಳ ಬಳಿ ತಾತ್ಕಾಲಿಕ ಆಸ್ಪತ್ರೆ ನಿರ್ಮಾಣ

ನವದೆಹಲಿ (ಪಿಟಿಐ): ಆಮ್ಲಜನಕ ಉತ್ಪಾದಿಸುವ ಕೈಗಾರಿಕೆಗಳ ಬಳಿಯೇ ತಾತ್ಕಾಲಿಕ ಆಸ್ಪತ್ರೆಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಅಗತ್ಯವಿರುವಷ್ಟು ಶುದ್ಧತೆಯ ಆಮ್ಲಜನಕ ತಕ್ಷಣವೇ ಕೋವಿಡ್–19 ರೋಗಿಗಳಿಗೆ ಸಿಗುವಂತಾಗಬೇಕು ಎಂಬ ಉದ್ದೇಶದಿಂದ ಇಂಥ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತದೆ. ಈ ರೀತಿಯ ಆಸ್ಪತ್ರೆಗಳಲ್ಲಿ ಒಟ್ಟು 10,000 ಹಾಸಿಗೆಗಳು ಇರಲಿದ್ದು, ಪ್ರತಿ ಹಾಸಿಗೆಯೂ ಆಮ್ಲಜನಕ ಪೂರೈಕೆ ಸೌಲಭ್ಯ ಹೊಂದಿರಲಿದೆ ಎಂದು ಮೂಲಗಳು ಹೇಳಿವೆ.

ಕೋವಿಡ್–19 ಪರಿಸ್ಥಿತಿ ಪರಾಮರ್ಶಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಸಭೆಯ ಬಳಿಕ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಲಾಗಿದೆ.

ಪ್ರಾಯೋಗಿಕವಾಗಿ ಇಂಥ ತಾತ್ಕಾಲಿಕ ಆಸ್ಪತ್ರೆಗಳ ಸ್ಥಾಪನೆಗೆ ಐದು ಸ್ಥಳಗಳನ್ನು ಸರ್ಕಾರ ಗುರುತಿಸಿದೆ.

ದೇಶದ ವಿವಿಧೆಡೆ ಸಾರಜನಕ ಉತ್ಪಾದಿಸುವ ಘಟಕಗಳಿದ್ದು, ಅವುಗಳನ್ನು ಆಮ್ಲಜನಕ ಉತ್ಪಾದನಾ ಘಟಕಗಳನ್ನಾಗಿ ಪರಿವರ್ತಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ.

ಉಕ್ಕು ಕಾರ್ಖಾನೆಗಳು, ತೈಲ ಸಂಸ್ಕರಣೆ ಘಟಕಗಳಿರುವ ಪೆಟ್ರೋಕೆಮಿಕಲ್‌ಉದ್ದಿಮೆಗಳು,ವಿದ್ಯುತ್‌ಉತ್ಪಾದನಾ ಸ್ಥಾವರಗಳನ್ನು ಸಹ ಪ್ರಾಣವಾಯುವಿನ ಉತ್ಪಾದನೆಗೆ ಬಳಸಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು’ ಎಂದು ಮೂಲಗಳು ಹೇಳಿವೆ.

ಆಮ್ಲಜನಕ ಉತ್ಪಾದನೆ (ಸಾಂದರ್ಭಿಕ ಚಿತ್ರ)

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸೋಮಶೇಖರ್ ಅವರು ಕೆ.ಗೊಲ್ಲಹಳ್ಳಿ ಗ್ರಾಮದಲ್ಲಿ ಕೊರೊನಾ ಸೋಂಕಿತರ ಮನೆಯ ಸದಸ್ಯರಿಗೆ ಸಾಂಕೇತಿಕವಾಗಿ ಪಡಿತರ ಕಿಟ್ ವಿತರಿಸಿದರು

‘ಸೋಂಕಿತರ ಮನೆಗೆ ಫಾಗಿಂಗ್’

ಬೆಂಗಳೂರು: ‘ಕೊರೊನಾ ಸೋಂಕಿತರು ಬಯಸಿದರೆ ಅವರ ಮನೆಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಿಸುವ ವ್ಯವಸ್ಥೆ ಮಾಡಲಾಗುವುದು. ಪ್ರತಿ ಬೀದಿಗಳಲ್ಲೂ ‘ಫಾಗಿಂಗ್’ ಮಾಡುವ ಮೂಲಕ ಸ್ಥಳೀಯರಲ್ಲಿ ಆತ್ಮವಿಶ್ವಾಸ ವೃದ್ಧಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಕೋವಿಡ್ ನಿರ್ವಹಣೆ ಸಂಬಂಧ ಯಶವಂತಪುರ ವಿಧಾನಸಭಾ ಕ್ಷೇತ್ರದಾದ್ಯಂತ ಭಾನುವಾರ ಪ್ರವಾಸ ಕೈಗೊಂಡಿದ್ದ ಅವರು ಬಿಬಿಎಂಪಿ ವಾರ್ಡ್‌ಗಳ ಬಿಜೆಪಿ ಪದಾಧಿಕಾರಿಗಳು, ಗ್ರಾಮಾಂತರ ಮಂಡಳ ಪದಾಧಿಕಾರಿಗಳು, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರು ಮತ್ತು ಹಿರಿಯ ಅಧಿಕಾರಿಗಳ ಜತೆ ನಿರಂತರ ಸಭೆಗಳನ್ನು ನಡೆಸಿದರು.

‘ವಾರ್ಡ್‌ವಾರು ಸಮಿತಿಗಳನ್ನು ರಚಿಸಿಕೊಂಡು ಜನರ ಕಷ್ಟಕ್ಕೆ ಸ್ಪಂದಿಸಬೇಕು. ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಆಮ್ಲಜನಕ ಸಿಲಿಂಡರ್ ಸಮಸ್ಯೆಯಾಗದಂತೆ ಎಚ್ಚರವಹಿಸಬೇಕು. ಮಂಜೂರಾಗಿರುವ 8 ಶವ ಸಾಗಣೆ ವಾಹನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಈ ಸಂಬಂಧ ತೆರೆಯಲಾಗಿರುವ ಸಹಾಯವಾಣಿ ಸಂಖ್ಯೆಯನ್ನು ಸಾರ್ವಜನಿಕರಿಗೆ ಒದಗಿಸುವ ಕೆಲಸವೂ ಆಗಬೇಕು’ ಎಂದು ಪಕ್ಷದ ಮುಖಂಡರು ಹಾಗೂ ಅಧಿಕಾರಿಗಳಿಗೆ ಸೂಚಿಸಿದರು.

ಕರ್ಫ್ಯೂ: ವಸ್ತುಗಳ ಖರೀದಿ ಅವಧಿ ವಿಸ್ತರಣೆ • ಮಾಂಸ ಖರೀದಿಗೆ ಟೋಕನ್ ವ್ಯವಸ್ಥೆ

ಮಾರುಕಟ್ಟೆಯಲ್ಲಿ ಜನ, ರೈಲು ನಿಲ್ದಾಣದಲ್ಲಿ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ನಗರದಲ್ಲಿ ಬಿಗಿ ನಿಯಮಗಳ ಕರ್ಫ್ಯೂ ಜಾರಿಯಾಗಿದ್ದು, ಇದರ ನಡುವೆಯೂ ಭಾನುವಾರ ಬೆಳಿಗ್ಗೆ ನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ಹೆಚ್ಚಿನ ಜನ ಜಮಾಯಿಸಿದ್ದರು.

ಕರ್ಫ್ಯೂ ನಿಯಮಗಳಲ್ಲಿ ತಿದ್ದುಪಡಿ ಮಾಡಿರುವ ರಾಜ್ಯ ಸರ್ಕಾರ, ಬೆಳಿಗ್ಗೆ 6ರಿಂದ ಮಧ್ಯಾಹ್ನ 12 ಗಂಟೆವರೆಗೆ ಅಗತ್ಯವಸ್ತುಗಳ ಖರೀದಿಗೆ ಅವಕಾಶ ಮಾಡಿಕೊಟ್ಟಿದೆ. ಹೀಗಾಗಿ, ಭಾನುವಾರ ಮಧ್ಯಾಹ್ನ 12ರವರೆಗೂ ಜನರು ಖರೀದಿಯಲ್ಲಿ ನಿರತರಾಗಿದ್ದರು.

ಕೆ.ಆರ್.ಮಾರುಕಟ್ಟೆ, ರಾಜಾಜಿನಗರ, ಮೂಡಲಪಾಳ್ಯ, ವಿಜಯನಗರ, ಬಸವನಗುಡಿ, ಹೆಬ್ಬಾಳ, ನಾಗವಾರ ಹಾಗೂ ಇತರೆ ಪ್ರದೇಶಗಳಲ್ಲಿ ತರಕಾರಿ ಹಾಗೂ ಅಗತ್ಯ ವಸ್ತುಗಳನ್ನು ಖರೀದಿಸಿದರು. ಕೆಲವರು ಮಾಸ್ಕ್ ಹಾಕಿಕೊಂಡು ಬಂದು, ಪರಸ್ಪರ ಅಂತರದಲ್ಲಿ ನಿಂತಿದ್ದರು. ಆದರೆ, ಬಹುತೇಕರು ಅಂತರವನ್ನೇ ಮರೆತಿದ್ದರು.

ಮಾಸ್ಕ್ ಧರಿಸಿ ಮಾರುಕಟ್ಟೆಗೆ ಬಂದಿದ್ದ ಕೆಲವರು, ಖರೀದಿ ಸಂದರ್ಭದಲ್ಲಿ ಮಾಸ್ಕ್ ತೆಗೆದಿದ್ದರು. ಕೆಲವರಂತೂ ಬಾಯಿಗೆ ಮಾತ್ರ ಮಾಸ್ಕ್ ಹಾಕಿಕೊಂಡಿದ್ದು ಕಂಡುಬಂತು.

ಮಾಂಸ ಖರೀದಿಗೆ ಟೋಕನ್: ಭಾನುವಾರದ ಬಾಡೂಟ ಸವಿಯಲು ಯೋಚಿಸಿದ್ದ ಜನ, ಬೆಳಿಗ್ಗೆಯೇ ಮಾಂಸ ಮಾರಾಟ ಮಳಿಗೆಗೆ ಬಂದಿದ್ದರು. ಮಳಿಗೆ ಎದುರು ಜನ ಸಾಲಾಗಿ ನಿಂತು ಅಂತರ ಕಾಯ್ದುಕೊಳ್ಳುವುದಿಲ್ಲವೆಂಬ ಕಾರಣಕ್ಕೆ ವ್ಯಾಪಾರಿಗಳು ಟೋಕನ್ ವ್ಯವಸ್ಥೆ ಮಾಡಿದ್ದರು. ಟೋಕನ್ ಸಂಖ್ಯೆ ಕೂಗಿ ಮಾಂಸದ ಪೊಟ್ಟಣ ನೀಡಿದರು.

ಟೋಕನ್ ಪಡೆದಿದ್ದ ಕೆಲವರು, ಮಳಿಗೆ ಸಮೀಪದಲ್ಲೇ ಗುಂಪು ಗುಂಪಾಗಿ ಕುಳಿತಿದ್ದರು. ಪರಸ್ಪರ ಅಂತರವಂತೂ ಇರಲೇ ಇಲ್ಲ. ಸ್ಥಳದಲ್ಲಿ ಗಸ್ತು ತಿರುಗುತ್ತಿದ್ದ ಪೊಲೀಸರು, ಜನರನ್ನು ತರಾಟೆಗೆ ತೆಗೆದುಕೊಂಡು ದೂರ ದೂರ ಕುಳಿತುಕೊಳ್ಳುವಂತೆ ಹೇಳಿ ಹೋದರು.

ರೈಲು ನಿಲ್ದಾಣದಲ್ಲಿ ಭದ್ರತೆ: ಕರ್ಫ್ಯೂ ಸಂದರ್ಭದಲ್ಲೂ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ರೈಲಿನ ಮೂಲಕ ಹೋಗುವವರ ಸಂಖ್ಯೆ ಹೆಚ್ಚಿದೆ. ನಿತ್ಯವೂ ತಂಡೋಪತಂಡವಾಗಿ ಪ್ರಯಾಣಿಕರು ನಿಲ್ದಾಣಕ್ಕೆ ಬರುತ್ತಿದ್ದರು. ಅಂತರವನ್ನೂ ಕಾಯ್ದುಕೊಳ್ಳದೇ ಕುಳಿತುಕೊಳ್ಳುತ್ತಿದ್ದರು.

ಮೆಜೆಸ್ಟಿಕ್‌ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಯಶವಂತಪುರ ನಿಲ್ದಾಣಗಳಲ್ಲಿ ಪ್ರಯಾಣಿಕರ ವರ್ತನೆಯಿಂದ ಸೋಂಕು ಹರಡುವ ಸಾಧ್ಯತೆ ಇತ್ತು. ಇದನ್ನು ಗಮನಿಸಿದ ರೈಲ್ವೆ ಹಿರಿಯ ಅಧಿಕಾರಿಗಳು, ನಿಲ್ದಾಣದಲ್ಲಿ ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು ಹಾಗೂ ಸಿಬ್ಬಂದಿಯನ್ನು ನಿಯೋಜಿಸಿದ್ದರು.

‘ಪೊಲೀಸರ ಜೊತೆ ವಾಗ್ವಾದ ಬೇಡ’

‘ಜನರಿಗಾಗಿ ಹಾಗೂ ನಿಯಮಗಳ ಜಾರಿಗಾಗಿ ಪ್ರಾಣ ಒತ್ತೆ ಇಟ್ಟು ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರ ಜೊತೆ ವಾಗ್ವಾದ ಮಾಡಬೇಡಿ’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಕೋರಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ‘ನೀವು (ಜನ) ರಸ್ತೆಯಲ್ಲಿ ಓಡಾಡಲು 100 ಕಾರಣ ಕೊಡುತ್ತೀರಾ. ಆದರೆ, ನಾವು ನಿಮ್ಮ ಸುರಕ್ಷತೆಗಾಗಿ ಮನೆಯಲ್ಲಿರುವಂತೆ ಒಂದೇ ಕಾರಣ ಕೊಡುತ್ತೇವೆ. ಆಕಸ್ಮಾತ್ ನಾವೂ ಮನೆಯಲ್ಲಿರಲು ಆಯ್ಕೆ ಮಾಡಿಕೊಂಡಿದ್ದರೆ, ರಸ್ತೆಯಲ್ಲಿ ಕೊರೊನಾ ಕರ್ತವ್ಯ ನಿರ್ವಹಿಸುವ ವೇಳೆ ನಮ್ಮ 120 ಪೊಲೀಸರನ್ನು ಕಳೆದುಕೊಳ್ಳುತ್ತಿರಲಿಲ್ಲ’ ಎಂದಿದ್ದಾರೆ.

ಸುದ್ದಿ 2 ನಿಮಿಷ

ಕೋವಿಡ್ ಸೇನಾನಿಗಳಿಗೆ ಚೈತನ್ಯ ಕೇಂದ್ರ: ಸುರೇಶ್ ಕುಮಾರ್

ಬೆಂಗಳೂರು: ‘ಕೋವಿಡ್ ಸೇನಾನಿಗಳು ತಮ್ಮ ಜೀವದ ಹಂಗು ತೊರೆದು ಕೊರೊನಾ ಸೋಂಕಿತರ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಅವರಲ್ಲಿ ಆತ್ಮವಿಶ್ವಾಸ ವೃದ್ಧಿಸುವ ಸಲುವಾಗಿ ರಾಜಾಜಿನಗರದಲ್ಲಿ ‘ಚೈತನ್ಯ ಕೇಂದ್ರ’ ಆರಂಭಿಸಲಾಗಿದೆ. ರಾಜ್ಯದಲ್ಲಿ ಇಂತಹದ್ದೊಂದು ಕೇಂದ್ರ ತಲೆ ಎತ್ತಿರುವುದು ಇದೇ ಮೊದಲು’ ಎಂದು ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಚೈತನ್ಯ ಕೇಂದ್ರಕ್ಕೆ ಭಾನುವಾರ ಚಾಲನೆ ನೀಡಿ ಮಾತನಾಡಿದ ಅವರು ‘ಈ ಕೇಂದ್ರದಲ್ಲಿ ಪೊಲೀಸ್ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಶುಶ್ರೂಷಕಿಯರು, ವೈದ್ಯರು ಹಾಗೂ ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿಕೊಂಡಿರುವವರಿಗೆ ಸ್ವನಿಯಂತ್ರಿತ ಹಬೆ (ಸ್ಟೀಮ್), ಕಷಾಯ ಹಾಗೂ ಕುಡಿಯಲು ಬಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಇವುಗಳನ್ನು ನಿರಂತರವಾಗಿ ಒದಗಿಸಲಾಗುತ್ತದೆ’ ಎಂದರು.

‘ಆಂಬುಲೆನ್ಸ್ ಸೇವೆಯನ್ನು ಉಚಿತವಾಗಿ ನೀಡುವ ಜೊತೆಗೆ ಮನೆ ಮನೆಗೆ ಆಮ್ಲಜನಕ ಒದಗಿಸುವ ಸೇವೆಯನ್ನೂ ಆರಂಭಿಸಲಾಗಿದೆ. ತುರ್ತು ಅಗತ್ಯವಿರುವ ವ್ಯಕ್ತಿಗಳ ಮನೆಗೇ ಆಮ್ಲಜನಕ ತಲುಪಿಸುವುದು ಇದರ ಉದ್ದೇಶ. ಇದಕ್ಕಾಗಿ ಸುಮಾರು 20 ಆಮ್ಲಜನಕ ಸಿಲಿಂಡರ್‌ಗಳನ್ನು ಬಳಸಲಾಗುತ್ತದೆ. ಭಾಷ್ಯಂ ವೃತ್ತದ ಬಳಿ ಇರುವ ಡಾ.ನಾಗರಾಜ್ ಸ್ಮಾರಕ ಆಸ್ಪತ್ರೆಯನ್ನು ಕೋವಿಡ್ ಆರೈಕೆ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ. ಇಲ್ಲಿ ದ್ರವೀಕೃತ ಆಮ್ಲಜನಕದ ವ್ಯವಸ್ಥೆಯುಳ್ಳ 20 ಹಾಸಿಗೆಗಳು ಲಭ್ಯವಿವೆ. ಈ ಕೇಂದ್ರ ಇನ್ನೆರಡು ದಿನಗಳಲ್ಲಿ ಬಳಕೆಗೆ ಮುಕ್ತವಾಗಲಿದೆ’ ಎಂದು ತಿಳಿಸಿದರು.

ಆಹಾರ ಧಾನ್ಯಗಳ ಕಿಟ್ ವಿತರಣೆ

ಕೆ.ಆರ್.ಪುರ: ಕೋವಿಡ್ ಕರ್ಫ್ಯೂ ಜಾರಿಯಿಂದ ಸಂಕಷ್ಟದಲ್ಲಿರುವ ಬಡವರು ಮತ್ತು ಮಧ್ಯಮ ವರ್ಗದವರಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಕೆ.ಆರ್.ಪುರದ ಬಿಜೆಪಿ ಮುಖಂಡ ಅಮಾನುಲ್ಲಾ ಹೇಳಿದರು.

ಕ್ಷೇತ್ರದ ವಿಜಿನಾಪುರದ ದರ್ಗಾ ಮೊಹಲ್ ದಲ್ಲಿ ಸಾರ್ವಜನಿಕರಿಗೆ ಆಹಾರ ಧಾನ್ಯಗಳ ಕಿಟ್ ವಿತರಿಸಿ ಮಾತನಾಡಿದರು.

‘ಸ್ವಂತ ಖರ್ಚಿನಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಕಿಟ್ ಗಳನ್ನು ತಯಾರಿಸಿ ಅಗತ್ಯ ಇರುವ ಬಡವರ ಮನೆಗಳಿಗೆ ತಲುಪಿಸುವ ಕೆಲಸ ಕಾರ್ಯಕರ್ತರು ಮಾಡಲಿದ್ದಾರೆ. ಕಿಟ್ ನಲ್ಲಿ ಅಕ್ಕಿ, ಗೋಧಿಹಿಟ್ಟು, ಸಕ್ಕರೆ, ಅಡುಗೆ ಎಣ್ಣೆ, ಬೇಳೆ ಒಳಗೊಂಡಿದೆ. ವಿಜಿನಾಪುರ, ಎ.ನಾರಾಯಣಪುರ, ದೇವಸಂದ್ರ ವಾರ್ಡ್‌ಗಳಲ್ಲಿ ಸಾರ್ವಜನಿಕರಿಗೆ ಕಿಟ್ ವಿತರಿಸಲಾಗಿದೆ’ ಎಂದು ಹೇಳಿದರು.

ಭಾವಪೂರ್ಣ ಶ್ರದ್ಧಾಂಜಲಿ



ಜನನ 09.07.1951 | ಮರಣ 01.05.2021

ಶ್ರೀ ಎನ್.ಉದಯ್

ಉಪಾಧ್ಯಕ್ಷರು, ಶ್ರೀಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು. ಹಾಗೂ ಉಪಾಧ್ಯಕ್ಷರು, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ (ರಿ) ಬೆಂಗಳೂರು

ಇವರು ದಿನಾಂಕ 01.05.2021 ರಂದು ರಾತ್ರಿ 10:30 ರಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ನಿಧನದಿಂದ ಶ್ರೀ ಸುಧಾ ಕೋ ಆಪರೇಟಿವ್ ಬ್ಯಾಂಕ್‌ಗೆ ಹಾಗೂ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಮೃತರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸಿ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇವೆ. ಈ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ದೇವರು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು : ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು ಅಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ(ರಿ) ಬೆಂಗಳೂರು.

ಔಷಧ ಕಿಟ್ ವಿತರಣೆ

ಬೆಂಗಳೂರು: ಕಾರ್ಮಿಕರ ದಿನದ ಅಂಗವಾಗಿ ಬೇಳೂರು ಸಹಾಯಹಸ್ತ ಟ್ರಸ್ಟ್ ವತಿಯಿಂದ ಕೋವಿಡ್ ರೋಗಿಗಳ ಮನೆ ಬಾಗಿಲಿಗೆ ಹಾಗೂ ಪೌರಕಾರ್ಮಿಕರಿಗೆ ಔಷಧ ಕಿಟ್ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

‘ಮನೆಯಲ್ಲೇ ಚಿಕಿತ್ಸೆ ಪಡೆಯುವ ಕೋವಿಡ್ ರೋಗಿಗಳಿಗೆ ಉಚಿತವಾಗಿ ಔಷಧ ಕಿಟ್ ವಿತರಿಸಲಾಗುವುದು. ಇದಕ್ಕಾಗಿ ಸಹಾಯವಾಣಿ (6360234388) ಆರಂಭಿಸಿದ್ದೇವೆ’ ಎಂದು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ ತಿಳಿಸಿದರು.

ತವರಿನತ್ತ ಪಯಣ...

ಲಾಕ್‌ಡೌನ್‌ನಿಂದ ವಾಹನ ಸಂಚಾರ ಬಹುತೇಕ ಸ್ತಬ್ಧಗೊಂಡಿದೆ. ಹೀಗಾಗಿ ವಲಸೆ ಕಾರ್ಮಿಕರು ಸಾಮಾನು ಸರಂಜಾಮುಗಳು ತುಂಬಿದ್ದ ಚೀಲಗಳನ್ನು ಸೈಕಲ್ ಮೇಲೆ ಹಾಕಿಕೊಂಡು ಊರಿನತ್ತ ಹೊರಟಿದ್ದ ದೃಶ್ಯ ಕಬ್ಬನ್ ರಸ್ತೆಯ ಮಿನ್ಸ್ಕ್ ಚೌಕದ ಬಳಿ ಭಾನುವಾರ ಕಂಡು ಬಂತು -ಪ್ರಜಾವಾಣಿ ಚಿತ್ರ

CONNECT ಕ್ಲಾಸಿಫೈಡ್ಸ್

Vasanthnagar : 080 4719 1010 | Marathahalli (ORR) : 96202 20217

ಲಾರಿಗಳ ನಡುವೆ ಅಪಘಾತ: ಇಬ್ಬರ ಸಾವು

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಎರಡು ಲಾರಿಗಳ ನಡುವೆ ಭಾನುವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

‘ತಮಿಳುನಾಡಿನ ಎ. ಪಾಷಾ (45) ಹಾಗೂ ಅಲ್ಲಾವುದ್ದೀನ್ (48) ಮೃತರು. ಅವಘಡದಲ್ಲಿ ಮುರುಗೇಶ್ (48) ಮತ್ತು ಸುಬ್ರಮಣಿ (30) ಎಂಬುವರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಪಾಷಾ ಹಾಗೂ ಅಲ್ಲಾವುದ್ದೀನ್, ಒಂದು ಲಾರಿಯಲ್ಲಿ ಈರುಳ್ಳಿ ತುಂಬಿಕೊಂಡು ಮಹಾರಾಷ್ಟ್ರದಿಂದ ಬೆಂಗಳೂರು ಮಾರ್ಗವಾಗಿ ತಮಿಳುನಾಡಿನತ್ತ ಹೊರಟಿದ್ದರು. ಇನ್ನೊಂದು ಲಾರಿಯಲ್ಲಿ ಮುರುಗೇಶ್ ಹಾಗೂ ಸುಬ್ರಮಣಿ, ಪಶು ಆಹಾರ ತುಂಬಿಕೊಂಡು ನೈಸ್ ರಸ್ತೆಯಲ್ಲಿ ತೆರಳುತ್ತಿದ್ದರು.’

‘ವೇಗವಾಗಿ ಹೊರಟಿದ್ದ ಪಾಷಾ ಅವರ ಲಾರಿಗೆ ಹಿಂಬದಿಯಿಂದ ಮುರುಗೇಶ್ ಅವರ ಲಾರಿ ಡಿಕ್ಕಿ ಹೊಡೆದಿತ್ತು. ಪಾಷಾ ಅವರ ಲಾರಿ ನಿಯಂತ್ರಣ ತಪ್ಪಿ ರಸ್ತೆಯಲ್ಲೇ ಉರುಳಿಬಿದ್ದು ವಿಭಜಕಕ್ಕೆ ಗುದ್ದಿತ್ತು. ಲಾರಿ ಮುಂಭಾಗ ಜಖಂಗೊಂಡು ಪಾಷಾ ಹಾಗೂ ಅಲ್ಲಾವುದ್ದೀನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದೂ ಪೊಲೀಸರು ತಿಳಿಸಿದರು.

‘ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಪೊಲೀಸರು ಹೇಳಿದರು.

‘ಹಜ್ ಸಮಿತಿ ಚುನಾವಣೆ: ಆತುರವೇಕೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮತ್ತು ರಾಜಧಾನಿಯಲ್ಲಿ ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಸಾವಿನ ಸಂಖ್ಯೆಯೂ ಏರುತ್ತಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ರಾಜ್ಯ ಹಜ್ ಸಮಿತಿ ಅಧ್ಯಕ್ಷರ ಚುನಾವಣೆ ನಡೆಸಲು ಮುಂದಾಗಿರುವ ಸರ್ಕಾರದ ನಿರ್ಧಾರಕ್ಕೆ ವಿರೋಧ ವ್ಯಕ್ತವಾಗಿದೆ.

ನಗರದ ತಿರುಮೇನಹಳ್ಳಿ ಹೆಗ್ಗಡೆ ನಗರದಲ್ಲಿರುವ ಹಜ್ ಭವನದಲ್ಲಿ ಇದೇ 5ರಂದು ಚುನಾವಣೆ ನಡೆಸಲಾಗುವುದು ಎಂದು ರಾಜ್ಯಸರ್ಕಾರ ಪ್ರಕಟಿಸಿದೆ. ಹಜ್ ಸಮಿತಿಗೆ 14 ಸದಸ್ಯರಿದ್ದು, ಇವರು ಅಂದು ಅಧ್ಯಕ್ಷರನ್ನು ಚುನಾಯಿಸಲಿದ್ದಾರೆ.

‘ಸಾಲು ಸಾಲು ಸಾವುಗಳು ಸಂಭವಿಸುತ್ತಿರುವ ಈ ಸಂದರ್ಭದಲ್ಲಿ ಸರ್ಕಾರವು ಚುನಾವಣೆ ನಡೆಸಲು ಮುಂದಾಗಿರುವುದು ಅಚ್ಚರಿ ತಂದಿದೆ. ಯಾವುದೇ ಚುನಾವಣೆ ನಡೆಸುವಂತಿಲ್ಲ ಎಂದು ಮುಖ್ಯಮಂತ್ರಿಯವರೇ ಹೇಳಿದ್ದರು. ಅಲ್ಲದೆ, ಕರ್ನಾಟಕ ಸಾಹಿತ್ಯ ಪರಿಷತ್‌ನಂತಹ ಚುನಾವಣೆಯನ್ನೂ ಮುಂದೂಡಲಾಗಿದೆ. ಈಗ ಸರ್ಕಾರದ ಸಂಸ್ಥೆಯಾಗಿರುವ ಹಜ್ ಸಮಿತಿಯ ಚುನಾವಣೆಯನ್ನು ನಡೆಸಲು ಸರ್ಕಾರವೇ ಮುಂದಾಗಿದೆ’ ಎಂದು ಸಮಿತಿಯ ಸದಸ್ಯ ಮತ್ತು ವಿಧಾನ ಪರಿಷತ್ ಸದಸ್ಯ ಬಿ.ಎಂ. ಫಾರೂಕ್ ಹೇಳಿದರು.

‘ಚುನಾವಣೆ ನಡೆಸಬೇಕು ಎಂದು ಸಂಘದ ಸದಸ್ಯರೊಬ್ಬರು ನ್ಯಾಯಾಲಯದ ಮೊರೆ ಹೋಗಿದ್ದರು. ಚುನಾವಣೆ ನಡೆಸಬೇಕು ಎಂದು ಕೋರ್ಟ್ ಕೂಡ ಹೇಳಿದೆ. ಆದರೆ, ಇದಕ್ಕೆ ಯಾವುದೇ ಗಡುವು ನೀಡಿಲ್ಲ. ಅಲ್ಲದೆ, ಇದು ಹಜ್ ಯಾತ್ರೆ ಹೋಗುವ ಸಮಯವೂ ಅಲ್ಲ. ಕೋವಿಡ್ ವ್ಯಾಪಕವಾಗಿ ಹರಡುತ್ತಿರುವ ಕಾರಣದಿಂದ ಚುನಾವಣೆ ಮುಂದೂಡಿದರೂ ಅದು ನ್ಯಾಯಾಲಯದ ಆದೇಶಕ್ಕೆ ವಿರುದ್ಧ ಎನಿಸುವುದಿಲ್ಲ’ ಎಂದರು.

‘ಹಜ್ ಭವನದಲ್ಲಿಯೇ ಕೋವಿಡ್ ಆರೈಕೆ ಕೇಂದ್ರವನ್ನೂ ತೆರೆಯಲಾಗಿದೆ. ಚುನಾವಣೆ ಹೆಸರಿನಲ್ಲಿ ಮತ್ತೆ ಅಲ್ಲಿ ಜನ ಸೇರುವುದು ಒಳ್ಳೆಯದಲ್ಲ’ ಎಂದೂ ಹೇಳಿದರು.

‘ಸಾಮಾನ್ಯ ದಿನಗಳಲ್ಲಿ ಚುನಾವಣೆ ನಡೆಸಿ ಎಂದು ನ್ಯಾಯಾಲಯ ಹೇಳಿದೆಯೇ ವಿನಾ ತಕ್ಷಣಕ್ಕೆ ಎಲೆಕ್ಷನ್ ಮಾಡಿ ಎಂದು ಆದೇಶಿಸಿಲ್ಲ. 14 ಜನ ಸದಸ್ಯರು ರಾಜ್ಯದ ಬೇರೆ ಬೇರೆ ಕಡೆ ಇದ್ದಾರೆ. ಈ ಸಂದರ್ಭದಲ್ಲಿ ಅವರೆಲ್ಲರೂ ಬೆಂಗಳೂರಿಗೆ ಬರಲು ಸಾಧ್ಯವೇ, ಬಂದರೂ ಅದರಿಂದ ಎಲ್ಲರಿಗೂ ತೊಂದರೆ ಆಗುತ್ತದೆ. ಚುನಾವಣೆಯನ್ನು ಮುಂದೂಡಬೇಕು’ ಎಂದು ಸಮಿತಿಯ ಸದಸ್ಯ ಹಾಗೂ ರಾಜ್ಯಸಭಾ ಸದಸ್ಯ ಸೈಯದ್ ನಾಸೀರ್ ಹುಸೇನ್ ಒತ್ತಾಯಿಸಿದರು.

ತಾಂತ್ರಿಕ ಪದವಿಯ ಆನ್‌ಲೈನ್ ತರಗತಿ 5ರಿಂದ ಆರಂಭ

ಬೆಂಗಳೂರು: ಬಿ.ಟೆಕ್‌ನ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಹಾಗೂ ಬಿ.ಆರ್ಕ್‌ನ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಇದೇ 5ರಿಂದ ಆನ್‌ಲೈನ್ ತರಗತಿ ಆರಂಭಿಸಲಾಗುವುದು ಎಂದು ಬೆಂಗಳೂರು ವಿಶ್ವವಿದ್ಯಾಲಯ ಹೇಳಿದೆ.

2020–21ನೇ ಶೈಕ್ಷಣಿಕ ವರ್ಷದ ವೇಳಾಪಟ್ಟಿಯನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲ ಸ್ನಾತಕೋತ್ತರ ಪದವಿಗಳ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೂ 5ರಿಂದ ಆನ್‌ಲೈನ್ ತರಗತಿ ನಡೆಸಲಾಗುವುದು ಎಂದೂ ಅವರು ತಿಳಿಸಿದ್ದಾರೆ.

ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ದೇವನಹಳ್ಳಿ ಬಳಿಯ ಆಕಾಶ್ ಆಸ್ಪತ್ರೆಗೆ ಕಂದಾಯ ಸಚಿವ ಆರ್.ಅಶೋಕ ಅವರು ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು.

ಸಂಪುಟದಿಂದ ಸಚಿವ ರಾಜೇಂದ್ರಗೆ ಕೊಕ್

ಹೈದರಾಬಾದ್: ಮೇಡಕ್ ಜಿಲ್ಲೆಯಲ್ಲಿ 100 ಎಕರೆಗೂ ಅಧಿಕ ಜಮೀನನ್ನು ಕಬಳಿಸಿದ ಆರೋಪ ಹೊತ್ತ ಆರೋಗ್ಯ ಸಚಿವ ಈತಳ ರಾಜೇಂದ್ರ ಅವರನ್ನು ತೆಲಂಗಾಣ ಮುಖ್ಯಮಂತ್ರಿ ಕೆ.ಸಿ. ಆರ್.ಚಂದ್ರಶೇಖರ್ ಸಂಪುಟದಿಂದ ಭಾನುವಾರ ಕೈಬಿಟ್ಟಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

NRI'S INVESTMENT And Finance Available On LowInterestAgainst Properties,Land & Buildings,Sites,Flats Converted&Agricultural Lands Call:7411265189

General

GET 30-LAKHS Assured return from India's No.1 Company TATA. Just 5000/- PM. 7829975577/ 9986375577

REAL ESTATE SELLING

House

Vishweshwariah Layout

2-BHK SPACIOUS 6-Units Under Construction House For Sale on 2400Sqft BDA'A' Katha Site, Very Less Rate, Pre Launch Offer.(East Gate): 9606037595/596

LISTEN TO DIVINE VOICE :

“WHEN MAN FAILS TO PERFORM, MERCIFUL GODS ARISE TO SAVE MANKIND - FROM UTTER DISASTER” - B.K.VENUGOPAL

FOR DETAILS LOG ON TO: WWW.VIJAYABHAVAN.COM

SHIVA DARMA IS OURS

HOW TO ERADICATE EASILY CORONA VIRUS FROM THE FACE OF THE EARTH - B.K.VENUGOPAL

Honest volunteers required for tapping and for QUICK DISTRIBUTION of the most sacred SREE RAMA THIRTHA (also known as Vishnu Thirtha) Available at Namada Chilume, Devarayana Durga, Tumkur District 40 k.m. from Bangalore.

Very useful for dementia, childless couples : and other common Diseases afflicting mankind Know your Vast Universe as revealed by God's, and How exactly our earth moves around the sun which Man is not Aware even to this day etc.

(Also see Deccan Herald and Prajavani Dated 11-04-2021 & Vijayavani 28-4-2021).

DH Classifieds

BOOK YOUR AD FOR SUNDAY & GET 50% OFF ON WEEKDAYS

For Lineage & Single/ Multi Column Classifieds Display ads

For more information contact: 9880856233 /9845114560 9886213331

EDUCATIONAL

Admission

DIRECT FINAL B.Tech/ M.Tech/Diploma/MBA/MCA/ M.Sc/BBA/BCA/B.Sc/B.Com/ B.Ed.Recog by UGC/Govt. Asha Institute. Bangalore-560085. 9448460103/ 7093438248.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

‘ಲಕ್ಕಿ ಡ್ರಾ’ ನಂಬಿ ಹಣ ಕಳೆದುಕೊಂಡ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಕ್ಕಿ ಡ್ರಾ’ ಗೆದ್ದಿರುವುದಾಗಿ ಬಂದ ಪತ್ರ ನಂಬಿ ನಗರದ ಮಹಿಳೆಯೊಬ್ಬರು ₹ 5.04 ಲಕ್ಷ ಕಳೆದುಕೊಂಡಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಎಲೆಕ್ಟ್ರಾನಿಕ್ ಸಿಟಿ ನಿವಾಸಿಯಾಗಿರುವ 37 ವರ್ಷದ ಮಹಿಳೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಅಮಿತ್ ಕುಮಾರ್, ಲುಫ್ತಾರ್ ಅಲಿ ಫಾಜಿ, ಗಂಗಾ ಪಾಸ್ವಾನ್ ಹಾಗೂ ಜಾನಕಿ ದೇವಿ ಜಾ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರೆಲ್ಲರೂ ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಏಪ್ರಿಲ್ 27ರಂದು ಅಂಚೆ ಮೂಲಕ ಮಹಿಳೆಗೆ ಪತ್ರ ಬಂದಿತ್ತು. ‘ಲಕ್ಕಿ ಡ್ರಾನಲ್ಲಿ ನೀವು ವಿಜೇತರಾಗಿದ್ದೀರಾ. ₹ 1 ಲಕ್ಷ ನಗದು ಹಾಗೂ ₹ 8 ಲಕ್ಷ ಮೌಲ್ಯದ ಉಡುಗೊರೆ ಕಾರ್ಡ್ ನಿಮಗೆ ನೀಡಲಾಗುತ್ತಿದೆ. ಇದನ್ನು ಪಡೆಯಲು ಮೊಬೈಲ್ ನಂಬರ್ 8653****45 ಸಂಪರ್ಕಿಸಿ’ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.’

‘ಮಹಿಳೆ ಮೊಬೈಲ್‌ಗೆ ಕರೆ ಮಾಡಿದ್ದರು. ಪ್ರತಿಕ್ರಿಯಿಸಿದ್ದ ಆರೋಪಿ, ‘ಲಕ್ಕಿ ಡ್ರಾ ಹಣ ಹಾಗೂ ಉಡುಗೊರೆ ಕಾರ್ಡ್ ನೀಡಬೇಕಾದರೆ ಕೆಲ ಶುಲ್ಕ ಹಾಗೂ ಜಿಎಸ್‌ಟಿ ತುಂಬಬೇಕು’ ಎಂದಿದ್ದರು. ಅದನ್ನು ನಂಬಿದ್ದ ಮಹಿಳೆ, ಆರೋಪಿಗಳು ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 5.04 ಲಕ್ಷ ಹಾಕಿದ್ದರು. ಅದಾದ ನಂತರ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾರೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸ್ನೇಹಿತನ ಹೆಸರಿನಲ್ಲಿ ₹ 7 ಲಕ್ಷ ವಂಚನೆ

ಸ್ನೇಹಿತನ ಹೆಸರಿನಲ್ಲಿ ಸುಳ್ಳು ಸಂದೇಶ ಕಳುಹಿಸಿದ್ದ ಸೈಬರ್ ವಂಚಕರು, ನಗರದ ನಿವಾಸಿಯೊಬ್ಬರಿಂದ ₹ 7 ಲಕ್ಷ ಪಡೆದುಕೊಂಡು ವಂಚಿಸಿದ್ದಾರೆ.

‘ವಂಚನೆ ಸಂಬಂಧ ದೇವರಬಿಸನಹಳ್ಳಿಯ 52 ವರ್ಷದ ನಿವಾಸಿಯೊಬ್ಬರು ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ಏಪ್ರಿಲ್ 29ರಂದು ದೂರುದಾರರ ಮೊಬೈಲ್‌ಗೆ +16026****11 ಸಂಖ್ಯೆಯಿಂದ ಕರೆ ಮಾಡಿದ್ದ ಆರೋಪಿ, ಸ್ವೀಕರಿಸುವ ಮುನ್ನವೇ ಕಡಿತಗೊಳಿಸಿದ್ದರು. ವಾಪಸು ಅದೇ ನಂಬರ್‌ಗೆ ಕರೆ ಮಾಡಿದಾಗ ಸ್ಪಂದನೆ ಸಿಕ್ಕಿರಲಿಲ್ಲ. ಕೆಲ ನಿಮಿಷ ಬಿಟ್ಟು ಸಂದೇಶವೊಂದು ಬಂದಿತ್ತು.’

‘ನಾನು ನಿನ್ನ ಸ್ನೇಹಿತ ಸಂಜಯ್. ಅಮೆರಿಕದಲ್ಲಿ ಇದ್ದೇನೆ. ಈಗ ಅನಾರೋಗ್ಯಕ್ಕೆ ತುತ್ತಾಗಿದ್ದು, ತುರ್ತಾಗಿ ಶಸ್ತ್ರಚಿಕಿತ್ಸೆ ಮಾಡಿಬೇಕಿದೆ. ಸಾಧ್ಯವಾದಷ್ಟು ಹಣ ವರ್ಗಾವಣೆ ಮಾಡು’ ಎಂಬುದು ಆರೋಪಿ ಕಳುಹಿಸಿದ್ದ ಸಂದೇಶದಲ್ಲಿತ್ತು. ಅದನ್ನು ನಂಬಿದ್ದ ದೂರುದಾರ, ಆರೋಪಿ ಹೇಳಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 7 ಲಕ್ಷ ಜಮೆ ಮಾಡಿದ್ದರು. ಅದಾದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ. ಪರಿಶೀಲನೆ ನಡೆಸಿದಾಗ ಅಮೆರಿಕದ ಸ್ನೇಹಿತ ಯಾವುದೇ ಸಂದೇಶವನ್ನೇ ಕಳುಹಿಸಿಲ್ಲವೆಂಬುದು ಗೊತ್ತಾಗಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ಸ್ನೇಹಿತನ ಹೆಸರನಲ್ಲಿ ಸುಳ್ಳು ಸಂದೇಶ ಕಳುಹಿಸಿರುವ ಆರೋಪಿಯನ್ನು ಪತ್ತೆ ಮಾಡಿ ಹಣವನ್ನು ವಾಪಸು ಕೊಡಿಸುವಂತೆ ದೂರುದಾರ ಕೋರಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ನಿಧನ ವಾರ್ತೆ

ವೀರಣ್ಣ ಹಾವರಗಿ



ಬೆಂಗಳೂರು: ವಕೀಲ ವೀರಣ್ಣ ಹಾವರಗಿ (71) ಅನಾರೋಗ್ಯದಿಂದಾಗಿ ಶನಿವಾರ ನಿಧನರಾದರು.

ಬಾಗಲಕೋಟೆಯವರಾಗಿದ್ದ ಅವರು ಕೆನರಾ ಬ್ಯಾಂಕ್‌ನ ವಕೀಲರಾಗಿದ್ದರು. ಶನಿವಾರ ಸಂಜೆ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಕಾಕುಂಜೆ ಕೇಶವ ಭಟ್ಟ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್ ಪ್ರಕಾಶನದ ‘ಉತ್ಥಾನ’ ಮಾಸಪತ್ರಿಕೆ ಸಂಪಾದಕ ಕಾಕುಂಜೆ ಕೇಶವ್ ಭಟ್ಟ (66) ಅವರು ಶನಿವಾರ ರಾತ್ರಿ ನಿಧನರಾದರು.

ಕಾಸರಗೋಡಿನ ನೀರ್ಚಾಲು ಗ್ರಾಮದಲ್ಲಿ ಜನಿಸಿದ ಅವರು, ‘ಒತ್ತಡಕ್ಕೆ ವಿದಾಯ’, ‘ಗುಡ್ ಬೈ ಅಸ್ತ್ರ’, ‘ಬದುಕು ಸವಿಯೋಣ’ ಸೇರಿದಂತೆ ಹಲವು ಪುಸ್ತಕಗಳನ್ನು ಬರೆದಿದ್ದರು

ಖಾಸಗಿ ಆಸ್ಪತ್ರೆಗಳಲ್ಲಿ ಆಮ್ಲಜನಕ ಅಭಾವ • ಉಸಿರಾಟ ಸಮಸ್ಯೆಯಿಂದ ಬಳಲುವ ರೋಗಿಗಳಿಗೆ ಸಂಕಟ • ಸಿಲಿಕಾನ್ ಸಿಟಿಗೆ ಅಪಖ್ಯಾತಿ ತಂದ ಆಕ್ಸಿಜನ್

ನಗರದಲ್ಲಿ ಜೀವ ಚೈತನ್ಯಕ್ಕಿಲ್ಲ ಪ್ರಾಣವಾಯು!

• ವರುಣ್ ಹೆಗಡೆ

ಬೆಂಗಳೂರು: ಇಲ್ಲಿನ ಆರೈಕೆ ಹಾಗೂ ವೈದ್ಯಕೀಯ ವ್ಯವಸ್ಥೆಗೆ ವಿದೇಶಿಗರು ಕೂಡ ಮಾರುಹೋಗಿದ್ದರು. ಮಧ್ಯ ಏಷ್ಯಾ, ಆಫ್ರಿಕಾ ದೇಶಗಳಿಂದ ಪ್ರತಿವರ್ಷ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಇಲ್ಲಿಗೆ ಬಂದು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು.

ಆದರೆ, ಕೋವಿಡ್ ಕಾಣಿಸಿಕೊಂಡ ಬಳಿಕ ಇಲ್ಲಿನ ವೈದ್ಯಕೀಯ ವ್ಯವಸ್ಥೆಯ ಲೋಪಗಳು ಒಂದೊಂದಾಗಿ ಅನಾವರಣಗೊಂಡಿವೆ. ಸ್ಥಳೀಯ ರೋಗಿಗಳೇ ಚಿಕಿತ್ಸೆಗಾಗಿ ಆಸ್ಪತ್ರೆಗಳ ಮುಂದೆ ದಿನವಿಡೀ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಯಾವುದೇ ಒಂದು ನಗರ ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನ ಮೌಲ್ಯ ಹೆಚ್ಚಿಸಿಕೊಳ್ಳಬೇಕಾದಲ್ಲಿ ಅಲ್ಲಿನ ವೈದ್ಯಕೀಯ ವ್ಯವಸ್ಥೆ ಸುಸ್ಥಿತಿಯಲ್ಲಿರಬೇಕು. ವೈದ್ಯಕೀಯ ಲೋಕದಲ್ಲಿ ನಡೆಯುತ್ತಿರುವ ಆವಿಷ್ಕಾರ ಗಳನ್ನು ಅಳವಡಿಸಿಕೊಳ್ಳುತ್ತಾ, ರೋಗಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಬೇಕಾಗುತ್ತದೆ. ಆದರೆ, ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ನಗರದ ವೈದ್ಯಕೀಯ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಕೋವಿಡ್ ಪೂರ್ವದಲ್ಲಿ ಚಿಕಿತ್ಸೆಗಾಗಿ ಸಿಲಿಕಾನ್ ಸಿಟಿಗೆ ಬರಲು ತುದಿಗಾಲ ಮೇಲೆ ನಿಂತಿರುತ್ತಿದ್ದ ವಿದೇಶಿಗರು, ಈಗ ಇಲ್ಲಿ ಕೊರೊನಾ ಸೋಂಕಿತರು ಎದುರಿಸುತ್ತಿರುವ ಸಂಕಟಗಳನ್ನು ಕಂಡು ಕಳವಳಗೊಳ್ಳುವ ಪರಿಸ್ಥಿತಿ ಉಂಟಾಗಿದೆ. ಸಮಯಕ್ಕೆ ಸರಿಯಾಗಿ ವೈದ್ಯಕೀಯ ಆಮ್ಲಜನಕ (ಆಕ್ಸಿಜನ್) ಸಿಗದ ಕಾರಣಕ್ಕೆ ರೋಗಿಗಳನ್ನು ಬೇರೆ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯದಲ್ಲಿಯೇ ಕೊನೆಯುಸಿರೆಳೆಯುತ್ತಿದ್ದಾರೆ.

ಕೋವಿಡ್ ಪೂರ್ವದ ಪರಿಸ್ಥಿತಿಗೆ ಹೋಲಿಸಿದಲ್ಲಿ ವೈದ್ಯಕೀಯ ಆಮ್ಲಜನಕದ ಬೇಡಿಕೆ ನಾಲ್ಕು ಪಟ್ಟು ಹೆಚ್ಚಳವಾಗಿದೆ. ನಗರದಲ್ಲಿನ ಶೇ 90ರಷ್ಟು ಆಸ್ಪತ್ರೆಗಳು ದೈನಂದಿನ ಆಕ್ಸಿಜನ್ ಪೂರೈಕೆಯನ್ನೇ ಅವಲಂಬಿಸಿವೆ. ರಾಜ್ಯದಲ್ಲಿ ಜಿಂದಾಲ್, ಜೆಎಸ್‌ಡಬ್ಲ್ಯು ಸೇರಿದಂತೆ 7 ಪ್ರಮುಖ ವೈದ್ಯಕೀಯ ಆಕ್ಸಿಜನ್ ಉತ್ಪಾದನಾ ಘಟಕಗಳಿದ್ದು, ಅವುಗಳಲ್ಲಿ ಬಹುತೇಕವು ಬಳ್ಳಾರಿಯಲ್ಲಿವೆ. ಈ ಘಟಕಗಳು ದಿನಕ್ಕೆ 812 ಟನ್ ವೈದ್ಯಕೀಯ ಆಕ್ಸಿಜನ್ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ.

ಸಣ್ಣ ಸಿಲಿಂಡರ್ ಅನ್ನು ದ್ವಿಚಕ್ರವಾಹನದಲ್ಲಿ ಮನೆಗೆ ಕೊಂಡೊಯ್ಯುತ್ತಿರುವುದು – ಪ್ರಜಾವಾಣಿ ಚಿತ್ರ

ಮನೆಗಳಲ್ಲಿಯೇ ಸಿಲಿಂಡರ್ ದಾಸ್ತಾನು

ನಗರದ ಆಸ್ಪತ್ರೆಗಳಲ್ಲಿ ಆಮ್ಲಜನಕದ ಅಭಾವ ಎದುರಾದ ಪರಿಣಾಮ ಕೆಲವರು ಮುನ್ನೆಚ್ಚರಿಕೆ ಕ್ರಮವಾಗಿ 2ರಿಂದ 5 ಲೀಟರ್ ಸಿಲಿಂಡರ್ ಗಳನ್ನು ಮನೆಗೆ ಕೊಂಡೊಯ್ಯಲಾ ರಂಭಿಸಿದ್ದಾರೆ. ಇದು ಕೂಡ ಆಸ್ಪತ್ರೆಗಳಲ್ಲಿ ಆಮ್ಲಜನಕದ ಅಭಾವ ಹೆಚ್ಚಲು ಕಾರಣವಾಗಿದೆ. ಪರಿಣಾಮ ಸಣ್ಣ ಆಸ್ಪತ್ರೆಗಳಿಗೆ ಬೇಡಿಕೆ ಅನುಸಾರ ಆಕ್ಸಿಜನ್ ಸಿಲಿಂಡರ್‌ಗಳು ದೊರೆಯುತ್ತಿಲ್ಲ. ಪೂರೈಕೆದಾರರು ಪರಿಸ್ಥಿತಿಯ ಲಾಭ ಪಡೆದು ಕಾಳಸಂತೆಯಲ್ಲಿ ದುಪ್ಪಟ್ಟು ದರಕ್ಕೆ ಸಿಲಿಂಡರ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಆರೋಪಗಳು ಖಾಸಗಿ ಆಸ್ಪತ್ರೆಗಳಿಂದ ಕೇಳಿ ಬಂದಿದೆ.

ಇಲ್ಲಿ ಉತ್ಪಾದನೆ ಆಗುವ ಆಮ್ಲಜನಕವನ್ನು ಮಹಾರಾಷ್ಟ್ರ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಗೂ ಪೂರೈಸಲಾಗುತ್ತಿದೆ. ಇದರಿಂದಾಗಿ ಆಮ್ಲಜನಕದ ಅಭಾವ ಇಲ್ಲಿನ ಆಸ್ಪತ್ರೆಗಳಲ್ಲಿ ಗಂಭೀರ ಸ್ವರೂಪ ಪಡೆದುಕೊಂಡಿದೆ.

ಕೇಂದ್ರ ಸರ್ಕಾರವು ರಾಜ್ಯಕ್ಕೆ ಈ ಮೊದಲು ದಿನಕ್ಕೆ 300 ಟನ್ ಆಕ್ಸಿಜನ್ ಪೂರೈಕೆ ಮಾಡುತ್ತಿತ್ತು. ಸರ್ಕಾರವು 1,500 ಟನ್ ಒದಗಿಸುವಂತೆ ಮನವಿ ಸಲ್ಲಿಸಿತ್ತು. ಈಗ ರಾಜ್ಯಕ್ಕೆ 800 ಟನ್ ಪೂರೈಕೆಯಾಗುತ್ತಿದೆ. ಆದರೆ, ಅದನ್ನ ಯಾವ ಆಸ್ಪತ್ರೆಗಳಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಲಾಗಿದೆ ಎಂಬ ಮಾಹಿತಿಯು ಆರೋಗ್ಯ ಇಲಾಖೆಯ ಅಧಿಕಾರಿಗಳ ಬಳಿಯೂ ಇಲ್ಲ. ಇಲಾಖೆಯ ಅಧಿಕಾರಿಗಳು ಹೇಳುವ ಪ್ರಕಾರ, ನಗರದ ಖಾಸಗಿ ಆಸ್ಪತ್ರೆಗಳಿಗೆ ಪ್ರತಿನಿತ್ಯ 180 ಟನ್ ಆಕ್ಸಿಜನ್ ಅಗತ್ಯವಿದೆ. ಆದರೆ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಪ್ರಕಾರ 300 ಟನ್ ಆಕ್ಸಿಜನ್ ಬೇಕಾಗುತ್ತದೆ. ಸದ್ಯ ನಗರಕ್ಕೆ ಪ್ರತಿನಿತ್ಯ ಸರಾಸರಿ 150 ಟನ್ ಮಾತ್ರ ಪೂರೈಕೆ ಆಗುತ್ತಿದೆ. ಇದರಿಂದ ಕೋವಿಡ್ ಪೀಡಿತರಿಗೆ ಸಕಾಲದಲ್ಲಿ ಆಕ್ಸಿಜನ್ ದೊರೆಯದಂತಾಗಿದೆ.

ದಾಖಲಾತಿಗೆ ನಿರಾಕರಣೆ: ವಿಕ್ಟೋರಿಯಾ, ಕೆ.ಸಿ. ಜನರಲ್, ಬೌರಿಂಗ್ ಸೇರಿದಂತೆ ಪ್ರಮುಖ ಸರ್ಕಾರಿ ಆಸ್ಪತ್ರೆಗಳು ಹಾಗೂ ಮಣಿಪಾಲ್, ಅಪೋಲೊ, ವೈದೇಹಿ ಸೇರಿದಂತೆ 8ರಿಂದ 9 ಪ್ರಮುಖ ಖಾಸಗಿ ಆಸ್ಪತ್ರೆಗಳು ಮಾತ್ರ ಆಮ್ಲಜನಕ ಶೇಖರಣಾ ಘಟಕ ಹೊಂದಿವೆ. ಉಳಿದ ಆಸ್ಪತ್ರೆಗಳು ದೈನಂದಿನ ಪೂರೈಕೆದಾರರನ್ನೇ ಅವಲಂಬಿಸಿವೆ. ಬೇಡಿಕೆಗೆ ಅನುಸಾರ ಆಮ್ಲಜನಕವು ಇಲ್ಲಿಗೆ ತಲುಪದ ಪರಿಣಾಮ ಪೂರೈಕೆದಾರರು ಕೂಡ ಕೈಚೆಲ್ಲುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಗಳ ವಾಹನಗಳು ಆಕ್ಸಿಜನ್ ಸಿಲಿಂಡರ್ ವಿತರಣಾ ಕೇಂದ್ರಗಳ ಮುಂದೆ ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನೊಂದೆಡೆ, ಆಕ್ಸಿಜನ್ ಅಭಾವದಿಂದ ಕೆಲ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ದಾಖಲಿಸಿಕೊಳ್ಳಲು ನಿರಾಕರಿಸುತ್ತಿವೆ. ಪರಿಣಾಮ ಕೆಲ ದಿನಗಳಿಂದ ಕೋವಿಡ್‌ಗೆ ಮೃತಪಡುವವರ ಸಂಖ್ಯೆ ಕೂಡ ನಗರದಲ್ಲಿ ಏರಿಕೆ ಕಂಡಿದೆ.

ಏಪ್ರಿಲ್ ತಿಂಗಳೊಂದರಲ್ಲೇ ನಗರದಲ್ಲಿ 1,756 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಸೋಂಕು ಕಾಣಿಸಿಕೊಂಡ ಬಳಿಕ ಒಂದು ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಮರಣ ಪ್ರಕರಣಗಳು ಇವಾಗಿವೆ. ಇವರಲ್ಲಿ ಬಹುತೇಕರು ಉಸಿರಾಟದ ಸಮಸ್ಯೆ ಎದುರಿಸಿದ್ದವರೇ ಆಗಿದ್ದಾರೆ. ಆಕ್ಸಿಜನ್ ಪೂರೈಕೆ ಸಮರ್ಪಕವಾಗಿ ನಡೆಯದಿದ್ದಲ್ಲಿ ಕೋವಿಡ್‌ಗೆ ಬಲಿಯಾಗುವವರ ಸಂಖ್ಯೆ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ವೈದ್ಯರು ಕಳವಳ ವ್ಯಕ್ತಪಡಿಸುತ್ತಾರೆ.

ನಗರದಲ್ಲಿ ಭುರುಕಾ ಗ್ಯಾಸಸ್ ಮತ್ತು ಯೂನಿವರ್ಸಲ್ ಏರ್ ಪ್ರಾಡಕ್ಟ್ಸ್ ವೈದ್ಯಕೀಯ ಆಮ್ಲಜನಕ ಉತ್ಪಾದಿಸುವ ಪ್ರಮುಖ ಘಟಕಗಳಾಗಿವೆ. ಇವು ಕ್ರಮವಾಗಿ ಪ್ರತಿನಿತ್ಯ 65 ಟನ್ ಮತ್ತು 50 ಟನ್ ಆಕ್ಸಿಜನ್ ಉತ್ಪಾದಿಸುತ್ತಿವೆ. ಈ ಘಟಕಗಳಿಗೆ ನಗರದ ಆಸ್ಪತ್ರೆಗಳು ಬೇಡಿಕೆ ಸಲ್ಲಿಸುತ್ತಿವೆ. ಆದರೆ, ಆಸ್ಪತ್ರೆಗಳ ಅಗತ್ಯತೆಗೆ ಅನುಸಾರ ಆಮ್ಲಜನಕ ಪೂರೈಸಲಾಗದೆಯೇ ಈ ಘಟಕಗಳು ಹೆಣಗಾಡುತ್ತಿವೆ.

'ಬೆಳಿಗ್ಗೆ ಆಮ್ಲಜನಕ ಸರಬರಾಜು ಮಾಡಿದರೆ ಮತ್ತೆ ಸಂಜೆಯ ವೇಳೆಗೆ ಆಸ್ಪತ್ರೆಗಳು ಬೇಡಿಕೆ ಸಲ್ಲಿಸುತ್ತಿವೆ. ಪ್ರತಿ 8 ಗಂಟೆಗಳ ಅವಧಿಯಲ್ಲಿ ಎರಡೆರಡು ಬಾರಿ ಖಾಲಿ ಸಿಲಿಂಡರ್‌ಗಳನ್ನು ಕಳುಹಿಸುತ್ತಿವೆ. ಹೀಗಾಗಿ, ಬೇಡಿಕೆ ಅನುಸಾರ ಆಕ್ಸಿಜನ್ ಒದಗಿಸುವುದು ಸವಾಲಾಗಿ ಪರಿಣಮಿಸಿದೆ. ಕೋವಿಡ್ ಪೂರ್ವದಲ್ಲಿ 50ರಿಂದ 100 ಹಾಸಿಗೆಗಳ ಆಸ್ಪತ್ರೆಗಳು ದಿನಕ್ಕೆ 50ರಿಂದ 100 ಸಿಲಿಂಡರ್‌ಗಳನ್ನು ಬಳಸುತ್ತಿದ್ದವು. ಈಗ ಆ ಪ್ರಮಾಣ ನಾಲ್ಕು ಪಟ್ಟು ಹೆಚ್ಚಳವಾಗಿದೆ' ಎನ್ನುತ್ತಾರೆ ಯೂನಿವರ್ಸಲ್ ಏರ್ ಪ್ರಾಡಕ್ಟ್ಸ್‌ನ ನಿರ್ದೇಶಕ ಸುಬಾಷಿಶ್ ಗುಹಾ ರಾಯ್.

'ದೊಡ್ಡ ಆಸ್ಪತ್ರೆಗಳು ಆಕ್ಸಿಜನ್ ಶೇಖರಣೆಗೆ ಅಗತ್ಯ ವ್ಯವಸ್ಥೆ ಮಾಡಿಕೊಂಡಿವೆ. ಅದೇ ರೀತಿ, ಹೆಚ್ಚಿನ ಸಂಖ್ಯೆಯಲ್ಲಿ ಆಕ್ಸಿಜನ್ ಸಿಲಿಂಡರ್‌ಗಳನ್ನು ಹೊಂದಿವೆ. ಇದರಿಂದಾಗಿ ರೋಗಿಗಳಿಗೆ ಅಗತ್ಯ ಪ್ರಮಾಣದಲ್ಲಿ ಆಕ್ಸಿಜನ್ ಒದಗಿಸುತ್ತಿವೆ. ಆದರೆ, ಸಣ್ಣ ಆಸ್ಪತ್ರೆಗಳು ಬೆರಳಣಿಕೆಯಷ್ಟು ಸಿಲಿಂಡರ್‌ಗಳನ್ನು ಇರಿಸಿಕೊಂಡು, ರೋಗಿಗಳನ್ನು ದಾಖಲಿಸಿಕೊಳ್ಳುತ್ತಿವೆ. ಇದರಿಂದ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ' ಎಂದು ಬೆಂಗಳೂರು ನಗರ ಜಿಲ್ಲೆ ಆರೋಗ್ಯಾಧಿಕಾರಿ ಜಿ. ಶ್ರೀನಿವಾಸ್ ತಿಳಿಸಿದರು.

ಅಗತ್ಯ ಪ್ರಮಾಣದಲ್ಲಿ ವೈದ್ಯಕೀಯ ಆಮ್ಲಜನಕ ಆಸ್ಪತ್ರೆಗಳಿಗೆ ಪೂರೈಕೆಯಾದಲ್ಲಿ ಕೋವಿಡ್‌ನಿಂದ ಉಂಟಾಗುತ್ತಿದ್ದ ಸಾವಿನ ಪ್ರಮಾಣವನ್ನು ಸ್ವಲ್ಪಮಟ್ಟಿಗಾದರೂ ತಡೆಯಲು ಸಾಧ್ಯವಾಗುತ್ತಿತ್ತು. ಈ ಸಂದರ್ಭದಲ್ಲಿ ಸರ್ಕಾರವು ರೋಗಿಯ ಜೀವ ಉಳಿಸುವ ಪ್ರಾಣವಾಯುವಿಗೆ ಆದ್ಯತೆ ನೀಡಿ, ಆಸ್ಪತ್ರೆಗಳಲ್ಲಿ ಏನಾಗುತ್ತಿದೆ ಎನ್ನುವುದನ್ನು ಅರಿತು ಕಾರ್ಯನಿರ್ವಹಿಸಬೇಕಾಗಿತ್ತು. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದಿದ್ದಲ್ಲಿ ಕೋವಿಡ್‌ನಂತಹ ಕಾಯಿಲೆ ಇಲ್ಲಿನ ವೈದ್ಯಕೀಯ ವ್ಯವಸ್ಥೆಗೆ ಶಾಪವಾಗಿ ಪರಿಣಮಿಸಲಿದೆ ಎನ್ನುತ್ತಾರೆ ವೈದ್ಯರು.

ಆಸ್ಪತ್ರೆಗಳಿಗೆ ಶೇಖರಣಾ ಘಟಕ ಹೊರೆ

'ನಗರದ ಬಹುತೇಕ ಎಲ್ಲ ಆಸ್ಪತ್ರೆಗಳು ಆಕ್ಸಿಜನ್ ಕೊರತೆಯ ಸಮಸ್ಯೆ ಎದುರಿಸುತ್ತಿವೆ. ಕೋವಿಡ್ ಪೂರ್ವದ ಸ್ಥಿತಿಗೆ ಹೋಲಿಸಿದಲ್ಲಿ ವೈದ್ಯಕೀಯ ಆಮ್ಲಜನಕದ ಬೇಡಿಕೆ ಐದು ಪಟ್ಟು ಹೆಚ್ಚಾಗಿದೆ. ಆಮ್ಲಜನಕ ಶೇಖರಣಾ ಘಟಕವನ್ನು ಎಲ್ಲ ಆಸ್ಪತ್ರೆಗಳು ಅಳವಡಿಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಘಟಕಗಳಿಗೆ ₹ 1.50 ಕೋಟಿ ವೆಚ್ಚವಾಗಲಿದೆ. ಹಾಗಾಗಿ, ದೈನಂದಿನ ಪೂರೈಕೆಯನ್ನೇ ಬಹುತೇಕ ಆಸ್ಪತ್ರೆಗಳು ಅವಲಂಬಿಸಿವೆ' ಎಂದು ಫಾನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

'ಸರ್ಕಾರವು ಈಗ ಆಸ್ಪತ್ರೆಗಳ ಸಂಗ್ರಹಣಾ ಸಾಮರ್ಥ್ಯ, ಬೇಡಿಕೆಯ ದತ್ತಾಂಶ ಸಂಗ್ರಹ ಮಾಡುತ್ತಿದೆ. ಆದರೆ, ಯಾವ ರೀತಿ ಪರಿಹಾರ ಒದಗಿಸಲಿದೆ ಎನ್ನುವುದು ತಿಳಿದಿಲ್ಲ. ರಾಜ್ಯದಲ್ಲಿನ ಆಕ್ಸಿಜನ್ ಉತ್ಪಾದನಾ ಘಟಕಗಳು ಆಮ್ಲಜನಕವನ್ನು ಬೇರೆ ರಾಜ್ಯಗಳಿಗೆ ಕೂಡ ಪೂರೈಕೆ ಮಾಡುತ್ತಿದೆ. ಇದರಿಂದಾಗಿ ಅಗತ್ಯಕ್ಕೆ ಅನುಸಾರ ಆಕ್ಸಿಜನ್ ಸಿಗುತ್ತಿಲ್ಲ' ಎಂದು ವಿವರಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ 'ಆಕ್ಸಿಪ್ಲಾಂಟ್ ಇಂಡಿಯಾ ಪ್ರೈ.ಲಿ.ನಲ್ಲಿ ಸಿಲಿಂಡರ್‌ಗಳಿಗೆ ಸಿಬ್ಬಂದಿ ಆಕ್ಸಿಜನ್ ಅನ್ನು ಮರುಪೂರಣ ಮಾಡುತ್ತಿರುವುದು ಪ್ರಜಾವಾಣಿ ಚಿತ್ರ

'ಉತ್ಪಾದನಾ ಘಟಕ ನಿರ್ಮಾಣ ಸುಲಭವಲ್ಲ'

'ಕೋವಿಡ್ ಬಳಿಕ ವೈದ್ಯಕೀಯ ಆಮ್ಲಜನಕಕ್ಕೆ ಬೇಡಿಕೆ ಹೆಚ್ಚುತ್ತಿದೆ. ಆದರೆ, ಉತ್ಪಾದನೆ ಮತ್ತು ಪೂರೈಕೆಯಲ್ಲಿ ಸಮಸ್ಯೆಯಿಲ್ಲ. ಪ್ರಕರಣಗಳು ಹೆಚ್ಚಾದಂತೆ ಕೇಂದ್ರ ಸರ್ಕಾರ ಕೂಡ ಆಮ್ಲಜನಕದ ಪೂರೈಕೆ ಹೆಚ್ಚಿಸಲಿದೆ. ಕೆಲವು ಖಾಸಗಿ ಆಸ್ಪತ್ರೆಗಳು ಆಮ್ಲಜನಕದ ಕೊರತೆ ಎದುರಾಗಿದೆ ಎಂಬಂತೆ ಬಿಂಬಿಸುತ್ತಿವೆ. ಮೆಡ್‌ಸ್ಟಾರ್, ಅಪೂರ್ವ ಆಸ್ಪತ್ರೆಗಳು ಆಕ್ಸಿಜನ್ ಕೊರತೆ ಇದೆ ಎಂದಾಗ ಆ ಆಸ್ಪತ್ರೆಗಳ ಬಗ್ಗೆ ಅಧ್ಯಯನ ನಡೆಸಲಾಯಿತು. ಅವು ಕೇವಲ 8 ಸಿಲಿಂಡರ್‌ಗಳನ್ನು ಇಟ್ಟುಕೊಂಡಿದ್ದವು. ಕನಿಷ್ಠ 20 ಸಿಲಿಂಡರ್‌ಗಳನ್ನು ಇಟ್ಟುಕೊಂಡಿದ್ದರೂ ಸಮಸ್ಯೆಯಾಗುತ್ತಿರಲಿಲ್ಲ' ಎಂದು ಆರೋಗ್ಯ ಇಲಾಖೆ ವೈದ್ಯಕೀಯ ವಿಭಾಗದ ಉಪನಿರ್ದೇಶಕ ಡಾ.ಎಂ.ಸೆಲ್ವರಾಜನ್ ತಿಳಿಸಿದರು.

'ಕೋವಿಡ್ ಮೊದಲನೆ ಅಲೆಯು ಆಸ್ಪತ್ರೆಗಳಿಗೆ ಹಲವು ಪಾಠಗಳನ್ನು ಕಲಿಸಿದೆ. ಇದರಿಂದಾಗಿ ಎಚ್ಚೆತ್ತುಕೊಂಡು ಆಕ್ಸಿಜನ್ ಶೇಖರಣಾ ಸಾಮರ್ಥ್ಯವನ್ನು ಆಸ್ಪತ್ರೆಗಳು ಹೆಚ್ಚಿಸಿಕೊಳ್ಳಬೇಕಾಗಿತ್ತು. ಆದರೆ, ಬೆರಳಣಿಕೆಯಷ್ಟು ಸಿಲಿಂಡರ್‌ಗಳನ್ನು ಇರಿಸಿಕೊಂಡು, ರೋಗಿಗಳನ್ನು ದಾಖಲಿಸಿಕೊಂಡಲ್ಲಿ ಸಮಸ್ಯೆಯಾಗದೆ ಇರದು. ಪ್ರಮುಖ ಆಕ್ಸಿಜನ್ ಉತ್ಪಾದನಾ ಘಟಕಗಳು ಬಳ್ಳಾರಿಯಲ್ಲಿವೆ. ಉಕ್ಕಿನ ಕೈಗಾರಿಕೆಗಳು ಇರುವ ಕಡೆ ಈ ಘಟಕಗಳು ಇರುತ್ತವೆ. ಇಲ್ಲಿ ಹೊಸದಾಗಿ ಘಟಕ ನಿರ್ಮಿಸಲು ಸಾಧ್ಯವಾಗುವುದಿಲ್ಲ. ಕೆಲವೊಂದು ನಿಯಮಗಳು ಅಡ್ಡಿಯಾಗುವ ಜತೆಗೆ 400ರಿಂದ 500 ಎಕರೆ ಜಾಗ ಬೇಕಾಗುತ್ತದೆ' ಎಂದು ವಿವರಿಸಿದರು.

ಕೋವಿಡ್ ಎದುರಿಸಲು ಅಧಿಕ ಆಕ್ಸಿಜನ್ ಅಗತ್ಯ

'ಕೋವಿಡ್ ಕಾಣಿಸಿಕೊಂಡ ಬಳಿಕ ಆಮ್ಲಜನಕ್ಕೆ ಬೇಡಿಕೆ ಹೆಚ್ಚಿದೆ. ಈ ಮೊದಲು ಒಬ್ಬ ರೋಗಿಗೆ ದಿನಕ್ಕೆ 2ಲೀ.ನಿಂದ 4 ಲೀ. ನೀಡಲಾಗುತ್ತಿತ್ತು. ಈಗ 10 ಲೀ.ನಿಂದ 30ಲೀ. ವರೆಗೂ ಬೇಕಾಗುತ್ತಿದೆ. ಕೋವಿಡ್ ಪೀಡಿತರಿಗೆ ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕದ ಅವಶ್ಯಕತೆ ಇರುತ್ತದೆ. ಕೆಲವು ಆಸ್ಪತ್ರೆಗಳು ಆಕ್ಸಿಜನ್ ಜನರೇಟರ್‌ಗಳನ್ನು ಅಳವಡಿಸಿಕೊಂಡಿರುತ್ತವೆ. ಇದು ಗಾಳಿಯಲ್ಲಿನ ಆಮ್ಲಜನಕ ಹಿಡಿದಿಟ್ಟುಕೊಳ್ಳಲಿದೆ. ಈ ಯಂತ್ರಗಳು ಸಾಮರ್ಥ್ಯಕ್ಕೆ ಅನುಸಾರವಾಗಿ ನಿಮಿಷಕ್ಕೆ 80 ಲೀಟರ್‌ನಿಂದ 5 ಸಾವಿರ ಲೀಟರ್‌ವರೆಗೆ ಕೂಡ ಆಮ್ಲಜನಕ ಒದಗಿಸುತ್ತಿವೆ' ಎಂದು ಸುಗುಣ ಆಸ್ಪತ್ರೆ ಮುಖ್ಯಸ್ಥ ಹಾಗೂ ಫಾನಾದ ನಿಕಟಪೂರ್ವ ಅಧ್ಯಕ್ಷ ಡಾ.ಆರ್. ರವೀಂದ್ರ ತಿಳಿಸಿದರು.

'ಜಿಗಣಿಯಲ್ಲಿ ಅಮೆರಿಕ ಮೂಲದ ಕಂಪನಿ ಆಕ್ಸಿಜನ್ ಜನರೇಟರ್‌ಗಳನ್ನು ತಯಾರಿಸುತ್ತಿದೆ. ಆದೇಶ ನೀಡಿದ ಎರಡು ತಿಂಗಳ ಬಳಿಕ ಸಿಗುತ್ತವೆ. ಈ ಯಂತ್ರವು ₹ 60 ಲಕ್ಷದಿಂದ ಪ್ರಾರಂಭವಾಗಲಿದೆ. ಹೆಚ್ಚಿನ ಸಾಮರ್ಥ್ಯದ ಯಂತ್ರ ಬೇಕಾದಲ್ಲಿ ಕೋಟ್ಯಂತರ ರೂಪಾಯಿ ವ್ಯಯ ಮಾಡಬೇಕಾಗುತ್ತದೆ. ಆಕ್ಸಿಜನ್ ಕಾನ್ಸನ್ಟ್ರೇಟರ್ ಎಂಬ ಯಂತ್ರವನ್ನು ಮನೆಗಳಲ್ಲಿ ಆರೈಕೆಗೆ ಒಳಗಾದ ರೋಗಿಗಳು ಬಳಕೆ ಮಾಡಬಹುದು. ಅವು ಎರಡರಿಂದ ಹತ್ತು ಲೀಟರ್ ಆಕ್ಸಿಜನ್ ಒದಗಿಸುತ್ತವೆ' ಎಂದು ಹೇಳಿದರು.

ಕೋವಿಡ್ ಆಸ್ಪತ್ರೆಗಳಲ್ಲಿ ಲಸಿಕೆ ವಿತರಣೆ | ಆರೋಗ್ಯವಂತರಿಗೂ ಸೋಂಕು ತಗಲುವ ಭೀತಿ

'ಲಸಿಕೆ ವಿತರಣೆಗೆ ಕ್ರೀಡಾಂಗಣ ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಪಾರಾಗಲು ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಆಸ್ಪತ್ರೆಗೆ ಬರುತ್ತಿರುವವರಲ್ಲಿಯೇ ಹೆಚ್ಚು ಸೋಂಕು ಕಾಣಿಸಿಕೊಳ್ಳುತ್ತಿದೆ. ಕೋವಿಡ್ ಆಸ್ಪತ್ರೆಗಳಲ್ಲಿಯೇ ಲಸಿಕೆ ವಿತರಣೆ ಮಾಡುತ್ತಿರುವುದು ಇದಕ್ಕೆ ಕಾರಣ ಎಂದು ಹಿರಿಯ ನಾಗರಿಕರು ದೂರುತ್ತಾರೆ.

'ಕೋವಿಡ್ ರೋಗಿಗಳಿರುವ ಆಸ್ಪತ್ರೆಯಲ್ಲಿಯೇ ಲಸಿಕೆ ವಿತರಣೆಯೂ ಮಾಡಲಾಗುತ್ತಿದೆ. ಅಂದರೆ, ಆರೋಗ್ಯವಾಗಿರುವವರೂ ಇಂತಹ ಅಪಾಯಕಾರಿ ಸ್ಥಳಗಳಿಗೆ ಬರಬೇಕಾಗಿದೆ. ಹೆಚ್ಚು ಜನ ಸೇರುತ್ತಿರುತ್ತಿರುವುದರಿಂದ ಅಂತರ ಕಾಪಾಡಿಕೊಳ್ಳುವುದಕ್ಕೂ ಆಗುತ್ತಿಲ್ಲ' ಎಂದು ಹಿರಿಯ ನಾಗರಿಕ ಕೃಷ್ಣಮೂರ್ತಿ ದೂರಿದರು.

ಸಿ.ವಿ. ರಾಮನ್ ನಗರ ಮತ್ತು ಇಂದಿರಾ ನಗರದಲ್ಲಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ ಲಸಿಕೆ ಹಾಕಿಸಿಕೊಳ್ಳಲು ಬಂದಿದ್ದ ಅನೇಕರು ಇದೇ ರೀತಿ ಅಸಮಾಧಾನ ವ್ಯಕ್ತಪಡಿಸಿದರು.

'ನಗರದ ದೊಡ್ಡ ಕ್ರೀಡಾಂಗಣಗಳನ್ನು ಈ ಕಾರ್ಯಕ್ಕೆ ಬಳಸಿಕೊಳ್ಳಲು ಅವಕಾಶವಿದೆ. ಸರ್ಕಾರ ಈ ನಿಟ್ಟಿನಲ್ಲಿ ಯೋಚಿಸಿ ಕಾರ್ಯಪ್ರವೃತ್ತರಾಗಬೇಕು. ವಿಶಾಲ ಮೈದಾನಗಳಲ್ಲಿ ಜನ ತಾವೇ ತಾವಾಗಿ ಅಂತರ ಕಾಪಾಡಿಕೊಳ್ಳುತ್ತಾರೆ. ಸೋಂಕು ತಗುಲುವ ಅಪಾಯವೂ ಇರುವುದಿಲ್ಲ. ಕೋವಿಡ್ ಆಸ್ಪತ್ರೆಗಳಲ್ಲಿನ ರೋಗಿಗಳಿಗೂ ತೊಂದರೆ ಉಂಟಾಗುವುದಿಲ್ಲ' ಎಂದು ಅವರು ಸಲಹೆ ನೀಡಿದರು.

ಮಲ್ಲೇಶ್ವರದ ಫುಟ್‌ಬಾಲ್ ಮೈದಾನ, ನ್ಯಾಷನಲ್ ಕಾಲೇಜು ಮೈದಾನ, ಅರಮನೆ ಮೈದಾನ, ಕಂಠೀರವ ಕ್ರೀಡಾಂಗಣ, ಕಬ್ಬನ್ ಪಾರ್ಕ್, ಲಾಲ್‌ಬಾಗ್ ನಲ್ಲಿ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಬೇಕು ಎಂದು ಹಲವರು ಒತ್ತಾಯಿಸುತ್ತಾರೆ.

3 ಮೀಟರ್ ಅಂತರ ಅಗತ್ಯ: 'ಎರಡನೇ ಅಲೆಯಲ್ಲಿ ವೈರಾಣು ತೀವ್ರವಾಗಿ ಹರಡುತ್ತಿದೆ. ಕೇವಲ 6 ಅಡಿ ಅಂತರ ಕಾಪಾಡಿಕೊಂಡರೂ ಪ್ರಯೋಜನವಾಗದು. ಕನಿಷ್ಠ 3 ಮೀಟರ್ ಅಂತರ ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ಎಷ್ಟೇ ವೈದ್ಯರು, ಶುಶ್ರೂಷಕರು ಕೆಲಸ ಮಾಡಿದರೂ, ಸಾವಿರಾರು ಐಸಿಯು ಹಾಸಿಗೆಗಳು ಇದ್ದರೂ ಯಾರೂ ಕಾಪಾಡಲು ಆಗುವುದಿಲ್ಲ. ಆದರೆ, ಆಸ್ಪತ್ರೆಗಳು ಚಿಕ್ಕದಿರುವುದರಿಂದ ಹೆಚ್ಚು ಅಂತರ ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ' ಎಂದು ವೈದ್ಯರೊಬ್ಬರು ಹೇಳಿದರು.

ಮಾರ್ಗಸೂಚಿ ಪಾಲನೆ: 'ಲಸಿಕೆ ಹಾಕಿಸಿಕೊಳ್ಳಲು ಕೋವಿಡ್ ಆಸ್ಪತ್ರೆಗೆ ಬರುತ್ತಿರುವವರಿಗೂ ಸೋಂಕು ತಗುಲುವ ಅಪಾಯ ಇರಬಹುದು. ಆದರೆ, ನಾವು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಕೋವಿಡ್ ಮಾರ್ಗಸೂಚಿಗಳ ಅನ್ವಯವೇ ಲಸಿಕೆ ವಿತರಿಸಲಾಗುತ್ತಿದೆ' ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಅನ್ಸರ್ ಅಹಮದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್ ಆಸ್ಪತ್ರೆಗಳ ಬದಲು ಕ್ರೀಡಾಂಗಣ ಅಥವಾ ಆಟದ ಮೈದಾನಗಳಲ್ಲಿ ಇದಕ್ಕೆ ವ್ಯವಸ್ಥೆ ಮಾಡುವುದು ಉತ್ತಮ ಸಲಹೆ. ಇದನ್ನು ಉನ್ನತ ಅಧಿಕಾರಿಗಳ ಗಮನಕ್ಕೆ ತರಲಾಗುವುದು' ಎಂದೂ ಹೇಳಿದರು.

ನಗರದ ಕೆ.ಸಿ. ಜನರಲ್ ಆಸ್ಪತ್ರೆಗೆ ಲಸಿಕೆ ಹಾಕಿಸಿಕೊಳ್ಳಲು ಬಂದಿದ್ದ ಸಾರ್ವಜನಿಕರು –ಪ್ರಜಾವಾಣಿ ಚಿತ್ರ

'ಸಿಸಿಟಿವಿ ಕ್ಯಾಮೆರಾ ಇರಲಿ'

'ವಿಶಾಲ ಮೈದಾನಗಳು, ಕ್ರೀಡಾಂಗಣದಲ್ಲಿ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಬಹುದು. ಆದರೆ ಸಂದರ್ಭದಲ್ಲಿ ಲಸಿಕೆಗಳು ದುರುಪಯೋಗವಾಗುವ ಸಾಧ್ಯತೆಯೂ ಇರುತ್ತದೆ. ಇಂತಹ ಕಡೆಗೆ ತಾತ್ಕಾಲಿಕವಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸ ಬೇಕು' ಎಂದು ವೈದ್ಯರೊಬ್ಬರು ಸಲಹೆ ನೀಡಿದರು.

'ಜಿಲ್ಲಾ ಶಸ್ತ್ರಚಿಕಿತ್ಸಕರು, ಆಯಾ ಆಸ್ಪತ್ರೆಗಳ ಅಧೀಕ್ಷಕರನ್ನು ಮೇಲ್ವಿಚಾರಣೆಗೆ ನೇಮಕ ಮಾಡಬೇಕು' ಎಂದೂ ಹೇಳಿದರು.

ನಗರದ ಕೋವಿಡ್ ಅಂಕಿ–ಅಂಶ

7,97,292	ಒಟ್ಟು ಪ್ರಕರಣಗಳು (7,76,093 ನಿನ್ನೆಯ ವಿವರ)
2,81,767	ಸಕ್ರಿಯ ಪ್ರಕರಣಗಳು
5,08,923	ಗುಣಮುಖರಾದವರು
6,601	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	21,199
ಗುಣಮುಖ	10,361
ಸಾವು	64

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ಸೋಂಕಿತ ಅಪರಾಧಿಗಳ ಚಿಕಿತ್ಸೆ ಸವಾಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೊದಲ ಬಾರಿ ಕಾಣಿಸಿಕೊಂಡಾಗ, ಅಂದರೆ ಕಳೆದ ವರ್ಷ ಯಾವುದೇ ವ್ಯವಸ್ಥೆ ಸರಿಯಾಗಿರಲಿಲ್ಲ. ಸರ್ಕಾರಕ್ಕೂ ಈ ಮಾದರಿಯ ಸಮಸ್ಯೆ ಹೊಸದಾಗಿದ್ದರಿಂದ ಎಲ್ಲರಿಗೂ ಹೆಚ್ಚು ಆತಂಕವಿತ್ತು. ಪಿಪಿಇ ಕಿಟ್, ಮಾಸ್ಕ್, ಸ್ಯಾನಿಟೈಸರ್ ಸೌಲಭ್ಯ ಒದಗಿಸುವವರೆಗೆ ಅಳುಕಿನಿಂದಲೇ ರೋಗಿಗಳ ಶುಶ್ರೂಷೆ ಮಾಡಬೇಕಾಯಿತು. ಹಿರಿಯ ವೈದ್ಯರು, ಸೂಪರಿಂಟೆಂಡೆಂಟ್ ಎಲ್ಲರೂ ಧೈರ್ಯ ನೀಡಿದ್ದರಿಂದ ಕೆಲಸ ಸುಲಭವಾಯಿತು.'

'ಈ ಬಾರಿ ಎಲ್ಲ ಸಿದ್ಧತೆ ಮಾಡಿಕೊಂಡಿದ್ದವು. ಆದರೆ, ರೋಗಿಗಳ ಸಂಖ್ಯೆ ನಿರೀಕ್ಷೆಗೂ ಮೀರಿ ಹೆಚ್ಚಾಗಿದೆ. ಹಲವು ಆಸ್ಪತ್ರೆಗಳಲ್ಲಿ ತಂದೆ–ತಾಯಿ ಮಕ್ಕಳು ಎಲ್ಲರಿಗೂ ಏಕಕಾಲಕ್ಕೆ ಚಿಕಿತ್ಸೆ ಪಡೆಯುವ ಸ್ಥಿತಿ ನಿರ್ಮಾಣವಾಗಿದೆ.'

'ನಾನು ಕೆಲಸ ಮಾಡುತ್ತಿರುವ ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಪರಪ್ಪನ ಅಗ್ರಹಾರದಲ್ಲಿರುವ ಕೈದಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಅವರಲ್ಲಿಯೂ ಕೋವಿಡ್ ರೋಗಿಗಳ ಸಂಖ್ಯೆ ಹೆಚ್ಚಾಗಿದೆ. ಸದ್ಯ 45 ಕೈದಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ'

ಶುಶ್ರೂಷಕರ ಅಂತರಂಗ

ಮಂಜುಳಾ ಕುಮಾರಿ

'ಈ ಕೈದಿಗಳು ಅಪರಾಧ ಹಿನ್ನೆಲೆ ಹೊಂದಿರುವುದರಿಂದ ಆತಂಕ ಇದ್ದೇ ಇರುತ್ತದೆ. ಅವರಿಗೆ ಏನೇ ಚಿಕಿತ್ಸೆ, ಔಷಧ ಕೊಡಬೇಕಾದರೆ ಪೊಲೀಸರ ಉಪಸ್ಥಿತಿ ಇರಬೇಕು. ಪೊಲೀಸರು ಜೊತೆಗಿದ್ದರೂ ಅಳಕು ಇದ್ದೇ ಇರುತ್ತದೆ. ಸೋಂಕು ಹರಡುವ ಭೀತಿಯೊಂದಿಗೆ ಇಂತಹ ಅಳಕನ್ನೂ ನಾವು ಎದುರಿಸಿದ್ದೇವೆ'

'ನನ್ನ ಪತಿ ಬಿಬಿಎಂಪಿ ಶಾಲೆಯಲ್ಲಿ ಶಿಕ್ಷಕರಾಗಿದ್ದು, ಅವರೂ ಈಗ ಕೋವಿಡ್ ಕರ್ತವ್ಯ ಮಾಡುತ್ತಿದ್ದಾರೆ. ಒಂದೇ ಮನೆಯಲ್ಲಿ ಇಬ್ಬರು ಕೊರೊನಾ ಸೇನಾನಿಗಳು ಇದ್ದೇವೆ. ಕರ್ತವ್ಯ ನಿಭಾಯಿಸುವುದರೊಂದಿಗೆ ಮಕ್ಕಳ ಬಗ್ಗೆಯೂ ಕಾಳಜಿ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ'

'1992ರಲ್ಲಿ ನನ್ನ ವೃತ್ತಿ ಜೀವನ ಆರಂಭವಾಯಿತು. ಸಿ.ವಿ. ರಾಮನ್ ನಗರದಲ್ಲಿರುವ ಕ್ಷಯರೋಗ ಆಸ್ಪತ್ರೆಯಲ್ಲಿ ಕೆಲಸ ಆರಂಭಿಸಿದೆ. ಈಗ ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಲ್ಲಿ ಹಿರಿಯ ಶುಶ್ರೂಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ'

'ಸೋಂಕಿನ ಸೌಮ್ಯ ಸ್ವಭಾವದ ಲಕ್ಷಣ ಹೊಂದಿರುವಂಥವರಿಗೆ ಮಾತ್ರ ಚಿಕಿತ್ಸೆ ನೀಡಲಾಗುತ್ತಿದೆ. ಗಂಭೀರ ಪರಿಸ್ಥಿತಿಗೆ ತಲುಪಿಸಿದರೆ ಆ ರೋಗಿಗಳನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಗುತ್ತಿದೆ. ಸೋಂಕು ತೀವ್ರವಾಗಿ ಹರಡುತ್ತಿರುವುದರಿಂದ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ನನಗೂ ಸೋಂಕು ತಗುಲಿದ್ದು ಸದ್ಯ ಹೋಂ ಐಸೊಲೇಷನ್‌ನಲ್ಲಿದ್ದೇನೆ. ಸೋಂಕಿನ ಬಗ್ಗೆ ಆತಂಕ ಪಡುವುದಕ್ಕಿಂತ ಎಚ್ಚರಿಕೆಯಿಂದಿರುವುದು ಉತ್ತಮ'.

ಕೊರೊನಾ ಯೋಧರ ಪರಿಚಯ

ಹೆಸರು: ಎಂ. ಮಂಜುಳಾಕುಮಾರಿ
ಊರು: ಬೆಂಗಳೂರು
ವೃತ್ತಿ: ಹಿರಿಯ ಶುಶ್ರೂಷಕಿ
ಸೇವೆ: 28 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಇಂದಿರಾ ನಗರ

ರಾಯಭಾರ ಕಚೇರಿಗಳಿಗೆ ಆಕ್ಸಿಜನ್: ಯೂತ್ ಕಾಂಗ್ರೆಸ್ ನಡೆಗೆ ಕೇಂದ್ರ ಗರಂ

ನವದೆಹಲಿ: ಫಿಲಿಪ್ಪೀನ್ಸ್ ರಾಯಭಾರ ಕಚೇರಿ ಹಾಗೂ ನ್ಯೂಜಿಲೆಂಡ್ ಹೈಕಮಿಷನ್ ಕಚೇರಿಗೆ ಯೂತ್ ಕಾಂಗ್ರೆಸ್ ಆಮ್ಲಜನಕ ಸಿಲಿಂಡರ್‌ಗಳನ್ನು ಪೂರೈಕೆ ಮಾಡಿರುವುದು ಕೇಂದ್ರ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದೆ.

ಬಿ.ವಿ.ಶ್ರೀನಿವಾಸ್ ಅಧ್ಯಕ್ಷರಾಗಿರುವ ಯೂತ್ ಕಾಂಗ್ರೆಸ್‌ನ ಈ ನಡೆಯನ್ನು ಖಂಡಿಸಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಟ್ವೀಟ್ ಮಾಡಿದ್ದಾರೆ.

'ಫಿಲಿಪ್ಪೀನ್ಸ್ ರಾಯಭಾರ ಕಚೇರಿಯಲ್ಲಿ ಯಾರೂ ಕೋವಿಡ್‌ನಿಂದ ಬಳಲುತ್ತಿಲ್ಲ. ಆ ಕಚೇರಿಗೆ ಆಮ್ಲಜನಕ ಸಿಲಿಂಡರ್ ನೀಡಿರುವ ಯೂತ್ ಕಾಂಗ್ರೆಸ್‌ನ ನಡೆ ಅನಪೇಕ್ಷಿತ ಹಾಗೂ ಪ್ರಚಾರಕ್ಕಾಗಿ ಮಾಡಿದ ಯತ್ನ' ಎಂದು ಸಚಿವ ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಇದಕ್ಕೂ ಮುನ್ನ, ಪಕ್ಷದ ಯುವ ಘಟಕ ಮಾಡಿದ ಕಾರ್ಯವನ್ನು ತಮ್ಮ ಟ್ವೀಟ್‌ನಲ್ಲಿ ಪ್ರಸ್ತಾಪಿಸಿದ್ದ ಕಾಂಗ್ರೆಸ್‌ನ ಹಿರಿಯ ಮುಖಂಡ ಜೈರಾಮ್ ರಮೇಶ್, 'ರಾಯಭಾರ ಕಚೇರಿಗಳ ಸಂಕಷ್ಟಕ್ಕೆ ಯೂತ್ ಕಾಂಗ್ರೆಸ್ ಸ್ಪಂದಿಸಿದೆ. ವಿದೇಶಾಂಗ ಸಚಿವಾಲಯ ನಿದ್ದೆ ಮಾಡುತ್ತಿದೆ' ಎಂದು ಪ್ರಶ್ನಿಸಿದ್ದರು.

ಕೋವಿಡ್ ಕರ್ಫ್ಯೂ ಕಾರಣ ಯಶವಂತಪುರದ ಎಪಿಎಂಸಿ ಆವರಣದಲ್ಲಿ ಮುಚ್ಚಿರುವ ಮಳಿಗೆಗಳ ಮುಂದೆ ನಿದ್ದೆಗೆ ಜಾರಿದ ಕಾರ್ಮಿಕರು –ಪ್ರಜಾವಾಣಿ ಚಿತ್ರ

ಬಿಬಿಎಂಪಿ ಆರೋಗ್ಯ ಕೇಂದ್ರದಲ್ಲಿ ಉಚಿತವಾಗಿ ಕೋವಿಡ್ ಲಸಿಕೆ ಪಡೆದುಕೊಳ್ಳಲು ಸಾರ್ವಜನಿಕರು ಸರತಿ ಸಾಲಿನಲ್ಲಿ ಕಾಯುತ್ತಿರುವುದು – ಪ್ರಜಾವಾಣಿ ಚಿತ್ರ

ಭಾರತಕ್ಕೆ ಹೆಚ್ಚುವರಿ 1,000 ವೆಂಟಿಲೇಟರ್: ಬ್ರಿಟನ್

ಲಂಡನ್ (ಪಿಟಿಐ): ಕೋವಿಡ್–19 ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ಹೆಚ್ಚುವರಿಯಾಗಿ 1,000 ವೆಂಟಿಲೇಟರ್‌ಗಳನ್ನು ಕಳುಹಿಸುವುದಾಗಿ ಬ್ರಿಟನ್ ಭಾನುವಾರ ಹೇಳಿದೆ.

ಕೋವಿಡ್–19 ಪ್ರಸರಣ ನಿಯಂತ್ರಣ ಸೇರಿದಂತೆ ಉಭಯ ರಾಷ್ಟ್ರಗಳ ನಡುವಿನ ಸಹಕಾರವನ್ನು ಗಟ್ಟಿಗೊಳಿಸಲು ಬ್ರಿಟಿಷ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಂಗಳವಾರ ವರ್ಚುವಲ್ ಸಭೆ ನಡೆಸಲಿದ್ದು, ಅದಕ್ಕೂ ಮುನ್ನವೇ ಬ್ರಿಟನ್‌ನಿಂದ ಈ ಹೇಳಿಕೆ ಹೊರ ಬಿದ್ದಿದೆ.

ಭಾರತಕ್ಕೆ 200 ವೆಂಟಿಲೇಟರ್‌ಗಳು, 495 ಆಮ್ಲಜನಕ ಕಾನ್ಸಂಟ್ರೇಟರ್ ಮತ್ತು 3 ಆಮ್ಲಜನಕ ಉತ್ಪಾದನಾ ಘಟಕ ಒದಗಿಸುವುದಾಗಿ ಕಳೆದ ವಾರ ಬ್ರಿಟನ್ ಹೇಳಿತ್ತು. ಈಗ ಹೆಚ್ಚುವರಿ ವೆಂಟಿಲೇಟರ್ ಕಳುಹಿಸುವುದಾಗಿ ಹೇಳಿದೆ.

ಕೋವಿಡ್ ವಿರುದ್ಧ ಜಯಿಸಿದ ಮಹಾಲಕ್ಷ್ಮಿ ಬಡಾವಣೆ ನಿವಾಸಿ ಶಶಿಧರ್

ಮುನ್ನೆಚ್ಚರಿಕೆ, ಆತ್ಮವಿಶ್ವಾಸವೇ ಗೆಲುವಿನ ಸಾಧನ

ಕೋವಿಡ್ ಗೆದ್ದವರ ಕಥೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ವೈರಸ್ ಸೋಂಕಿನ ಗುಣಲಕ್ಷಣಗಳು ಅರಿವಿಗೆ ಬರುತ್ತಿದ್ದಂತೆಯೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಆತ್ಮವಿಶ್ವಾಸ ಕಳೆದುಕೊಳ್ಳದೇ ವೈದ್ಯರು, ವೈದ್ಯಕೀಯ ಸಿಬ್ಬಂದಿಯ ಸಲಹೆಗಳನ್ನು ಪಾಲಿಸಿದರೆ ಕೋವಿಡ್ ವಿರುದ್ಧ ಜಯಿಸುವುದು ಸುಲಭ. ತಡಮಾಡದೆ ಪರೀಕ್ಷಿಸಿಕೊಳ್ಳುವುದರಲ್ಲೇ ಮೊದಲ ಹಂತದ ಜಯ ಅಡಗಿರುತ್ತದೆ' ಎನ್ನುತ್ತಾರೆ ಕೋವಿಡ್‌ನಿಂದ ಗುಣಮುಖರಾಗಿರುವ ಮಹಾಲಕ್ಷ್ಮಿ ಬಡಾವಣೆ ನಿವಾಸಿ ಶಶಿಧರ್.

'ಏಪ್ರಿಲ್ 3ರ ಸಂಜೆ ನನಗೆ ಮತ್ತು ಪತ್ನಿಗೆ ಇಬ್ಬರಿಗೂ ಜ್ವರ ಕಾಣಿಸಿಕೊಂಡಿತ್ತು. ಕುಟುಂಬ ವೈದ್ಯರ ಬಳಿ ಹೋದಾಗ ಸಾಮಾನ್ಯ ವೈರಾಣು ಜ್ವರದ ಲಕ್ಷಣ ಎಂದು ಔಷಧಿ ನೀಡಿ ಕಳುಹಿಸಿದರು. ಪತ್ನಿಗೆ ಒಂದೇ ದಿನಕ್ಕೆ ಜ್ವರ ಕಡಿಮೆಯಾಯಿತು. ಆದರೆ, ನನಗೆ ಮೂರು ದಿನವಾದರೂ ಜ್ವರ ಇತ್ತು. ಏ. 7ಕ್ಕೆ ಬಿಬಿಎಂಪಿ ಕೋವಿಡ್ ಕೇಂದ್ರದಲ್ಲಿ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮಾಡಿಸಿಕೊಂಡೆ. ನೆಗೆಟಿವ್ ಎಂದರು. ಆದರೆ, ವರದಿ ನೀಡಿರಲಿಲ್ಲ' ಎಂದು ಅವರು ತಮ್ಮ ಅನುಭವ ಹಂಚಿಕೊಂಡರು.

'ಮೂರು ದಿನಗಳಾದರೂ ವರದಿ ಬರಲಿಲ್ಲ. ಮತ್ತೆ ಬಿಬಿಎಂಪಿ ಸಹಾಯವಾಣಿಗೆ ಕರೆ ಮಾಡಿದರೂ ಸ್ಪಂದನೆ ಸಿಗಲಿಲ್ಲ. ಏ.11ಕ್ಕೆ ಖಾಸಗಿ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸಿಕೊಂಡೆ. ಸೋಂಕು ತಗುಲಿದೆ ಎಂಬ ವರದಿ ಏ. 12ಕ್ಕೆ ಬಂತು. ಅದೇ ದಿನ ಬಸವೇಶ್ವರನಗರ ಸಮೀಪದ ಕೆಎಚ್‌ಬಿ ಕಾಲೊನಿಯ ಪುಣ್ಯ ಆಸ್ಪತ್ರೆಗೆ ದಾಖಲಾದೆ. ಹೆಸರಿಗೆ ತಕ್ಕಂತೆ ಅತ್ಯುತ್ತಮ ವೈದ್ಯರು, ಚಿಕಿತ್ಸೆ ದೊರೆಯಿತು. ಡಾ.ನಾಗರಾಜ್ ಮತ್ತು ಡಾ.ನರಸಿಂಹ ಜ್ಞಾನಿ ಆರಂಭದಿಂದಲೇ ವೈದ್ಯರು ಧೈರ್ಯ ತುಂಬಿದರು. ರೆಮ್‌ಡಿಸಿವಿರ್ ಚುಚ್ಚುಮದ್ದು ಸಿಗುವುದು ಒಂದು ದಿನ ತಡವಾಯಿತು. ಬಳಿಕ ಐದು ಡೋಸ್ ನೀಡಿದರು' ಎಂದು ಆಸ್ಪತ್ರೆಯಲ್ಲಿದ್ದ ದಿನಗಳನ್ನು ವಿವರಿಸಿದರು.

'ಎರಡನೇ ದಿನದಿಂದಲೇ ನಾನು ಧೈರ್ಯದಿಂದ ಇದ್ದೆ. ಮೊದಲ ದಿನದಿಂದ ಆಮ್ಲಜನಕ ನೀಡಿದ್ದರು. ಕೊನೆಯ ಎರಡು ದಿನ ಆಮ್ಲಜನಕದ ಪೂರೈಕೆ ಇಲ್ಲದೆ ನಿಗಾದಲ್ಲಿ ಇರಿಸಿದ್ದರು. ಏ.19ಕ್ಕೆ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದೆ' ಎಂದು ತಿಳಿಸಿದರು.

ಆಸ್ಪತ್ರೆಯಿಂದ ಬಂದ ಬಳಿಕ ಒಂದು ವಾರ ಸುಸ್ತು ಇತ್ತು. ಏ.7ಕ್ಕೆ ಸಂಗ್ರಹಿಸಿದ್ದ ಮಾದರಿಯ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟಿದೆ ಎಂದು ಏ.24ರ ಮಧ್ಯ ರಾತ್ರಿ ಬಿಬಿಎಂಪಿ ಕೋವಿಡ್ ಕೇಂದ್ರದವರು ಕರೆಮಾಡಿ ಮಾಹಿತಿ ನೀಡಿದರು. ಈ ವರದಿ ಕಾದಿದ್ದರೆ, ಕತೆ ಬೇರೆಯೇ ಆಗುತ್ತಿತ್ತು ಎಂದರು.

ಬೆಳಗಾವಿ ಲೋಕಸಭಾ ಕ್ಷೇತ್ರ: ಕುತೂಹಲ ಹೆಚ್ಚಿಸಿದ್ದ ಫಲಿತಾಂಶ

ಬಿಜೆಪಿಗೆ ಗೆಲುವಿನ 'ಕುಂದಾ'

ಪ್ರಜಾವಾಣಿ ವಾರ್ತೆ

ಬೆಳಗಾವಿ ಲೋಕಸಭಾ ಕ್ಷೇತ್ರ		
ಅಭ್ಯರ್ಥಿಗಳು	ಪಕ್ಷ	ಪಡೆದ ಮತಗಳು
ಮಂಗಲಾ ಸುರೇಶ ಅಂಗಡಿ	ಬಿಜೆಪಿ	4,40,327
ಸತೀಶ ಜಾರಕಿಹೊಳಿ	ಕಾಂಗ್ರೆಸ್	4,35,087
ಶುಭಂ ಶೆಳಕೆ	ಎಂಇಎಸ್, ಶಿವಸೇನೆ ಬೆಂಬಲಿತ ಪಕ್ಷೇತರ	1,17,174
ಗೆಲುವಿನ ಅಂತರ 5240		

ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ		
ಅಭ್ಯರ್ಥಿಗಳು	ಪಕ್ಷ	ಪಡೆದ ಮತಗಳು
ಶರಣು ಸಲಗರ	ಬಿಜೆಪಿ	70,012
ಮಾಲಾ ನಾರಾಯಣರಾವ್	ಕಾಂಗ್ರೆಸ್	50,383
ಸಯ್ಯದ್ ಅಶ್ರಬ್ ಅಲಿ ಖಾದ್ರಿ	ಜೆಡಿಎಸ್	11,402
ಮಲ್ಲಿಕಾರ್ಜುನ ಖೂಬಾ	ಪಕ್ಷೇತರ	9,457
ಗೆಲುವಿನ ಅಂತರ 20,629		

ಮಸ್ಕಿ ವಿಧಾನಸಭಾ ಕ್ಷೇತ್ರ		
ಅಭ್ಯರ್ಥಿಗಳು	ಪಕ್ಷ	ಪಡೆದ ಮತಗಳು
ಬಸನಗೌಡ ತುರ್ವಿಹಾಳ	ಕಾಂಗ್ರೆಸ್	86,337
ಪ್ರತಾಪಗೌಡ ಪಾಟೀಲ	ಬಿಜೆಪಿ	55,731
ಗೆಲುವಿನ ಅಂತರ 30,606		

ಬೆಳಗಾವಿ: ರಾಜ್ಯದಾದ್ಯಂತ ತೀವ್ರ ಕುತೂಹಲ ಮೂಡಿಸಿದ್ದ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿಯ ಮಂಗಲಾ ಸುರೇಶ ಅಂಗಡಿ ಪ್ರಯಾಸದ ಗೆಲುವು ಸಾಧಿಸಿದ್ದಾರೆ. ಕ್ಷೇತ್ರದ ಇತಿಹಾಸದಲ್ಲಿ ಇದೇ ಮೊದಲಿಗೆ ಮಹಿಳೆ ಜಯದಾಖಲಿಸಿದ್ದಾರೆ. ಪ್ರಥಮ ಪ್ರಯತ್ನದಲ್ಲೇ ಲೋಕಸಭೆ ಪ್ರವೇಶಿಸಿರುವುದು ಮತ್ತೊಂದು ವಿಶೇಷ.

ಪ್ರತಿ ಸ್ಪರ್ಧಿ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಅವರು ತೀವ್ರ ಪೈಪೋಟಿ ನೀಡಿದ್ದರಿಂದಾಗಿ, ಆಡಳಿತ ಪಕ್ಷದ ಅಭ್ಯರ್ಥಿ ಮಂಗಲಾಗೆ ಗೆಲುವು ಸುಲಭದ ತುತ್ತೇನೂ ಆಗಲಿಲ್ಲ. ಕೇಂದ್ರದಲ್ಲಿ ಸಚಿವರಾಗಿದ್ದ ಇಲ್ಲಿನ ಸಂಸದ ಸುರೇಶ ಅಂಗಡಿ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಅವರು ಸತತ ನಾಲ್ಕು ಚುನಾವಣೆಗಳಲ್ಲಿ ಭಾರಿ ಅಂತರದಿಂದ ಗೆಲುವು ಸಾಧಿಸಿದ್ದರು. ಕಳೆದ ಚುನಾವಣೆಯಲ್ಲಿ 3.91 ಲಕ್ಷ ಮತಗಳ ಅಂತರ ಗಳಿಸಿದ್ದರು. ಬಿಜೆಪಿಯ ಮತ ಗಳಿಕೆಗೆ ಸತೀಶ ಈ ಬಾರಿ ಬ್ರೇಕ್ ಹಾಕಿದ್ದಾರೆ. ಮರಾಠಿ ಭಾಷಿಗರ ಮತ ವಿಭಜನೆಯಿಂದಾಗಿ ಮತ ಗಳಿಕೆಯಲ್ಲಿ ಬಿಜೆಪಿಯು ಹಿನ್ನಡೆ ಅನುಭವಿಸಿತು ಎಂದು ವಿಶ್ಲೇಷಿಸಲಾಗುತ್ತಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಲಕ್ಷ್ಮಣ ಸವದಿ ಸೇರಿದಂತೆ ಹಲವು ಸಚಿವರು ಇಲ್ಲಿ ಅಬ್ಬರದ ಪ್ರಚಾರ ನಡೆಸಿದ್ದರು. ಯಡಿಯೂರಪ್ಪ ಜ್ವರದ ನಡುವೆಯೂ ಪ್ರಚಾರ ಕೈಗೊಂಡಿದ್ದರು. ವಿವಿಧ ಸಮಾಜಗಳ ಸಭೆ ನಡೆಸಿ, ಬೆಂಬಲ ಕೋರಿದ್ದರು. ಅದಕ್ಕೆ ತಕ್ಕಂತೆ 'ಮತ ಫಸಲು' ಸಿಕ್ಕಿಲ್ಲ. ಆದರೆ, ಬಿಜೆಪಿಗೆ ಗೆಲುವಿನ 'ಕುಂದಾ' ದಕ್ಕಿದೆ.

ಮತ ಎಣಿಕೆ ಆರಂಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮುನ್ನಡೆ ಸಾಧಿಸಿದ್ದರಿಂದ ಬಿಜೆಪಿ ಪಾಳಯದಲ್ಲಿ ಆತಂಕ ಶುರುವಾಗಿತ್ತು. ಬಳಿಕ, ಮಂಗಲಾ ಮುನ್ನಡೆ ಕಾಯ್ದುಕೊಂಡರು. 10ಸಾವಿರ ಗಡಿ ದಾಟಿ ಮುನ್ನಡೆ ಗಳಿಸಿದ್ದರು. ಮಧ್ಯಾಹ್ನದ ನಂತರ ಹಿನ್ನಡೆ ಅನುಭವಿಸಿದ್ದರು. ಒಂದು ಹಂತದಲ್ಲಿ ಸತೀಶ 10ಸಾವಿರ ಮತಗಳ ಅಂತರದಿಂದ ಮುನ್ನಡೆಯಲ್ಲಿದ್ದರು.

ಕೊನೆಯ ಸುತ್ತುಗಳು ರೋಚಕವಾಗಿದ್ದವು. ಕೆಲವೇ ಸುತ್ತುಗಳು ಬಾಕಿ ಇವೆ ಎನ್ನುವಾಗಲೂ ಬಿಜೆಪಿ ಹಿನ್ನಡೆಯಲ್ಲಿತ್ತು. ರಮೇಶ ಜಾರಕಿಹೊಳಿ ಪ್ರತಿನಿಧಿಸುವ ಗೋಕಾಕ ವಿಧಾನಸಭಾ ಕ್ಷೇತ್ರದ ಮತಗಳು ಬಿಜೆಪಿ ಕೈಹಿಡಿದವು. ಪತಿ ಸಾವಿನಿಂದ ಉಂಟಾಗಿದ್ದ ಅನುಕಂಪದ ಅಲೆಯೂ ಮಂಗಲಾ ಅವರಿಗೆ ನೆರವಾಗಿದೆ.

ಮಂತ್ರಿ ಆಸೆಗಾಗಿ ಮಾಜಿಯಾದ ಪ್ರತಾಪಗೌಡ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಮಂತ್ರಿಗಿರಿ ಆಸೆಗಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಪ್ರತಾಪಗೌಡ ಪಾಟೀಲ, ಈ ಉಪ ಚುನಾವಣೆಯಲ್ಲಿ ಸೋತು ಅತಂತ್ರರಾಗಿದ್ದಾರೆ.

ಪ್ರತಾಪಗೌಡ ಪಾಟೀಲ

ಆಡಳಿತಾರೂಢ ಬಿಜೆಪಿಯ 'ಅತಿರೇಕ', ಕಾಂಗ್ರೆಸ್‌ನ 'ಸಾಂಘಿಕ ಯತ್ನ'ದ ಜೊತೆಗೆ ಕ್ಷೇತ್ರದಲ್ಲಿಯ ಆಡಳಿತ ವಿರೋಧಿ ಅಲೆ ಹಾಗೂ ಜಿದ್ದಿನ ಹೋರಾಟವು ಬಸನಗೌಡ ತುರ್ವಿಹಾಳ ಅವರನ್ನು ಗೆಲುವಿನ ದಡ ಸೇರಿಸಿದೆ.

2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆ ನಂತರ ಮಸ್ಕಿ ಎಸ್‌ಟಿ ಮೀಸಲು ಕ್ಷೇತ್ರ ಅಸ್ತಿತ್ವಕ್ಕೆ ಬಂದಿದ್ದು, ಪ್ರತಾಪಗೌಡರು ಹ್ಯಾಟ್ರಿಕ್ ಗೆಲುವು ಸಾಧಿಸಿದ್ದರು. 2008ರಲ್ಲಿ ಬಿಜೆಪಿಯಿಂದ, 2013, 2018ರಲ್ಲಿ ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದ್ದರು.

ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಮಂತ್ರಿಸ್ಥಾನ ಸಿಗಲಿಲ್ಲ ಎಂದು ಬೇಸರಗೊಂಡು, ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿಯಾಗಿಸಲು, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ 16 ಶಾಸಕರಲ್ಲಿ ಇವರು ಸೇರಿದ್ದರು.

ಇವರು ಶಾಸಕ ಸ್ಥಾನಕ್ಕೆ 2019 ಜೂನ್‌ನಲ್ಲಿ ರಾಜೀನಾಮೆ ನೀಡಿದ್ದರು. ಇವರೊಟ್ಟಿಗೆ ರಾಜೀನಾಮೆ ನೀಡಿದ್ದ ಶಾಸಕರಿದ್ದ ಇತರೆ ಕ್ಷೇತ್ರಗಳಿಗೆ ಆಗಲೇ ಉಪ ಚುನಾವಣೆ ನಡೆದು ಗೆದ್ದ ಕೆಲವರು ಮಂತ್ರಿಗಳೂ ಅಗಿದ್ದಾರೆ. ಹೈಕೋರ್ಟ್‌ನಲ್ಲಿ ಮಸ್ಕಿ ಕ್ಷೇತ್ರದ ಚುನಾವಣಾ ತಕರಾರು ಅರ್ಜಿ ಇತ್ಯರ್ಥಗೊಳ್ಳದ ಕಾರಣ ಚುನಾವಣೆ ವಿಳಂಬವಾಗಿತ್ತು.

'ಜಿದ್ದಿನಿಂದ' ಗೆದ್ದ ಬಸನಗೌಡ

ಬಸನಗೌಡ ಮೂಲತಃ ಕಾಂಗ್ರೆಸ್ಸಿಗರು. ಕಾಂಗ್ರೆಸ್‌ನಿಂದ ಒಂದು ಅವಧಿಗೆ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದರು. ನಂತರ ಬಿಜೆಪಿ ಸೇರಿದ್ದರು. 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಕೇವಲ 213 ಮತಗಳಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಪ್ರತಾಪಗೌಡ ವಿರುದ್ಧ ಸೋತಿದ್ದರು.

ಪ್ರತಾಪಗೌಡ ಪುತ್ರಿ ಅಮೆರಿಕದಲ್ಲಿದ್ದರೂ ಅವರ ಹೆಸರಿನಲ್ಲಿ ಮತ ಚಲಾವಣೆಯಾಗಿದೆ. ಮತದಾನದಲ್ಲಿ ಅಕ್ರಮವಾಗಿದೆ ಎಂದು ಆರೋಪಿಸಿ ಹೈಕೋರ್ಟ್‌ನಲ್ಲಿ ಚುನಾವಣಾ ತಕರಾರು ಅರ್ಜಿ ದಾಖಲಿಸಿದರು.

ಬದಲಾದ ರಾಜಕೀಯ ಸ್ಥಿತಿಯಲ್ಲಿ ಪ್ರತಾಪಗೌಡ ಬಿಜೆಪಿ ಸೇರಿದ್ದರಿಂದ ಬಿಜೆಪಿ ಮುಖಂಡರು ಬಸನಗೌಡರಿಗೆ ಟಿಎಲ್‌ಬಿಸಿ ಕಾಡಾ ಅಧ್ಯಕ್ಷ ಸ್ಥಾನ ನೀಡಿ ಅವರನ್ನು ಸಮಾಧಾನ ಪಡಿಸಲು ಯತ್ನಿಸಿದ್ದರು. ಚುನಾವಣಾ ತಕರಾರು ಅರ್ಜಿ ವಾಪಸ್ ಪಡೆಯುವಂತೆ ಮಾಡುವಲ್ಲಿಯೂ ಯಶಸ್ವಿಯಾಗಿದ್ದರು.

ತಮಗೆ ಟಿಕೆಟ್ ಸಿಗುವುದಿಲ್ಲ ಎಂಬುದು ತಿಳಿಯುತ್ತಿದ್ದಂತೆ ಬಸನಗೌಡರು ಕಾಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ಸೇರಿದರು. ಉಪಚುನಾವಣೆಗೆ ಸ್ಪರ್ಧಿಸಿ ಗೆಲುವಿನ ದಡ ಸೇರಿದರು.

ನಡೆಯದ ವಿಜಯೇಂದ್ರ 'ತಂತ್ರಗಾರಿಕೆ'

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಕ್ಷೇತ್ರದ ಉಸ್ತುವಾರಿಯಾಗಿದ್ದರು. ಅವರ 'ತಂತ್ರಗಾರಿಕೆ' ಕ್ಷೇತ್ರದಲ್ಲಿ ಕೆಲಸ ಮಾಡಲಿಲ್ಲ. ಬದಲಿಗೆ 'ಹೊರಗಿನವರ ಅತಿರೇಕ' ವ್ಯತಿರಿಕ್ತ ಪರಿಣಾಮ ಬೀರಿದ್ದು, ಕಾಂಗ್ರೆಸ್ ಅಭ್ಯರ್ಥಿಯ ಪರ ಮತ್ತಷ್ಟು ಅನುಕಂಪ ಬರುವಂತೆ ಮಾಡಿತು ಎಂಬ ವ್ಯಾಖ್ಯಾನ ಬಿಜೆಪಿ ಸ್ಥಳೀಯ ಕಾರ್ಯಕರ್ತರಿಂದಲೇ ಕೇಳಿಬರುತ್ತಿದೆ.

'ಮುಂದಿನ ರಾಜಕೀಯ ಬೆಳವಣಿಗೆಯ ದಿಕ್ಸೂಚಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಣ, ಅಧಿಕಾರದ ಬಲದಿಂದ ಚುನಾವಣೆ ಗೆಲ್ಲಬಹುದೆಂಬ ಬಿಜೆಪಿಯವರ ಕುತಂತ್ರದ ರಾಜಕಾರಣಕ್ಕೆ ಪಂಚ ರಾಜ್ಯಗಳ ಚುನಾವಣೆ ದೊಡ್ಡ ಹೊಡೆತ ನೀಡಿದೆ. ಈ ಫಲಿತಾಂಶ ಮುಂದಿನ ರಾಜಕೀಯ ಬೆಳವಣಿಗೆಯ ದಿಕ್ಸೂಚಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹಿಂದಿನ ಚುನಾವಣೆಗಿಂತ ಹೆಚ್ಚು ಸ್ಥಾನಗಳನ್ನು ಗಳಿಸಿರುವುದು ನಿಜವಾದರೂ, ಆ ಎಲ್ಲ ಸ್ಥಾನಗಳು 'ಆಪರೇಷನ್ ಕಮಲ'ದ ಫಲ. ದೇಶದಲ್ಲಿ ಆ ಪಕ್ಷದ ಅವನತಿಯ ಪರ್ವ ಆರಂಭವಾಗಿದೆ' ಎಂದರು. 'ಮಸ್ಕಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿದೆ. ಆಪರೇಷನ್ ಕಮಲಕ್ಕೆ ಮತದಾರರು ಪಾಠ ಕಲಿಸಿದ್ದಾರೆ. ಚುನಾವಣಾ ಚಾಣಕ್ಯ ಎಂದು ಹೊಗಳಿಸಿಕೊಂಡಿದ್ದ ವಿಜಯೇಂದ್ರ ಮತ್ತವರ ಹಣದ ಥೈಲಿಗೆ ಮತದಾರ ಮಣೆ ಹಾಕಿಲ್ಲ' ಎಂದರು.

'ಜೆಡಿಎಸ್ ತನ್ನ ಅಭ್ಯರ್ಥಿ ಕಣಕ್ಕಿಳಿಸಿದ್ದರಿಂದ, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಕೊರೊನಾ ಸೋಂಕಿಗೆ ಒಳಗಾಗಿ ಪ್ರಚಾರದಲ್ಲಿ ಭಾಗವಹಿಸಲು ಆಗದಿರುವುದು ಸೇರಿ ವಿವಿಧ ಕಾರಣಗಳಿಂದ ಬಸವಕಲ್ಯಾಣ ಕ್ಷೇತ್ರದಲ್ಲಿ ಸೋಲಾಯಿತು' ಎಂದರು.

'ಬೆಳಗಾವಿ ಲೋಕಸಭೆ ಕ್ಷೇತ್ರದಲ್ಲಿ ಸತೀಶ ಜಾರಕಿಹೊಳಿ ಗೆಲ್ಲುವ ವಿಶ್ವಾಸ ಇತ್ತು. ಅವರು ತೀವ್ರ ಪೈಪೋಟಿ ನೀಡಿದ್ದಾರೆ' ಎಂದರು.

ಮತದಾರರ ತೀರ್ಪಿನಿಂದ ಹೊಸ ವಿಶ್ವಾಸ– ಡಿಕೆಶಿ

'ಮಸ್ಕಿ ಕ್ಷೇತ್ರದಲ್ಲಿ 30 ಸಾವಿರ ಮತಗಳ ಅಂತರದ ಗೆಲುವು, ಬೆಳಗಾವಿಯಲ್ಲಿ ತೀವ್ರ ಪೈಪೋಟಿ ನೀಡಿರುವುದು ರಾಜ್ಯದಲ್ಲಿ ಪಕ್ಷಕ್ಕೆ ಹೊಸ ವಿಶ್ವಾಸ ಮೂಡಿಸಿದೆ. ಮತದಾರರ ತೀರ್ಪು, ಅವರ ನಂಬಿಕೆಯನ್ನು ಮುಂದಿನ ದಿನಗಳಲ್ಲಿ ಉಳಿಸಿಕೊಂಡು ಹೋಗುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಇಡೀ ದೇಶದಲ್ಲಿ ಬದಲಾವಣೆ ಆಗಬೇಕೆಂದು ಬಯಸಿ ಮತದಾರರು ಬಿಜೆಪಿ ವಿರುದ್ಧ ಮತ ಚಲಾಯಿಸಿದ್ದಾರೆ. ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಕರ್ನಾಟಕದ ಫಲಿತಾಂಶ ಇದಕ್ಕೆ ಸಾಕ್ಷಿ' ಎಂದು ಅವರು ಅಭಿಪ್ರಾಯಪಟ್ಟರು.

ಶಿವಕುಮಾರ್

'ಬೆಳಗಾವಿ ಲೋಕಸಭೆ ಕ್ಷೇತ್ರದಲ್ಲಿ ಸೋಲಿನಲ್ಲೂ ನಾವು (ಕಾಂಗ್ರೆಸ್) ಗೆಲುವು ಕಂಡಿದ್ದೇವೆ. ಆ ಮೂಲಕ, ನಮ್ಮ ಅಭ್ಯರ್ಥಿ ಸತೀಶ ಜಾರಕಿಹೊಳಿ, ಆ ಭಾಗದಲ್ಲಿ ಪಕ್ಷಕ್ಕೆ ಶಕ್ತಿ ತುಂಬಿದ್ದಾರೆ. ತಮ್ಮ ನಾಯಕತ್ವಕ್ಕೆ ಬಲ ನೀಡಿದ್ದಾರೆ' ಎಂದರು.

'ರಾಜ್ಯದಲ್ಲಿ ಉಪ ಚುನಾವಣೆ ನಡೆದ ಮೂರೂ ಕ್ಷೇತ್ರಗಳಲ್ಲಿ ಪಕ್ಷದ ನಾಯಕರು, ಕಾರ್ಯಕರ್ತರು ಒಗ್ಗಟ್ಟಿನ ಪ್ರದರ್ಶನ ಮಾಡಿದ್ದಾರೆ. ಮಸ್ಕಿಯಲ್ಲಿ ಸ್ವಾಭಿಮಾನಿ ಮತದಾರರು ನಮ್ಮನ್ನು ಗೆಲ್ಲಿಸಿದ್ದಾರೆ' ಎಂದೂ ಅವರು ವಿಶ್ಲೇಷಿಸಿದರು.

ಒಳನೋಟ

ನೆರವಿಗೆ ಬಾರದ ಪ್ರತಿನಿಧಿಗಳು

ಬೆಂಗಳೂರು: 'ನಿರೀಕ್ಷೆ ಹೆಚ್ಚು:ಸ್ಪಂದನೆ ಕಡಿಮೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮೇ.2) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಜನರ ಕೈ ಹಿಡಿಯಿರಿ

ಕೋವಿಡ್ ಎರಡನೇ ಅಲೆಗೆ ಜನ ಹೈರಾಣಾಗಿದ್ದಾರೆ. ಅಲೆ ಬರುವಿಕೆಯನ್ನು ತಜ್ಞರು ಎಚ್ಚರಿಸಿದ್ದರೂ ಸರ್ಕಾರ ಪೂರ್ವಸಿದ್ಧತೆಯಲ್ಲಿ ಎಡವಿದೆ.

ಮತಗಳಿಂದ ಮಿಂದೆದ್ದ ನಾಯಕರೆಲ್ಲ ಜನರಿಗೂ ತಮಗೂ ಸಂಬಂಧವೇ ಇಲ್ಲ ಎನ್ನುವಂತೆ ಸರಿದಿದ್ದಾರೆ. ಈ ಪರಿಸ್ಥಿತಿಯಲ್ಲೂ ಚುನಾವಣೆಗಳಿಗೆ ಆದ್ಯತೆ ನೀಡಿದ ಮುಖಂಡರೇ ಕೊರೊನಾ ಹರಡಲು ಕಾರಣ. ಅಪಾಯದಲ್ಲಿರುವ ಜನರನ್ನು ಕೈಹಿಡಿಯಬೇಕಿದ್ದ ಜನಪ್ರತಿನಿಧಿಗಳು ಕೈಕಟ್ಟಿ ಕುಳಿತಿರುವುದು ಸರಿಯಲ್ಲ.

ಶ್ರೀದೇವಿ, ಮಂಡ್ಯ

ಪ್ರತಿಮೆ ನೋಡಿ ಸಂಭ್ರಮಿಸುವ ಸಮಯವಲ್ಲ

ಪ್ರತಿಮೆಗಳು, ಮಂದಿರಗಳಿಗಾಗಿ ಕೋಟಿಗಟ್ಟಲೆ ಖರ್ಚು ಮಾಡುವ ಜನಪ್ರತಿನಿಧಿಗಳು, ಶಾಲೆಗಳು ಹಾಗೂ ಆಸ್ಪತ್ರೆಗಳನ್ನು ಕಟ್ಟಿಸಿದ್ದರೆ ದೇಶಕ್ಕೆ ಈ ಸ್ಥಿತಿ ಬರುತ್ತಿರಲಿಲ್ಲ. ಪ್ರತಿಮೆಗಳನ್ನು ನೋಡಿ ನಲಿಯುವುದಕ್ಕಿಂತ ಜನರ ಪ್ರಾಣ ರಕ್ಷಿಸುವುದು ಮುಖ್ಯ. ಕೊರೊನಾದಿಂದ ಪರದಾಡುತ್ತಿರುವ ಜನರ ನೆರವಿಗೆ ನಾಯಕರು ಸ್ಪಂದಿಸಲಿ.

ನಾಗರತ್ನ, ರಾಜಾಜಿನಗರ, ಬೆಂಗಳೂರು

ರಾಜಕಾರಣ ನಿಲ್ಲಿಸಿ

ಕೊರೊನಾ ಬಿಕ್ಕಟ್ಟಿನಲ್ಲಿ ಸಿಲುಕಿರುವ ಜನರ ಕಷ್ಟಗಳಿಗೆ ಜನಪ್ರತಿನಿಧಿಗಳು ಸ್ಪಂದಿಸಬೇಕು. ಹಾಸಿಗೆ, ಆಮ್ಲಜನಕ, ವೆಂಟಿಲೇಟರ್ ಹಾಗೂ ಮೃತರ ಅಂತ್ಯಕ್ರಿಯೆಗೆ ಕ್ಷೇತ್ರವಾರು ವ್ಯವಸ್ಥೆ ಮಾಡಬೇಕು. ಶಾಸಕರು ಹಾಗೂ ಸಂಸದರ ನಿಧಿಯ ಹಣವನ್ನು ಈ ಉದ್ದೇಶಗಳಿಗೆ ಬಳಸಿಕೊಳ್ಳಿ. ಬಡವರ ತುರ್ತು ಅಗತ್ಯಗಳನ್ನು ಪೂರೈಸುವಲ್ಲಿ ಸರ್ಕಾರದ ಹೊಲಸು ರಾಜಕೀಯ ಬೇಡ. ಕಠಿಣ ನಿಯಮಗಳನ್ನು ಜಾರಿಗೊಳಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತನ್ನಿ.



ನಿಡಸಾಲೆ ಪುಟ್ಟಸ್ವಾಮಯ್ಯ, ನಾಗರಬಾವಿ, ಬೆಂಗಳೂರು

ಮತಕ್ಕಾಗಿ ಬಂದವರು ಈಗ ಬರಲಿ

ಪ್ರಜಾ ಪ್ರತಿನಿಧಿಗಳು ಮತಯಾಚಿಸಲು ಮನೆ ಮನೆಗೆ ಬರುವಂತೆಯೇ, ಜನಗಳ ಯೋಗಕ್ಷೇಮ ವಿಚಾರಿಸಲು ಮನೆ– ಮನೆಗೆ ಈಗ ಬರಬೇಕು. ತಮ್ಮ ಸುರಕ್ಷತೆಯನ್ನಷ್ಟೇ ನೋಡಿಕೊಂಡಿರುವ ಪ್ರತಿನಿಧಿಗಳು, ಕೋವಿಡ್‌ನಿಂದ ನರಳಿ-ಸಾಯುತ್ತಿರುವ ಜನರನ್ನು ಮಾಧ್ಯಮಗಳಲ್ಲಿ ವೀಕ್ಷಿಸುತ್ತಾ ಕುಳಿತಿರುವುದು ವಿಪರ್ಯಾಸ. ಇಂತಹ ಅಪ್ರಯೋಜಕ ರಾಜಕಾರಣಿಗಳೇ ನಮ್ಮ ಪ್ರಜಾಪ್ರಭುತ್ವಕ್ಕೆ ಮಾರಕ.

ಹನುಮಂತೇಗೌಡ, ತರೀಕೆರೆ, ಚಿಕ್ಕಮಗಳೂರು

ಆಟಕ್ಕುಂಟು, ಲೆಕ್ಕಕ್ಕಿಲ್ಲ

ಈಗಿನ ರಾಜಕೀಯ ಪ್ರತಿನಿಧಿಗಳು ಚುನಾವಣೆ ಹಾಗೂ ಅಧಿಕಾರದ ದಾಹದ ಆಟಕ್ಕುಂಟೇ ಹೊರತು ಸಮಾಜದ ಏಳಿಗೆಯನ್ನು ಲೆಕ್ಕಿಸುವುದಿಲ್ಲ. ಇಂತಹ ಪರಿಸ್ಥಿತಿಯಲ್ಲೂ ಜನರ ನೆರವಿಗೆ ಧಾವಿಸದ ಪ್ರತಿನಿಧಿಗಳ ಅಗತ್ಯವೇನು? ಚುನಾವಣೆ ವೇಳೆ ಜನರನ್ನು ಅಂಕಿ ಅಂಶಗಳಲ್ಲಿ ಲೆಕ್ಕಾಚಾರ ಹಾಕಿ, ಬಳಿಕ ಮನುಷ್ಯರೇ ಅಲ್ಲ ಎನ್ನುವಂತೆ ವರ್ತಿಸುತ್ತಾರೆ.

ಮುಬೀನಾ, ವಿದ್ಯಾರ್ಥಿ, ಹಂಪಿ

ಜಿಲ್ಲೆ ಕೊರೊನಾ ಕೇಂದ್ರವಾಗದಿರಲಿ

ಕಲಬುರ್ಗಿ ಜಿಲ್ಲೆಯ ನಾಯಕರು ಕೇವಲ ಸಭೆ ಸಮಾರಂಭಗಳಿಗೆ ಸೀಮಿತವಾಗಿದ್ದಾರೆ. ಕ್ಷೇತ್ರದ ಜನರ ಸಂಕಷ್ಟಕ್ಕೆ ಯಾವೊಬ್ಬ ನಾಯಕನೂ ಸಹಾಯಹಸ್ತ ಚಾಚುತ್ತಿಲ್ಲ. ಎರಡನೇ ಅಲೆ ಭೀಕರವಾಗಿದ್ದರೂ ಜಿಲ್ಲಾ ಉಸ್ತುವಾರಿಗಳು ಮೌನ ತಾಳಿದ್ದಾರೆ. ಜನರಿಂದ ಆಯ್ಕೆಯಾದವರು ಜನರಿಗಾಗಿ ಏನೂ ಮಾಡುತ್ತಿಲ್ಲ. ಜಿಲ್ಲೆಯಲ್ಲಿ ಕೊರೊನಾ ಆರೈಕೆ ಕೇಂದ್ರಗಳು ಇರಬೇಕೇ ಹೊರತು ಜಿಲ್ಲೆಯನ್ನೇ ಕೊರೊನಾ ಕೇಂದ್ರವನ್ನಾಗಿ ಮಾಡಬೇಡಿ.

ಪೃಥ್ವಿರಾಜ್, ಕಲಬುರ್ಗಿ

ಕೆಲಸಕ್ಕೆ ಕರೆಯಬೇಡಿ, ಮತ ಮರೆಯಬೇಡಿ

ಮತಕ್ಕೆ ಮಾತ್ರ ಬರುವ ಹಾಗೂ ಕಷ್ಟಗಳಿಗೆ ಧಾವಿಸದ ಜನಪ್ರತಿನಿಧಿಗಳ ನಿಜವಾದ ಮುಖವಾಡ ಕಳಚಲು ಕೊರೊನಾ ಅವಕಾಶ ಕಲ್ಪಿಸಿದೆ. ಮುಂದೆ ಮತ ಹಾಕುವ ಮುನ್ನ ಈ ಪಾಠ ಜನರ ತಲೆಯಲ್ಲಿರಬೇಕು. ಸ್ಪಂದನೆ ಇಲ್ಲದ ಜನಪ್ರತಿನಿಧಿಗಳ ನಡೆಯಿಂದ ರಾಜಕೀಯ ಪ್ರಜ್ಞೆ, ನಾಯಕರ ಆಯ್ಕೆಯ ಅರಿವು ಜನರಿಗೆ ತಿಳಿಯುವ ಸಮಯವಿದು.

ವಿಜಯಲಕ್ಷ್ಮೀ, ಹಾವೇರಿ

ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ: 'ಕೈ' ಹಿಡಿಯದ ಅನುಕಂಪ

'ಬಂಡಾಯದ ಬಿಸಿ'ಯಲ್ಲೂ ಅರಳಿದ ಕಮಲ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಅನುಕಂಪ ಮತ್ತು 'ಸ್ವಾಭಿಮಾನ' ನೆರವಿಗೆ ಬರಲಿಲ್ಲ. ಬಂಡಾಯದ ಬಿಸಿಯಲ್ಲೂ ಕಮಲ ಅರಳಿತು. ಕಾಂಗ್ರೆಸ್ ಶಾಸಕರಾಗಿದ್ದ ಬಿ. ನಾರಾಯಣರಾವ್ ನಿಧನರಾಗಿದ್ದರಿಂದ ಇಲ್ಲಿ ಉಪಚುನಾವಣೆ ನಡೆಯಿತು.

ದಿವಂಗತ ನಾರಾಯಣರಾವ್ ಅವರ ಪತ್ನಿ ಮಾಲಾ ಅವರನ್ನು ಕಣಕ್ಕಿಳಿಸುವ ಮೂಲಕ ಕಾಂಗ್ರೆಸ್ ಪಕ್ಷ ಅನುಕಂಪದ ಅಲೆಯಲ್ಲಿ ಗೆಲುವು ಸಾಧಿಸಬಹುದು ಎಂದು ನಂಬಿತ್ತು. ಜೆಡಿಎಸ್ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿದ ಪರಿಣಾಮ ಮುಸ್ಲಿಂ ಮತ ವಿಭಜನೆಯಾದ್ದರಿಂದ ಕಾಂಗ್ರೆಸ್ ಲೆಕ್ಕಾಚಾರ ತಲೆಕೆಳಗಾಯಿತು.

ಬಿಜೆಪಿ ಟಿಕೆಟ್ ಸಿಗದ ಕಾರಣಕ್ಕೆ ಬಂಡೆದ್ದು ಪಕ್ಷೇತರರಾಗಿ ಸ್ಪರ್ಧಿಸಿದ್ದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, 'ಬಿಜೆಪಿ ನಾಯಕರು ಹೊರಗಿನ ವ್ಯಕ್ತಿಗೆ ಮಣೆ ಹಾಕಿದ್ದಾರೆ. ಸ್ವಾಭಿಮಾನಕ್ಕೆ ಮತ ನೀಡಿ' ಎಂದು ಪ್ರಚಾರ ನಡೆಸಿದ್ದರು.

'ಟಿಕೆಟ್ ಹಂಚಿಕೆಯಲ್ಲಿ ಎಡವಿದ್ದೇವೆ' ಎಂಬುದು ಮನವರಿಕೆಯಾಗುತ್ತಿದ್ದಂತೆ ಬಿಜೆಪಿ ರಾಜ್ಯ ಮುಖಂಡರು ತಮ್ಮ 'ಮತಬುಟ್ಟಿ' ಗಟ್ಟಿಗೊಳಿಸಿಕೊಂಡರು. ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಚಿವರು ಜಾತಿವಾರು ಸಭೆಗಳನ್ನು ನಡೆಸಿದರು.

ಶರದ್ ಪವಾರ ನೇತೃತ್ವದ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದಿಂದ ನಾಮಪತ್ರ ಸಲ್ಲಿಸಿದ್ದ ಮಾಜಿ ಶಾಸಕ ಮಾರುತಿರಾವ್ ಮುಳೆ ಅವರನ್ನು ಬಿಜೆಪಿಯವರು ಸೆಳೆದುಕೊಂಡರು. ಅವರನ್ನು ಕಣದಿಂದ ಹಿಂದೆ ಸರಿಸಿ ಮರಾಠ ಮತಗಳು ವಿಭಜನೆಯಾಗದಂತೆ ನೋಡಿಕೊಂಡರು.

> ಬಡಕುಟುಂಬದಿಂದ ಬಂದ ಒಬ್ಬ ಸಾಮಾನ್ಯ ಕಾರ್ಯಕರ್ತ ಶಾಸಕನಾಗಿದ್ದು ಇತಿಹಾಸ. ಇದು ಬಿಜೆಪಿಯಲ್ಲಿ ಮಾತ್ರ ಸಾಧ್ಯ. ಕೋವಿಡ್ ನಿಯಂತ್ರಣ ನನ್ನ ಸದ್ಯದ ಆದ್ಯತೆ
> **ಶರಣು ಸಲಗರ**

ಚುನಾವಣೆ ಸಮೀಪವಿರುವಾಗ ನೂತನ ಅನುಭವಮಂಟಪಕ್ಕೆ ಶಿಲಾನ್ಯಾಸ ನೆರವೇರಿಸಿ, 'ಬಸವಾಭಿಮಾನಿಗಳ' ಮನ ಗೆದ್ದಿದ್ದು ಹಾಗೂ ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆ ಬಿಜೆಪಿ ನೆರವಿಗೆ ಬಂತು. ಈ ಎಲ್ಲ ಕಾರಣಗಳಿಂದ ಪಕ್ಕದ ಕಲಬುರ್ಗಿ ಜಿಲ್ಲೆಯ ಶರಣು ಸಲಗರ ಇಲ್ಲಿ ಗೆಲ್ಲಲು ಸಾಧ್ಯವಾಯಿತು.

ಮತ್ತೆ ಚುನಾವಣೆಗೆ ತಳ್ಳಬೇಡಿ ಎಂದಿದ್ದ ನಾರಾಯಣರಾವ್

ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನದ ಅಂಚಿನಲ್ಲಿದ್ದಾಗ ವಿಧಾನಸಭೆ ವಿಸರ್ಜಿಸಬೇಕು ಎಂದು ಕೆಲವರು ಆಗ್ರಹಿಸಿದ್ದರು. ಆಗ ವಿಧಾನಸಭೆಯಲ್ಲಿ ಮಾತನಾಡಿದ್ದ ಬಿ.ನಾರಾಯಣರಾವ್ 'ನನ್ನಂಥ ಸಾಮಾನ್ಯರು ಚುನಾವಣೆಯಲ್ಲಿ ಗೆದ್ದು ಬರುವುದು ಅಷ್ಟು ಸಲೀಸಲ್ಲ. ವಿಧಾನಸಭೆ ವಿಸರ್ಜಿಸಿ ಮತ್ತೆ ಚುನಾವಣೆ ಬರುವಂತೆ ಮಾಡಬೇಡಿ. ನಮ್ಮ ಅವಧಿ ಪೂರೈಸಲು ಬಿಡಿ' ಎಂದಿದ್ದರು. ಕೋವಿಡ್‌ನಿಂದ ನಿಧನರಾಗಿದ್ದರಿಂದ ಅವರು ಶಾಸಕತ್ವದ ಅವಧಿ ಪೂರೈಸಲಿಲ್ಲ. ಅವರಿಂದ ತೆರವಾದ ಸ್ಥಾನಕ್ಕೆ ಅವರ ಪತ್ನಿಯ ಗೆಲುವೂ ಸಾಧ್ಯವಾಗಲಿಲ್ಲ.

ಬಸವಕಲ್ಯಾಣ ಉಪಚುನಾವಣೆಯಲ್ಲಿ ಗೆದ್ದ ಬಿಜೆಪಿ ಅಭ್ಯರ್ಥಿ ಶರಣು ಸಲಗರ ಅವರು ಬೀದರ್ ಸಂಸದ ಭಗವಂತ ಖೂಬಾ ಅವರ ಕಾಲಿಗೆರಗಿ ನಮಸ್ಕರಿಸಿದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಆಗ ಶಾಸಕರ ಪಿ.ಎ.; ಈಗ ಶಾಸಕ!

ಇಬ್ಬರು ಶಾಸಕರು ಹಾಗೂ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರುಗಳಿಗೆ ಆಪ್ತಸಹಾಯಕರಾಗಿ ಕೆಲಸ ಮಾಡಿದ್ದ ಶರಣು ಸಲಗರ ಈಗ ಶಾಸಕ!

ಬಸವಕಲ್ಯಾಣ ಕ್ಷೇತ್ರಕ್ಕೆ ವಲಸೆ ಹೋಗಿ ಎರಡೇ ವರ್ಷದಲ್ಲಿ ಅಲ್ಲಿ ಬೀಡುಬಿಟ್ಟಿದ್ದಲ್ಲದೇ 16 ಜನ ಸ್ಥಳೀಯ ಘಟಾನುಘಟಿ ಆಕಾಂಕ್ಷಿಗಳನ್ನು ಹಿಂದಿಕ್ಕಿ ಬಿಜೆಪಿ ಟಿಕೆಟ್ ಗಿಟ್ಟಿಸಿಕೊಂಡರು.

ಕಲಬುರ್ಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ವಿ.ಕೆ.ಸಲಗರದವರಾದ ಶರಣು, 2002ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಗೊಂಡರು. 2011ರಲ್ಲಿ ಪ್ರೌಢಶಾಲೆ ಶಿಕ್ಷಕರಾಗಿ ಪದೋನ್ನತಿ ಪಡೆದರು. 2014ರಲ್ಲಿ ಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದರು. ಜಿಲ್ಲಾ ಪಂಚಾಯಿತಿ ಟಿಕೆಟ್ ಸಿಗಲಿಲ್ಲ ಎಂದು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು. ಕಲಬುರ್ಗಿ ಗ್ರಾಮೀಣ ಮಂಡಲದ ಬಿಜೆಪಿ ಅಧ್ಯಕ್ಷರೂ ಆದರು.

ರಾಜಕೀಯ ಭವಿಷ್ಯ ಅರಸಿ ಬಸವಕಲ್ಯಾಣಕ್ಕೆ ವಲಸೆ ಹೋದರು.

ಅವರ ಪತ್ನಿ ಸಾವಿತ್ರಿ ಅವರು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ಮೇಲ್ವಿಚಾರಕಿಯಾಗಿದ್ದರು. 2016ರ ಕೆಎಎಸ್ ಪರೀಕ್ಷೆಯಲ್ಲಿ ಪಾಸಾಗಿ ತಹಶೀಲ್ದಾರರಾದರು. ಇದೇ ವೇಳೆಗೆ ಸಾವಿತ್ರಿ ಅವರು ಬಸವಕಲ್ಯಾಣ ತಹಶೀಲ್ದಾರರಾಗಿದ್ದರು. ಪತ್ನಿ ತಹಶೀಲ್ದಾರರಾಗಿದ್ದರೆ, ಇವರು ಅದೇ ಕ್ಷೇತ್ರದಲ್ಲಿ ಕಳೆದ ಲಾಕ್‌ಡೌನ್ ಅವಧಿಯಲ್ಲಿ ಸಮಾಜ ಸೇವೆಯ ಮೂಲಕ ಜನರ ಮಧ್ಯೆ ಗುರುತಿಸಿಕೊಂಡರು.

ರಾಯಚೂರಿನಲ್ಲಿ ನಡೆದ ಮಸ್ಕಿ ಉಪಚುನಾವಣೆ ಮತ ಎಣಿಕೆ ಕೇಂದ್ರಕ್ಕೆ ಅಭ್ಯರ್ಥಿಗಳ ಏಜೆಂಟರು ಪಿಪಿಇ ಕಿಟ್ ಧರಿಸಿ ಬಂದರು

'ಅಭಿವೃದ್ಧಿಪರ ಕಾರ್ಯಸೂಚಿಗೆ ಮತದಾರರ ಒಲವು'

ಬೆಂಗಳೂರು: 'ಬೆಳಗಾವಿಯಲ್ಲಿ ಮತದಾರರು ಮತ್ತೊಮ್ಮೆ ಪಕ್ಷವನ್ನು ಗೆಲ್ಲಿಸಿ, ಆಶೀರ್ವದಿಸಿದ್ದಾರೆ. ಬಸವಕಲ್ಯಾಣದಲ್ಲಿ ಅನುಕಂಪದ ಅಲೆಯನ್ನೂ ಮೀರಿ ಪಕ್ಷದ ಅಭಿವೃದ್ಧಿಪರ ಹಾಗೂ ಜನಹಿತ ಪರ ಕಾರ್ಯಸೂಚಿಗೆ ಮತದಾರರು ಒಲವು ತೋರಿದ್ದಾರೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ.

ಚುನಾವಣಾ ಫಲಿತಾಂಶದ ಬಗ್ಗೆ ಟ್ವೀಟ್ ಮಾಡಿರುವ ಅವರು, ಬೆಳಗಾವಿ ಮತ್ತು ಬಸವಕಲ್ಯಾಣ ಕ್ಷೇತ್ರಗಳಲ್ಲಿ ಬಿಜೆಪಿ ಜಯ ಗಳಿಸಿರುವ ಬಗ್ಗೆ ಮುಖ್ಯಮಂತ್ರಿ ಹರ್ಷ ವ್ಯಕ್ತಪಡಿಸಿದ್ದಾರೆ.

'ಅಸ್ಸಾಂನಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಮರಳಿದೆ. ಪುದುಚೇರಿಯಲ್ಲೂ ಸರ್ಕಾರ ರಚನೆಯಲ್ಲಿ ಪಕ್ಷ ಭಾಗಿಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಪಕ್ಷ ತನ್ನ ಸಂಖ್ಯಾಬಲ 3ರಿಂದ 75 ಸ್ಥಾನಗಳಿಗೆ ಹೆಚ್ಚಿಸಿಕೊಂಡಿದೆ. ಕೇರಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಪಕ್ಷ ಮತ ಪ್ರಮಾಣ ಹೆಚ್ಚಿರುವುದು ಆಶಾದಾಯಕ ಬೆಳವಣಿಗೆ. ದಕ್ಷಿಣದ ಇತರ ರಾಜ್ಯಗಳಲ್ಲೂ ಬಿಜೆಪಿ ಇನ್ನಷ್ಟು ಸದೃಢವಾಗಲಿದೆ' ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಬಿಜೆಪಿ ಪರ ಜನತೆಯ ವಿಶ್ವಾಸ'

ಮಂಗಳೂರು: 'ರಾಜ್ಯದ ಮತದಾರರು ಬಿಜೆಪಿ ಪರವಿದ್ದಾರೆ ಎನ್ನುವುದನ್ನು ಬೆಳಗಾವಿ ಲೋಕಸಭೆ ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶ ಸಾಬೀತು ಪಡಿಸಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಕಟೀಲ್

ಅಸ್ಸಾಂ, ಪುದುಚೇರಿ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಉತ್ತಮ ಸಾಧನೆ ಮಾಡಿದೆ. ಕಾಂಗ್ರೆಸ್ ಪಕ್ಷವನ್ನು ಐದು ರಾಜ್ಯಗಳಲ್ಲೂ ಜನ ತಿರಸ್ಕರಿಸಿದ್ದಾರೆ ಎಂದರು.

'ಕಾಂಗ್ರೆಸ್ ಭವಿಷ್ಯಕ್ಕೆ ದಿಕ್ಸೂಚಿ'

ಬೆಂಗಳೂರು: 'ದೇಶ ಮತ್ತು ರಾಜ್ಯದಲ್ಲಿ ಯುವ ಸಮೂಹ ಬದಲಾವಣೆ ಬಯಸಿರುವುದು ಚುನಾವಣೆಯ ಜನಾದೇಶದಿಂದ ಸ್ಪಷ್ಟವಾಗಿದೆ. ಜನರ ತೀರ್ಪು ಕಾಂಗ್ರೆಸ್‌ನ ಮುಂದಿನ ಭವಿಷ್ಯಕ್ಕೆ ದಿಕ್ಸೂಚಿ ಆಗಲಿದೆ' ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ಹೇಳಿದ್ದಾರೆ.

'ಬೆಳಗಾವಿಯಲ್ಲಿ ಹೆಚ್ಚು ಕುತೂಹಲ ಕೆರಳಿಸಿದ್ದ ಚುನಾವಣೆ ಇದಾಗಿತ್ತು. ಕ್ಷೇತ್ರದಲ್ಲಿ 20 ವರ್ಷಗಳ ಬಿಜೆಪಿ ಪಾರುಪತ್ಯ ಅಂತ್ಯಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮಾಡಿದ ಯತ್ನ ಚರಿತ್ರೆಯಲ್ಲಿ ದಾಖಲಾಗಲಿದೆ. ಮಸ್ಕಿಯಲ್ಲಿ ಮತದಾರರು ಆಪರೇಷನ್ ಕಮಲ ಕಾರ್ಯಾಚರಣೆಯಲ್ಲಿ ಮಾರಾಟವಾದ ಪ್ರತಾಪ ಗೌಡ ಪಾಟೀಲ ಅವರಿಗೆ ಪಾಠ ಕಲಿಸಿದ್ದಾರೆ' ಎಂದು ಹೇಳಿದ್ದಾರೆ.

ರಾಜ್ಯದ ವಿವಿಧೆಡೆ ಉತ್ತಮ ಮಳೆ

ಬೆಂಗಳೂರು: ರಾಜ್ಯದಲ್ಲಿ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಬೆಳಗಾವಿ ಜಿಲ್ಲೆಯ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ನಗರ, ಕಡೂರು ಸೇರಿ ಜಿಲ್ಲೆಯ ವಿವಿಧೆಡೆ ಮಳೆ ಸುರಿಯಿತು. ಬೀರೂರಿನಲ್ಲಿ ಗುಡುಗು ಸಹಿತ ಮಳೆಯಾಗಿದೆ. ಮೂಡಿಗೆರೆ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಹಾಗೂ ಬಾಳೆಹೊನ್ನೂರಿನಲ್ಲಿ ತುಂತುರು ಮಳೆ ಆಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ವಿವಿಧೆಡೆ ಮಳೆಯಾಗಿದೆ. ಕೊಡಗು ಜಿಲ್ಲೆಯ ನಾಪೋಕ್ಲು, ಗೋಣಿಕೊಪ್ಪಲು, ವಿರಾಜಪೇಟೆ ಸುತ್ತಮುತ್ತ ಧಾರಾಕಾರ ಮಳೆಯಾಗಿದೆ.

ಬೆಳಗಾವಿಯಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ. ಹಾವೇರಿ ಜಿಲ್ಲೆಹಾಗೂ ಹೊಸಪೇಟೆಯಲ್ಲಿ ಮಳೆಯಾಗಿದೆ.

ಆರು ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮೇ 5 ಮತ್ತು 6ರಂದು ಗುಡುಗು ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗುವ ಮುನ್ಸೂಚನೆ ಇರುವುದರಿಂದ ಎರಡೂ ದಿನ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಉತ್ತರ ಒಳನಾಡಿನಲ್ಲಿ ಒಣಹವೆ ಮುಂದುವರಿಯಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು ಎಂದು ಮಾಹಿತಿ ನೀಡಿದೆ.

ಮಳೆ–ಎಲ್ಲಿ, ಎಷ್ಟು?: ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಭಾನುವಾರ 11 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಕುಂದಾಪುರ, ಸಿದ್ದಾಪುರ 3, ಬೆಳ್ತಂಗಡಿ, ಮಂಗಳೂರು, ಹಾವೇರಿ, ಕಡೂರು 2, ಮೂಡುಬಿದಿರೆ, ಪುತ್ತೂರು, ಬೆಳಗಾವಿ, ವಿಜಯಪುರ, ಸಾಗರ ಹಾಗೂ ಸೊರಬದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಕಲಬುರ್ಗಿಯಲ್ಲಿ 39.3 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ವಿಜಯಪುರ, ರಾಯಚೂರು 38, ಚಿಕ್ಕಮಗಳೂರು, ಆಗುಂಬೆ, ಬೆಳಗಾವಿಯಲ್ಲಿ ತಲಾ 19 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

'ಬೆಂಗಳೂರು ಹಸಿರೀಕರಣ'ದ ಹರಿಕಾರ ಎಸ್.ಜಿ. ನೇಗಿನ್ಹಾಳ್ ಇನ್ನಿಲ್ಲ

ಬೆಂಗಳೂರು: ಬೆಂಗಳೂರು ನಗರದ ಹಸಿರೀಕರಣದ ಹರಿಕಾರ, ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) ನಿವೃತ್ತ ಅಧಿಕಾರಿ ಎಸ್.ಜಿ. ನೇಗಿನ್ಹಾಳ್ (93) ಅವರು ಕೋವಿಡ್‌ನಿಂದಾಗಿ ಭಾನುವಾರ ನಿಧನರಾಗಿದ್ದಾರೆ. ಅವರಿಗೆ ಪುತ್ರ ಹಾಗೂ ನಾಲ್ವರು ಪುತ್ರಿಯರು ಇದ್ದಾರೆ.

ಬೆಂಗಳೂರಿನಲ್ಲಿ 1982 ರಿಂದ 87ರ ಅವಧಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಎಫ್‌ಒ) ಆಗಿ ಕಾರ್ಯನಿರ್ವಹಿಸಿದ್ದ ನೇಗಿನ್ಹಾಳ್ ಅವರನ್ನು ನಗರದ ಹಸಿರೀಕರಣ ಅಭಿಯಾನದ ಮುಖ್ಯಸ್ಥರಾಗಿ ಸರ್ಕಾರ ನೇಮಿಸಿತ್ತು. ನಗರಗಳ ಹಸಿರೀಕರಣದ ಬಗ್ಗೆ ಅಪಾರ ಜ್ಞಾನ ಹೊಂದಿದ್ದ ಅವರು ಬೆಂಗಳೂರಿನಂತಹ ಪ್ರದೇಶದಲ್ಲಿ ಬೆಳೆಸುವುದಕ್ಕೆ ಸೂಕ್ತವಾದ ಸಸ್ಯಗಳನ್ನೇ ನೆಡಿಸಿದ್ದರು. ಅವರ ನೇತೃತ್ವ, ಹಲವು ಸಂಘಸಂಸ್ಥೆಗಳ ಸಹಯೋಗದಲ್ಲಿ ನಗರದ ಪ್ರಮುಖ ರಸ್ತೆಗಳ ಇಕ್ಕೆಲದಲ್ಲಿ ಸುಮಾರು 15 ಲಕ್ಷ ಸಸಿಗಳನ್ನು ನೆಟ್ಟು ಬೆಳೆಸಲಾಗಿತ್ತು. ಸಾರ್ವಜನಿಕರೂ ಅಭಿಯಾನದಲ್ಲಿ ಭಾಗವಹಿಸುವಂತೆ ಉತ್ತೇಜನ ನೀಡಿದ್ದರು. ಆಗಿನ ಪ್ರಧಾನಿ ರಾಜೀವ ಗಾಂಧಿ ಅವರು ಇಂದಿರಾ ಗಾಂಧಿ ಅವರ ಸಮಾಧಿ 'ಶಕ್ತಿ ಸ್ಥಳ'ದಲ್ಲಿ ನೆಡುವುದಕ್ಕೆ ನೇಗಿನ್ಹಾಳ್ ಅವರಿಂದ ಗಿಡ ಪಡೆದಿದ್ದರು.

ನಗರದ ಮರಗಳನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕಡಿಯುವಾಗ ಬೇಸರ ವ್ಯಕ್ತಪಡಿಸುತ್ತಿದ್ದರು. ತಮ್ಮ ಇಳಿ ವಯಸ್ಸಿನಲ್ಲೂ ನಗರದ ಮರಗಳನ್ನು ಉಳಿಸುವ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಬಂಡೀಪುರ ಹುಲಿ ಯೋಜನೆಯ ಅನುಷ್ಠಾನದಲ್ಲೂ ಅವರು ಪ್ರಮುಖ ಪಾತ್ರ ವಹಿಸಿದ್ದರು. 1973 ರಲ್ಲಿ ಹುಲಿ ಯೋಜನೆಗೆ ಚಾಲನೆ ನೀಡುವ ಸಂದರ್ಭದಲ್ಲಿ ಅವರು ಅದರ ಮುಖ್ಯಸ್ಥರಾಗಿದ್ದರು. ಕೊಕ್ಕರೆ ಬೆಳ್ಳೂರನ್ನು ಪಕ್ಷಿಧಾಮವನ್ನಾಗಿ ಗುರುತಿಸಿ ಜನಪ್ರಿಯಗೊಳಿಸುವಲ್ಲಿಯೂ ನೇಗಿನ್ಹಾಳ್ ಅವರ ಪರಿಶ್ರಮವಿದೆ.

ಛಾಯಾಗ್ರಾಹಕ ಹಾಗೂ ಬರಹಗಾರರೂ ಆಗಿದ್ದ ಅವರು ಅರಣ್ಯ– ವನ್ಯಜೀವಿಗಳ ಸಂಬಂಧದ ಬಗ್ಗೆ, ವನ್ಯಜೀವಿಗಳ ಬಗ್ಗೆ ಪುಸ್ತಕಗಳನ್ನೂ ಬರೆದಿದ್ದಾರೆ. ಫಾರೆಸ್ಟ್ ಟ್ರೀಸ್ ಆಫ್ ಸೌತ್ ಇಂಡಿಯಾ, ಸ್ಯಾಂಕ್ಚುರೀಸ್ ಆ್ಯಂಡ್ ವೈಲ್ಡ್‌ಲೈಫ್ ಆಫ್ ಕರ್ನಾಟಕ, ಗೋಲ್ಡನ್ ಟ್ರೀಸ್, ಗ್ರೀನ್ ಸ್ಪೇಸಸ್ ಆ್ಯಂಡ್ ಅರ್ಬನ್ ಫಾರೆಸ್ಟ್ರಿ ಇವರ ಪ್ರಮುಖ ಕೃತಿಗಳು. ಇವರು 'ಫಾರೆಸ್ಟ್ ಟ್ರೀಸ್ ಆಫ್ ವೆಸ್ಟರ್ನ್ ಘಾಟ್ಸ್ (ಇನ್‌ಕ್ಲೂಡ್ಸ್ ಈಸ್ಟರ್ನ್ ಘಾಟ್ಸ್ ಆ್ಯಂಡ್ ಡೆಕ್ಕನ್ ಪ್ಲಾಟ್ಯೂ)' ಕೃತಿಯ ಸಹಲೇಖಕ.

ಫೋಕಸ್ ಅಕಾಡೆಮಿ ಆಫ್ ಆರ್ಟ್ ಫೋಟೊಗ್ರಫಿ ವತಿಯಿಂದ ನೀಡುವ 2017ನೇ ಸಾಲಿನ 'ಟಿಎನ್‌ಎ ಪೆರುಮಾಳ್ ಸ್ಮಾರಕ ರಾಷ್ಟ್ರೀಯ ಛಾಯಾಗ್ರಹಣ ಪ್ರಶಸ್ತಿಯೂ ಅವರಿಗೆ ಲಭಿಸಿತ್ತು. ಯೂತ್ ಫೋಟೊಗ್ರಫಿ ಸೊಸೈಟಿಯ ಗೌರವ ಸದಸ್ಯರಾಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲೂ ಭಾಗವಹಿಸಿದ್ದರು.

ನಿಧನ ವಾರ್ತೆ

ಸಿ.ಜಿ. ಕೂಡ್ಲಿ

ಬೆಂಗಳೂರು: ರಾಯಚೂರು ಜಿಲ್ಲೆಯ ಲಿಂಗಸಗೂರಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸಿ.ಜಿ. ಕೂಡ್ಲಿ (66) ಅವರು ಅನಾರೋಗ್ಯದಿಂದಾಗಿ ನಗರದ ಆಸ್ಪತ್ರೆಯೊಂದರಲ್ಲಿ ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ನಿವೃತ್ತ ಬಳಿಕ ಕೂಡ್ಲಿ ಅವರು ಬೆಂಗಳೂರಿನ ದೊಡ್ಡಕಲ್ಲಸಂದ್ರದ ನಾರಾಯಣ ನಗರದಲ್ಲಿ ನೆಲೆಸಿದ್ದರು.

ಎನ್. ಉದಯಕುಮಾರ್

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಉಪಾಧ್ಯಕ್ಷ ಎನ್. ಉದಯಕುಮಾರ್ (69) ಅವರು ಶನಿವಾರ ರಾತ್ರಿ ನಿಧನರಾದರು.



ಉದ್ಯಮಿಯಾಗಿದ್ದ ಅವರಿಗೆ ಇಬ್ಬರು ಪುತ್ರರು ಇದ್ದಾರೆ. ದೊಡ್ಡಬಳ್ಳಾಪುರ ಸಮೀಪದ ಅವರ ತೋಟದಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಯಿತು.

ಉದಯಕುಮಾರ್ ಅವರು ಸುಧಾ ಕೋ ಆಪರೇಟಿವ್ ಬ್ಯಾಂಕ್‌ನ ಉಪಾಧ್ಯಕ್ಷ ಹಾಗೂ ಕೋಲಾರದ ದೇವರಾಜ್ ಅರಸು ವೈದ್ಯಕೀಯ ಕಾಲೇಜು ಟ್ರಸ್ಟ್ ಹಾಗೂ ಆರ್.ಎಲ್. ಜಾಲಪ್ಪ ಅಕಾಡೆಮಿಯ ಟ್ರಸ್ಟಿ ಸಹ ಆಗಿದ್ದರು.

ಶಿಕ್ಷಣ



ಅಕ್ಷರದತ್ತ ಅಕ್ಕರೆ ಕಥೆಯಿಂದಲೇ ಶುರು!

ಟಿ.ಪಿ. ಮನೋಜ್

ಚಿಕ್ಕಮಕ್ಕಳಿಗೆ ಪ್ಲೇ ಹೋಂ, ನಂತರ ಕಿಂಡರ್‌ಗಾರ್ಟನ್... ಹೀಗೆ ಶಿಕ್ಷಣದ ಒಂದೊಂದೇ ಮಜಲಿಗೆ ದೂಡುತ್ತ ಹೋಗುತ್ತೇವೆ. ಅಷ್ಟು ಬೇಗ ಶಿಸ್ತುಬದ್ಧ ಶಿಕ್ಷಣ ಕೊಡಬೇಕೇ ಬೇಡವೇ ಎಂಬ ಚರ್ಚೆ ಯಾವತ್ತಿನಿಂದಲೂ ಇದೆ. ಆದರೆ ಚಿಕ್ಕ ವಯಸ್ಸಿನಲ್ಲೇ ಮಕ್ಕಳಿಗೆ ಅಕ್ಷರದ ರುಚಿ ಹತ್ತಿಸಿದರೆ ಮುಂದೆ ಶಾಲೆಯಲ್ಲಿ ಒಳ್ಳೆಯ ಬೆಳವಣಿಗೆ, ಕೌಶಲ ತೋರುತ್ತವೆ ಎಂಬುದು ಶಿಕ್ಷಣ ತಜ್ಞರ ಅಭಿಮತ. ಈ ವಯಸ್ಸಿನಲ್ಲೇ ಓದಿಸಿ, ಬರೆಸಲು ಶುರು ಮಾಡಬೇಕು ಎಂಬುದು ಇದರರ್ಥವಲ್ಲ. ನಿತ್ಯ ಇಪ್ಪತ್ತು ನಿಮಿಷ ಅಥವಾ ಅರ್ಧ ತಾಸು ಅದಕ್ಕೆ ಅರ್ಥವಾಗುವ ಯಾವುದಾದರೂ ಪುಸ್ತಕ ಓದಿ ಹೇಳಿದರೆ ಮಗು ಅಕ್ಷರದ ಬಗ್ಗೆ ಅಕ್ಕರೆ ಬೆಳೆಸಿಕೊಳ್ಳುತ್ತದೆ.

ಪುಟ್ಟ ಮಕ್ಕಳೆಂದರೆ ಹೆಚ್ಚಾಗಿ ಕಥೆ ಪುಸ್ತಕ ಓದಿ ಹೇಳುವುದು ಅಭ್ಯಾಸ. ಈ ಚಟುವಟಿಕೆಯಲ್ಲಿ ಕೆಲವೊಂದು ವಿಧಾನಗಳನ್ನು ಅನುಸರಿಸಿದರೆ ಮಗು ಚೆನ್ನಾಗಿ ಅರ್ಥ ಮಾಡಿಕೊಂಡು ಸೂಕ್ತವಾಗಿ ಸ್ಪಂದಿಸುತ್ತದೆ.

- ಪುಸ್ತಕವನ್ನು ಓದಿ ಹೇಳುವಾಗ ಪ್ರತಿಯೊಂದು ಶಬ್ದದ ಕೆಳಗೂ ಬೆರಳಿಡುವ ಕ್ರಮ ಅನುಸರಿಸಿ. ಎಡದಿಂದ ಬಲಕ್ಕೆ ಅಥವಾ ಮೇಲಿನಿಂದ ಕೆಳಗೆ ಓದುವ ಅಭ್ಯಾಸ ಚಿಕ್ಕ ಮಕ್ಕಳಿಗೆ ಸುಲಭವಾಗಿ ಬರುವುದಿಲ್ಲ. ಹೀಗಾಗಿ ಶಬ್ದದ ಕೆಳಗೆ ಬೆರಳಿಟ್ಟು ಓದಿದರೆ ಮಕ್ಕಳಿಗೆ ಕೂಡ ಒಂದು ರೀತಿಯ ಪುನರಾವರ್ತನೆಯಾದಂತಾಗುತ್ತದೆ. ಶಬ್ದಗಳ ಅರ್ಥ ಗ್ರಹಿಸಲು ಸಹಾಯವಾಗುತ್ತದೆ. ಎರಡು ಶಬ್ದಗಳ ನಡುವೆ ಇರುವ ಅಂತರವನ್ನು ಅರ್ಥ ಮಾಡಿಕೊಳ್ಳಲು ಆರಂಭಿಸುತ್ತದೆ. ಮಗು ತಾನೂ ನಿಮ್ಮನ್ನು ಅನುಕರಿಸಿ ಓದುವಂತೆ ನಟಿಸುತ್ತದೆ.
- **ಶಬ್ದಗಳ ಮೇಲೆ ಗಮನವಿಡಿ:** ಮಗುವಿನ ಶಬ್ದ ಭಂಡಾರ ಹೆಚ್ಚಿಸಲು ಓದುವುದು ಹೇಗೆ ಎಂಬುದನ್ನು ಕಲಿಸಬೇಕಾಗಿಲ್ಲ. ಓದಲು ಆರಂಭಿಸುವುದಕ್ಕಿಂತ ಮುನ್ನವೇ ಅದು ಸಾಕಷ್ಟು ಶಬ್ದಗಳನ್ನು ಪೋಷಕರ ಜೊತೆ ಮಾತನಾಡುವಾಗ ಕಲಿತಿರುತ್ತದೆ. ಹೇಗೆ ಓದಬೇಕೆಂಬುದಕ್ಕೆ ಹಿನ್ನೆಲೆಯಾಗಿ ಈ ಶಬ್ದಗಳು ಸಾಥ್ ನೀಡುತ್ತವೆ. ಇದರಿಂದ ಮಕ್ಕಳಿಗೆ ಒಳ್ಳೆಯ ಜ್ಞಾನ ಲಭಿಸುತ್ತದೆ. ಮಕ್ಕಳಿಗೆ ಹಳೆಯ ವಿಷಯದ ಜೊತೆ ಹೊಸ ವಿಷಯವನ್ನು ಸೇರಿಸಿ ಹೇಳುವುದರಿಂದ ಅವು ಬೇಗ ಅರ್ಥ ಮಾಡಿಕೊಳ್ಳುತ್ತವೆ. ಶಾಲೆಗೆ ಸೇರಿಸಿದಾಗ ಅಂತಹ ಮಗು ದಿನಕ್ಕೆ 8-10 ಹೊಸ ಶಬ್ದಗಳನ್ನು ಕಲಿಯುತ್ತ ಹೋಗುತ್ತದೆ. ಇದರಿಂದ ಓದಿದ್ದನ್ನು ಗ್ರಹಿಸುವುದು ಸುಲಭ.
- ಕಥೆ ಓದುವಾಗ ಚಿತ್ರಗಳು ಹೆಚ್ಚಿರುವ ಪುಸ್ತಕ ಆಯ್ಕೆ ಮಾಡಿಕೊಳ್ಳಿ. ಶಬ್ದಗಳು ಹಾಗೂ ಚಿತ್ರಗಳನ್ನು ಪರಸ್ಪರ ಬೆಸೆದು ಅವುಗಳ ಅರ್ಥ ಮನದಟ್ಟಾಗುವಂತೆ ಮಾಡಬಹುದು. ಓದುವಾಗ ಮುಖ್ಯವಾದ ಶಬ್ದಗಳನ್ನು ಮಕ್ಕಳ ಜೊತೆ ಚರ್ಚಿಸಿ. ಮಗುವಿಗೆ ಗೊತ್ತಿರುವ ಶಬ್ದಗಳ ಬಗ್ಗೆ ತನ್ನದೇ ಆದ ರೀತಿಯಲ್ಲಿ ವಿವರಿಸಲು ಪ್ರೇರೇಪಿಸಿ.
- **ಮಗುವಿಗೆ ಚಿಹ್ನೆಗಳ ಬಗ್ಗೆ ಹೇಳಿ:** ಚಿಕ್ಕ ಮಗುವಿಗೆ ಚಿಹ್ನೆಗಳ ಬಗ್ಗೆ ವಿವರಿಸಿ ಹೇಳುವುದು ಕಷ್ಟ. ಅವುಗಳನ್ನು ಹೇಗೆ ಬಳಸಬೇಕು ಎಂದು ಕಲಿಸಲು ಹೋಗಬೇಡಿ. ಆದರೆ ಓದುವಾಗ ಪ್ರಶ್ನಾರ್ಥಕ, ಆಶ್ಚರ್ಯಸೂಚಕ, ಪೂರ್ಣವಿರಾಮದಂತಹ ಸರಳ ಚಿಹ್ನೆಗಳತ್ತ ಗಮನ ಸೆಳೆಯಬಹುದು. ಉದಾಹರಣೆಗೆ ಪ್ರಶ್ನಾರ್ಥಕ ಚಿಹ್ನೆ ಬಂದಾಗ ಪ್ರಶ್ನೆಗೆ ಉತ್ತರಿಸುವಂತೆ ಮಗುವಿಗೆ ಪ್ರೇರೇಪಿಸಿ. ಅಂತಹ ಚಿಹ್ನೆಗಳಿರುವ ವಾಕ್ಯಗಳನ್ನು ಓದುವಾಗ ದನಿಯಲ್ಲೂ ಏರಿಳಿತ ತನ್ನಿ. ಇದರಿಂದ ಮುಂದೆ ಆ ಮಗು ಸರಾಗವಾಗಿ ಇಂತಹ ಚಿಹ್ನೆಗಳನ್ನು ಬಳಸುವುದನ್ನು ತಾನಾಗೇ ಕಲಿಯುತ್ತದೆ.
- **ದನಿಯಲ್ಲಿ ಏರಿಳಿತವಿರಲಿ:** ಶೇ 90ರಷ್ಟು ಸಂವಹನ ದೇಹದ ಹಾವಭಾವಗಳಿಂದ ನಡೆಯುತ್ತದಂತೆ. ಹೀಗಾಗಿ ಶಬ್ದಗಳನ್ನು ಉಚ್ಚರಿಸುವಾಗ ದನಿಯಲ್ಲಿ ಏರಿಳಿತ ತಂದು ಮುಖದಲ್ಲಿ ಭಾವನೆಗಳನ್ನು ಮೂಡಿಸಬಹುದು. ಆಂಗಿಕ ಅಭಿನಯ ಮಗುವಿನ ಮನಸ್ಸಿನಲ್ಲಿ ಆಳವಾಗಿ ಅಚ್ಚೊತ್ತುತ್ತದೆ. ಹಾಗೆಯೇ ಓದಿನ ಬಗ್ಗೆ ಮಗುವಿನಲ್ಲಿ ಆಸಕ್ತಿ ಮೂಡುತ್ತದೆ. ಪ್ರತಿಯೊಂದು ಶಬ್ದವನ್ನೂ ನಾಟಕೀಯವಾಗಿ ಹೇಳುವ ಅವಶ್ಯಕತೆ ಇಲ್ಲ. ಆದರೆ ಧ್ವನಿಯಲ್ಲೇ ಅದು ಅರ್ಥವನ್ನು ಗ್ರಹಿಸಲು ಕಲಿಯುತ್ತದೆ.
- **ಗ್ರಹಿಸಿ ಓದುವುದು:** ಮಕ್ಕಳಿಗೆ ಈ ಕೌಶಲವನ್ನು ಚಿಕ್ಕಂದಿನಿಂದಲೇ ಅಭ್ಯಾಸ ಮಾಡಿಸಬಹುದು. ಏಕೆಂದರೆ ಶಾಲೆಗೆ ಹೋಗುವ ಮಕ್ಕಳು, ಹೈಸ್ಕೂಲ್ ಮೆಟ್ಟಿಲೇರಿದರೂ ಈ ವಿಭಾಗದಲ್ಲಿ ಕಷ್ಟಪಡಬಹುದು. ಹೀಗಾಗಿ ಕಥೆ ಓದಿದ ನಂತರ ಮಕ್ಕಳಿಗೆ ಕೆಲವು ಪ್ರಶ್ನೆಗಳನ್ನು ಕೇಳಿ. ನೀಡಿದ ಉತ್ತರದ ಮೇಲೆ ಆ ಮಕ್ಕಳು ಅದನ್ನು ಎಷ್ಟರ ಮಟ್ಟಿಗೆ ಗ್ರಹಿಸಿದ್ದಾರೆ ಎಂದು ವಿಶ್ಲೇಷಿಸಬಹುದು. ಉತ್ತರಿಸಲು ಕಷ್ಟಪಟ್ಟರೆ ಆ ಉತ್ತರ ಇರುವ ಪುಟ ತೆರೆದು ಮತ್ತೆ ಓದಿ ಹೇಳಿ.
- **ಪುನರಾವರ್ತನೆ:** ಮಗುವಿಗೆ ಒಂದು ಪುಸ್ತಕ ಇಷ್ಟವಾದರೆ ಮತ್ತೆ ಮತ್ತೆ ಓದಿ ಹೇಳಿ. ಈ ರೀತಿ ಪುನರಾವರ್ತನೆ ಅಭ್ಯಾಸ ಕಲಿಕೆಗೆ ಉತ್ತಮ. ಶಬ್ದಗಳನ್ನು ಗ್ರಹಿಸಿ, ಅದರ ಅರ್ಥವನ್ನೂ ಕಲಿಯುತ್ತದೆ. ಜೊತೆಗೆ ನೀವೇನಾದರೂ ತಪ್ಪು ಮಾಡಿದರೆ ಕಂಡು ಹಿಡಿದು ಸರಿಪಡಿಸುವಷ್ಟು ಜಾಣ್ಮೆಯನ್ನು ಮಕ್ಕಳು ತೋರಿಸುತ್ತಾರೆ.

> ಮಕ್ಕಳಿಗೆ ಚಿಕ್ಕಂದಿನಿಂದಲೇ ಅಕ್ಷರದ ಪರಿಚಯ ಮಾಡಿಸಿದರೆ ಮುಂದೆ ಪುಸ್ತಕಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡು ಕಲಿಕೆಯನ್ನು ಖುಷಿಯಿಂದ ಮುಂದುವರಿಸಲು ಸಹಾಯಕ. ಕಲಿಕೆಯ ಚಟುವಟಿಕೆಗಳಲ್ಲಿ ಒಂದಾದ ಕಥೆ ಓದಿ ಹೇಳಿದರೆ ಮಕ್ಕಳು ಅದನ್ನು ತಮಾಷೆಯಾಗಿ ಅನುಭವಿಸಿ, ಕಲಿಯುವುದರಲ್ಲೂ ಆಸಕ್ತಿ ತೋರುತ್ತಾರೆ.

ವಿಧಿ ವಿಜ್ಞಾನ

ವ್ಯಾಸಂಗದ ಜೊತೆ ಬದ್ಧತೆಯೂ ಬೇಕು

ಅರುಣ ಬ. ಚೂರಿ

ವಿಧಿ ವಿಜ್ಞಾನವು ಯಾವುದೇ ಅಪರಾಧ ತನಿಖೆಯ ಅಂಶಗಳಲ್ಲಿ ಪ್ರಮುಖ ಭಾಗ. ಇದರ ನೆರವಿನೊಂದಿಗೆ ಶಂಕಿತರನ್ನು ಸರಿಯಾಗಿ ಗುರುತಿಸಿ, ಆ ಅಪರಾಧ ಯಾವಾಗ ಮತ್ತು ಹೇಗೆ ಸಂಭವಿಸಿತು ಎಂಬುದನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗುತ್ತದೆ.

ಜಗತ್ತಿನಲ್ಲಿ ಅಪರಾಧಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಹೀಗಾಗಿ ಈ ಕ್ಷೇತ್ರದಲ್ಲಿ ಬೇಕಾದಷ್ಟು ವೃತ್ತಿ ಅವಕಾಶಗಳಿವೆ. ಆದರೆ ನಿಮಗೆ ಅತ್ಯವಶ್ಯಕವಾಗಿರುವುದು ವೈಯಕ್ತಿಕ ಆಸಕ್ತಿ. ಈ ಕ್ಷೇತ್ರದಲ್ಲಿ ನಿಮಗೆ ಆಸಕ್ತಿ ಇದ್ದರೆ ನೀವು ಭಾರತದಲ್ಲಷ್ಟೇ ಅಲ್ಲ, ವಿದೇಶಗಳಲ್ಲೂ ಸಹ ಕೆಲಸ ಗಿಟ್ಟಿಸಿಕೊಳ್ಳಬಹುದು.

ವಿಧಿವಿಜ್ಞಾನ ವಿಜ್ಞಾನಿಗಳು ಕೆಲವೊಮ್ಮೆ ಅಪರಾಧದ ಸ್ಥಳಕ್ಕೆ ಭೇಟಿ ನೀಡಬೇಕಾಗಬಹುದು. ಅಲ್ಲಿ ಅವರು ಮೃತದೇಹದ ಪರೀಕ್ಷೆ ಹಾಗೂ ರಕ್ತ, ಇನ್ನಿತರ ಸಾಕ್ಷ್ಯಗಳ ಕಲೆ ಹಾಕಬೇಕಾಗುತ್ತದೆ. ಇದಲ್ಲದೆ ಕೆಲವೊಮ್ಮೆ ಪ್ರಯೋಗಾಲಯದಲ್ಲಿ ರಕ್ತಸಿಕ್ತ ಬಟ್ಟೆ ಹಾಗೂ ಮನಸ್ಸಿಗೆ ಯಾತನೆ ಉಂಟು ಮಾಡಬಹುದಾದಂತಹ ವಸ್ತುಗಳನ್ನು ವಿಶ್ಲೇಷಿಸುವ ಸಾಧ್ಯತೆ ಎದುರಾಗಬಹುದು. ಹೀಗಾಗಿ ಈ ರೀತಿಯ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಇವೆಲ್ಲವುಗಳನ್ನು ಎದುರಿಸಲು ನಾನು ಶಕ್ತನೇ ಎಂದು ವಿಶ್ಲೇಷಿಸಿಕೊಂಡರೆ ಒಳ್ಳೆಯದು.

ವಿಧಿವಿಜ್ಞಾನ ವಿಜ್ಞಾನಿಗಳನ್ನು ಸರ್ಕಾರಿ ವಲಯಗಳಲ್ಲಿಯೂ ನೇಮಿಸಿಕೊಳ್ಳುತ್ತಾರೆ. ಅವರು ವಿವಿಧ ಕಾನೂನು ಸಂಸ್ಥೆಗಳು, ಪೊಲೀಸ್ ಇಲಾಖೆ, ವಿಧಿ ವಿಜ್ಞಾನ ಪ್ರಯೋಗಾಲಯಗಳು, ಅಪರಾಧ ಶಾಖೆಗಳು, ಆಸ್ಪತ್ರೆಗಳು, ಭದ್ರತಾ ಸೇವಾ ಏಜೆನ್ಸಿಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ತನಿಖಾ ಸೇವೆಗಳು ಮತ್ತು ಕಾನೂನು-ವ್ಯವಸ್ಥೆಯ ತನಿಖಾ ವಿಭಾಗದಲ್ಲಿ ಕಾರ್ಯನಿರ್ವಹಿಸಬಹುದು.

ಇದಲ್ಲದೆ ವಿಧಿವಿಜ್ಞಾನಿಯಾಗಿ ಅನುಭವ ಪಡೆದ ನಂತರ ಕಾನೂನು ಸಲಹೆಗಾರರಾಗಿಯೂ ಕಾರ್ಯನಿರ್ವಹಿಸಬಹುದು.

ವಿಧಿ ವಿಜ್ಞಾನ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಅವಶ್ಯಕವಾದ ಕೌಶಲಗಳು

- ಏಕಾಗ್ರತೆ, ತಾಳ್ಮೆ ಹಾಗೂ ಭಾವನಾತ್ಮಕ ಸಂದರ್ಭಗಳನ್ನು ಎದುರಿಸುವ ಶಕ್ತಿ.
- ತಾರ್ಕಿಕ ಹಾಗೂ ಸ್ವತಂತ್ರವಾಗಿ ಯೋಚಿಸುವ ಶಕ್ತಿ.
- ನೀಡಿದ ವಿವರಗಳ ಕಡೆಗೆ ಸೂಕ್ಷ್ಮ ಗಮನ ಹರಿಸುವುದು.
- ಗೌಪ್ಯ ಮಾಹಿತಿಯೊಂದಿಗೆ ವ್ಯವಹರಿಸುವಾಗ ವಸ್ತುನಿಷ್ಠ ಹಾಗೂ ಸೂಕ್ಷ್ಮ ಅಂಶ ಕಾಪಾಡುವುದು.
- ಅತ್ಯುತ್ತಮ ಲಿಖಿತ ಹಾಗೂ ಮೌಖಿಕ ಸಂವಹನ ಕೌಶಲ.
- ಒತ್ತಡದಲ್ಲಿ ಹಾಗೂ ನಿಗದಿತ ಗಡುವಿನೊಳಗೆ ಕೆಲಸ ಮಾಡುವ ಸಾಮರ್ಥ್ಯ.

ವಿಧಿ ವಿಜ್ಞಾನದ ವಿವಿಧ ಕೋರ್ಸ್‌ಗಳು

1. ಫೊರೆನ್ಸಿಕ್ ಸೈನ್ಸ್ ಆ್ಯಂಡ್ ಕ್ರಿಮಿನಾಲಜಿ, 2. ಫೊರೆನ್ಸಿಕ್ ಸೈನ್ಸ್ ಆ್ಯಂಡ್ ಫಿಂಗರ್‌ಪ್ರಿಂಟ್, 3. ಫೊರೆನ್ಸಿಕ್ ಸೈನ್ಸ್ ಆ್ಯಂಡ್ ಡಾಕ್ಯುಮೆಂಟ್ ಎಕ್ಸಾಮಿನೇಶನ್, 4. ಫಿಂಗರ್‌ಪ್ರಿಂಟ್ ಎಕ್ಸ್‌ಪರ್ಟ್, 5. ಸೈಬರ್ ಫೊರೆನ್ಸಿಕ್, 6. ಡಿಎನ್‌ಎ ಫಿಂಗರ್‌ಪ್ರಿಂಟಿಂಗ್, 7. ಫೊರೆನ್ಸಿಕ್ ಆಡಿಯೊ ಆ್ಯಂಡ್ ವಿಡಿಯೊ ಅನಾಲಿಸಿಸ್, 8. ಫೊರೆನ್ಸಿಕ್ ಮೆಡಿಸಿನ್ ಆ್ಯಂಡ್ ಟಾಕ್ಸಿಕೊಲಜಿ, 9. ಸೆಲ್ ಫೋನ್ ಫೊರೆನ್ಸಿಕ್, 10. ಪ್ರೈವೇಟ್ ಇನ್ವೆಸ್ಟಿಗೇಟರ್. ಇದರಲ್ಲಿ ಅಲ್ಪಾವಧಿ ಸರ್ಟಿಫಿಕೇಟ್, ಅಡ್ವಾನ್ಸಡ್ ಸರ್ಟಿಫಿಕೇಟ್, ಎಕ್ಸ್‌ಪರ್ಟ್, ಸ್ನಾತಕೋತ್ತರ ಸರ್ಟಿಫಿಕೇಟ್ ಮೊದಲಾದ ಕೋರ್ಸ್‌ಗಳು ಲಭ್ಯ.

ವಿಧಿವಿಜ್ಞಾನ ತಜ್ಞರನ್ನು ನೇಮಕ ಮಾಡಿಕೊಳ್ಳುವ ಉನ್ನತ ಕಂಪನಿಗಳು: ವಿಧಿವಿಜ್ಞಾನ ಸೇವೆಗಳ ನಿರ್ದೇಶನಾಲಯ (ಗೃಹ ಇಲಾಖೆ, ಕೇಂದ್ರ ಸರ್ಕಾರ), ಗುಪ್ತಚರ ಬ್ಯೂರೋ (ಗೃಹ ಸಚಿವಾಲಯ, ಕೇಂದ್ರ ಸರ್ಕಾರ), ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಸಿಬಿಐ), ಫೊರೆನ್ಸಿಕ್ ಸ್ಟ್ಯಾಂಡರ್ಡ್ & ರಿಸರ್ಚ್, ಇಂಟಲಿಜೆನ್ಸ್ ಬ್ಯೂರೋ.

ವಿಧಿವಿಜ್ಞಾನ ತಜ್ಞ ಆಗುವುದರ ಸಾಧಕ-ಬಾಧಕಗಳು

ಸಾಧಕಗಳು

- ವಿಧಿವಿಜ್ಞಾನ ತಜ್ಞರು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಯಲ್ಲಿ ಅತ್ಯುತ್ತಮ ವೃತ್ತಿಜೀವನದ ನಿರೀಕ್ಷೆಯೊಂದಿಗೆ ಸವಾಲಿನ ಕೆಲಸ ಮಾಡಬಹುದು.
- ಅಪರಾಧದ ಕೃತ್ಯಗಳು, ಸೈಬರ್ ಬೆದರಿಕೆಗಳನ್ನು ಪರಿಹರಿಸಲು ಮತ್ತು ಅಪರಾಧಿಗಳನ್ನು ಪರೀಕ್ಷಿಸಲು ವಿವಿಧ ಸಂಸ್ಥೆಗಳಲ್ಲಿ ನುರಿತ ವಿಧಿವಿಜ್ಞಾನ ವೃತ್ತಿಪರರ ಅಗತ್ಯವಿರುವುದರಿಂದ ಕೆಲವು ವರ್ಷಗಳ ಅನುಭವ ಹೊಂದಿದ ನಂತರ ಅಭ್ಯರ್ಥಿಗಳು ಉತ್ತಮ ವೇತನ ಪಡೆಯಬಹುದು ಹಾಗೂ ವೃತ್ತಿಜೀವನದಲ್ಲಿ ಬೆಳವಣಿಗೆ ಹೊಂದಬಹುದು.

ಬಾಧಕಗಳು

- ವಿಧಿವಿಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆದಾಗ ಮಾತ್ರ ಅಭ್ಯರ್ಥಿಗಳಿಗೆ ಉತ್ತಮ ಅವಕಾಶಗಳು ಲಭ್ಯ.
- ಕೆಲಸದ ಸಮಯವು ಒಂದೇ ರೀತಿ ಇರುವುದಿಲ್ಲ.
- ಸೂಕ್ಷ್ಮವಾದ ಕೆಲಸವಾಗಿದ್ದು, ಅಭ್ಯರ್ಥಿಗಳು ಹೆಚ್ಚು ಬದ್ಧರಾಗಿರಬೇಕು.

ಅರ್ಹತೆ: ಸ್ನಾತಕೋತ್ತರ ಕೋರ್ಸ್‌ಗೆ ಯಾವುದೇ ವಿಭಾಗದಲ್ಲಿ ಪದವಿ - ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ.

ಸುಧಾರಿತ ಪ್ರಮಾಣೀಕರಣ ಕೋರ್ಸ್: ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ಅಥವಾ ಡಿಪ್ಲೊಮಾದ ಯಾವುದೇ ವಿಭಾಗದಲ್ಲಿ ಉತ್ತೀರ್ಣರಾಗಿರಬೇಕು.

ವಿದ್ಯಾರ್ಥಿ ವೇತನ ಕೈಪಿಡಿ

ಐಎನ್‌ಎಇ ವುಮನ್ ಎಂಜಿನಿಯರ್ ಆಫ್ ದಿ ಇಯರ್ ಫೆಲೋಶಿಪ್ 2021

- ವಿವರ: ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್ ಮಹಿಳಾ ಎಂಜಿನಿಯರ್‌ಗಳಿಂದ 'ಎಂಜಿನಿಯರ್ ಆಫ್ ದಿ ಇಯರ್ ಫೆಲೋಶಿಪ್'ಗೆ ಅರ್ಜಿಗಳನ್ನು ಆಹ್ವಾನಿಸಿದೆ. ಎಂಜಿನಿಯರಿಂಗ್ ಹಾಗೂ ತಾಂತ್ರಿಕ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿರುವ ಮಹಿಳಾ ಎಂಜಿನಿಯರ್‌ಗಳನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.
- ಅರ್ಹತೆ: ಭಾರತದಲ್ಲಿ ಉದ್ಯೋಗಸ್ಥರಾಗಿರುವ 40 ರಿಂದ 60 ವರ್ಷದ ಒಳಗಿನ ಎಂಜಿನಿಯರ್‌ಗಳಿಗೆ ಈ ಫೆಲೋಶಿಪ್ ಮುಕ್ತವಾಗಿದೆ. ಅಭ್ಯರ್ಥಿ ಭಾರತೀಯ ಪ್ರಜೆಯಾಗಿರಬೇಕು.
- ಆರ್ಥಿಕ ನೆರವು: ₹ 2 ಲಕ್ಷ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 15, 2021
- ಅರ್ಜಿ ಸಲ್ಲಿಕೆ ವಿಧಾನ: ಅರ್ಜಿಯನ್ನು ಪೋಸ್ಟ್ ಮೂಲಕ ಕಳುಹಿಸಬೇಕು.
- ಹೆಚ್ಚಿನ ಮಾಹಿತಿಗೆ: www.b4s.in/praja/NWA4

ನ್ಯಾಷನಲ್ ಸ್ಕಾಲರ್‌ಶಿಪ್ ಸ್ಕೀಮ್, ಎಚ್‌ಆರ್‌ಡಿಎಂ 2021

- ವಿವರ: ಮಾವನ ಸಂಪನ್ಮೂಲ ಹಾಗೂ ಅಭಿವೃದ್ಧಿ ಮಿಷನ್ ರಾಷ್ಟ್ರೀಯ ವಿದ್ಯಾರ್ಥಿವೇತನ ಯೋಜನೆಯಡಿ 10ನೇ ತರಗತಿ, ದ್ವಿತೀಯ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.
- ಅರ್ಹತೆ: 10ನೇ ತರಗತಿ, ದ್ವಿತೀಯ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ಪೂರ್ಣಗೊಳಿಸಿದ 16 ರಿಂದ 40 ವರ್ಷದೊಳಗಿನ ಅಭ್ಯರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರು.
- ಆರ್ಥಿಕ ನೆರವು: ₹ 6000
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 15, 2021
- ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
- ಹೆಚ್ಚಿನ ಮಾಹಿತಿಗೆ: www.b4s.in/praja/SSH8

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಬಹುಪದೋಕ್ತಿಗಳು

ಗಣಿತ | ಎಸ್ಸೆಸ್ಸೆಲ್ಸಿ

ಪೀಠಿಕೆ: ಒಂದು ಚರಾಕ್ಷರವುಳ್ಳ ಬಹುಪದೋಕ್ತಿಗಳು ಹಾಗೂ ಅವುಗಳ ಮಹತ್ತಮ ಘಾತ ಡಿಗ್ರಿಯ ಬಗ್ಗೆ ಅಭ್ಯಾಸ ಮಾಡಿದ್ದೀರಿ. $p(x)$ ಎಂಬುದು x ಎಂಬ ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾದರೆ $p(x)$ ದಲ್ಲಿನ x ನ ಗರಿಷ್ಠ ಘಾತಸೂಚಿಯಲ್ಲಿ ಆ ಬಹುಪದೋಕ್ತಿ $p(x)$ ನ ಮಹತ್ತಮ ಘಾತ ಅಥವಾ ಡಿಗ್ರಿಯಾಗಿರುತ್ತದೆ.

ಡಿಗ್ರಿ 1 ಆಗಿರುವ ಬಹುಪದೋಕ್ತಿಗೆ ರೇಖಾತ್ಮಕ ಬಹುಪದೋಕ್ತಿ ಎನ್ನುವರು.

$2x-3$, $3z+4$ ಇವು ರೇಖಾತ್ಮಕ ಬಹುಪದೋಕ್ತಿಗೆ ಉದಾಹರಣೆಯಾಗಿದೆ.

ಡಿಗ್ರಿ 2 ಆಗಿರುವ ಬಹುಪದೋಕ್ತಿಗೆ ವರ್ಗ ಬಹುಪದೋಕ್ತಿ ಎನ್ನುತ್ತಾರೆ.

$$2x^2+3x-$$

$$\frac{2}{5}y^2-2,\ 4z^2+4z+\frac{1}{7}$$

ಇವು ಬಹುಪದೋಕ್ತಿಗಳಿಗೆ ಉದಾಹರಣೆಯಾಗಿದೆ.

ಸಾಮಾನ್ಯವಾಗಿ x ಎಂಬ ಚರಾಕ್ಷರವುಳ್ಳ ಯಾವುದೇ ವರ್ಗ ಬಹುಪದೋಕ್ತಿಯ $ax2 + bx + c$ ರೂಪದಲ್ಲಿರುತ್ತವೆ. ಇಲ್ಲಿ a,b,c ಗಳು ವಾಸ್ತವ ಸಂಖ್ಯೆಗಳಾಗಿದ್ದು, $a \neq o$ ಆಗಿದೆ.

ಡಿಗ್ರಿ 3 ಆಗಿರುವ ಬಹುಪದೋಕ್ತಿಯನ್ನು ಘನ ಬಹುಪದೋಕ್ತಿ ಎನ್ನುತ್ತಾರೆ. ಘನ ಬಹುಪದೋಕ್ತಿಗೆ ಕೆಲವು ಉದಾಹರಣೆಗಳೆಂದರೆ $2- x3$, $x3$, $3-x2 + x3$ ಇತ್ಯಾದಿ.

ಒಂದು ಘನ ಬಹುಪದೋಕ್ತಿಯ ಸಾಮಾನ್ಯ ರೂಪವು $ax2 + bx2 + cx + d$ ಆಗಿದ್ದು ಇಲ್ಲಿ a,b,c,d ಗಳು ವಾಸ್ತವ ಸಂಖ್ಯೆಗಳು ಮತ್ತು ಆಗಿದೆ.

ಬಹುಪದೋಕ್ತಿಯ ಶೂನ್ಯತೆ

ಈಗ $p(x) = x2-3x-4$ ಎಂಬ ಬಹುಪದೋಕ್ತಿಯನ್ನು ತೆಗೆದುಕೊಳ್ಳೋಣ. ಇಲ್ಲಿ $x = 2$ ಎಂದು ಆದೇಶಿಸಿದಾಗ $p(2) = 22- 3(2)-4 = -6$, $x2- 3x- 4$ ದೊರೆತ ಬೆಲೆ ಇದಾಗಿರುತ್ತದೆ.

ಅಂತೆಯೇ $p(0)$ ಇದು $x = 0$ ಆದಾಗ $p(x)$ ನ ಬೆಲೆಯಾಗಿದ್ದು, ಅದು -4 ಆಗಿದೆ.

$p(x)$ ಎಂಬುದು ಬಹುಪದೋಕ್ತಿಯಾಗಿದ್ದು ಮತ್ತು k ಎಂಬುದು ಯಾವುದೇ ವಾಸ್ತವ ಸಂಖ್ಯೆಯಾಗಿದ್ದರೆ $p(x)$ ನಲ್ಲಿ x ಗೆ ಯನ್ನು ಆದೇಶಿಸಿದಾಗ ದೊರೆಯುವ ಬೆಲೆಯನ್ನು $x = k$ ಆದಾಗ $p(x)$ ನ ಬೆಲೆ ಎನ್ನುತ್ತೇವೆ ಹಾಗೂ ಅದನ್ನು $p(k)$ ಎಂದು ಸೂಚಿಸುತ್ತೇವೆ.

$x = -1$ $p(x) = x2- 3x-4$ ಆದಾಗ ಇದರ ಬೆಲೆ ಎಷ್ಟು?

$p(-1) = (-1)2-3(-1)-4 = 0$

ಹಾಗೆಯೇ $P(4) = (4)2-3(4)-4 = 0$ ಆಗಿರುವುದನ್ನು ಗಮನಿಸಿ.

$p(-1) = 0$ ಮತ್ತು $p(4) = 0$

ಆಗಿರುವುದರಿಂದ –1 ಮತ್ತು 4 ಅನ್ನು ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳು ಎನ್ನುತ್ತೇವೆ.

ಸಾಮಾನ್ಯವಾಗಿ k ಯು ಒಂದು ವಾಸ್ತವ ಸಂಖ್ಯೆಯಾಗಿದ್ದು, $p(k) = 0$ ಆದರೆ k ಯನ್ನು ಬಹುಪದೋಕ್ತಿ $p(x)$ ಶೂನ್ಯತೆ ಎಂದು ಕರೆಯುತ್ತೇವೆ.

ಒಂದು ರೇಖಾತ್ಮಕ ಬಹುಪದೋಕ್ತಿಯ ಶೂನ್ಯತೆಗಳನ್ನು ಹೀಗೆ ಕಂಡುಹಿಡಿಯುವುದರಿಂದ k ಎಂಬುದು $p(x)2x + 3$ ರ ಶೂನ್ಯತೆಯಾದರೆ ಆಗ

$p(k) = 0$

$2k-3 = 0$

ಅಂದರೆ $k = -3/2$

ಸಾಮಾನ್ಯವಾಗಿ k ಎಂಬುದು $p(x)$ $ax-b$ ಶೂನ್ಯತೆಯಾದರೆ ಆಗ $p(k) = ak + b$ ಅಂದರೆ $k = \frac{-b}{a}$ ಆದ್ದರಿಂದ ರೇಖಾತ್ಮಕ ಬಹುಪದೋಕ್ತಿ ಶೂನ್ಯತೆಯು ಒಂದು ರೇಖಾತ್ಮಕ ಬಹುಪದೋಕ್ತಿಯ $ax + b$ ಶೂನ್ಯತೆಯು

$$\frac{-b}{a} = \frac{-\text{ಸ್ಥಿರಾಂಕ}}{x \text{ ನ ಸಹಗುಣಕ}}$$

ಒಂದು ರೇಖಾತ್ಮಕ ಬಹುಪದೋಕ್ತಿಯ ಶೂನ್ಯತೆಯು ಅದರ ಸಹಗುಣಕಗಳೊಂದಿಗೆ ಸಂಬಂಧವನ್ನು ಹೊಂದಿದೆ. ಬೇರೆ ನಮೂನೆಯ ಬಹುಪದೋಕ್ತಿಯ ಶೂನ್ಯತೆಗಳೂ ಸಹ ಅದರ ಸಹಗುಣಕಗಳೊಡನೆ ಸಂಬಂಧವನ್ನು ಹೊಂದಿದೆ.

(ಮುಂದುವರಿಯುವುದು)

ನಾಮಕರಣ

(ಮುಂದುವರಿದ ಭಾಗ)

ರಸಾಯನಶಾಸ್ತ್ರ | ದ್ವಿತೀಯ ಪಿಯುಸಿ

ಹೈಡ್ರೋಕಾರ್ಬನ್‌ಗಳಿಂದ

ಎ) ಮುಕ್ತ ಮಾತೃಕೆಯ ಹ್ಯಾಲೋಜನೀಕರಣದಿಂದ

ಆಲ್ಕೇನ್‌ಗಳನ್ನು ಮುಕ್ತ ಮಾತೃಕೆಯ ಕ್ಲೋರಿನೀಕರಣ ಮತ್ತು ಬ್ರೋಮಿನೀಕರಣಗೊಳಿಸಿದಾಗ ಮೊನೋ ಮತ್ತು ಪಾಲಿ ಹ್ಯಾಲೋ ಆಲ್ಕೇನ್‌ಗಳ ಸಂಕೀರ್ಣ ಸಮಾಂಗೀಯ ಮಿಶ್ರಣವನ್ನು ನೀಡುತ್ತದೆ.

$$CH_3CH=CH_2+H-I\rightarrow CH_3CH_2CH_2I+CH_3CHICH_3$$

(ಕಡಿಮೆ ಪ್ರಮಾಣ) (ಹೆಚ್ಚಿನ ಪ್ರಮಾಣ)

ಬಿ) ಎಲೆಕ್ಟ್ರಾನ್ ಆಕಾಂಕ್ಷೀಯ ಆದೇಶ್ಯಗಳಿಂದ

ಆರೀನ್‌ಗಳು, ಕ್ಲೋರೀನ್ ಮತ್ತು ಬ್ರೋಮೀನ್‌ನೊಂದಿಗೆ ಲೆವಿಸ್ ಆಮ್ಲ ವೇಗ ವರ್ಧಕಗಳಂತಹ ಕಬ್ಬಿಣ ಮತ್ತು ಕಬ್ಬಿಣ (|||) ಕ್ಲೋರೈಡ್‌ನ ಸಾನಿಧ್ಯದಲ್ಲಿ ಎಲೆಕ್ಟ್ರಾನ್ ಆಕಾಂಕ್ಷೀಯ ಆದೇಶ್ಯ ಕ್ರಿಯೆಗೆ ಒಳಪಟ್ಟು ಕ್ರಮವಾಗಿ ಅರೈಲ್ ಕ್ಲೋರೈಡ್ ಮತ್ತು ಅರೈಲ್ ಬ್ರೋಮೈಡ್ ಅನ್ನು ಸುಲಭವಾಗಿ ತಯಾರಿಸಬಹುದು.



ಆರ್ಥೋ ಮತ್ತು ಪ್ಯಾರಾ ಸಮಾಂಗಿಗಳ ಕರಗುವ ಬಿಂದುವಿನಲ್ಲಿ ಬಹಳ ವ್ಯತ್ಯಾಸವಿರುವುದರಿಂದ ಸುಲಭವಾಗಿ ಬೇರ್ಪಡಿಸಬಹುದು.

ಸಿ)ಸ್ಯಾಂಡ್ ಮೇಯರ್ ಪ್ರಕ್ರಿಯೆ

ತಣ್ಣಗಿನ ಜಲೀಯ, ಖನಿಜಾಮ್ಲದಲ್ಲಿ ಪ್ರೈಮರಿ ಆರೊಮ್ಯಾಟಿಕ್ ಅಮೈನ್ ಅನ್ನು ಕರಗಿಸಿ ಅಥವಾ ನಿಲಂಬಿಸಿ ಸೋಡಿಯಂ ನೈಟ್ರೈಟ್‌ನೊಂದಿಗೆ ವರ್ತಿಸಿದಾಗ ಡೈ ಅಝೋನಿಯಂ ಲವಣವು ಉಂಟಾಗುತ್ತದೆ.

ಕ್ಯುಪ್ರಸ್ ಕ್ಲೋರೈಡ್ ಅಥವಾ ಕ್ಯುಪ್ರಸ್ ಬ್ರೋಮೈಡ್‌ನೊಂದಿಗೆ ತಾಜಾ ತಯಾರಿಸಿದ ಡೈ ಅಝೋನಿಯಂ ಲವಣವನ್ನು ಮಿಶ್ರಣ ಮಾಡಿದಾಗ ಡೈ ಅಝೋನಿಯಂ ಗುಂಪು ಕ್ಲೋರೈಡ್ ಅಥವಾ ಬ್ರೋಮೈಡ್‌ನಿಂದ ಸ್ಥಾನಪಲ್ಲಟವಾಗುತ್ತದೆ.









ಡೈ ಅಝೋನಿಯಂ ಲವಣವನ್ನು ಪೊಟ್ಯಾಷಿಯಂ ಅಯೋಡೈಡ್‌ನೊಂದಿಗೆ ಕೇವಲ ಕುಲುಕುವುದರಿಂದ ಡೈ ಅಝೋನಿಯಂ ಗುಂಪನ್ನು ಸ್ಥಾನಪಲ್ಲಟಗೊಳಿಸಬಹುದು.

ಡಿ) ಆಲ್ಕೀನ್‌ಗಳಿಂದ

ಹೈಡ್ರೋಜನ್ ಹ್ಯಾಲೈಡ್‌ಗಳ ಸಂಕಲನದಿಂದ: ಆಲ್ಕೀನ್ ಅನ್ನು ಹೈಡ್ರೋಜನ್ ಕ್ಲೋರೈಡ್ , ಹೈಡ್ರೋಜನ್ ಬ್ರೋಮೈಡ್ ಅಥವಾ ಹೈಡ್ರೋಜನ್ ಅಯೋಡೈಡ್‌ನೊಂದಿಗೆ ವರ್ತಿಸಿದಾಗ ಸಂಬಂಧಿಸಿದ ಆಲ್ಕೈಲ್ ಹ್ಯಾಲೈಡ್ ಆಗಿ ಪರಿವರ್ತನೆಯಾಗುತ್ತದೆ.



$Cl,\ Br,$ I

ಪ್ರೊಪೀನ್ ಎರಡು ಉತ್ಪನ್ನಗಳನ್ನು ಕೊಡುತ್ತದೆಯಾದರೂ ಮಾರ್ಕೋನಿಕೊವ್‌ನ ನಿಯಮದಂತೆ ಒಂದು ಉತ್ಪನ್ನ ಪ್ರಧಾನವಾಗಿರುತ್ತದೆ.

$$CH_3CH_2CH_2CH_3 \xrightarrow[\text{or heat}]{cl2/\text{UV light}} CH_3CH_2CH_2CH_2CI+CH_3CH_2CHCICH_3$$

ಹ್ಯಾಲೋಜನ್‌ಗಳ ಸಂಕಲನ

ಪ್ರಯೋಗ ಶಾಲೆಯಲ್ಲಿ CCl_4ನ ದ್ರಾವಣದಲ್ಲಿರುವ ಬ್ರೋಮೀನ್‌ನೊಂದಿಗೆ ಆಲ್ಕೀನ್ ಸೇರಿಸಿದಾಗ ಬಿಡುಗಡೆಯಾಗುವ ಕೆಂಪು ಮಿಶ್ರಿತ ಕಂದು ಬಣ್ಣದ ಬ್ರೋಮಿನ್ ಅಣುವಿನಲ್ಲಿರುವ ದ್ವಿಬಂಧವನ್ನು ಪತ್ತೆಹಚ್ಚುವ ಒಂದು ಪ್ರಮುಖ ವಿಧಾನವಾಗಿದೆ. ಈ ಸಂಕಲನ ಕ್ರಿಯೆಯು ವರ್ಣರಹಿತವಾದ ವಿಸಿನಲ್ (ಸಾಮಿಪ್ಯ) ಡೈ ಬ್ರೋಮೈಡ್‌ಗಳನ್ನು ಸಂಶ್ಲೇಷಿಸುತ್ತದೆ.



(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಸಾಲಿಡ್ ಸ್ಟೇಟ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3uccdVp

ಬಿಜೆಪಿಯ ಸವಾಲು ಗೆದ್ದ ಮಮತಾ

• ಶೋಮು ದಾಸ್

ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯ ಬೋಲಪುರದಲ್ಲಿ ಟಿಎಂಸಿ ಕಾರ್ಯಕರ್ತರು ಬಣ್ಣ ಹಚ್ಚಿ ಪಕ್ಷದ ಗೆಲುವನ್ನು ಸಂಭ್ರಮಿಸಿದರು—ಪಿಟಿಐ ಚಿತ್ರ

ಕೋಲ್ಕತ್ತ: ನಂದಿಗ್ರಾಮದಲ್ಲಿ ಸುವೇಂದು ಅಧಿಕಾರಿ ವಿರುದ್ಧ ಸೋತರೂ ತೃಣಮೂಲ ಕಾಂಗ್ರೆಸ್‌ಗೆ (ಟಿಎಂಸಿ) ಭಾರಿ ಗೆಲುವು ತಂದುಕೊಟ್ಟು ಬಿಜೆಪಿಯನ್ನು ತಡೆದು ನಿಲ್ಲಿಸುವಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಯಶಸ್ವಿಯಾಗಿದ್ದಾರೆ. 294 ಕ್ಷೇತ್ರಗಳ ಪೈಕಿ ಮಮತಾ ಅವರ ಪಕ್ಷವು 200ರ ಗಡಿ ದಾಟಿ ಗೆಲುವಿನ ನಗು ಬೀರಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ 18 ಕ್ಷೇತ್ರಗಳಲ್ಲಿ ಸಿಕ್ಕ ಗೆಲುವು ಮಮತಾ ಅವರಿಗೆ ಬಹುದೊಡ್ಡ ಚಿಂತೆ ಆಗಬೇಕಿತ್ತು. ಟಿಎಂಸಿಯ ಹಲವು ಪ್ರಮುಖ ಮುಖಂಡರನ್ನು ಬಿಜೆಪಿ ಸೆಳೆದುಕೊಂಡಿತ್ತು. ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ರಂಗ ಪ್ರವೇಶದಿಂದ ಮುಸ್ಲಿಂ ಮತಗಳ ವಿಭಜನೆಯ ಸಾಧ್ಯತೆ ಇತ್ತು. ಈ ಎಲ್ಲವೂ ಮಮತಾ ಅವರ ಚಿಂತೆಯನ್ನು ಹೆಚ್ಚಿಸಬೇಕಿತ್ತು. ಆದರೆ ಅದು ಹಾಗೆ ಆಗಲಿಲ್ಲ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ನಡೆಸಿದ ಪ್ರಚಾರದ ಬಿರುಸು ಎಂಥವರನ್ನೂ ಎದೆಗುಂದಿಸಬೇಕಿತ್ತು. ಆದರೆ, ಮಮತಾ ಅವರಿಗೆ ಇರುವ ಜನಪ್ರಿಯತೆಗೆ ಧಕ್ಕೆ ತರಲು ಈ ಪ್ರಚಾರಕ್ಕೆ ಸಾಧ್ಯವಾಗಿಲ್ಲ. ಮಮತಾ ಅವರ ಜನಪ್ರಿಯತೆಗೆ ಸಾಟಿಯಾಗಬಲ್ಲ ಸ್ಥಳೀಯ ನಾಯಕ ಬಿಜೆಪಿಯಲ್ಲಿ ಇರಲಿಲ್ಲ ಎಂಬುದು ಮಮತಾಗೆ ವರವಾಗಿ ಪರಿಣಮಿಸಿತು. ಬಿಜೆಪಿ ಸಂಪೂರ್ಣವಾಗಿ ಮೋದಿ ಅವರನ್ನೇ ನೆಚ್ಚಿಕೊಂಡಿತ್ತು. ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಣೆ ಮಾಡದೇ ಇರುವ ಕಾರ್ಯತಂತ್ರವು ಬಿಜೆಪಿಗೆ ಮುಳುವಾಯಿತು.

ಮಮತಾ ಅವರು ಅಲ್ಪಸಂಖ್ಯಾತರನ್ನು ಓಲೈಸುತ್ತಾರೆ ಎಂದು ಪ್ರಚಾರ ಮಾಡಿ, ತನ್ನ ಪರವಾಗಿ ಹಿಂದೂ ಮತಗಳ ಧ್ರುವೀಕರಣಕ್ಕೆ ಬಿಜೆಪಿ ಯತ್ನಿಸಿದ್ದರಿಂದಾಗಿ ಮುಸ್ಲಿಂ ಮತಗಳು ಸಂಪೂರ್ಣವಾಗಿ ಟಿಎಂಸಿ ಪರವಾಗಿ ಧ್ರುವೀಕರಣಗೊಂಡಿತು. ಮಾಲ್ಡಾ, ಮುರ್ಷಿದಾಬಾದ್‌ನಂತಹ ಅಲ್ಪಸಂಖ್ಯಾತರ ಪ್ರಾಬಲ್ಯದ ಜಿಲ್ಲೆಗಳಲ್ಲಿ ಟಿಎಂಸಿಗೆ ಭಾರಿ ಗೆಲುವು ದಕ್ಕಿದೆ. ಮೊದಲು ಇದು ಕಾಂಗ್ರೆಸ್‌ನ ಭದ್ರಕೋಟೆ ಆಗಿತ್ತು. ಪಶ್ಚಿಮ ಬಂಗಾಳ ಜನಸಂಖ್ಯೆಯಲ್ಲಿ ಶೇ 30ರಷ್ಟು ಮುಸ್ಲಿಮರಿದ್ದಾರೆ.

ಸುವೇಂದು ಅಧಿಕಾರಿ ಒಬ್ಬರನ್ನು ಬಿಟ್ಟರೆ ಟಿಎಂಸಿಯಿಂದ ಬಂದ ಯಾರೊಬ್ಬರಿಂದಲೂ ಬಿಜೆಪಿಗೆ ದೊಡ್ಡ ನೆರವು ಸಿಕ್ಕಿಲ್ಲ. ಪಕ್ಷ ಬಿಟ್ಟು ಹೋದವರು ವಂಚಕರು ಎಂದು ಮಮತಾ ಮಾಡಿದ ತೀವ್ರ ಆರೋಪಗಳು ಕೂಡ ಬಿಜೆಪಿ ಹಿನ್ನಡೆಗೆ ಕಾರಣವಾಯಿತು.

ಟಿಎಂಸಿಯ ಹಿರಿಯ ಮುಖಂಡರಾದ ಫಿರ್ಹಾದ್ ಹಕೀಮ್, ಸುಬ್ರತಾ ಮುಖರ್ಜಿ, ಪಾರ್ಥ ಚಟರ್ಜಿ, ಅರೂಪ್ ಬಿಸ್ವಾಸ್, ಸೋವನ್‌ದೇವ್ ಚಟ್ಟೋಪಾಧ್ಯಾಯ ಅವರೆಲ್ಲರಿಗೂ ಸುಲಭ ಗೆಲುವು ದಕ್ಕಿದೆ.

ಕೇಂದ್ರ ಸಚಿವ ಬಾಬುಲ್ ಸುಪ್ರಿಯೊ, ಹಾಲಿ ಸಂಸದೆ ಲಾಕೆಟ್ ಚಟರ್ಜಿ ಅಂಥವರೂ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದಾರೆ.

ನಂದಿಗ್ರಾಮದಲ್ಲಿ ಮಮತಾ ಸೋತಿದ್ದಾರೆ. ಆದರೆ, ಈ ಸೋಲಿನ ವಿರುದ್ಧ ಅವರು ನ್ಯಾಯಾಲಯಕ್ಕೆ ಹೋಗುವುದಾಗಿ ಹೇಳಿದ್ದಾರೆ. 'ಇಡೀ ರಾಜ್ಯ ಒಂದು ಜನಾದೇಶ ಕೊಟ್ಟಿರುವಾಗ, ಒಂದು ಕ್ಷೇತ್ರ ಮಾತ್ರ ಬೇರೆ ರೀತಿಯಲ್ಲಿ ಫಲಿತಾಂಶ ನೀಡಲು ಸಾಧ್ಯವೇ? ಅದು ಸಾಧ್ಯವಿಲ್ಲ. ಸರ್ವರ್ ಅನ್ನು ಅವರು ಮೂರು ತಾಸು ಸ್ಥಗಿತಗೊಳಿಸಿದ್ದರು. ಮೊದಲಿಗೆ ಅವರು ವಿಜೇತರನ್ನು (ಮಮತಾ) ಘೋಷಿಸಿದರು. ಬಳಿಕ ಅವರು ಬೇರೆಯದೇ ಹೇಳಿದರು. ಹಾಗಾಗಿ, ಇಲ್ಲಿ ವಂಚನೆ ಮಾಡಿದ್ದು ಸತ್ಯ' ಎಂದು ಮಮತಾ ಹೇಳಿದ್ದಾರೆ.

200ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲುವ ಬಿಜೆಪಿಯ ವಿಶ್ವಾಸ ಈಡೇರಿಲ್ಲ. 2016ರ ಚುನಾವಣೆಯಲ್ಲಿ ಬಿಜೆಪಿ ಗೆದ್ದದ್ದು ಮೂರು ಕ್ಷೇತ್ರಗಳಲ್ಲಿ ಮಾತ್ರ. ಈ ಬಾರಿ ಅದು ಗಮನಾರ್ಹ ಸಂಖ್ಯೆಗೆ ಏರಿಕೆಯಾಗಿದೆ. ವಿರೋಧ ಪಕ್ಷದ ಸ್ಥಾನ ಬಿಜೆಪಿಗೆ ಸಿಕ್ಕಿದೆ. ಹಾಗಾಗಿ, ಬಿಜೆಪಿಯ ಬೆಳವಣಿಗೆ ನಗಣ್ಯವೇನೂ ಅಲ್ಲ.



ಟಿಎಂಸಿ, ಬಿಜೆಪಿಗಷ್ಟೇ ಸ್ಥಾನ

ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಮತದಾರರು ಎರಡು ಪಕ್ಷಗಳನ್ನಷ್ಟೇ ಆಯ್ಕೆ ಮಾಡಿಕೊಂಡಿದ್ದಾರೆ. ಒಂದು ಟಿಎಂಸಿ, ಮತ್ತೊಂದು ಬಿಜೆಪಿ. ಭಾರಿ ಮುನ್ನಡೆ ಸಾಧಿಸಿರುವ ಟಿಎಂಸಿಯ ಮತಗಳಿಕೆ ಪ್ರಮಾಣ ಶೇ 44.91ರಿಂದ ಶೇ 48ಕ್ಕೆ ಏರಿಕೆಯಾಗಿದೆ. ಕೇವಲ 3 ಶೇಕಡಾವಾರು ಅಂಶಗಳಷ್ಟು ಹೆಚ್ಚು ಮತಗಳನ್ನು ಪಡೆದರೂ, ಅವೆಲ್ಲವೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಟಿಎಂಸಿಗೆ ನೆರವಾಗಿವೆ. ಹೀಗಾಗಿಯೇ ಹೆಚ್ಚು ಕ್ಷೇತ್ರಗಳಲ್ಲಿ ಟಿಎಂಸಿ ಗೆಲುವು ಸಾಧಿಸಿವೆ.

2016ರ ಚುನಾವಣೆಯಲ್ಲಿ ಸಿಪಿಎಂ, ಸಿಪಿಐ ಮತ್ತು ಸಿಪಿಎಂಎಲ್ ಪಕ್ಷಗಳು ಒಟ್ಟು ಶೇ 19.75ರಷ್ಟು ಮತ ಪಡೆದಿದ್ದವು. ಆದರೆ ಈ ಮೂರು ಪಕ್ಷಗಳಿಗೆ ಈ ಚುನಾವಣೆಯಲ್ಲಿ ಕೇವಲ ಶೇ 4.9ರಷ್ಟು ಮತಗಳು ಬಂದಿವೆ. ಕಾಂಗ್ರೆಸ್ ಸಹ ತನ್ನ ಮತಗಳನ್ನು ಈ ಚುನಾವಣೆಯಲ್ಲಿ ಕಳೆದುಕೊಂಡಿದೆ. ಕಾಂಗ್ರೆಸ್‌ನ ಮತ ಪ್ರಮಾಣವು ಶೇ 12.25ರಿಂದ ಶೇ 3.3ಕ್ಕೆ ಕುಸಿದಿದೆ. ಪಕ್ಷೇತರರು ಮತ್ತು ಸಣ್ಣಪುಟ್ಟ ಪಕ್ಷಗಳ ಮತಪ್ರಮಾಣವೂ ಈ ಬಾರಿ ಶೇ 12.93ರಿಂದ ಶೇ 5.7ಕ್ಕೆ ಕುಸಿದಿದೆ. ಈ ಬಾರಿ ಚಲಾವಣೆಯಾದ ಮತಗಳಲ್ಲಿ ಶೇ 86ಕ್ಕೂ ಹೆಚ್ಚು ಮತಗಳು ಟಿಎಂಸಿ ಮತ್ತು ಬಿಜೆಪಿ ಮಧ್ಯೆ ಹಂಚಿಕೆಯಾಗಿವೆ.

ಈ ಎಲ್ಲಾ ಪಕ್ಷಗಳು ಕಳೆದುಕೊಂಡ ಮತಗಳು ಬಿಜೆಪಿಗೆ ಬಿದ್ದಿವೆ. ಈ ಬಾರಿ ದಾಖಲೆ ಪ್ರಮಾಣದಲ್ಲಿ ಆಗಿರುವ ಮತದಾನದಲ್ಲಿ ಹೆಚ್ಚುವರಿ ಮತಗಳೂ ಬಜೆಪಿಗೆ ಬಿದ್ದಿವೆ. ಬಿಜೆಪಿ ಮತಪ್ರಮಾಣವು ಶೇ 10.16ರಿಂದ ಶೇ 38.04ಕ್ಕೆ ಏರಿಕೆಯಾಗಿದೆ. ಈ ಮೂಲಕ ಬಿಜೆಪಿ, ಪಶ್ಚಿಮ ಬಂಗಾಳದಲ್ಲಿ ತನ್ನ ನೆಲೆಯನ್ನು ಗಟ್ಟಿಮಾಡಿಕೊಂಡಿದೆ.

ಗೆದ್ದ- ಸೋತ ಪ್ರಮುಖರು

ಪಶ್ಚಿಮ ಬಂಗಾಳ

ಗೆದ್ದವರು	
ಮುಕುಲ್ ರಾಯ್	ಬಿಜೆಪಿ
ಫಿರ್ಹಾದ್ ಹಕೀಂ	ಟಿಎಂಸಿ
ಸುಬ್ರತ ಮುಖರ್ಜಿ	ಟಿಎಂಸಿ
ಪಾರ್ಥ ಚಟರ್ಜಿ	ಟಿಎಂಸಿ
ಸೋವನ್‌ದೇವ್ ಚಟ್ಟೋಪಾಧ್ಯಾಯ	ಟಿಎಂಸಿ

ಮುಕುಲ್ ರಾಯ್

ಬಾಬುಲ್ ಸುಪ್ರಿಯೊ

ಸೋತವರು	
ಲಾಕೆಟ್ ಚಟರ್ಜಿ	ಬಿಜೆಪಿ
ಬಾಬುಲ್ ಸುಪ್ರಿಯೊ	ಬಿಜೆಪಿ

ಎಐಎಂಐಎಂ, ಐಎಸ್‌ಎಫ್ ಶೂನ್ಯ ಸಾಧನೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂ ಮತ್ತು ಅಬ್ಬಾಸ್ ಸಿದ್ದಿಖಿಯ ಐಎಸ್‌ಎಫ್, ಟಿಎಂಸಿಯ ಮುಸ್ಲಿಂ ಮತಬ್ಯಾಂಕ್‌ಗೆ ಕನ್ನ ಕೊರೆಯಬಹುದು ಎಂಬು ಭಾವಿಸಲಾಗಿತ್ತು. ಆದರೆ, ಯಾವುದೇ ಪರಿಣಾಮ ಬೀರುವಲ್ಲಿ ಈ ಎರಡೂ ಪಕ್ಷಗಳು ವಿಫಲವಾಗಿವೆ.

ಎಡರಂಗ-ಕಾಂಗ್ರೆಸ್ ಮೈತ್ರಿಕೂಟದ ಭಾಗವಾಗಿದ್ದ ಐಎಸ್‌ಎಫ್, ಮುಸ್ಲಿಮರ ಪ್ರಾಬಲ್ಯದ 26 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಒಂದು ಕ್ಷೇತ್ರದಲ್ಲಿಯೂ ಪಕ್ಷವು ಗೆದ್ದಿಲ್ಲ.

ಒವೈಸಿ ಅವರ ಪಕ್ಷವು ಏಳು ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಈ ಪಕ್ಷವು ಒಂದು ಕ್ಷೇತ್ರದಲ್ಲಿಯೂ ಗೆದ್ದಿಲ್ಲ. ಈ ಪಕ್ಷಕ್ಕೆ ಸಿಕ್ಕ ಮತ ಪ್ರಮಾಣ ಶೇ 0.02ರಷ್ಟು ಮಾತ್ರ.

ಮುಖ್ಯವಾಗಿ ಮುಸ್ಲಿಂ ಮತಗಳನ್ನೇ ನಂಬಿರುವ ಇತರ ಪಕ್ಷಗಳ ಸಾಧನೆ ಕೂಡ ಅತ್ಯುತ್ತಮವಾಗಿ ಇಲ್ಲ. ಕೇರಳದಲ್ಲಿ ಯುಡಿಎಫ್‌ನ ಭಾಗವಾಗಿರುವ ಮುಸ್ಲಿಂ ಲೀಗ್ 15 ಕ್ಷೇತ್ರಗಳಲ್ಲಿ ಗೆಲ್ಲುವಲ್ಲಿ ಮಾತ್ರ ಯಶಸ್ವಿಯಾಗಿದೆ. ಆದರೆ, ಅಸ್ಸಾಂನಲ್ಲಿ ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್ ಸ್ಪರ್ಧಿಸಿದ್ದ 20 ಕ್ಷೇತ್ರಗಳ ಪೈಕಿ 15ರಲ್ಲಿ ಗೆಲುವು ಪಡೆದಿದೆ. ಆದರೆ, ಈ ಪಕ್ಷವು ಇದ್ದ ಮೈತ್ರಿಕೂಟವು ಬಿಜೆಪಿಯ ಗೆಲುವಿನ ಓಟಕ್ಕೆ ತಡೆ ಒಡ್ಡುವಲ್ಲಿ ಯಶಸ್ವಿಯಾಗಿಲ್ಲ.

ಪಶ್ಚಿಮ ಬಂಗಾಳದ ನೂರಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮುಸ್ಲಿಮರೇ ನಿರ್ಣಾಯಕ. ಶೇ 30ರಷ್ಟಿರುವ ಮುಸ್ಲಿಮರ ಮತಗಳು ಎಐಎಂಐಎಂ ಮತ್ತು ಐಎಸ್‌ಎಫ್‌ಗೆ ಹಂಚಿ ಹೋದರೆ ಟಿಎಂಸಿ ಸೋಲು ಸುಲಭ ಎಂದು ವಿಶ್ಲೇಷಿಸಲಾಗಿತ್ತು. ಆದರೆ, ಅದು ನಿಜವಾಗಿಲ್ಲ. ಮುಸ್ಲಿಂ ಸಮುದಾಯವು ಟಿಎಂಸಿಯನ್ನು ಬೆಂಬಲಿಸಿದೆ ಎಂಬುದು ಫಲಿತಾಂಶದಲ್ಲಿ ವ್ಯಕ್ತವಾಗಿದೆ.

ಸ್ವಾತಂತ್ರ್ಯದ ನಂತರ ಪಶ್ಚಿಮ ಬಂಗಾಳದ ಮುಸ್ಲಿಮರು ಕಾಂಗ್ರೆಸ್ ಬೆಂಬಲಕ್ಕೆ ನಿಂತಿದ್ದರು. ಹಿಂದೂ ಮಹಾಸಭಾ ಮತ್ತು ಜನಸಂಘದಂತಹ ಪಕ್ಷಗಳನ್ನು ಅಧಿಕಾರದಿಂದ ದೂರ ಇರಿಸಲು ಅವರು ಕಾಂಗ್ರೆಸ್ ಅನ್ನು ಬೆಂಬಲಿಸಿದ್ದರು. 1960ರ ದಶಕದ ನಂತರ ಈ ಸಮುದಾಯದ ನಿಷ್ಠೆಯು ನಿಧಾನವಾಗಿ ಎಡಪಕ್ಷಗಳತ್ತ ವಾಲಿತು. ಎಡಪಕ್ಷಗಳು ಅಪ್ರಸ್ತುತವಾದ ಬಳಿಕ, ಈ ಸಮುದಾಯವು ಟಿಎಂಸಿಯನ್ನು ನೆಚ್ಚಿಕೊಂಡಿದೆ.

ಜನಾದೇಶ ಒಪ್ಪಿಕೊಳ್ಳುತ್ತೇವೆ. ಟಿಎಂಸಿಯಿಂದ ಬಿಜೆಪಿಗೆ ವಲಸೆ ಬಂದ ಮುಖಂಡರ ಮೇಲೆ ಜನರು ನಂಬಿಕೆ ಇಟ್ಟಿಲ್ಲ ಎಂದು ಫಲಿತಾಂಶ ತೋರಿಸಿದೆ
ದಿಲೀಪ್ ಘೋಷ್, ಬಿಜೆಪಿಯ ಪಶ್ಚಿಮ ಬಂಗಾಳ ಘಟಕದ ಮುಖ್ಯಸ್ಥ

ಭರ್ಜರಿ ವಿಜಯಕ್ಕಾಗಿ ಅಭಿನಂದನೆಗಳು. ಎಂಥಾ ಹೋರಾಟ ಇದು! ಪಶ್ಚಿಮ ಬಂಗಾಳದ ಜನರಿಗೆ ಅಭಿನಂದನೆಗಳು
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ದೇಶದ ಜನರು ಕೇಂದ್ರದ ನಾಯಕತ್ವದಲ್ಲಿ ಬದಲಾವಣೆ ಬಯಸಿದ್ದಾರೆ. ಇದು ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಮತ್ತು 2024ರ ಲೋಕಸಭಾ ಚುನಾವಣೆ ಮೇಲೆ ಪರಿಣಾಮ ಬೀರಲಿದೆ
ಯಶವಂತ್ ಸಿನ್ಹಾ, ಟಿಎಂಸಿ ಪ್ರಧಾನ ಕಾರ್ಯದರ್ಶಿ

ಮಮತಾ ಬ್ಯಾನರ್ಜಿ ಅವರಿಂದಾಗಿ ಟಿಎಂಸಿ ಗೆದ್ದಿದೆ. ಇದರರ್ಥ ಜನರು ದೀದಿಯನ್ನು ಆರಿಸಿಕೊಂಡಿದ್ದಾರೆ. ನಾವು ಎಲ್ಲಿ ತಪ್ಪು ಹೆಜ್ಜೆ ಇರಿಸಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ
ಕೈಲಾಶ್ ವಿಜಯವರ್ಗೀಯ, ರಾಜ್ಯ ಬಿಜೆಪಿ ಉಸ್ತುವಾರಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ

ಮಮತಾ ಬ್ಯಾನರ್ಜಿ ಅವರು ಬಂಗಾಳದ ಹುಲಿ. ಅವರನ್ನು ಸೋಲಿಸುವುದು ಸುಲಭದ ಮಾತಲ್ಲ. ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಸಾಕಷ್ಟು ಶ್ರಮಿಸಿದ್ದರೂ ಫಲ ಸಿಕ್ಕಿಲ್ಲ
ಸಂಜಯ್ ರಾವುತ್, ಶಿವಸೇನಾ ವಕ್ತಾರ

ಬಂಗಾಳದಲ್ಲಿ ಬಿಜೆಪಿಯ ದ್ವೇಷದ ರಾಜಕೀಯವನ್ನು ಸೋಲಿಸಿದ ಪ್ರಜ್ಞಾಪೂರ್ವಕ ಸಾರ್ವಜನಿಕರಿಗೆ, ಹೋರಾಟಗಾರ್ತಿ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ಕಾರ್ಯಕರ್ತರಿಗೆ ಅಭಿನಂದನೆ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಬಿಜೆಪಿಗೆ ಪಶ್ಚಿಮ ಬಂಗಾಳದಲ್ಲಿ ಆಮ್ಲಜನಕ ಸಿಗದೆ ಐಸಿಯುನಿಂದ ಹೊರಬಿದ್ದಿದೆ. ಕನಿಷ್ಠಪಕ್ಷ ರೆಮ್‌ಡಿಸಿವಿರ್ ಔಷಧವನ್ನೂ ಸಹ ಪಡೆಯಲಾಗಲಿಲ್ಲ!!
ಪ್ರೊ ಬಿ.ಕೆ. ಚಂದ್ರಶೇಖರ್, ಕಾಂಗ್ರೆಸ್ ಮುಖಂಡ

ಬಿಜೆಪಿ: ಕೇಂದ್ರ ನಾಯಕತ್ವದ ವಿರುದ್ಧ ಅಸಮಾಧಾನ

ಕೋಲ್ಕತ್ತ: ಬಂಗಾಳದಲ್ಲಿ ಬಿಜೆಪಿಗೆ ಸೋಲಾಗುವುದು ಖಚಿತವಾಗುತ್ತಿದ್ದಂತೆಯೇ ರಾಜ್ಯದ ನಾಯಕರು ಕೇಂದ್ರ ನಾಯಕತ್ವದ ವಿರುದ್ಧ ಅಸಮಾಧಾನ ಹೊರಹಾಕಲು ಆರಂಭಿಸಿದ್ದಾರೆ.

'ಬಂಗಾಳದಲ್ಲಿ ಚುನಾವಣಾ ಪ್ರಚಾರ ಕಾರ್ಯವನ್ನು ಬೇರೆ ರಾಜ್ಯದ ಮುಖಂಡರೇ ಕೈಗೆತ್ತಿಕೊಂಡಿದ್ದರು. ಹೊರ ರಾಜ್ಯಗಳಿಂದ ಬಂದಿದ್ದ ವೀಕ್ಷಕರು ಸ್ಥಳೀಯ ನಾಯಕರ ಸಲಹೆಗಳಿಗೆ ಬೆಲೆ ಕೊಡಲಿಲ್ಲ. ಅಭ್ಯರ್ಥಿಗಳ ಆಯ್ಕೆಯೂ ಪಕ್ಷದೊಳಗೆ ಅಸಮಾಧಾನಕ್ಕೆ ಕಾರಣವಾಗಿತ್ತು ಎಂದು ಬಿಜೆಪಿಯ ರಾಜ್ಯ ನಾಯಕರು ಹೇಳಿದ್ದಾರೆ.

'ಬೇರೆಬೇರೆ ಸಮುದಾಯದ ಜನರ ಮನೆಯಲ್ಲಿ ಊಟ ಮಾಡುವುದೇ ಮುಂತಾದ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಪ್ರಭಾವ ಬೀರಬಲ್ಲವು ಎಂಬುದರ ಬಗ್ಗೆ ಸ್ಥಳೀಯ ನಾಯಕರಿಗೆ ಸಂದೇಹಗಳಿದ್ದವು. ಆದರೆ, ನಾವೆಲ್ಲರೂ ಇಂಥ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳಬೇಕಾಗಿದ್ದುದರಿಂದ ಸಂಘಟನೆಯ ಕೆಲಸಗಳನ್ನು ಮಾಡಲು ಸಮಯ ಸಾಕಾಗಲಿಲ್ಲ. ಇದು ದುಬಾರಿಯಾಗಿ ಪರಿಣಮಿಸಿತು ಎಂದು ಅವರು ಹೇಳಿದ್ದಾರೆ.

'ಅಭ್ಯರ್ಥಿಗಳ ಆಯ್ಕೆ, ವಿಶೇಷವಾಗಿ ಟಿಎಂಸಿ ತ್ಯಜಿಸಿ ಬಂದವರಿಗೆ ಬಿಜೆಪಿಯ ಟಿಕೆಟ್ ನೀಡಿರುವುದರಿಂದ ಪಕ್ಷದ ಒಂದು ವರ್ಗದ ಕಾರ್ಯಕರ್ತರಲ್ಲಿ ನಿರಾಸೆಯ ಭಾವನೆ ಮೂಡುವಂತಾಗಿತ್ತು. ಬೇರೆ ರಾಜ್ಯಗಳಿಂದ ಬಂದಿದ್ದ ವೀಕ್ಷಕರು ಪಶ್ಚಿಮ ಬಂಗಾಳದ ಚುನಾವಣಾ ನೀತಿಗಳನ್ನು ರೂಪಿಸುವುದೇಕೆ ಎಂದು ಸ್ಥಳೀಯ ನಾಯಕರು ಕೇಂದ್ರದ ನಾಯಕರನ್ನು ಪ್ರಶ್ನಿಸಿದ್ದರು. ವೀಕ್ಷಕರು ಸ್ಥಳೀಯ ರಾಜಕೀಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡದೆ, ತಮ್ಮತಮ್ಮ ರಾಜ್ಯದಲ್ಲಿ ಅನುಸರಿಸಿದ್ದ ನೀತಿಯನ್ನೇ ಇಲ್ಲಿಯೂ ಜಾರಿಮಾಡಲು ಪ್ರಯತ್ನಿಸಿದ್ದರು ಎಂದು ಬಿಜೆಪಿ ಮೂಲಗಳು ಹೇಳಿವೆ.

'ಹಾಗೆ ಮಾಡಬೇಡಿ ಎಂದು ನಾವು ಅವರ ಜತೆಗೆ ಬಾರಿಬಾರಿ ವಾದ ಮಾಡಿದ್ದೇವೆ. ಆದರೆ ಅವರು ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಅಭ್ಯರ್ಥಿ ಆಯ್ಕೆಯ ವಿಚಾರದಲ್ಲೂ ನಮ್ಮ ಸಲಹೆಗಳನ್ನು ಅವರು ಕಡೆಗಣಿಸಿದ್ದರು. ಇದು ಪಕ್ಷದ ತಳಮಟ್ಟದ ಕಾರ್ಯಕರ್ತರ ಸ್ಥೈರ್ಯವನ್ನು ಕುಗ್ಗಿಸಿತು' ಎಂದು ಪಕ್ಷದ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯು ಅಭ್ಯರ್ಥಿಗಳ ಪಟ್ಟಿಯನ್ನು ಘೋಷಣೆ ಮಾಡುತ್ತಿದ್ದಂತೆಯೇ ಅನೇಕ ಮುಖಂಡರು, ಕಾರ್ಯಕರ್ತರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು.

ಪ್ರಬಲ ನಾಯಕತ್ವಕ್ಕೆ ಮನ್ನಣೆ: ವಿಜಯನ್‌ಗೆ ವಿಜಯಮಾಲೆ

• ಅರ್ಜುನ್ ರಘುನಾಥ್

ತಿರುವನಂತಪುರ: ಹಲವು ಗಂಭೀರ ವಾದ ಭ್ರಷ್ಟಾಚಾರ ಆರೋಪಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ಹೊರಿಸಿದ್ದರೂ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಐತಿಹಾಸಿಕ ಗೆಲುವು ಸಾಧಿಸಿದೆ. ಶಬರಿಮಲೆಗೆ ಎಲ್ಲ ವಯಸ್ಸಿನ ಮಹಿಳೆಯರ ಪ್ರವೇಶವನ್ನು ಚುನಾವಣಾ ವಿಚಾರವಾಗಿಸಲು ಬಿಜೆಪಿ-ಕಾಂಗ್ರೆಸ್ ಗಳೆರಡೂ ಶ್ರಮಿಸಿದ್ದವು. ಅದರ ನಡುವಲ್ಲಿಯೂ ಎಲ್‌ಡಿಎಫ್‌ಗೆ ಸಿಕ್ಕ ಗೆಲುವಿಗೆ ವಿಶೇಷ ಹೊಳಪು ಇದೆ.

ಆರೋಪಗಳಿಗೆ ಉತ್ತರಿಸುತ್ತಾ ಕೂರುವ ಬದಲಿಗೆ ಜನರ ಅಭಿವೃದ್ಧಿಯೇ ತಮ್ಮ ಗುರಿ ಎಂಬ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನಿಲುವು ಜನರಿಗೆ ಮೆಚ್ಚುಗೆ ಆಗಿದೆ. 2020ರಲ್ಲಿ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ವಿಜಯನ್ ಅವರು ಇದೇ ನಿಲುವು ವ್ಯಕ್ತ ಪಡಿಸಿದ್ದರು. ಆಗಲೂ ಜನರು ವಿಜಯನ್ ಅವರ ಕೈ ಹಿಡಿದಿದ್ದರು.

ವಿಜಯನ್ ದಕ್ಷ ಕೆಲಸಗಾರ ಎಂಬುದನ್ನು ವಿರೋಧಿಗಳೂ ಅಲ್ಲಗಳೆ ಯಲಾಗದು. ಆಳ್ವಿಕೆಯ ಮೊದಲ ನಾಲ್ಕು ವರ್ಷಗಳಲ್ಲಿ ವಿಜಯನ್ ಸರ್ಕಾರದ ಸಾಧನೆ ಬಗ್ಗೆ ವ್ಯಾಪಕ ಮೆಚ್ಚುಗೆ ಇತ್ತು. ವಿಶೇಷವಾಗಿ, ಪ್ರವಾಹ ಮತ್ತು ಇತರ ಪ್ರಕೃತಿ ವಿಕೋಪಗಳನ್ನು ಅವರು ನಿಭಾಯಿಸಿದ ರೀತಿಗೆ ಶ್ಲಾಘನೆ ಸಿಕ್ಕಿತ್ತು. ಆದರೆ, ಕೊನೆಯ ವರ್ಷ ಭ್ರಷ್ಟಾ ಚಾರದ ಹಲವು ಆರೋಪಗಳು ಕೇಳಿ ಬಂದವು. ಸರ್ಕಾರದಲ್ಲಿದ್ದ ಹಲವು ಪ್ರಮುಖರ ಹೆಸರು ಚಿನ್ನ ಕಳ್ಳ ಸಾಗಾಟ ಪ್ರಕರಣದಲ್ಲಿ ಕೇಳಿ ಬಂತು. ಮಹತ್ವಾಕಾಂಕ್ಷೆಯ ವಸತಿ ಯೋಜನೆ ಮತ್ತು ಆಳ ಸಮುದ್ರ ಮೀನುಗಾರಿಕೆಗೆ ಟ್ರಾಲರ್ ದೋಣಿ ಅಭಿವೃದ್ಧಿಯನ್ನು ಅಮೆರಿಕದ ಕಂಪನಿಗೆ ನೀಡಿದ್ದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿ ಬಂತು. ಕೇಂದ್ರದ ತನಿಖಾ ಸಂಸ್ಥೆ ಗಳು ತನಿಖೆ ನಡೆಸಿದವು. ಸ್ಪೀಕರ್ ಮತ್ತು ಸಚಿವರೊಬ್ಬರ ತನಿಖೆಯೂ ಆಯಿತು.

ವಿಜಯನ್ ಅವರು ಇದನ್ನು ಬಲವಾಗಿಯೇ ಎದುರಿಸಿದರು. ಕೇಂದ್ರ ಸರ್ಕಾರವು ರಾಜಕೀಯ ದುರುದ್ದೇಶ ದಿಂದ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ ಎಂದರು.

ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ಎಲ್ಲ ವಯಸ್ಸಿನ ಮಹಿಳೆಯರ ಪ್ರವೇಶ ವಿಷಯವು ಚುನಾವಣೆಯಲ್ಲಿ ಅಲ್ಪ ಪರಿಣಾಮವನ್ನೂ ಬೀರಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಎಲ್‌ಡಿಎಫ್‌ಗೆ ಹೀನಾಯ ಸೋಲು ಎದುರಾಗಿತ್ತು. ಶಬರಿಮಲೆಗೆ ಮಹಿಳೆ ಯರ ಪ್ರವೇಶ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಪನ್ನು ಅನುಸರಿಸಲು ವಿಜಯನ್ ತೋರಿದ್ದ ಉತ್ಸಾಹವೇ ಈ ಸೋಲಿಗೆ ಕಾರಣ ಎಂದು ಆಗ ವಿಶ್ಲೇಷಿಸಲಾಗಿತ್ತು. ಬಳಿಕ, ಎಲ್ಲ ವಯೋ ಮಾನದ ಮಹಿಳೆಯರು ಶಬರಿಮಲೆಗೆ ಪ್ರವೇಶಿಸುವ ವಿಚಾರದಲ್ಲಿ ಎಲ್‌ಡಿಎಫ್ ಸರ್ಕಾರವು ತನ್ನ ನಿಲುವು ಬದಲಿಸಿತು.

ಹಾಗಿದ್ದರೂ ಶಬರಿಮಲೆ ವಿಚಾರ ವನ್ನು ಕಾಂಗ್ರೆಸ್ ಮತ್ತು ಬಿಜೆಪಿ ಚುನಾವಣೆಯಲ್ಲಿ ಪ್ರಸ್ತಾಪಿಸಿವೆ. ಶಬರಿಮಲೆ ವಿಚಾರದಲ್ಲಿ ಸರ್ಕಾರ ಬದ ಲಾಗಬೇಕು ಎಂದು ಪ್ರಭಾವಿ ಹಿಂದೂ ನಾಯರ್ ಸಮುದಾಯದ ನಾಯರ್ ಸರ್ವಿಸ್ ಸೊಸೈಟಿ ಎಂಬ ಸಂಘಟನೆಯ ಪ್ರಧಾನ ಕಾರ್ಯದರ್ಶಿಯು ಮತ ದಾನದ ದಿನವೇ ಹೇಳಿಕೆ ನೀಡಿದ್ದರು. ಇಂತಹ ನಡೆ ಕೇರಳದ ಜನರ ರಾಜಕೀಯ ಮನಸ್ಥಿತಿಯ ಮೇಲೆ ಪರಿಣಾಮ ಬೀರುವುದಿಲ್ಲ ಎಂಬುದನ್ನು ಫಲಿತಾಂಶವು ಸಾಬೀತು ಮಾಡಿದೆ.

ಜನರ ಬಗ್ಗೆ ತೋರಿದ ಕಳಕಳಿಯೇ ಎಲ್‌ಡಿಎಫ್‌ಗೆ ಮತ್ತೊಂದು ಅವಕಾಶ ನೀಡಿದೆ. ವಿವಿಧ ಪಿಂಚಣಿಗಳನ್ನು ಐದು ವರ್ಷದ ಅವಧಿಯಲ್ಲಿ ₹600ರಿಂದ ₹1,600ಕ್ಕೆ ಹೆಚ್ಚಿಸಲಾಗಿದೆ. ಈ ಪಿಂಚಣಿ ವಿಳಂಬವಿಲ್ಲದೆ ಪಾವತಿ ಆಗುವಂತೆ ನೋಡಿಕೊಳ್ಳಲಾಗಿದೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಆಹಾರದ ಕಿಟ್‌ಗಳನ್ನು ಮನೆಮನೆಗಳಿಗೆ ತಲುಪಿಸಲಾಗಿದೆ. ಈ ಕ್ರಮಗಳೇ ಜಾತಿ ತಾರತಮ್ಯ ಇಲ್ಲದೆ ಎಲ್ಲ ಸಮುದಾಯಗಳ ಮನಗೆಲ್ಲಲು ಕಾರಣವಾಗಿವೆ.

ಎಲ್ಲಕ್ಕಿಂತ ಹೆಚ್ಚಾಗಿ, ಪ್ರವಾಹ, ಕೋವಿಡ್‌ನಂತಹ ವಿಕೋಪದ ಸಂದರ್ಭದಲ್ಲಿ ವಿಜಯನ್ ಅವರ ನಾಯಕತ್ವ ಗುಣವು ಜನಮೆಚ್ಚುಗೆ ಪಡೆದಿದೆ. ಅವರ ಕೆಲಸಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಶ್ಲಾಘನೆ ಸಿಕ್ಕಿತ್ತು.

ವಿರೋಧ ಪಕ್ಷವು ದುರ್ಬಲ ಎಂದು ವಿಜಯನ್ ಸದಾ ಲೇವಡಿ ಮಾಡುತ್ತಿದ್ದರು. ಅದಕ್ಕೆ ತಕ್ಕಂತೆ ಕಾಂಗ್ರೆಸ್ ಪಕ್ಷದಲ್ಲಿ ಗುಂಪುಗಾರಿಕೆ ಇತ್ತು. ಪ್ರಬಲ ನಾಯಕರೂ ಇರಲಿಲ್ಲ. ಚುನಾವಣಾ ಪ್ರಚಾರ ಸಮಯದಲ್ಲಿಯೂ ಒಳಜಗಳ ಬಹಿರಂಗವಾಗಿಯೇ ನಡೆಯಿತು.

ಕಾಂಗ್ರೆಸ್‌ನ ಹಲವು ಮುಖಂಡರು ಬಿಜೆಪಿಗೆ ಹೋಗುತ್ತಾರೆ ಎಂಬ ವರದಿ ಗಳು ಬಂದವು. ಅದರ ಪ್ರಯೋಜನ ಪಡೆದುಕೊಂಡ ಸಿಪಿಎಂ, ಬಿಜೆಪಿ ಮತ್ತು ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳು ಎಂದು ಪ್ರಚಾರ ಮಾಡಿತು. ಎರಡೂ ಪಕ್ಷಗಳನ್ನು ಅದುಮಿಡಲು ಎಲ್‌ಡಿಎಫ್‌ಗೆ ಇದು ನೆರವಾಯಿತು.


ಪಿಣರಾಯಿ ವಿಜಯನ್

'ಕ್ಯಾಪ್ಟನ್'ಗೇ ಚುಕ್ಕಾಣಿ

ಈ ಹಿಂದೆಲ್ಲ ಎಲ್‌ಡಿಎಫ್ ಗೆದ್ದಾಗ ಮುಖ್ಯಮಂತ್ರಿ ಯಾರು ಎಂಬ ಚರ್ಚೆ ನಡೆಯುತ್ತಿತ್ತು. ಆದರೆ, ಈ ಬಾರಿ ಅಂತಹ ಸಾಧ್ಯತೆಯೇ ಇಲ್ಲ. ವಿಜಯನ್ ನೇತೃತ್ವದಲ್ಲಿಯೇ ಚುನಾವಣೆ ಎದುರಿಸಿ ಎಲ್‌ಡಿಎಫ್ ಗೆದ್ದಿದೆ. ಮುಖ್ಯಮಂತ್ರಿಯಾಗುವ ಅವರ ಹಕ್ಕನ್ನು ಪ್ರಶ್ನಿಸುವವರೇ ಪಕ್ಷದಲ್ಲಿ ಈಗ ಇಲ್ಲ.

2016ರಲ್ಲಿ ಎಲ್‌ಡಿಎಫ್ ಗೆದ್ದಾಗ ವಿ.ಎಸ್. ಅಚ್ಯುತಾನಂದನ್ ಅವರು ಮುಖ್ಯಮಂತ್ರಿಯಾಗಲು ಬಯಸಿದ್ದರು. ಆ ಬಾರಿ ಮುಂಚೂಣಿಯಲ್ಲಿ ನಿಂತು ಪ್ರಚಾರವನ್ನೂ ಅವರು ಮಾಡಿದ್ದರು. ಈ ಬಾರಿ ವಿಜಯನ್ ಅವರೇ ಮುಂಚೂಣಿಯಲ್ಲಿದ್ದರು. ಅಭಿಮಾನಿಗಳು ಅವರನ್ನು 'ಕ್ಯಾಪ್ಟನ್' ಎಂದು ಕರೆಯುತ್ತಾರೆ. 'ಕ್ಯಾಪ್ಟನ್' ಈಗ ಸಿಪಿಎಂನ ಪ್ರಶ್ನಾತೀತ ನಾಯಕ.



ಗರಿಷ್ಠ ಅಂತರ: ದಾಖಲೆ ಸೃಷ್ಟಿಸಿದ ಸಚಿವೆ ಶೈಲಜಾ

ಕೆ.ಕೆ. ಶೈಲಜಾ

ತಿರುವನಂತಪುರ: ಕೇರಳದ ಆರೋಗ್ಯ ಸಚಿವೆ ಕೆ.ಕೆ. ಶೈಲಜಾ ಅವರು ಕಣ್ಣೂರು ಜಿಲ್ಲೆಯ ಮಟ್ಟನ್ನೂರು ಕ್ಷೇತ್ರದಿಂದ 60,963 ಮತಗಳ ಭಾರಿ ಅಂತರದಿಂದ ಗೆಲ್ಲುವ ಮೂಲಕ ದಾಖಲೆ ಸೃಷ್ಟಿಸಿದ್ದಾರೆ. ಅವರು ಒಟ್ಟು 96,129 ಮತಗಳನ್ನು ಪಡೆದಿದ್ದಾರೆ.

ಈ ಹಿಂದೆ 2006ರಲ್ಲಿ ಪಾಲಕ್ಕಾಡ್ ಜಿಲ್ಲೆಯ ಅಳತ್ತೂರು ಕ್ಷೇತ್ರದಿಂದ ಸಿಪಿಎಂ ಅಭ್ಯರ್ಥಿ ಎಂ. ಚಂದ್ರನ್ ಅವರು 47,671 ಮತಗಳ ಅಂತರದಿಂದ ಗೆದ್ದಿದ್ದರು. ಕೇರಳದಲ್ಲಿ ಅದೇ ಈವರೆಗಿನ ಗರಿಷ್ಠ ಅಂತರದ ಗೆಲುವಾಗಿತ್ತು. ಈ ದಾಖಲೆಯನ್ನು ಶೈಲಜಾ ಅವರು ಮುರಿದಿದ್ದಾರೆ.

2016ರಲ್ಲಿ ಶೈಲಜಾ ಅವರು ಕೂತ್ತುಪರಂಬ ಕ್ಷೇತ್ರದಿಂದ ಸ್ಪರ್ಧಿಸಿ 12,291 ಮತಗಳ ಅಂತರದಿಂದ ಗೆದ್ದಿದ್ದರು. ಕೋವಿಡ್ ಮತ್ತು ನಿಫಾ ವಿರುದ್ಧದ ಹೋರಾಟದಲ್ಲಿ ಅವರು ವಹಿಸಿದ್ದ ಪಾತ್ರವೇ ಅವರ ಜನಪ್ರಿಯತೆ ಹೆಚ್ಚಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

ಉಪಚುನಾವಣೆ: ಕ್ಷೇತ್ರ ಉಳಿಸಿಕೊಂಡ ಪಕ್ಷಗಳು

ನವದೆಹಲಿ: ಉಪಚುನಾವಣೆ ನಡೆದ ಬಹುತೇಕ ಕ್ಷೇತ್ರಗಳನ್ನು ಮೊದಲು ಆ ಸ್ಥಾನಗಳನ್ನು ಹೊಂದಿದ್ದ ಪಕ್ಷಗಳೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ.

ಕಾಂಗ್ರೆಸ್, ಬಿಜೆಪಿ, ಮುಸ್ಲಿಂ ಲೀಗ್ ಮತ್ತು ವೈಎಸ್‌ಆರ್ ಕಾಂಗ್ರೆಸ್ ಪಕ್ಷಗಳು ಲೋಕಸಭಾ ಉಪಚುನಾವಣೆಯಲ್ಲಿ ತಮ್ಮ ತಮ್ಮ ಕ್ಷೇತ್ರಗಳನ್ನು ಉಳಿಸಿಕೊಂಡಿವೆ.

ಸಾವು ಹಾಗೂ ಇತರೆ ಕಾರಣಗಳಿಂದ ತೆರವಾಗಿದ್ದ 13 ವಿಧಾನಸಭಾ ಕ್ಷೇತ್ರಗಳ ಪೈಕಿ ಆರರಲ್ಲಿ ಬಿಜೆಪಿ ಗೆದ್ದಿದೆ. 10 ರಾಜ್ಯಗಳಲ್ಲಿ ಉಪಚುನಾವಣೆ ನಡೆದಿತ್ತು. 13ರ ಪೈಕಿ ಕಾಂಗ್ರೆಸ್ ನಾಲ್ಕರಲ್ಲಿ ಜಯಿಸಿದೆ.

ತಿರುಪತಿ ಕ್ಷೇತ್ರವು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಪಾಲಾಗಿದೆ. ಟಿಡಿಪಿಯ ಪನಬಾಕ ಲಕ್ಷ್ಮಿ ವಿರುದ್ಧ ಮದ್ದಿಲ ಗುರುಮೂರ್ತಿ ಅವರು ದಾಖಲೆಯ 2.71 ಲಕ್ಷ ಮತಗಳಿಂದ ಗೆದ್ದಿದ್ದಾರೆ. ಮಲಪ್ಪುರಂನಲ್ಲಿ ಮುಸ್ಲಿಂ ಲೀಗ್‌ನ ಅಬ್ದುಲ್ ಸಮದ್ ಅವರು 1.14 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದಾರೆ.

ಕಾಂಗ್ರೆಸ್ ಪಕ್ಷವು ಕನ್ಯಾಕುಮಾರಿ ಕ್ಷೇತ್ರವನ್ನು ಗೆದ್ದಿದ್ದು, ಬಿಜೆಪಿ ಮುಖಂಡ ಪಿ. ರಾಧಾಕೃಷ್ಣನ್ ಸೋಲುಂಡಿದ್ದಾರೆ.

ಗುಜರಾತ್, ಜಾರ್ಖಂಡ್, ಮಹಾರಾಷ್ಟ್ರ, ಉತ್ತರಾಖಂಡ, ರಾಜಸ್ಥಾನದಲ್ಲಿ ಬಿಜೆಪಿ ತಲಾ ಒಂದು ಸ್ಥಾನ ಗೆದ್ದುಕೊಂಡಿದೆ. ಟಿಆರ್‌ಎಸ್ ಪಕ್ಷವು ನಾಗಾರ್ಜುನ ಸಾಗರದಲ್ಲಿ ವಿಜಯಿಯಾಗಿದೆ.

ಗೆದ್ದ- ಸೋತ ಪ್ರಮುಖರು

ಕೇರಳ

ಗೆದ್ದವರು	
ರಮೇಶ್ ಚೆನ್ನಿತಲ	ಕಾಂಗ್ರೆಸ್
ಉಮ್ಮನ್ ಚಾಂಡಿ	ಕಾಂಗ್ರೆಸ್
ಕೆ.ಕೆ. ಶೈಲಜಾ	ಸಿಪಿಎಂ

ಸೋತವರು	
ಇ. ಶ್ರೀಧರನ್	ಬಿಜೆಪಿ
ಕುಮ್ಮನಂ ರಾಜಶೇಖರನ್	ಬಿಜೆಪಿ
ಕೆ. ಮುರಳೀಧರನ್	ಕಾಂಗ್ರೆಸ್
ಸುರೇಶ್‌ಗೋಪಿ	ಬಿಜೆಪಿ
ಕೆ. ಸುರೇಂದ್ರನ್ (ಎರಡು ಕಡೆ)	ಬಿಜೆಪಿ

ಹಿಂದಿನ ಎಲ್‌ಡಿಎಫ್ ಸರ್ಕಾರದ ಮೇಲೆ ಜನರು ಇಟ್ಟಿದ್ದ ಅಭೂತಪೂರ್ವ ನಂಬಿಕೆಗೆ ಧನ್ಯವಾದಗಳು. ಸಾಂಕ್ರಾಮಿಕ ರೋಗವನ್ನು ಹೇಗೆ ನಿಭಾಯಿಸಬೇಕು ಎಂದು ಇಡೀ ಜಗತ್ತಿಗೆ 'ಕೇರಳ ಮಾದರಿ'ಯನ್ನು ಸರ್ಕಾರ ನೀಡಿದೆ
ಸೀತಾರಾಂ ಯೆಚೂರಿ
ಸಿಪಿಎಂ ನಾಯಕ

ಬಂಗಾಳ: ಎಡಪಕ್ಷ, ಕಾಂಗ್ರೆಸ್ ಶೂನ್ಯ ಸಾಧನೆ

ಎಲ್‌ಡಿಎಫ್ ಕಾರ್ಯಕರ್ತರು ತಿರುವನಂತಪುರದಲ್ಲಿ ಸಂಭ್ರಮ ಆಚರಿಸಿದರು—ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಎಡಪಕ್ಷಗಳು ಮತ್ತು ಕಾಂಗ್ರೆಸ್ ಶೂನ್ಯಸಾಧನೆ ಮಾಡಿವೆ. ಸುಮಾರು ಆರು ದಶಕಗಳ ಕಾಲ ಈ ಎರಡೂ ಪಕ್ಷಗಳು ಪಶ್ಚಿಮ ಬಂಗಾಳವನ್ನು ಆಳಿದ್ದವು. ಆದರೆ ಮುಂದಿನ ವಿಧಾನಸಭೆಯಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳು ತಮ್ಮ ಪ್ರಾತಿನಿಧ್ಯವನ್ನು ಕಳೆದುಕೊಂಡಿವೆ.

ಹಾಲಿ ವಿಧಾನಸಭೆಯಲ್ಲಿ 44 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದ ಕಾಂಗ್ರೆಸ್, ಪ್ರಮುಖ ವಿರೋಧ ಪಕ್ಷವಾಗಿತ್ತು. ಆದರೆ ಈ ಬಾರಿ ಕಾಂಗ್ರೆಸ್ ಒಂದೂ ಕ್ಷೇತ್ರವನ್ನು ಗೆದ್ದಿಲ್ಲ. ಅಲ್ಲದೆ, ಕಾಂಗ್ರೆಸ್‌ನ ಮತ ಪ್ರಮಾಣ ಸಹ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿದೆ. ಸಿಪಿಎಂ ನೇತೃತ್ವದ ಎಡಪಕ್ಷಗಳೂ ಸಹ ಹಾಲಿ ವಿಧಾನಸಭೆಯಲ್ಲಿ 34 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದವು. ಆದರೆ, ಈ ಚುನಾವಣೆಯಲ್ಲಿ ಒಂದು ಕ್ಷೇತ್ರವನ್ನೂ ಉಳಿಸಿಕೊಳ್ಳುವಲ್ಲಿ ಈ ಪಕ್ಷಗಳು ವಿಫಲವಾಗಿವೆ.

ಎಡಪಕ್ಷಗಳು ಮತ್ತು ಕಾಂಗ್ರೆಸ್ ಈ ಬಾರು ಐಎಸ್‌ಎಫ್ ಜತೆ ಮೈತ್ರಿಮಾಡಿಕೊಂಡಿದ್ದವು. ಆದರೆ ಇದು ಅನುಕೂಲಕ್ಕೆ ಬಂದಿಲ್ಲ. ಐಎಸ್‌ಎಫ್ ಸಹ ಶೇ 1ಕ್ಕಿಂತ ಕಡಿಮೆ ಮತಗಳನ್ನು ಪಡೆದಿದೆ. ಐಎಸ್‌ಎಫ್ ಜತೆಗಿನ ಮೈತ್ರಿಗೆ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. ಇದೂ ಸಹ ಈ ಪಕ್ಷಗಳಿಗೆ ಮಾರಕವಾಗಿರುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ.

1977ರಿಂದ 2011ರವರೆಗೆ ಪಶ್ಚಿಮ ಬಂಗಾಳದಲ್ಲಿ ಆಳ್ವಿಕೆ ನಡೆಸಿದ್ದ ಎಡಪಕ್ಷಗಳು ತಮ್ಮ ಪ್ರಮುಖ ನಾಯಕರನ್ನು ಕಳೆದುಕೊಂಡಿದೆ. ಹೀಗಾಗಿ ಹೊಸ ತಲೆಮಾರಿನ ನಾಯಕರನ್ನು ಕಣಕ್ಕೆ ಇಳಿಸಿತ್ತು. ವಿದ್ಯಾರ್ಥಿ ಚಳವಳಿಗಳಲ್ಲಿ ಮುನ್ನೆಲೆಗೆ ಬಂದಿದ್ದ ಹಲವು ನಾಯಕರಿಗೆ ಎಡರಂಗವು ಟಿಕೆಟ್ ನೀಡಿತ್ತು. ಆದರೆ, ಯಾರೊಬ್ಬರೂ ಗೆಲುವು ಸಾಧಿಸುವಲ್ಲಿ ವಿಫಲರಾಗಿದ್ದಾರೆ.

'ಈ ಚುನಾವಣೆಯು ಪಶ್ಚಿಮ ಬಂಗಾಳದಿಂದ ಎಡಪಕ್ಷಗಳು ಮತ್ತು ಕಾಂಗ್ರೆಸ್ ಅನ್ನು ನಿರ್ಮೂಲನೆ ಮಾಡಿದೆ. ಇನ್ನು ಇಲ್ಲಿ ಟಿಎಂಸಿ ಮತ್ತು ಬಿಜೆಪಿಯ ಮಧ್ಯೆ ಮಾತ್ರ ಸ್ಪರ್ಧೆ ಇರುತ್ತದೆ' ಎಂದು ಬಿಜೆಪಿಯ ನಾಯಕರೊಬ್ಬರು ಹೇಳಿದ್ದಾರೆ.

ಕರುಣಾನಿಧಿ, ಜಯಲಲಿತಾ ಸಾವಿನ ಬಳಿಕದ ಮೊದಲ ಚುನಾವಣೆ: ದಶಕದ ನಂತರ ಡಿಎಂಕೆ ಅಧಿಕಾರಕ್ಕೆ

ತಮಿಳುನಾಡಿನಲ್ಲಿ ಡಿಎಂಕೆ ಸೂರ್ಯೋದಯ

• ಇ.ಟಿ.ಬಿ. ಶಿವಪ್ರಿಯನ್

ಚೆನ್ನೈ: ತಮಿಳುನಾಡಿನ 234 ಸದಸ್ಯ ಬಲದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಮುತ್ತುವೇಲು ಕರುಣಾನಿಧಿ ಸ್ಟಾಲಿನ್ ಅವರು ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಪಕ್ಷಕ್ಕೆ ಗೆಲುವಿನ ಸಿಹಿ ತಂದುಕೊಟ್ಟಿದ್ದಾರೆ.

68 ವರ್ಷ ವಯಸ್ಸಿನ ಸ್ಟಾಲಿನ್ ಅವರು ತಮಿಳುನಾಡಿನ ನೂತನ ಮುಖ್ಯಮಂತ್ರಿ ಆಗಲಿದ್ದಾರೆ. ಈ ಹುದ್ದೆಯನ್ನು ಅವರು ಕನಿಷ್ಠ ಒಂದು ದಶಕದಿಂದ ಬಯಸುತ್ತಿದ್ದರು. ಸ್ಟಾಲಿನ್ ಅವರು ತಮ್ಮ ತಂದೆಯ ಪ್ರಭಾವದಿಂದ ಹೊರಬಂದಿರುವುದಷ್ಟೇ ಅಲ್ಲದೆ, ಸ್ವಸಾಮರ್ಥ್ಯವನ್ನು ಆಧರಿಸಿ ನಾಯಕರಾಗಿ ಹೊರಹೊಮ್ಮಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಸ್ಟಾಲಿನ್ ಅವರಿಗೆ ಶುಭ ಹಾರೈಸಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ರಾಜೀವ್ ರಂಜನ್, ಪೊಲೀಸ್ ಮಹಾನಿರ್ದೇಶಕ ಜೆ.ಕೆ. ತ್ರಿಪಾಠಿ, ಆರೋಗ್ಯ ಕಾರ್ಯದರ್ಶಿ ಡಾ.ಜೆ. ರಾಧಾಕೃಷ್ಣನ್ ಸೇರಿದಂತೆ ಹಲವರು ಸ್ಟಾಲಿನ್ ಅವರನ್ನು ಅಭಿನಂದಿಸಿದ್ದಾರೆ. ಡಿಎಂಕೆ ಪಕ್ಷವು ಒಂದು ದಶಕದ ನಂತರ ತಮಿಳುನಾಡಿನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದೆ. ಪತ್ರಿಕೆಯು ಮುದ್ರಣಕ್ಕೆ ಹೋಗುವವರೆಗಿನ ಫಲಿತಾಂಶದ ಪ್ರಕಾರ ತಮಿಳುನಾಡಿನಲ್ಲಿ ಈ ಬಾರಿ ಪ್ರಬಲ ವಿರೋಧ ಪಕ್ಷ ಇರಲಿದೆ. ಎಐಎಡಿಎಂಕೆ ಪಕ್ಷದ ಚುನಾವಣಾ ಅಭಿಯಾನದ ಜವಾಬ್ದಾರಿಯನ್ನು ಏಕಾಂಗಿಯಾಗಿ ನಿಭಾಯಿಸಿದ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಎಡಪ್ಪಾಡಿ ಕ್ಷೇತ್ರದಲ್ಲಿ 92 ಸಾವಿರಕ್ಕೂ ಹೆಚ್ಚು ಮತಗಳಿಂದ ಜಯ ಸಾಧಿಸಿದ್ದಾರೆ. ಪ್ರಚಾರದ ಸಂದರ್ಭದಲ್ಲಿ ಅವರು ಬಳಸಿದ್ದ 'ಮಣ್ಣಿನ ಮಗ' ಘೋಷಣೆಯು ಪಕ್ಷದ ಪರ ಕೆಲಸ ಮಾಡಿರುವಂತಿದೆ. ಎಐಎಡಿಎಂಕೆ ಪಕ್ಷವು ತನ್ನ ಪ್ರಾಬಲ್ಯವಿರುವ ಕೊಂಗು ಪ್ರದೇಶದಲ್ಲಿ ಹಲವು ಸ್ಥಾನಗಳನ್ನು ಗೆದ್ದುಕೊಂಡಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಪರಾಭವ ಕಂಡಿದ್ದ ಬಿಜೆಪಿ ಈ ಬಾರಿ ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಹೊಂದುವ ಸಾಧ್ಯತೆ ಇದೆ.

ಡಿಎಂಕೆ ಪಕ್ಷವು ಒಟ್ಟು 129 ಸ್ಥಾನಗಳಲ್ಲಿ ಮುನ್ನಡೆ ಕಾಯ್ದುಕೊಂಡಿದೆ ಅಥವಾ ಗೆಲುವು ಸಾಧಿಸಿದೆ ಎಂದು ಕೇಂದ್ರ ಚುನಾವಣಾ ಆಯೋಗ ಹೇಳಿದೆ. ಕಾಂಗ್ರೆಸ್ ಕೂಡ ಇಲ್ಲಿ ಉತ್ತಮ ಸಾಧನೆ ತೋರಿದ್ದು, ಸ್ಪರ್ಧಿಸಿದ 25 ಸ್ಥಾನಗಳ ಪೈಕಿ 16ರಲ್ಲಿ ಮುನ್ನಡೆ ಕಾಯ್ದುಕೊಂಡಿದೆ ಅಥವಾ ಗೆಲುವು ಸಾಧಿಸಿದೆ. ಸ್ಟಾಲಿನ್ ಅವರ ಪುತ್ರ ಉದಯ ನಿಧಿ ಸ್ಟಾಲಿನ್ ಸೇರಿದಂತೆ ಡಿಎಂಕೆಯ ತಾರಾ ಪ್ರಚಾರಕರಲ್ಲಿ ಬಹುತೇಕರು ದೊಡ್ಡ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ದಲಿತರನ್ನು ಪ್ರತಿನಿಧಿಸುವುದಾಗಿ ಹೇಳಿರುವ, ಬಿಜೆಪಿಯ ಕಡು ವಿರೋಧಿಯಾಗಿರುವ ವಿದುತಲೈ ಚಿರುತೈಗಳ್ ಕಚ್ಚಿ ಪಕ್ಷವು ನಾಲ್ಕು ಸ್ಥಾನಗಳಲ್ಲಿ ಮುನ್ನಡೆ ಕಾಯ್ದುಕೊಂಡಿದೆ ಅಥವಾ ಗೆಲುವು ಸಾಧಿಸಿದೆ. ಸಿಪಿಎಂ ಮತ್ತು ಸಿಪಿಐ ಪಕ್ಷಗಳು ತಲಾ ಎರಡು ಸ್ಥಾನಗಳಲ್ಲಿ ಮುನ್ನಡೆ ಕಾಯ್ದುಕೊಂಡಿವೆ.

ಡಿಎಂಕೆ 200 ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಸ್ಟಾಲಿನ್ ನಿರೀಕ್ಷಿಸಿದ್ದರು. ಆದರೆ ಡಿಎಂಕೆಗೆ ದಕ್ಕಿರುವ ಜಯವು ನಿರೀಕ್ಷೆಯಂತೆ ಇಲ್ಲ. ತಮ್ಮ ನಾಯಕತ್ವದಲ್ಲಿ ನಂಬಿಕೆ ಇರಿಸಿದ ತಮಿಳುನಾಡು ಜನರಿಗೆ ಧನ್ಯವಾದ ಅರ್ಪಿಸಿರುವ ಸ್ಟಾಲಿನ್, 'ಐವತ್ತು ವರ್ಷಗಳ ಕಠಿಣ ಶ್ರಮಕ್ಕೆ ಸಿಕ್ಕ ಫಲ' ಎಂದು ಜಯವನ್ನು ಬಣ್ಣಿಸಿದ್ದಾರೆ.

ತಮಿಳು ರಾಷ್ಟ್ರೀಯವಾದಿ ಪಕ್ಷವಾದ ನಾಮ್ ತಮಿಳರ್ ಕಚ್ಚಿ ಯಾವ ಸ್ಥಾನವನ್ನೂ ಗೆದ್ದಿಲ್ಲ. ಆದರೆ, ಹಲವು ಕ್ಷೇತ್ರಗಳಲ್ಲಿ ಈ ಪಕ್ಷದ ಅಭ್ಯರ್ಥಿಗಳು ಮೂರನೆಯ ಸ್ಥಾನ ಪಡೆದಿದ್ದಾರೆ.

ಚುನಾವಣೆಯಲ್ಲಿ ಯಾವ ಅಲೆಯೂ ಇರಲಿಲ್ಲ ಎಂಬುದನ್ನು ಫಲಿತಾಂಶವು ತೋರಿಸಿಕೊಟ್ಟಿದೆ. ಪಳನಿಸ್ವಾಮಿ ಸಂಪುಟದ ಒಂದು ಡಜನ್ ಸಚಿವರು ತೀವ್ರ ಹಿನ್ನಡೆ ಅನುಭವಿಸಿದ್ದಾರೆ ಅಥವಾ ಸೋಲು ಕಂಡಿದ್ದಾರೆ. ಡಿಎಂಕೆ ಪಕ್ಷವು ಉತ್ತರ ತಮಿಳುನಾಡಿನ ತನ್ನ ಭದ್ರ ನೆಲೆಗಳಲ್ಲಿಯೂ ಕೆಲವು ಸ್ಥಾನಗಳಲ್ಲಿ ಸೋತಿದೆ. ಅತ್ಯಂತ ಹಿಂದುಳಿದ ಸಮುದಾಯಗಳಿಗೆ (ಎಂಬಿಸಿ) ನೀಡುವ ಶೇಕಡ 20ರಷ್ಟು ಮೀಸಲಾತಿಯಲ್ಲಿ 'ವಣ್ಣಿಯಾರ್'ಗಳಿಗೆ ಶೇ 10.5ರಷ್ಟು ಮೀಸಲಾತಿ ನೀಡುವ ತೀರ್ಮಾನವು ಎಐಎಡಿಎಂಕೆ ಪರ ಕೆಲಸ ಮಾಡಿರಬಹುದು.

ಚೆನ್ನೈನಲ್ಲಿ ಡಿಎಂಕೆ ಕಾರ್ಯಕರ್ತರ ಸಂಭ್ರಮಾಚರಣೆ — ಪಿಟಿಐ ಚಿತ್ರ

ಪಕ್ಷಕ್ಕೆ ಆರನೇ ಬಾರಿ ಆಡಳಿತ ನಡೆಸಲು ಅವಕಾಶ ನೀಡಿದ ರಾಜ್ಯದ ಜನರಿಗೆ ಹೃದಯತುಂಬಿದ ಧನ್ಯವಾದ. ಡಿಎಂಕೆಗೆ ಮತ ಹಾಕಿದರೆ ಎಲ್ಲರ ಯೋಗಕ್ಷೇಮ ರಕ್ಷಣೆಯಾಗುತ್ತದೆ ಎಂದು ಅರಿತು ಜನ ಮತ ಹಾಕಿದ್ದಾರೆ

ಎಂ.ಕೆ. ಸ್ಟಾಲಿನ್, ಡಿಎಂಕೆ ಮುಖ್ಯಸ್ಥ



ಡಿಎಂಕೆ ಮತ ಏರಿಕೆ

ತಮಿಳುನಾಡಿನಲ್ಲಿ ಡಿಎಂಕೆಯು 2016ರ ಚುನಾವಣೆಯಲ್ಲಿ ಪಡೆದಿದ್ದ ಮತಗಳಿಗಿಂತ ಈ ಬಾರಿ ಹೆಚ್ಚು ಮತಗಳನ್ನು ಪಡೆದಿದೆ. ಡಿಎಂಕೆಯ ಮತ ಪ್ರಮಾಣ ಶೇ 31.39ರಿಂದ ಶೇ 37.6ಕ್ಕೆ ಏರಿಕೆಯಾಗಿದೆ. ಮತಗಳ ಪ್ರಮಾಣದಲ್ಲಿ ಸ್ವಲ್ಪವೇ ಏರಿಕೆಯಾಗಿದ್ದರೂ, ಹೆಚ್ಚಿನ ಕ್ಷೇತ್ರಗಳಲ್ಲಿ ಈ ಮತಗಳು ಡಿಎಂಕೆಗೆ ಗೆಲುವು ತಂದುಕೊಟ್ಟಿವೆ. ಡಿಎಂಕೆ ಮಿತ್ರಪಕ್ಷ ಕಾಂಗ್ರೆಸ್ ಈ ಚುನಾವಣೆಯಲ್ಲಿ ಕಡಿಮೆ ಮತಗಳನ್ನು ಗಳಿಸಿದೆ. ಕಾಂಗ್ರೆಸ್‌ನ ಮತಪ್ರಮಾಣ ಶೇ 6.43ರಿಂದ ಶೇ 3.77ಕ್ಕೆ ಇಳಿಕೆಯಾಗಿದೆ.

ಆಡಳಿತಾರೂಢ ಎಐಎಡಿಎಂಕೆ ಪಡೆದ ಮತ ಪ್ರಮಾಣದಲ್ಲಿ ಇಳಿಕೆಯಾಗಿದೆ. ಜತೆಗೆ ಸ್ಥಾನಗಳ ಸಂಖ್ಯೆಯಲ್ಲೂ ಇಳಿಕೆಯಾಗಿದೆ. ಎಐಎಡಿಎಂಕೆ ಮಿತ್ರಪಕ್ಷ ಬಿಜೆಪಿಯ ಮತಗಳಿಕೆ ಪ್ರಮಾಣ ಸ್ವಲ್ಪ ಏರಿಕೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮಿಳುನಾಡಿನಲ್ಲಿ ನಡೆಸಿದ ರೋಡ್‌ಶೋಗಳು ಬಿಜೆಪಿಗೆ ಯಾವುದೇ ರೀತಿಯ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಭರ್ಜರಿ ಪ್ರಚಾರ ನಡೆಸಿದ್ದರೂ, ತಮಿಳುನಾಡಿನಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳುವಲ್ಲಿ ಬಿಜೆಪಿ ವಿಫಲವಾಗಿದೆ.

ಎಎಂಎಂಕೆ, ಎಂಎನ್‌ಎಂ ಪಕ್ಷಗಳು ಹೆಚ್ಚು ಮತಗಳನ್ನು ಗಳಿಸಿವೆ. ಪಕ್ಷೇತರ ಮತ್ತು ಇತರ ಸಣ್ಣಪುಟ್ಟ ಪಕ್ಷಗಳ ಒಟ್ಟು ಮತ ಪ್ರಮಾಣ ಈ ಭಾರಿ ಶೇ 18.7ರಿಂದ ಶೇ 22.14ಕ್ಕೆ ಏರಿಕೆಯಾಗಿದೆ.

'ರೈತರ ನಿಲುವನ್ನು ಸಮರ್ಥಿಸಿದ ಫಲಿತಾಂಶ'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡಿನಲ್ಲಿ ಬಿಜೆಪಿ ಸೋಲು ಕಂಡಿದ್ದು, ಪಕ್ಷವನ್ನು ಶಿಕ್ಷಿಸುವಂತೆ ನೀಡಿಲಾಗಿದ್ದ ಕರೆಗೆ ಈ ಫಲಿತಾಂಶ ಸಮರ್ಥನೆ ನೀಡಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಭಾನುವಾರ ಅಭಿಪ್ರಾಯಪಟ್ಟಿದೆ.

ದೆಹಲಿಯ ಸಿಂಘು ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ಪ್ರತಿಭಟನನಿರತ ರೈತರು ಭಾನುವಾರ ಸಿಹಿ ಹಂಚಿದರು. ಪಶ್ಚಿಮ ಬಂಗಾಳ ಮತ್ತು ಇತರ ರಾಜ್ಯಗಳ ಜನರು ತಮ್ಮ ಮನವಿಗೆ ಓಗೊಟ್ಟಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು.

ಮೂರು ಕೇಂದ್ರ ಕೃಷಿ ಕಾನೂನುಗಳನ್ನು ವಿರೋಧಿಸಿದ್ದ ರೈತರು ಅಸ್ಸಾಂ, ಪಶ್ಚಿಮ ಬಂಗಾಳ, ಪುದುಚೇರಿ, ತಮಿಳುನಾಡು ಮತ್ತು ಕೇರಳದಲ್ಲಿ ಬಿಜೆಪಿ ವಿರುದ್ಧ ಪ್ರಚಾರ ನಡೆಸಿದ್ದರು.

'ತಮ್ಮ ಪ್ರತಿರೋಧ ವ್ಯಕ್ತಪಡಿಸಲು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಆಂದೋಲನಕ್ಕೆ ಸೇರಲು ಭಾರತದಾದ್ಯಂತದ ರೈತರಿಗೆ ಮನವಿ ಮಾಡುತ್ತೇವೆ. ನಮ್ಮ ಸಂವಿಧಾನ ಸಮರ್ಥಿಸುವ ಪ್ರಜಾಪ್ರಭುತ್ವ ಮೌಲ್ಯಗಳನ್ನು ಹರಡುವ ಕೆಲಸವನ್ನು ಈ ಆಂದೋಲನ ಮುಂದುವರಿಸುತ್ತದೆ' ಎಂದು ಸಂಘಟನೆ ತಿಳಿಸಿದೆ.

ಟಿಎಂಸಿ ಜಯದ ಪ್ರಮಾಣ ಅರಿಯುವಲ್ಲಿ ಸೋತ ಸಮೀಕ್ಷೆ

ಮುಖ್ಯಾಂಶಗಳು

- ಟಿಎಂಸಿ ಸರಳ ಬಹುಮತ ಪಡೆಯುತ್ತದೆ ಎಂದಷ್ಟೇ ಹೇಳಿದ್ದ ಸಮೀಕ್ಷೆಗಳು
- ಎಡಪಕ್ಷಗಳು ಮತ್ತು ಕಾಂಗ್ರೆಸ್‌ನ ಸೋಲನ್ನೂ ಅಂದಾಜಿಸಿರಲಿಲ್ಲ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹಾಗೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) ನಡುವೆ ತೀವ್ರ ಸ್ಪರ್ಧೆ ನಡೆಯಲಿದೆ ಎಂದು ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿದ್ದರೂ, ಅದಕ್ಕೆ ವಿರುದ್ಧವೆಂಬಂತೆ ಟಿಎಂಸಿ ಪಕ್ಷವು ನಿರ್ಣಾಯಕ ಗೆಲುವು ಸಾಧಿಸಿದೆ.

ಸಮೀಕ್ಷೆಗಳು ಟಿಎಂಸಿಯ ಗೆಲುವು ಎಷ್ಟು ದೊಡ್ಡದಿರಬಹುದು ಎಂಬುದನ್ನು ಅಳೆಯುವಲ್ಲಿ ಸೋತವು. ಆದರೆ, ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟ, ಅಸ್ಸಾಂನಲ್ಲಿ ಬಿಜೆಪಿ ಮೈತ್ರಿಕೂಟ, ಕೇರಳದಲ್ಲಿ ಎಲ್‌ಡಿಎಫ್ ಹಾಗೂ ಪುದುಚೇರಿಯಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರುತ್ತವೆ ಎಂದು ಬಹುತೇಕ ಸಮೀಕ್ಷೆಗಳು ಹೇಳಿದ್ದು ನಿಜವಾಗಿದೆ.

ಪಶ್ಚಿಮ ಬಂಗಾಳ ವಿಧಾನಸಭೆಯ ವಿಚಾರದಲ್ಲಿ ಇತರ ಎಲ್ಲ ಸಮೀಕ್ಷೆಗಳಿಗಿಂತ ಹೆಚ್ಚು ನಿಖರವಾಗಿ ಭವಿಷ್ಯ ನುಡಿದಿದ್ದು 'ಟುಡೇಸ್ ಚಾಣಕ್ಯ' ಸಂಸ್ಥೆ. ಟಿಎಂಸಿ 180 ಸ್ಥಾನಗಳಲ್ಲಿ ಗೆಲ್ಲಬಹುದು ಎಂದು ಅದು ಅಂದಾಜಿಸಿತ್ತು. ಬಿಜೆಪಿಯು 108 ಸ್ಥಾನಗಳಲ್ಲಿ ಗೆಲುವು ಸಾಧಿಸಬಹುದು ಎಂದು 'ಟುಡೇಸ್ ಚಾಣಕ್ಯ' ಅಂದಾಜಿಸಿತ್ತು.

ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಅಧಿಕಾರ ಉಳಿಸಿಕೊಳ್ಳಲಿದೆ ಎಂದು ಬಹುತೇಕ ಸಮೀಕ್ಷೆಗಳು ಅಂದಾಜು ಮಾಡಿದ್ದವು. ಒಮ್ಮೆ ಯುಡಿಎಫ್‌ಗೆ, ಮತ್ತೊಮ್ಮೆ ಎಲ್‌ಡಿಎಫ್‌ಗೆ ಅಧಿಕಾರ ನೀಡುವ ಪದ್ಧತಿಯು ಕೇರಳದಲ್ಲಿ ಈ ಬಾರಿ ಕೊನೆಯಾಗಲಿದೆ, ಅಲ್ಲಿ ಎಲ್‌ಡಿಎಫ್ ಅಧಿಕಾರದಲ್ಲಿ ಮುಂದುವರಿಯಲಿದೆ ಎಂದು ಹಲವು ಸಮೀಕ್ಷೆಗಳು ಅಂದಾಜಿಸಿದ್ದವು. ಅದು ನಿಜವಾಗಿದೆ.

3 ಲಕ್ಷ ಅಭ್ಯರ್ಥಿಗಳು ಅವಿರೋಧ ಆಯ್ಕೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ಲಕ್ಷಾಂತರ ಪಂಚಾಯಿತಿ ಸ್ಥಾನಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಭಾನುವಾರ ಪ್ರಾರಂಭವಾಗಿದ್ದು, ಈ ಪ್ರಕ್ರಿಯೆ ಪೂರ್ಣಗೊಳ್ಳಲು ಎರಡು ದಿನ ತೆಗೆದುಕೊಳ್ಳುವ ನಿರೀಕ್ಷೆಯಿದೆ.

ಎಣಿಕೆ ಪ್ರಾರಂಭವಾಗುವ ಸ್ವಲ್ಪ ಸಮಯದ ಮೊದಲು 3,19,317 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ರಾಜ್ಯ ಚುನಾವಣಾ ಆಯೋಗ ಘೋಷಿಸಿತು.

ಕೋವಿಡ್ ದೃಢಪಟ್ಟ ಕಾರಣ, ಕನೌಜ್‌ನ ಚಿಬ್ರಾಮೌ ತಹಸಿಲ್‌ನಲ್ಲಿರುವ ಎಣಿಕೆಯ ಕೇಂದ್ರದಿಂದ ಎಂಟು ಮಂದಿ ಏಜೆಂಟರನ್ನು ದೂರ ಕಳುಹಿಸಲಾಯಿತು.

ಪಿಲಿಭಿತ್ ಮತ್ತು ಫಿರೋಜಾಬಾದ್ ಜಿಲ್ಲೆಗಳಲ್ಲಿ ಎಣಿಕೆಯ ಸಿಬ್ಬಂದಿ ಮತ್ತು ಅಭ್ಯರ್ಥಿಗಳ ಬೆಂಬಲಿಗರ ನಡುವೆ ವಾಗ್ವಾದ ನಡೆದವು. ಹೀಗಾಗಿ ಪೊಲೀಸರು ಮಧ್ಯಪ್ರವೇಶಿಸಬೇಕಾಯಿತು.

58,176 ಗ್ರಾಮ ಪಂಚಾಯಿತಿಗಳು, 75,852 ಕ್ಷೇತ್ರ ಪಂಚಾಯಿತಿಗಳು ಮತ್ತು 3,050 ಜಿಲ್ಲಾ ಪಂಚಾಯಿತಿ ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ನಾಲ್ಕು ಹಂತಗಳಲ್ಲಿ ಶೇ 75ರಷ್ಟು ಮತದಾನ ನಡೆದಿತ್ತು.

ಕಮಲ್, ಖುಷ್ಬೂ, ಅಣ್ಣಾಮಲೈಗೆ ಸೋಲು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಹಲವು ಪ್ರಮುಖರು ಸೋತಿದ್ದಾರೆ. ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಎಲ್. ಮುರುಗನ್, ಪ್ರಸಿದ್ಧ ನಟಿ ಮತ್ತು ಬಿಜೆಪಿ ಅಭ್ಯರ್ಥಿಯಾಗಿದ್ದ ಖುಷ್ಬೂ ಸುಂದರ್, ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ (ಬಿಜೆಪಿ) ಅವರು ಸೋಲುಂಡಿದ್ದಾರೆ. ಸಿನಿಮಾ ನಟಿಯಾಗಿ ಜನಪ್ರಿಯತೆಯ ತುತ್ತತುದಿಯಲ್ಲಿದ್ದ ದಿನಗಳಲ್ಲಿ ತಮಿಳುನಾಡಿನ ಜನರು ಖುಷ್ಬೂ ಅವರ ಹೆಸರಿನಲ್ಲಿ ದೇಗುಲವನ್ನೇ ಕಟ್ಟಿದ್ದರು. ಆದರೆ, ಈಗ ಅವರಿಗೆ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲುವುದಕ್ಕೂ ಸಾಧ್ಯವಾಗಿಲ್ಲ.

ಸಿನಿಮಾ ನಟರ ಬಗ್ಗೆ ಅಪಾರ ಅಭಿಮಾನ ಹೊಂದಿರುವ ತಮಿಳುನಾಡಿನ ಜನರು ಈ ಬಾರಿ ಸಿನಿಮಾ ತಾರೆಯರಿಗೆ ಮಣೆ ಹಾಕಿಲ್ಲ. ಜನಪ್ರಿಯ ನಟ, ಕೊಯಮತ್ತೂರು ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಮಲ್‌ಹಾಸನ್ ಅವರು ಸೋತಿದ್ದಾರೆ. ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ವನತಿ ಶ್ರೀನಿವಾಸನ್ ಅವರು ಕಮಲ್‌ಹಾಸನ್ ವಿರುದ್ಧ ಗೆದ್ದಿದ್ದಾರೆ.

ಜಯಲಲಿತಾ ಅವರ ಆಪ್ತೆ ಶಶಿಕಲಾ ಅವರ ಸೋದರಳಿಯ ಟಿ.ಟಿ.ವಿ. ದಿನಕರನ್ ಅವರೂ ಸೋತಿದ್ದಾರೆ. ನಾಮ್ ತಮಿಳರ್ ಕಚ್ಚಿ ಪಕ್ಷವು ಒಂದೇ ಒಂದು ಕ್ಷೇತ್ರದಲ್ಲಿ ಗೆದ್ದಿಲ್ಲ.

ಈ ಬಾರಿ ತಮಿಳುನಾಡಿನಲ್ಲಿ ಯಾವುದೇ ಅಲೆ ಇರಲಿಲ್ಲ ಎಂಬುದು ಫಲಿತಾಂಶದಿಂದ ಸ್ಪಷ್ಟವಾಗಿದೆ. ಹತ್ತಕ್ಕೂ ಹೆಚ್ಚು ಹಾಲಿ ಸಚಿವರು ಸೋತಿದ್ದಾರೆ.

ಕಮಲ್

ಖುಷ್ಬೂ

ಅಣ್ಣಾಮಲೈ

'ಸೋತ ಮಮತಾ ಸಿ.ಎಂ. ಆಗುವುದು ಹೇಗೆ?'

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಭಾರಿ ಸೋಲು ಎದುರಾದರೂ ಮಮತಾ ಬ್ಯಾನರ್ಜಿ ಅವರು ನಂದಿಗ್ರಾಮದಲ್ಲಿ ಸೋತಿರುವುದು ಬಿಜೆಪಿಗೆ ಸ್ವಲ್ಪ ಸಾಂತ್ವನ ಕೊಟ್ಟಿದೆ. ಮಮತಾ ಅವರದ್ದು ಬಹು ದೊಡ್ಡ ಸೋಲು ಎಂದು ಬಿಜೆಪಿ ಹೇಳಿದೆ. ಈ ರೀತಿ ಸೋತ ಅವರು ಮುಖ್ಯಮಂತ್ರಿ ಸ್ಥಾನವನ್ನು ಉಳಿಸಿಕೊಳ್ಳುವುದು ಹೇಗೆ ಎಂದು ಬಿಜೆಪಿ ಪ್ರಶ್ನಿಸಿದೆ.

ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶವು ಅಲ್ಲಿನ ರಾಜಕಾರಣದಲ್ಲಿ ಆಗಿರುವ ಭಾರಿ ಪಲ್ಲಟವನ್ನು ಸೂಚಿಸಿದೆ ಎಂದು ಬಿಜೆಪಿ ಮಾಹಿತಿ ತಂತ್ರಜ್ಞಾನ ಸೆಲ್‌ನ ಅಮಿತ್ ಮಾಳವೀಯ ಹೇಳಿದ್ದಾರೆ.

'ಇದು ದೊಡ್ಡ ಸೋಲು. ಹಾಲಿ ಸಿಎಂ ಮಮತಾ ಬ್ಯಾನರ್ಜಿ ಅವರು ನಂದಿಗ್ರಾಮದಲ್ಲಿ ಸೋತಿದ್ದಾರೆ. ಬಿಜೆಪಿಯ ಸುವೇಂದು ಅಧಿಕಾರಿ ಗೆದ್ದಿದ್ದಾರೆ. ಮಮತಾ ಅವರ ಸೋಲು ಟಿಎಂಸಿಯ ವಿಜಯಕ್ಕೆ ಕಪ್ಪುಚುಕ್ಕೆ' ಎಂದು ಮಾಳವೀಯ ಟ್ವೀಟ್ ಮಾಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಮತ್ತು ಕಾಂಗ್ರೆಸ್ ಪಕ್ಷ ಕುಸಿದು ಬಿದ್ದಿವೆ ಅಥವಾ ಶರಣಾಗಿವೆ ಎಂದಿದ್ದಾರೆ.

ಸಿಎಎ ಬಳಿಕ ಅಸ್ಸಾಂ ಪರೀಕ್ಷೆ ಗೆದ್ದ ಬಿಜೆಪಿ, ಮತ್ತೆ ಅಧಿಕಾರಕ್ಕೆ

• ಸುಮೀರ್ ಕರ್ಮಾಕರ್

ಗುವಾಹಟಿ: 2019ರ ಡಿಸೆಂಬರ್‌ನಲ್ಲಿ ಪೌರತ್ವ ತಿದ್ದುಪಡಿ ಮಸೂದೆ (ಸಿಎಎ) ವಿರುದ್ಧದ ಹಿಂಸಾತ್ಮಕ ಪ್ರತಿಭಟನೆಗಳು ಅಸ್ಸಾಂನ ಬೀದಿಗಳಲ್ಲಿ ಸದ್ದು ಮಾಡಿದ್ದವು. ಅಸ್ಸಾಮಿನ ಅಸ್ಮಿತೆಯನ್ನು ಬಿಜೆಪಿ ಹಾಳುಮಾಡುತ್ತದೆ ಎಂದು ವಿರೋಧ ಪಕ್ಷಗಳು ಬಿಂಬಿಸಲು ಪ್ರಯತ್ನಿಸಿದ್ದವು. ಆದರೆ ಒಳನುಸುಳುವವರು ಹಾಗೂ ನಿರಾಶ್ರಿತರು ಎಂಬ ನಿರೂಪಣೆ ಹಾಗೂ ಅಭಿವೃದ್ಧಿ ವಿಷಯಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಿದ್ದ ಬಿಜೆಪಿಗೆ ಸಿಎಎ ವಿರೋಧಿ ಅಭಿಯಾನವು ತೊಡಕಾಗಲಿಲ್ಲ ಎಂದು ವಿಶ್ಲೇಷಕರು ಹೇಳುತ್ತಾರೆ.

ಬಿಜೆಪಿ ನೇತೃತ್ವದ ಮೈತ್ರಿಕೂಟವು ಸತತ ಎರಡನೇ ಬಾರಿಗೆ ಅಧಿಕಾರಕ್ಕೆ ಬರುತ್ತಿದ್ದು, 126 ಸ್ಥಾನಗಳ ಪೈಕಿ 75 ಸ್ಥಾನಗಳಲ್ಲಿ ಗೆಲುವು ಖಚಿತಪಡಿಸಿಕೊಂಡಿದೆ. ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್ ಸೇರಿದಂತೆ ಕಾಂಗ್ರೆಸ್ ನೇತೃತ್ವದ ಏಳು ಪಕ್ಷಗಳ ಮಹಾಮೈತ್ರಿಕೂಟವು 50 ಸ್ಥಾನಗಳಲ್ಲಷ್ಟೇ ಯಶಸ್ಸು ಕಾಣಲು ಸಾಧ್ಯವಾಗಿದೆ.

ತಮ್ಮ ಮೊದಲ ಚುನಾವಣಾ ಯುದ್ಧದಲ್ಲಿ ಸಿಎಎ ವಿರೋಧಿ ಮುಖಂಡ ಅಖಿಲ್ ಗೊಗೊಯಿ ಜಯ ಗಳಿಸಿದ್ದಾರೆ. ಆದರೆ ಸಿಎಎ ವಿರೋಧಿ ಪಕ್ಷವಾದ ಅಸ್ಸಾಂ ಜಾತಿಯ ಪರಿಷತ್ 82 ಸ್ಥಾನಗಳಲ್ಲಿ ಸ್ಪರ್ಧಿಸಿದರೂ ಎಲ್ಲಿಗೂ ಗೆದ್ದಿಲ್ಲ.

ಸಿಎಎ ವಿರೋಧಿ ಆಂದೋಲನದ ಹೊರತಾಗಿಯೂ ಬಿಜೆಪಿಯ ಗೆಲುವಿಗೆ ಕಾರಣವಾದ ಅಂಶಗಳು ಸಾಕಷ್ಟಿವೆ.

'ಕಾಂಗ್ರೆಸ್-ಎಐಯುಡಿಎಫ್ ಮೈತ್ರಿಯು ರಾಜ್ಯದ ಹಿತಾಸಕ್ತಿಗೆ ಮಾರಕ ಎಂಬ ಬಿಜೆಪಿಯ ಅಭಿಯಾನವು ಅಸ್ಸಾಮಿಗರು ಮತ್ತು ಇತರ ಜನಾಂಗೀಯ ಸಮುದಾಯಗಳ ಮೇಲೆ ಪ್ರಭಾವ ಬೀರಿತು. ಕಾಂಗ್ರೆಸ್ ಮತ್ತು ಎಐಯುಡಿಎಫ್ ಅನ್ನು ಒಳನುಸುಳುವವರ ರಕ್ಷಕರು ಎಂದು ಬಿಜೆಪಿ ಬಿಂಬಿಸಿತು. ಈ ಮೂಲಕ ಒಳನುಸುಳುವಿಕೆ ಹಾಗೂ ನಿರಾಶ್ರಿತರ ಕುರಿತ ತನ್ನ ನಿರೂಪಣೆಯನ್ನು ಬಿಜೆಪಿ ಯಶಸ್ವಿಯಾಗಿ ಮಂಡಿಸಿತು' ಎನ್ನುತ್ತಾರೆ ರಾಜಕೀಯ ನಿರೂಪಕ ಸುಶಾಂತಾ ತಾಲೂಕ್ದಾರ್.

ಬಾಂಗ್ಲಾದೇಶದಲ್ಲಿ ಬೇರುಗಳನ್ನು ಹೊಂದಿರುವ ಮುಸ್ಲಿಂ ವಲಸಿಗರನ್ನು ಒಳನುಸುಳುವವರು ಎಂದೂ, ಅದೇ ಪ್ರದೇಶದಿಂದ ಬರುವ ಹಿಂದೂ ವಲಸಿಗರನ್ನು ನಿರಾಶ್ರಿತರು ಎಂದೂ ಬಿಜೆಪಿ ಮನದಟ್ಟು ಮಾಡಿಸಿತು. ಈ ನಿರೂಪಣೆಯಿಂದ ಬಹುಪಾಲು ಅಸ್ಸಾಮಿಗರು ಮತ್ತು ಇತರ ಜನಾಂಗೀಯ ಮತದಾರರನ್ನು ಬಿಜೆಪಿ ಸೆಳೆಯಿತು.

ಅಸ್ಸಾಂ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ರಿಪುನ್ ಬೋರಾ ಅವರು ಈ ಸೋಲನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಬಿಜೆಪಿಯ ಹಣದ ಶಕ್ತಿ ಮತ್ತು ಧ್ರುವೀಕರಣ ತಂತ್ರಗಳು ಪ್ರತಿಪಕ್ಷಗಳ ಮೈತ್ರಿಕೂಟವು ಅಧಿಕಾರ ಹಿಡಿಯಲು ತೊಡಕಾದವು ಎಂದು ಹೇಳಿದ್ದಾರೆ.

'ಸಿಎಎಯಿಂದ ಉಂಟಾದ ಹಾನಿಯನ್ನು ಕಡಿಮೆ ಮಾಡಲು ಯೋಜಿತ ವಿನ್ಯಾಸದೊಂದಿಗೆ ಕಣಕ್ಕಿಳಿದ ಬಿಜೆಪಿ, ಹೆಚ್ಚು ಪರಿಣಾಮಕಾರಿಯಾಗಿ ತಳಮಟ್ಟದಲ್ಲಿ ಪ್ರಚಾರ ಮಾಡಿತು. ಕಡಿಮೆ ಆದಾಯದ ಜನ ಸಮುದಾಯಗಳಿಗೆ ನಗದು ನೇರ ವರ್ಗಾವಣೆ ಮಾಡುವ ಯತ್ನ ಫಲ ನೀಡಿತು. ಚಹಾ ತೋಟಗಳ ಕಾರ್ಮಿಕರಿಗೂ ವಿವಿಧ ಯೋಜನೆಗಳಲ್ಲಿ ನೇರ ನಗದು ವರ್ಗಾವಣೆ ಅಸ್ತ್ರ ಪ್ರಯೋಗಿಸಿ ಕಾಂಗ್ರೆಸ್‌ನ ಮತಬ್ಯಾಂಕ್ ಕಸಿದುಕೊಂಡಿತು' ಎಂದು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹರೇಕೃಷ್ಣ ದೇಕಾ ವಿವರಿಸುತ್ತಾರೆ.

ಬಿಜೆಪಿ ಕಾರ್ಯಕರ್ತರು ಗುವಾಹಟಿಯಲ್ಲಿ ಸಿಹಿ ಹಂಚಿ ಸಂಭ್ರಮಿಸಿದರು—ಪಿಟಿಐ ಚಿತ್ರ

ಎಲ್ಲರ ಮತ ಪ್ರಮಾಣ ಕಡಿತ



ಅಸ್ಸಾಂನಲ್ಲಿ ಈ ಬಾರಿ ಎನ್‌ಡಿಎ ತನ್ನ ಮತ ಪ್ರಮಾಣವನ್ನು ಉತ್ತಮಪಡಿಸಿಕೊಂಡಿದೆ. 2016ರ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಶೇ 41.9ರಷ್ಟು ಮತಗಳನ್ನು ಪಡೆದಿದ್ದವು. ಆದರೆ ಈ ಬಾರಿ ಈ ಪ್ರಮಾಣ ಶೇ 44.1ಕ್ಕೆ ಏರಿಕೆಯಾಗಿದೆ. ಆದರೆ ಈ ಹೆಚ್ಚಿನ ಮತಗಳು ಪೂರ್ಣ ಪ್ರಮಾಣದಲ್ಲಿ ಗೆಲುವಾಗಿ ಮಾರ್ಪಟ್ಟಿಲ್ಲ. ಕಳೆದ ಬಾರಿಗೆ ಹೋಲಿಸಿದರೆ ಎನ್‌ಡಿಎ ಈ ಬಾರಿ ಒಂದು ಸ್ಥಾನವನ್ನು ಕಳೆದುಕೊಂಡಿದೆ.

ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಮತ ಪ್ರಮಾಣವು ಈ ಬಾರಿ ಇಳಿಕೆಯಾಗಿದೆ. ಆದರೆ ಈ ಪಕ್ಷಗಳಿಗೆ ಬಿದ್ದಿರುವ ಮತಗಳು, ಗೆಲುವಾಗಿಯೂ ಮಾರ್ಪಟ್ಟಿವೆ. ಹೀಗಾಗಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಕಳೆದ ಬಾರಿಗಿಂತ ಹೆಚ್ಚುವರಿಯಾಗಿ 5 ಸ್ಥಾನಗಳಲ್ಲಿ ಗೆಲುವು ಸಾಧಿಸಿವೆ.

ಪಕ್ಷೇತರರ ಮತ ಪ್ರಮಾಣದಲ್ಲಿ ಏರಿಕೆಯಾಗಿದೆ. ಆದರೆ, ಈ ಮತಗಳು ಗೆಲುವಾಗಿ ಮಾರ್ಪಡುವಲ್ಲಿ ವಿಫಲವಾಗಿವೆ.

ಪುದುಚೇರಿ: ಎನ್‌ಆರ್ ಕಾಂಗ್ರೆಸ್ ಪ್ರಾಬಲ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ಪುದುಚೇರಿಯಲ್ಲಿ ಎನ್‌ಆರ್ ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿಕೂಟವು, ಡಿಎಂಕೆ-ಕಾಂಗ್ರೆಸ್ ಮೈತ್ರಿಕೂಟವನ್ನು ನೆಲಕಚ್ಚಿಸಿವೆ. ಎನ್‌ಆರ್ ಕಾಂಗ್ರೆಸ್ ಮತ್ತು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ನಾಯಕರ ಗೆಲುವಿನೊಂದಿಗೆ, ಬಿಜೆಪಿ ಇದೇ ಮೊದಲ ಬಾರಿ ಪುದುಚೇರಿ ಸರ್ಕಾರ ರಚನೆಯಲ್ಲಿ ಪಾತ್ರವಹಿಸುತ್ತಿದೆ. ಪುದುಚೇರಿ ಸರ್ಕಾರದಲ್ಲಿ ಬಿಜೆಪಿ ಪ್ರಮುಖ ಸ್ಥಾನ ಪಡೆದರೆ, ದಕ್ಷಿಣದ ರಾಜ್ಯಗಳಲ್ಲಿ ಪಕ್ಷದ ಬಲವರ್ಧನೆಗೆ ನೆರವಾಗಲಿದೆ.

ಮುದ್ರಣಕ್ಕೆ ಹೋಗುವ ವೇಳೆಗೆ 10 ಕ್ಷೇತ್ರಗಳಲ್ಲಿ ಎನ್‌ಆರ್ ಕಾಂಗ್ರೆಸ್ ಮುನ್ನಡೆ ಅಥವಾ ಗೆಲುವು ಸಾಧಿಸಿತ್ತು. ಬಿಜೆಪಿ 5 ಕ್ಷೇತ್ರಗಳಲ್ಲಿ ಮುನ್ನಡೆ ಅಥವಾ ಗೆಲುವು ಸಾಧಿಸಿತ್ತು. ಹೀಗಿದ್ದೂ ಸರ್ಕಾರ ರಚನೆಗೆ ಈ ಮೈತ್ರಿಕೂಟಕ್ಕೆ ಇನ್ನೂ ಒಂದು ಸ್ಥಾನದ ಅವಶ್ಯಕತೆ ಇದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಪಕ್ಷೇತರರ ಬೆಂಬಲ ಪಡೆದು ಈ ಮೈತ್ರಿಕೂಟವು ಸರ್ಕಾರ ರಚಿಸಲಿದೆ. ಎನ್‌ಆರ್ ಕಾಂಗ್ರೆಸ್ ಮುಖ್ಯಸ್ಥ ಎನ್.ರಂಗಸ್ವಾಮಿ ಅವರು ಈ ಬಾರಿ ಮುಖ್ಯಮಂತ್ರಿಯಾಗುವ ಸಾಧ್ಯತೆ ಅತ್ಯಧಿಕವಾಗಿದೆ. ಅವರು ಮುಖ್ಯಮಂತ್ರಿಯಾದರೆ, ಅವರು ನಾಲ್ಕನೇ ಬಾರಿ ಮುಖ್ಯಮಂತ್ರಿಯಾದಂತೆ ಆಗುತ್ತದೆ.

ಪುದುಚೇರಿ ವಿಧಾನಸಭೆಗೆ ಮೂವರು ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. ಕಳೆದ ಬಾರಿ ಬಿಜೆಪಿಯ ಮೂವರು ನಾಯಕರನ್ನು ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಿತ್ತು. ಈ ಬಾರಿಯೂ ಮೂವರನ್ನು ನಾಮನಿರ್ದೇಶನ ಮಾಡಲಿದೆ. ಅಲ್ಲಿಗೆ ಎನ್‌ಆರ್ ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿ ಸರ್ಕಾರದ ಬಲವರ್ಧನೆಯಾಗಲಿದೆ.

ಬಿಜೆಪಿ ಈ ಚುನಾವಣೆಯಲ್ಲಿ ಗಣನೀಯ ಪ್ರಮಾಣದಲ್ಲಿ ಪ್ರಗತಿ ಸಾಧಿಸಿದೆ. ಕಾಂಗ್ರೆಸ್‌ನಿಂದ ಬಿಜೆಪಿ ಸೇರಿದ್ದವರಲ್ಲಿ ಇಬ್ಬರು ಅಭ್ಯರ್ಥಿಗಳು ಈಗಾಗಲೇ ಗೆಲುವು ಸಾಧಿಸಿದ್ದಾರೆ. ಪುದುಚೇರಿ ವಿಧಾನಸಭೆಯಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಚುನಾವಣೆ ಮೂಲಕ ಖಾತೆ ತೆರೆದಿದೆ. ಆದರೆ ಆರಂಭದಿಂದಲೂ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದ, ಪುದುಚೇರಿ ಬಿಜೆಪಿ ಘಟಕದ ಅಧ್ಯಕ್ಷ ವಿ.ಸಾಮಿನಾಥನ್ ಸೋತಿದ್ದಾರೆ.

ಖಾತೆ ತೆರೆದ ಬಿಜೆಪಿ



ಎನ್‌ಆರ್ ಕಾಂಗ್ರೆಸ್ ಪಕ್ಷವು 2016ರಲ್ಲಿ ಪಡೆದ ಮತಗಳಿಗಿಂತ, ಹೆಚ್ಚು ಮತಗಳನ್ನು ಈ ಚುನಾವಣೆಯಲ್ಲಿ ಪಡೆದಿದೆ. ಈ ಮತಗಳು ಎನ್‌ಆರ್ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನಗಳನ್ನೂ ತಂದುಕೊಟ್ಟಿವೆ. ಆದರೆ ಸರ್ಕಾರ ರಚಿಸಲು ಅಗತ್ಯವಿರುವ ಸರಳ ಬಹುಮತವನ್ನು ಪಡೆಯುವಲ್ಲಿ ಎನ್‌ಆರ್ ಕಾಂಗ್ರೆಸ್ ವಿಫಲವಾಗಿದೆ. ಆದರೆ, ಎನ್‌ಆರ್ ಕಾಂಗ್ರೆಸ್‌ನ ಮಿತ್ರ ಪಕ್ಷ ಬಿಜೆಪಿ ಸಹ ಗಣನೀಯ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷ ಡಿಎಂಕೆಯು ಪುದುಚೇರಿ ವಿಧಾನಸಭಾ ಚುನಾವಣೆಯಲ್ಲಿ ಪಡೆದ ಮತಗಳ ಪ್ರಮಾಣದಲ್ಲಿ ಸ್ವಲ್ಪ ಇಳಿಕೆಯಾಗಿದೆ. 2016ರ ಲೋಕಸಭಾ ಚುನಾವಣೆಯಲ್ಲಿ ಈ ಎರಡೂ ಪಕ್ಷಗಳು ಒಟ್ಟು ಶೇ 39.5ರಷ್ಟು ಮತಗಳನ್ನು ಪಡೆದಿದ್ದವು. ಆದರೆ, ಈ ಚುನಾವಣೆಯಲ್ಲಿ ಶೇ 34.1ರಷ್ಟು ಮತಗಳನ್ನು ಮಾತ್ರ ಗಳಿಸುವಲ್ಲಿ ಸಫಲವಾಗಿವೆ. ಬೇರೆಲ್ಲಾ ಪಕ್ಷಗಳಿಗಿಂತ ಈ ಮೈತ್ರಿಕೂಟವು ಹೆಚ್ಚು ಮತಗಳನ್ನು ಪಡೆದಿದೆ. ಆದರೆ, ಹೆಚ್ಚಿನ ಮತಗಳು ಈ ಪಕ್ಷದ ಅಭ್ಯರ್ಥಿಗಳಿಗೆ ಗೆಲುವು ತಂದುಕೊಡುವಲ್ಲಿ ವಿಫಲವಾಗಿವೆ.

ಪುದುಚೇರಿಯಲ್ಲಿ ಎಐಎಡಿಎಂಕೆಗೆ ಸೊನ್ನೆ

ಪುದುಚೇರಿ (ಪಿಟಿಐ): ಎಐಎಡಿಎಂಕೆಗೆ ಪುದುಚೇರಿಯಲ್ಲಿ ಈ ಬಾರಿ ಭಾರಿ ಹಿನ್ನಡೆಯಾಗಿದೆ. ಪಕ್ಷವು ಕಣಕ್ಕಿಳಿಸಿದ್ದ ಐವರು ಅಭ್ಯರ್ಥಿಗಳಲ್ಲಿ ಯಾರೊಬ್ಬರಿಗೂ ಗೆಲುವು ಸಾಧಿಸಲು ಇಲ್ಲಿ ಸಾಧ್ಯವಾಗಲಿಲ್ಲ.

ಪಕ್ಷದ ಹಿರಿಯ ಮುಖಂಡರಾದ ಎ. ಅನ್ಬಳಗನ್, ಅವರ ಸಹೋದರ ಎ. ಭಾಸ್ಕರ್, ಕೆ.ಎ.ಯು. ಹಸನ ಮಾರಿಕಾರ್ ಅವರು ಡಿಎಂಕೆ ಎದುರಾಳಿಗಳ ವಿರುದ್ಧ ಸೋಲನುಭವಿಸಿದ್ದಾರೆ.

ಪಕ್ಷದ ಇತರ ಅಭ್ಯರ್ಥಿಗಳಾದ ವಯ್ಯಾಪುರಿ ಮಣಿಕಂಠನ್ ಹಾಗೂ ಓಂ ಶಕ್ತಿಶೇಖರ್ ಅವರನ್ನು ಪಕ್ಷೇತರ ಅಭ್ಯರ್ಥಿಗಳು ಸೋಲಿಸಿದ್ದಾರೆ.

ಪುದುಚೇರಿಯಲ್ಲಿ ಎಐಎಡಿಎಂಕೆಗೆ ಇದು ಹೊಸ ಅನುಭವವಲ್ಲ. 1980ರಲ್ಲೂ ಪಕ್ಷ ಇಲ್ಲಿ ಶೂನ್ಯ ಸಾಧನೆ ಮಾಡಿತ್ತು. ಆ ಚುನಾವಣೆ ಬಿಟ್ಟರೆ ದೀರ್ಘ ಕಾಲದ ನಂತರ ಮತ್ತೆ ಈ ಬಾರಿ ಪುದುಚೇರಿ ವಿಧಾನಸಭೆಯಲ್ಲಿ ಎಐಎಡಿಎಂಕೆಯ ಒಬ್ಬರೇ ಒಬ್ಬರು ಸದಸ್ಯರೂ ಇರುವುದಿಲ್ಲ.

1974ರಲ್ಲಿ ಮೊದಲಬಾರಿ ಎಐಎಡಿಎಂಕೆ ಪುದುಚೇರಿಯಲ್ಲಿ ಸರ್ಕಾರ ರಚಿಸಿತ್ತು. ಆದರೆ ಬಹುಮತದ ಕೊರತೆಯಿಂದಾಗಿ 21 ದಿನಗಳಿಗೇ ಅದು ಕೊನೆಗೊಂಡಿತ್ತು. 1977ರಲ್ಲಿ ಪಕ್ಷವು ಇಲ್ಲಿ ಸರ್ಕಾರ ರಚಿಸಿತ್ತಾದರೂ ಆಂತರಿಕ ಕಲಹಗಳಿಂದಾಗಿ ದೀರ್ಘ ಕಾಲ ಆಡಳಿತ ನಡೆಸಲು ಆಗಲೂ ಸಾಧ್ಯವಾಗಿರಲಿಲ್ಲ. ಈ ಬಾರಿ ಎಐಎಡಿಎಂಕೆ ಇಲ್ಲಿ ಎಐಎನ್‌ಆರ್‌ಸಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಭಾಗವಾಗಿತ್ತು. ಬಿಜೆಪಿಯೂ ಈ ಕೂಟದಲ್ಲಿದೆ.

ಜೈಲಿನಿಂದ ವಿಧಾನಸಭೆಗೆ ಅಖಿಲ್ ಗೊಗೊಯಿ

ಗುವಾಹಟಿ: ಕೇಂದ್ರ ಸರ್ಕಾರದ ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಅಸ್ಸಾಂನಲ್ಲಿ ಬೀದಿಗೆ ಇಳಿದಿದ್ದ ಅಖಿಲ್ ಗೊಗೊಯಿ ಅವರು, ಈಗ ಜೈಲಿನಲ್ಲಿ ಇದ್ದುಕೊಂಡೇ ಚುನಾವಣೆಯಲ್ಲಿ ಗೆಲ್ಲುವ ಮೂಲಕ ವಿಧಾನಸಭೆ ಪ್ರವೇಶಿಸಿದ್ದಾರೆ. ಸಿಎಎ ವಿರುದ್ಧ ಅವರ ಹೋರಾಟವನ್ನು ಪರಿಗಣಿಸದೇ, ಆ ಕಾಯ್ದೆಯನ್ನು ಬಿಜೆಪಿ ಜಾರಿಗೆ ತಂದಿತ್ತು. ಆದರೆ ಶಿವಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಈಗ ಬಿಜೆಪಿ ಅಭ್ಯರ್ಥಿಯನ್ನೇ ಸೋಲಿಸಿ, ಅಖಿಲ್ ಶಾಸಕನ ಸ್ಥಾನಕ್ಕೆ ಏರಿದ್ದಾರೆ.

ಶಿವಸಾಗರದಲ್ಲಿ ಬಿಜೆಪಿ ಅಭ್ಯರ್ಥಿ ಸುರಭಿ ರಾಜಕೋವಾರಿ ಅವರ ವಿರುದ್ಧ ಅಖಿಲ್ ಕಣಕ್ಕೆ ಇಳಿದಿದ್ದರು.

ಅಹೋಂ ರಾಜಮನೆತದನ ಮೂಲ ನೆಲೆಯಾದ ಶಿವಸಾಗರ ಕ್ಷೇತ್ರದಲ್ಲಿ, ಸಿಎಎಗೆ ಭಾರಿ ವಿರೋಧ ವ್ಯಕ್ತವಾಗಿತ್ತು. ಈ ಕ್ಷೇತ್ರವು ಕಾಂಗ್ರೆಸ್‌ನ ಭದ್ರ ಕೋಟೆಯೂ ಆಗಿತ್ತು. ಸಿಎಎ ವಿರುದ್ಧ ಇಲ್ಲಿ ಪ್ರತಿಭಟನೆ ಸಂಘಟಿಸಿದವರಲ್ಲಿ ಅಖಿಲ್ ಗೊಗೊಯಿ ಮೊದಲಿಗರು. ಈ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ ಕಾರಣ, ಅಖಿಲ್ ಅವರನ್ನು ಬಂಧಿಸಲಾಗಿತ್ತು. ದೇಶದ್ರೋಹದ ಪ್ರಕರಣದಲ್ಲಿ ಅವರನ್ನು ಜೈಲಿಗೆ ಹಾಕಲಾಗಿತ್ತು.

ಜೈಲಿನಲ್ಲಿ ಇದ್ದುಕೊಂಡೇ ಸಿಎಎ ಮತ್ತು ಎನ್‌ಆರ್‌ಸಿ ವಿರುದ್ಧ ತಮ್ಮ ಹೋರಾಟವನ್ನು ಅಖಿಲ್ ಮುಂದುವರಿಸಿದ್ದರು. 2020ರ ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ಅವರು ರಾಜೌರಿ ದಳವನ್ನು ಸ್ಥಾಪಿಸಿದರು. ಪಕ್ಷದ ಅಭ್ಯರ್ಥಿಗಳು ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಪಕ್ಷದ ಬೇರೆ ಅಭ್ಯರ್ಥಿಗಳು ಈ ಚುನಾವಣೆಯಲ್ಲಿ ಗೆಲುವು ಸಾಧಿಸಿಲ್ಲ.

'ಅಖಿಲ್ ಗೊಗೊಯಿ ಅವರು, ಸಿಎಎ ವಿರುದ್ಧದ ಹೋರಾಟದ ಪ್ರತೀಕವಾಗಿದ್ದಾರೆ. ನಮ್ಮ ಪಕ್ಷದಿಂದ ಅಖಿಲ್ ಮಾತ್ರವೇ ಗೆದ್ದಿದ್ದಾರೆ. ಅಸ್ಸಾಮಿ ಜನರ ಸಂಸ್ಕೃತಿ ಮತ್ತು ಸ್ವಾತಂತ್ರ್ಯವನ್ನು ಕಾಪಾಡಲು ಅವರು ಹೋರಾಡುತ್ತಾರೆ' ಎಂದು ರಾಜೌರಿ ದಳವು ಹೇಳಿದೆ.

ಅಖಿಲ್ ಗೊಗೊಯಿ

❦ ಸುಭಾಷಿತ ❦
ಭರವಸೆ ಮತ್ತು ಹತಾಶೆಯ ನಡುವೆ ನೀವು ಸಮಂಜಸವಾದ ರೀತಿಯಲ್ಲಿ ಸಮತೋಲನವನ್ನು ಕಾಯ್ದುಕೊಳ್ಳಬೇಕು.
–ರೋಹಿಂಟನ್ ಮಿಸ್ತ್ರಿ

ಪ್ರಾದೇಶಿಕ ಪಕ್ಷಗಳ ಗೆಲುವು ಹೇಳುತ್ತಿರುವ ಪಾಠಗಳು ಹಲವು

ತೀವ್ರ ಕುತೂಹಲ ಕೆರಳಿಸಿದ್ದ ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಗಿದೆ. ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳದಲ್ಲಿ ಆಡಳಿತಾರೂಢ ಪಕ್ಷಗಳೇ ಗೆಲುವಿನ ನಗೆಬೀರಿವೆ. ತಮಿಳುನಾಡಿನಲ್ಲಿ ಎಐಎಡಿಎಂಕೆ ಅಧಿಕಾರ ಕಳೆದುಕೊಂಡಿದೆ. ಡಿಎಂಕೆ ಹತ್ತು ವರ್ಷಗಳ ನಂತರ ಸರ್ಕಾರ ರಚಿಸಲಿದೆ. ಪುದುಚೇರಿಯಲ್ಲಿ ಮಾಜಿ ಮುಖ್ಯಮಂತ್ರಿ ಎನ್.ರಂಗಸ್ವಾಮಿ ನೇತೃತ್ವದ ಮೈತ್ರಿಕೂಟವು ಮೇಲುಗೈ ಸಾಧಿಸಿದೆ. ತೀವ್ರ ಸೆಣಸಾಟ ಮತ್ತು ರಾಜಕೀಯ ಜಿದ್ದಿಗೆ ಸಾಕ್ಷಿಯಾಗಿದ್ದ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹ್ಯಾಟ್ರಿಕ್ ಜಯ ಸಾಧಿಸಿದೆ. ಕೋಮು ಧ್ರುವೀಕರಣದ ಮೂಲಕವೇ ವಿಧಾನಸಭೆಯನ್ನು ಗೆದ್ದುಕೊಳ್ಳಲು ಯತ್ನಿಸಿದ ಬಿಜೆಪಿಯ ತಂತ್ರಗಾರಿಕೆ ಸೋತಿದೆ. ಕಾಂಗ್ರೆಸ್ ಹಾಗೂ ದಶಕಗಳ ಕಾಲ ಆಳ್ವಿಕೆ ನಡೆಸಿದ್ದ ಎಡರಂಗ ಮಣ್ಣುಮುಕ್ಕಿವೆ. ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯಲೇಬೇಕು ಎಂಬ ಒಂದೇ ಉದ್ದೇಶದಿಂದ ತನ್ನ ಬತ್ತಳಿಕೆಯಲ್ಲಿ ಇದ್ದ ಎಲ್ಲ ಅಸ್ತ್ರಗಳನ್ನೂ ಬಳಸಿಕೊಂಡ ಬಿಜೆಪಿ, ಆ ರಾಜ್ಯದ ಅಂತಃಸತ್ವವನ್ನು ಅರಿಯಲು ಆಗಲಿಲ್ಲ ಎಂಬುದು ಸತ್ಯ. 2019ರ ಲೋಕಸಭಾ ಚುನಾವಣೆಯಲ್ಲಿ ಸಿಕ್ಕ ಅನಿರೀಕ್ಷಿತ ಜಯದ ಉಮೇದಿನಲ್ಲಿ ವಿಧಾನಸಭೆಯೂ ಸುಲಭದ ತುತ್ತು ಎಂದು ಭಾವಿಸಿದ್ದ ಬಿಜೆಪಿ ವರಿಷ್ಠರು, ಸ್ಥಳೀಯ ನಾಯಕತ್ವದ ಮಹತ್ವ ಅರಿಯಲು ಬಂಗಾಳದ ಈ ಫಲಿತಾಂಶವನ್ನು ಅವಲೋಕಿಸಬಹುದು. ಖುದ್ದು ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರು ಹತ್ತಾರು ರ್‍ಯಾಲಿಗಳನ್ನು ನಡೆಸಿ, ಮಮತಾ ಅವರನ್ನು ಲೇವಡಿ ಮಾಡಿದ್ದರು, ರಾಜಕೀಯ ಶಿಷ್ಟಾಚಾರಗಳ ಮಿತಿಯನ್ನು ಮೀರಿದ್ದರು. ಸ್ಥಳೀಯರು ಮತ್ತು ಹೊರಗಿನವರು ಎಂಬುದು ಅಲ್ಲಿ ಪ್ರಮುಖ ಚುನಾವಣಾ ವಿಷಯವಾಯಿತು. ಕಾಲಿಗೆ ಪೆಟ್ಟಾದರೂ ಧೃತಿಗೆಡದೆ ಹೋರಾಟ ನಡೆಸಿದ ಮಮತಾ ಅವರ ಕೆಚ್ಚು ಈಗಿನ ಫಲಿತಾಂಶದ ರೂಪದಲ್ಲಿ ವ್ಯಕ್ತವಾಗಿದೆ. ಚುನಾವಣೆ ಹೊಸ್ತಿಲಲ್ಲಿ ಇದ್ದಾಗ ಟಿಎಂಸಿಯ ವರ್ಚಸ್ವಿ ನಾಯಕರನ್ನು ಸೆಳೆದುಕೊಂಡು ಅಧಿಕಾರ ಹಿಡಿಯುವ ಬಿಜೆಪಿ ಪ್ರಯತ್ನಕ್ಕೆ ನಿರೀಕ್ಷಿತ ಫಲ ದೊರೆತಿಲ್ಲ. ಆದರೆ, ಪ್ರಧಾನ ಪ್ರತಿಪಕ್ಷವಾಗಿ ಹೊರಹೊಮ್ಮಿರುವುದು ಕಡಿಮೆ ಸಾಧನೆಯಲ್ಲ. 2011ರವರೆಗೂ ಪಶ್ಚಿಮ ಬಂಗಾಳದ ರಾಜಕೀಯ ಭೂಪಟದಲ್ಲಿ ಮಹತ್ವದ ಸ್ಥಾನ ಹೊಂದಿದ್ದ ಎಡಪಕ್ಷಗಳು ಹಾಗೂ ಕಾಂಗ್ರೆಸ್ ಈಗ ನೆಲಕಚ್ಚಿದ್ದು, ಅವು ತಮ್ಮ ಅಸ್ತಿತ್ವದ ಮರುಶೋಧಕ್ಕೆ ಅಣಿಯಾಗಬೇಕಿದೆ. ತಮಿಳುನಾಡಿನಲ್ಲಿ ಡಿಎಂಕೆ ಜತೆಗಿನ ಸ್ನೇಹ ಕಾಂಗ್ರೆಸ್‌ಗೆ ಒಂದಿಷ್ಟು ಸೀಟು ನೀಡಿದೆ. ಪುದುಚೇರಿಯಲ್ಲಿ ಮೈತ್ರಿಯು ಪ್ರಯೋಜನಕ್ಕೆ ಬಂದಿಲ್ಲ.

ಗಟ್ಟಿಯಾದ ಪ್ರಾದೇಶಿಕ ಪಕ್ಷಗಳು ಹಾಗೂ ಬಿಜೆಪಿಯ ಹಿಂದುತ್ವವಾದಕ್ಕೆ ಪರ್ಯಾಯವಾಗಿ ಬಲಿಷ್ಠ ಸಂಕಥನಗಳನ್ನು ಕಟ್ಟುವ ನಾಯಕರು ಇರುವಲ್ಲಿ, ಬಿಜೆಪಿಯ ರಾಜಕೀಯ ಆಟ ನಡೆಯುವುದಿಲ್ಲ ಎಂಬುದನ್ನು ಈ ಚುನಾವಣೆ ಮತ್ತೊಮ್ಮೆ ಸಾಬೀತುಪಡಿಸಿದೆ

ಬಿಜೆಪಿಯ ಹಿಂದುತ್ವದ ರಾಜಕಾರಣಕ್ಕೆ ತಮಿಳುನಾಡು ಯಾವಾಗಲೂ ಸವಾಲಾಗಿದೆ. ಅದಕ್ಕೆ ಕಾರಣ ಅಲ್ಲಿನ ದ್ರಾವಿಡ ಚಳವಳಿಯ ಶಕ್ತಿ. ಎಂ.ಕರುಣಾನಿಧಿ ಮತ್ತು ಜೆ.ಜಯಲಲಿತಾ ನಂತರದ ಈ ಕಾಲಘಟ್ಟದಲ್ಲಿ ಅಲ್ಲಿ ಎಐಎಡಿಎಂಕೆ ಜೊತೆ ಕೈಜೋಡಿಸಿದ ಬಿಜೆಪಿ, ನೆಲೆ ವಿಸ್ತರಿಸಿಕೊಳ್ಳಲು ಪ್ರಯತ್ನಿಸಿತು. ಆದರೆ, ಈ ಪ್ರಯೋಗ ಫಲಿಸಿಲ್ಲ. ಎಐಎಡಿಎಂಕೆಯ ಸೋಲಿನ ಹಿಂದೆ ಸತತ ಎರಡು ಅವಧಿಯ ಆಡಳಿತ ವಿರೋಧಿ ಅಲೆ ಹಾಗೂ ಜಯಲಲಿತಾ ಅವರ ಅನುಪಸ್ಥಿತಿ ಕೆಲಸ ಮಾಡಿರಬಹುದು. ದಶಕಗಳ ಕಾಲ ತಂದೆಯ ನೆರಳಿನಲ್ಲಿ ಕೆಲಸ ಮಾಡಿದ ಎಂ.ಕೆ.ಸ್ಟಾಲಿನ್, ಡಿಎಂಕೆಗೆ ಗೆಲುವು ತಂದುಕೊಟ್ಟು, ತಮ್ಮ ರಾಜಕೀಯ ಭವಿಷ್ಯ ಭದ್ರಪಡಿಸಿಕೊಂಡಿದ್ದಾರೆ. ಕೇರಳದಲ್ಲಿ ನಾಲ್ಕು ದಶಕಗಳ ಸಂಪ್ರದಾಯವನ್ನು ಮುರಿದಿರುವ ಮತದಾರರು, ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್‌ಗೆ ಸತತ ಎರಡನೆಯ ಬಾರಿ ಸರ್ಕಾರ ರಚಿಸುವ ಅವಕಾಶ ನೀಡಿದ್ದಾರೆ. ಪ್ರವಾಹ ಪರಿಸ್ಥಿತಿ ನಿಭಾಯಿಸಿದ ಪರಿ, ಜಗತ್ತೇ ಮೆಚ್ಚುವಂತೆ ಕೋವಿಡ್–19 ಸಾಂಕ್ರಾಮಿಕವನ್ನು ನಿರ್ವಹಿಸಿದ ರೀತಿಯನ್ನು ಜನ ಮೆಚ್ಚಿಕೊಂಡಿರಬಹುದು. ಶಬರಿಮಲೆ ಪ್ರಕರಣವನ್ನು ಮುಂದಿಟ್ಟುಕೊಂಡು ಹಿಂದುತ್ವದ ಅಲೆ ಸೃಷ್ಟಿಸಲು ಯತ್ನಿಸಿದ ಬಿಜೆಪಿಗೆ ಕೇರಳದಲ್ಲಿ ಯಶಸ್ಸು ಸಿಕ್ಕಿಲ್ಲ. ಇದ್ದ ಒಂದು ಸ್ಥಾನವನ್ನೂ ಕಳೆದುಕೊಂಡಿದೆ. ಈ ಬಗೆಯ ರಾಜಕಾರಣಕ್ಕೆ ಕೇರಳದಲ್ಲಿ ಅವಕಾಶವಿಲ್ಲ ಎಂಬ ಸಂದೇಶ ರವಾನೆಯಾಗಿದೆ. ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರ ತುರುಸಿನ ಪ್ರಚಾರದ ನಡುವೆಯೂ ಕಾಂಗ್ರೆಸ್ ಹಿನ್ನಡೆ ಅನುಭವಿಸಿದೆ. ಅಸ್ಸಾಂ ರಾಜ್ಯದಲ್ಲಿ ಸಿಎಎ ಅಥವಾ ಎನ್‌ಆರ್‌ಸಿ ಚಳವಳಿಯು ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂಬುದನ್ನು ಫಲಿತಾಂಶ ತೋರಿಸಿದೆ. ಅಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಂಡಿದೆ. ಈ ಚಳವಳಿಯನ್ನು ನಂಬಿಕೊಂಡು ಕಾಂಗ್ರೆಸ್ ಮಾಡಿಕೊಂಡಿದ್ದ ಮೈತ್ರಿಯಿಂದ ಅದಕ್ಕೇನೂ ಅನುಕೂಲವಾಗಿಲ್ಲ. ಗಟ್ಟಿಯಾದ ಪ್ರಾದೇಶಿಕ ಪಕ್ಷಗಳು ಹಾಗೂ ಬಿಜೆಪಿಯ ಹಿಂದುತ್ವವಾದಕ್ಕೆ ಪರ್ಯಾಯವಾಗಿ ಬಲಿಷ್ಠ ಸಂಕಥನಗಳನ್ನು ಕಟ್ಟುವ ನಾಯಕರು ಇರುವಲ್ಲಿ ಬಿಜೆಪಿಯ ರಾಜಕೀಯ ಆಟ ನಡೆಯುವುದಿಲ್ಲ ಎಂಬುದನ್ನು ಈ ಚುನಾವಣೆ ಮತ್ತೊಮ್ಮೆ ಸಾಬೀತುಪಡಿಸಿದೆ.

ದಿನದ ಟ್ವೀಟ್

ಸರ್ವಸಮ್ಮತ ಅನುಮೋದನೆಯಲ್ಲ

ಚುನಾವಣೆಯಲ್ಲಿ ಗೆದ್ದ ಯಾವುದೇ ರಾಜಕೀಯ ಪಕ್ಷವು ಈ ವಿಜಯವನ್ನು ತನಗೆ ದೊರೆತ ಸರ್ವಸಮ್ಮತ ಅನುಮೋದನೆ ಎಂದುಕೊಳ್ಳಬಾರದು. ಸರ್ಕಾರಗಳ ನಿರ್ಲಕ್ಷ್ಯಕ್ಕೆ ನಾಗರಿಕರು ತಮ್ಮ ಜೀವ ಬಲಿಕೊಡುತ್ತಿದ್ದಾರೆ. ಯಾರೇ ಗೆದ್ದಿರಲಿ ಅವರು ನಿರ್ಗತಿಕ ಮತ್ತು ಅಸಹಾಯಕ ಸ್ಥಿತಿಯಲ್ಲಿರುವ ಜನರಿಗೆ ತುರ್ತಾಗಿ ಬೇಕಿರುವ ಆರೋಗ್ಯ ಸೇವೆಯನ್ನು ಒದಗಿಸಲು ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಬೇಕು.

ಸಾಗರಿಕಾ ಘೋಷ್, ಪತ್ರಕರ್ತೆ

25 ವರ್ಷಗಳ ಹಿಂದೆ

ಶುಕ್ರವಾರ, 3-5-1996

- **3 ರಾಜ್ಯಗಳಲ್ಲಿ ಹಿಂಸಾಚಾರ: ಗೋಲಿಬಾರ್, 10 ಸಾವು**

ನವದೆಹಲಿ, ಮೇ 2 (ಪಿಟಿಐ, ಯುಎನ್‌ಐ)– ಇಂದು ನಡೆದ ಎರಡನೇ ಸುತ್ತಿನ ಲೋಕಸಭಾ ಚುನಾವಣೆಯ ಮತದಾನದ ಸಂದರ್ಭದಲ್ಲಿ ಬಿಹಾರ, ಆಂಧ್ರ ಹಾಗೂ ಪಶ್ಚಿಮ ಬಂಗಾಳದಲ್ಲಿ ಬಾಂಬ್ ಸ್ಫೋಟ, ಮತಪತ್ರ, ಮತಪೆಟ್ಟಿಗೆ, ಚುನಾವಣಾ ಸಿಬ್ಬಂದಿ ಅಪಹರಣದ ನಡುವೆ ಭುಗಿಲೆದ್ದ ಹಿಂಸಾಚಾರದಲ್ಲಿ ಪೊಲೀಸ್ ಅಧಿಕಾರಿಗಳು ಸೇರಿ 10 ಮಂದಿ ಸತ್ತಿದ್ದಾರೆ. ಗುಂಪು ಘರ್ಷಣೆಗಳಲ್ಲಿ ನೂರಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ. ಹಲವೆಡೆ ನಕಲಿ ಮತದಾನ ನಡೆದಿದೆ.

ಚುನಾವಣಾ ಹಿಂಸಾಚಾರಕ್ಕೆ ಬಿಹಾರದಲ್ಲಿ ಪೊಲೀಸ್ ಅಧಿಕಾರಿ ಸೇರಿದಂತೆ 9 ಮಂದಿ ಹಾಗೂ ಆಂಧ್ರದಲ್ಲಿ ನಕ್ಸಲೀಯರು ಅಡಗಿಸಿದ್ದ ನೆಲ ಬಾಂಬ್ ಸ್ಫೋಟಿಸಿ ಪೊಲೀಸ್ ಅಧಿಕಾರಿಯೊಬ್ಬರು ಮೃತಪಟ್ಟಿದ್ದಾರೆ.

- **ನಕ್ಸಲೀಯರಿಂದ ಹಿಂಸಾಚಾರ: ಹತ್ಯೆ**

ಹೈದರಾಬಾದ್, ಮೇ 2 (ಯುಎನ್‌ಐ)– ಮತದಾನ ಬಹಿಷ್ಕಾರಕ್ಕೆ ಪೀಪಲ್ಸ್ ವಾರ್ ಗ್ರೂಪ್ ಕರೆ ನೀಡಿದ್ದ ಆಂಧ್ರ ಪ್ರದೇಶದ ಉತ್ತರ ತೆಲಂಗಾಣ ಪ್ರದೇಶದಲ್ಲಿ ಪ್ರದೇಶ ಚುನಾವಣಾಧಿಕಾರಿಗಳ ವಾಹನ ಚಾಲಕನ ಅಪಹರಣ, ಸಬ್‌ಇನ್‌ಸ್ಪೆಕ್ಟರ್ ಒಬ್ಬರ ಹತ್ಯೆಯೂ ಸೇರಿದಂತೆ ವ್ಯಾಪಕ ಹಿಂಸಾಚಾರ ನಡೆದಿದೆ.

50 ವರ್ಷಗಳ ಹಿಂದೆ

ಸೋಮವಾರ, 3-5-1971

- **ಡಾ. ಮಹಿಷಿಗೆ ಸ್ಟೇಟ್ ಸಚಿವ ಸ್ಥಾನಕ್ಕೆ ಬಡ್ತಿ: ಶಂಕರಾನಂದ್, ಮೊಹಿಸಿನ್ ಉಪ ಸಚಿವರು**

ನವದೆಹಲಿ, ಮೇ 2– ಕೇಂದ್ರದ ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಉಪಸಚಿವೆಯಾಗಿದ್ದ ಡಾ. ಸರೋಜಿನಿ ಮಹಿಷಿ ಅವರಿಗೆ ಸ್ಟೇಟ್ ಸಚಿವ ಸ್ಥಾನಕ್ಕೆ ಬಡ್ತಿ ನೀಡಲಾಗಿದೆ.

ಮೈಸೂರಿನ ಶ್ರೀ ಬಿ.ಶಂಕರಾನಂದ್ ಮತ್ತು ಶ್ರೀ ಎಫ್.ಎಚ್.ಮೊಹಿಸಿನ್ ಅವರೂ ಸೇರಿ ಒಟ್ಟು 18 ಮಂದಿ ಹೊಸಬರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಇವರಿಬ್ಬರಿಗೂ ಉಪಸಚಿವರ ಹುದ್ದೆ ನೀಡಲಾಗಿದೆ.

- **ವ್ಯವಸಾಯದಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಮೂರು ಅಧ್ಯಯನ ತಂಡಗಳ ಪ್ರವಾಸ**

ನವದೆಹಲಿ, ಮೇ 2– ಕೃಷಿ ದೃಷ್ಟಿಯಿಂದ ದೇಶದಲ್ಲಿ ಹಿಂದುಳಿದಿರುವ ಪ್ರದೇಶಗಳಲ್ಲಿ ಪ್ರವಾಸ ನಡೆಸಿ, ವ್ಯವಸಾಯ ಅಭಿವೃದ್ಧಿಯಲ್ಲಿನ ಅಸಮತೆಯನ್ನು ಹೋಗಲಾಡಿಸಲು ಪರಿಹಾರ ಸೂಚಿಸುವಂತೆ ಕಿಸಾನ್ ಸಂಸತ್ ಸದಸ್ಯರನ್ನೊಳಗೊಂಡ ಮೂರು ಅಧ್ಯಯನ ತಂಡಗಳನ್ನು ಆಯ್ಕೆ ಮಾಡಲಾಗಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ರೈತ ವಿಭಾಗ ಈ ನಿರ್ಧಾರ ಕೈಗೊಂಡಿದೆ.

ನದಿ ಸಂಪರ್ಕ ಯೋಜನೆಗಳು ತ್ವರಿತಗತಿಯಲ್ಲಿ ಮುನ್ನಡೆಯಲಿವೆಯೆಂದು ಸಂಭ್ರಮಿಸುವುದು ಅವಸರದ ನಡೆ

ವಿವಾದದ ಸುಳಿಯಲ್ಲಿ ನದಿ ಜೋಡಣೆ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಬೇಡ್ತಿ ಮತ್ತು ವರದಾ ನದಿ ಜೋಡಣೆಯ ಪ್ರಸ್ತಾವದ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲು ಮಾರ್ಚ್ 24ರಂದು ಶಿರಸಿಯಲ್ಲಿ ಪರಿಣತರು ಒಟ್ಟಾಗಿ ಸೇರಿದ್ದ ಸಮಯದಲ್ಲೇ ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯದ ಅಧಿಕಾರಿಗಳು ಸಂಭ್ರಮದ ಲಹರಿಯಲ್ಲಿದ್ದರು.

ಎರಡೇ ದಿನಗಳಷ್ಟು ಹಿಂದೆ, ಮಾರ್ಚ್ 22ರ ವಿಶ್ವ ಜಲ ದಿನಾಚರಣೆಯಂದು, ಜಲಶಕ್ತಿ ಸಚಿವಾಲಯದ ಸತತ ಪ್ರಯತ್ನದಿಂದ, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ಸರ್ಕಾರಗಳು ಕೆನ್ ಮತ್ತು ಬೆಟ್ವಾ ನದಿಗಳ ಜೋಡಣೆಯಿಂದ ದೊರೆಯುವ ನೀರಿನ ಹಂಚಿಕೆಯ ಒಪ್ಪಂದಕ್ಕೆ ಸಹಿ ಹಾಕಿದ್ದವು. ಸುಮಾರು ಎರಡು ದಶಕಗಳ ಕಾಲ ಕಗ್ಗಂಟಾಗಿದ್ದ ಈ ಸಮಸ್ಯೆ ಬಗೆಹರಿದಿದ್ದರಿಂದ, ಕೆನ್ ಮತ್ತು ಬೆಟ್ವಾ ನದಿಗಳ ಜೋಡಣೆಯ ಕಾಮಗಾರಿಗಳು ಪ್ರಾರಂಭವಾಗಿ, ದೇಶದ ಉಳಿದ 29 ನದಿಗಳ ತ್ವರಿತಗತಿಯ ಜೋಡಣೆಗೆ ಪ್ರೇರಣೆಯಾಗಲಿದೆ ಎಂಬ ನಿರೀಕ್ಷೆಯೇ ಸಂಭ್ರಮಕ್ಕೆ ಕಾರಣವಾಗಿತ್ತು.

ಕೆನ್ ಮತ್ತು ಬೆಟ್ವಾ, ಮಧ್ಯಪ್ರದೇಶ ಮತ್ತು ಉತ್ತರ-ಪ್ರದೇಶದ ಮೂಲಕ ಹರಿದು ಮುಂದೆ ಯಮುನೆಯನ್ನು ಸೇರುವ ಎರಡು ಮುಖ್ಯ ನದಿಗಳು. ಈ ನದಿಗಳನ್ನು ಜೋಡಿಸಿ, ಕೆನ್ ನದಿಯಲ್ಲಿರುವ ಹೆಚ್ಚುವರಿ ನೀರನ್ನು ಬೆಟ್ವಾಗೆ ವರ್ಗಾಯಿಸುವುದು ಯೋಜನೆಯ ಮುಖ್ಯ ಉದ್ದೇಶ. ನದಿ ಜೋಡಣೆ ಪೂರ್ಣಗೊಂಡ ನಂತರ, ಮಧ್ಯಪ್ರದೇಶದ 8.11 ಲಕ್ಷ ಹೆಕ್ಟೇರ್, ಉತ್ತರಪ್ರದೇಶದ 2.51 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರೆತು, ಎರಡೂ ರಾಜ್ಯಗಳ 62 ಲಕ್ಷ ಜನರಿಗೆ ಕುಡಿಯುವ ನೀರು ಲಭಿಸುವುದರೊಡನೆ, 103 ಮೆಗಾವಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಆಗಲಿದೆಯೆಂದು ಯೋಜನಾ ವರದಿ ತಿಳಿಸುತ್ತದೆ.

ಎರಡು ಹಂತಗಳಲ್ಲಿ ನಡೆಯಲಿರುವ ಈ ನದಿಗಳ ಜೋಡಣೆಯಲ್ಲಿ ಮಧ್ಯಪ್ರದೇಶದ ಚತ್ತಾರ್ಪುರ ಜಿಲ್ಲೆಯ ದೌಧನ್ ಹಳ್ಳಿಯ ಬಳಿ ಕೆನ್ ನದಿಗೆ ಅಡ್ಡವಾಗಿ 77 ಮೀಟರ್ ಎತ್ತರ ಮತ್ತು ಸುಮಾರು 2 ಕಿ.ಮೀ. ಅಗಲದ ಕಟ್ಟೆ ನಿರ್ಮಾಣವಾಗಲಿದೆ. ಅಲ್ಲಿಂದ 230 ಕಿ.ಮೀ. ಉದ್ದದ ಕಾಲುವೆಯ ಮೂಲಕ ನೀರನ್ನು ಬೆಟ್ವಾ ನದಿಗೆ ವರ್ಗಾಯಿಸಲಾಗುತ್ತದೆ. ದೌಧನ್ ಅಣೆಕಟ್ಟೆಯಿಂದ ಉಂಟಾಗುವ ಹಿನ್ನೀರಿನ ಜಲಾಶಯದಿಂದ 10 ಹಳ್ಳಿಗಳು ಮುಳುಗಡೆಯಾಗಲಿದ್ದು, 1,585 ಕುಟುಂಬಗಳ 10,000 ಜನರನ್ನು ಬೇರೆಡೆಗೆ ಸ್ಥಳಾಂತರಿಸಬೇಕಾಗುತ್ತದೆ. ಇದರೊಂದಿಗೆ ವಿಶ್ವವಿಖ್ಯಾತ ಪನ್ನಾ ಹುಲಿ ಸಂರಕ್ಷಣಾ ಯೋಜನಾ ಪ್ರದೇಶದ ಕೇಂದ್ರ ಭಾಗದ 4,400 ಹೆಕ್ಟೇರ್ ಪ್ರದೇಶವೂ ಜಲಾಶಯದ ನೀರಿನಲ್ಲಿ ಮುಳುಗುತ್ತದೆ.

ಈ ಯೋಜನೆಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಹೊತ್ತಿರುವ ನ್ಯಾಷನಲ್ ವಾಟರ್ ಡೆವಲಪ್‌ಮೆಂಟ್ ಏಜೆನ್ಸಿ, ಯೋಜನೆಗೆ ಸಂಬಂಧಿಸಿದಂತೆ 'ಪರಿಸರ ಪರಿಣಾಮ ಮೌಲ್ಯಮಾಪನಾ ವರದಿ'ಯನ್ನು (ಎನ್‌ವೈರನ್ಮೆಂಟ್ ಇಂಪ್ಯಾಕ್ಟ್ ಅಸೆಸ್‌ಮೆಂಟ್) ಸಿದ್ಧಪಡಿಸಿ, 2015ರಲ್ಲಿ ಅನುಮೋದನೆಗಾಗಿ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಸಲ್ಲಿಸಿತು. ಈ ವರದಿಯ ವಿರುದ್ಧ ತೀವ್ರ ವಿರೋಧಗಳಿದ್ದರೂ ಕೆಲವು ಬದಲಾವಣೆಗಳನ್ನು ಸೂಚಿಸಿದ ನಂತರ ಮಂಡಳಿಯು ಕೆನ್-ಬೆಟ್ವಾ ಯೋಜನೆಯ ಮೊದಲ ಹಂತಕ್ಕೆ ಅನುಮತಿ ನೀಡಿತು. ಆದರೆ ಮುಂಬೈ ಕನ್ಸರ್ವೇಷನ್ ಟ್ರಸ್ಟ್ ಈ ಅನುಮೋದನೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು.

ನ್ಯಾಯಾಲಯದ ನಿರ್ದೇಶನದಂತೆ, ಸುಪ್ರೀಂ ಕೋರ್ಟ್‌ನ 'ಸೆಂಟ್ರಲ್ ಎಂಪವರ್ಡ್ ಕಮಿಟಿ' ಈ ಅರ್ಜಿಯ ಕೂಲಂಕಷವಾದ ವಿಚಾರಣೆ ನಡೆಸಿ, 2019ರ ಆಗಸ್ಟ್ 30ರಂದು ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿದೆ. ಪರಿಸರ ಪರಿಣಾಮ ಮೌಲ್ಯಮಾಪನದಲ್ಲಿನ ತಪ್ಪುಗಳು, ಕೊರತೆಗಳು, ಪರಿಶೀಲಿಸದೇ ಕೈಬಿಟ್ಟಿರುವ ವಿಷಯಗಳು, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅವಸರದ ನಿರ್ಧಾರಗಳು ಮುಂತಾದವುಗಳನ್ನು ವರದಿ ಎಳೆಎಳೆಯಾಗಿ ಬಿಚ್ಚಿ ತೋರಿಸಿದೆ.

ಕೆನ್ ನದಿ ಹಾಗೂ ಅದರ ಜಲಾನಯನ ಪ್ರದೇಶದಲ್ಲಿ ಹೆಚ್ಚುವರಿ ನೀರಿದೆ ಎಂಬ ಮೂಲಭೂತ ಅಂಶವನ್ನೇ ಕಮಿಟಿ ಮೊದಲು ಪ್ರಶ್ನಿಸಿದೆ. ನದಿ ಜೋಡಣೆಯ ಮೊದಲ ಹಂತದಿಂದ ದೊರೆಯುತ್ತದೆ ಎಂದು ವರದಿ ತಿಳಿಸುವ ಬಹುತೇಕ ಪ್ರಯೋಜನಗಳು, ಅದೇ ಪ್ರದೇಶದಲ್ಲಿನ ಬೇರೆ ಬೇರೆ ಯೋಜನೆಗಳಿಂದ ಈಗಾಗಲೇ ದೊರೆಯುತ್ತಿವೆ ಎಂಬ ಅಂಶದತ್ತ ಗಮನ ಸೆಳೆಯುವ ಈ ಸಮಿತಿಯ ವರದಿ, ನೀರಿನ ಸಂರಕ್ಷಣೆಗಿರುವ ಹತ್ತು ಹಲವಾರು ಮಾರ್ಗಗಳನ್ನು ಉದಾಹರಿಸಿ, ಅವುಗಳನ್ನು ಯೋಜನೆಯ ಬದಲಿಗೆ ಪರ್ಯಾಯ ಉಪಾಯಗಳಾಗಿ ಪರಿಶೀಲಿಸದಿರುವುದಕ್ಕೆ ಕಾರಣಗಳನ್ನು ಕೇಳಿದೆ.

ಪನ್ನಾ ಹುಲಿ ಸಂರಕ್ಷಣಾ ಪ್ರದೇಶದ ಕೇಂದ್ರ ಭಾಗದ 4,400 ಹೆಕ್ಟೇರ್ ಪ್ರದೇಶ ಮುಳುಗಡೆಯಾಗಿ ಅಲ್ಲಿನ 50ಕ್ಕೂ ಹೆಚ್ಚಿನ ಹುಲಿಗಳಿಗೆ ಹಾಗೂ ಇತರ ಜೀವಿಗಳಿಗೆ ಆಗುವ ತೊಂದರೆಗಳನ್ನು ವನ್ಯಜೀವಿ ಮಂಡಳಿ ಗಂಭೀರವಾಗಿ ಪರಿಗಣಿಸಿಯೇ ಇಲ್ಲವೆಂದು ಖಾರವಾಗಿ ಪ್ರತಿಕ್ರಿಯಿಸಿದೆ. ಅಷ್ಟೇ ಅಲ್ಲ, ದೌಧನ್ ಅಣೆಕಟ್ಟೆಯ ಕೆಳಭಾಗದಲ್ಲಿರುವ ಘರಿಯಾಲ್ ವನ್ಯಧಾಮ ಮತ್ತು ಅಪರೂಪದ ರಣಹದ್ದು ಪ್ರಭೇದಗಳಿಗೆ ತಾಣವಾಗಿರುವ ಪ್ರದೇಶದ ಬಗ್ಗೆ ಮಂಡಳಿ ಯಾವ ಕಾಳಜಿಯನ್ನೂ ತೋರಿಲ್ಲವೆಂಬ ಅಂಶವನ್ನೂ ಪ್ರಸ್ತಾಪಿಸಿದೆ.

ಪನ್ನಾ ಕೇವಲ ಹುಲಿ ಸಂರಕ್ಷಣಾ ಪ್ರದೇಶವಲ್ಲ. ಅದು ಪನ್ನಾ ರಾಷ್ಟ್ರೀಯ ಉದ್ಯಾನವನ. ಈ ಪ್ರದೇಶದಲ್ಲಿ

ಹರಿಯುವಾಗ ಕೆನ್ ನದಿ 60 ಕಿ.ಮೀ. ಉದ್ದ, 150ರಿಂದ 180 ಕಿ.ಮೀ. ಆಳದ ಕಮರಿಯನ್ನು ಸೃಷ್ಟಿಸಿದೆ. ನದಿಯ ಎರಡೂ ಪಕ್ಕಗಳಲ್ಲಿರುವ ಕೋಡುಗಲ್ಲುಗಳು, ಇಳಿಜಾರು ಬಂಡೆಗಳು, ಅನೇಕ ಜಲಪಾತಗಳು ಇಲ್ಲಿ ವಿಶಿಷ್ಟವಾದ ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿಗೆ ಆಶ್ರಯ ನೀಡಿವೆ. ಹುಲಿಯ ಜೊತೆಗೆ ಅಲ್ಲಿನ ಪರಿಸರ, ಜೀವಜಾಲದ ಭಾಗವಾದ ಈ ಎಲ್ಲವನ್ನೂ ಸಂರಕ್ಷಿಸಬೇಕು. ಅದೇ ರಾಷ್ಟ್ರೀಯ ಉದ್ಯಾನದ ಪರಿಕಲ್ಪನೆ. ಆದರೆ ಮಂಡಳಿ ಇಂತಹ ಸಮಗ್ರ ದೃಷ್ಟಿಯನ್ನು ತೋರದೇ ಯೋಜನೆಗೆ ಅನುಮತಿ ನೀಡಿರುವುದನ್ನು ಕಮಿಟಿ ಎತ್ತಿ ತೋರಿದೆ.

ನದಿ ಸಂಪರ್ಕ ಯೋಜನೆಯ ವೆಚ್ಚ- ಲಾಭ ವಿಶ್ಲೇಷಣೆಯಲ್ಲಿ, ವೆಚ್ಚದಡಿಯಲ್ಲಿ ಬರಬೇಕಾದ ಹಲವಾರು ಅಂಶಗಳನ್ನು ಕೈಬಿಟ್ಟಿರುವುದನ್ನು ಎತ್ತಿ ತೋರಿರುವ ವರದಿ, ಒಟ್ಟಾರೆಯಾಗಿ ಯೋಜನೆಯಿಂದ ದೊರೆಯುವ ಲಾಭಕ್ಕಿಂತ ವೆಚ್ಚವೇ ಹೆಚ್ಚು ಎಂಬ ನಿರ್ಧಾರಕ್ಕೆ ಬಂದಿದೆ. ಈ ವರದಿ ಈಗ ಸುಪ್ರೀಂ ಕೋರ್ಟ್ ಮುಂದಿದ್ದು ಅದರ ಪರಿಶೀಲನೆಗೆ ಬರಬೇಕಾಗಿದೆ.

ಕೆನ್-ಬೆಟ್ವಾ ಯೋಜನೆ ಕಾರ್ಯಗತವಾಗಲು ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ಸಚಿವಾಲಯದ ಅನುಮೋದನೆಯೂ ಬೇಕು. ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಗೆ ಈ ಅನುಮೋದನೆ 2017ರ ಆಗಸ್ಟ್‌ನಲ್ಲಿ ದೊರೆಯಿತು. ಅದೇ ವರ್ಷ ಅಕ್ಟೋಬರ್‌ನಲ್ಲಿ ಈ ಅನುಮೋದನೆಯನ್ನು, 'ಸೌತ್ ಏಷ್ಯಾ ನೆಟ್‌ವರ್ಕ್ ಆನ್ ಡ್ಯಾಮ್ಸ್, ರಿವರ್ಸ್ ಅಂಡ್ ಪೀಪಲ್' ಸಂಸ್ಥೆಯ ಸಂಚಾಲಕ ಹಿಮಾಂಶು ಥಕ್ಕರ್ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯಲ್ಲಿ ಪ್ರಶ್ನಿಸಿದರು. ಈ ಅನುಮೋದನೆಯನ್ನು ಅಸಮರ್ಪಕವಾದ, ಅಪೂರ್ಣವಾದ, ಮಾಹಿತಿಯನ್ನು ಮುಚ್ಚಿಟ್ಟಿರುವ, ದಾರಿ ತಪ್ಪಿಸುವ ಅಂಶಗಳಿರುವ ಪರಿಸರ ಪರಿಣಾಮ ಮೌಲ್ಯಮಾಪನಾ ವರದಿಯ ಮೂಲಕ ಪಡೆಯಲಾಗಿದೆ ಎಂದು ಹಿಮಾಂಶು ಥಕ್ಕರ್ ತಮ್ಮ ಅರ್ಜಿಯಲ್ಲಿ ನಮೂದಿಸಿದ್ದಾರೆ.

ಆ ವರದಿಯನ್ನು ಪರಿಶೀಲಿಸಿದ ಸಚಿವಾಲಯದ 'ಫಾರೆಸ್ಟ್ ಅಡ್ವೈಸರಿ ಕಮಿಟಿ' ತನ್ನ ಅಂತಿಮ ಶಿಫಾರಸಿನಲ್ಲಿ 'ದೀರ್ಘಾವಧಿಯಲ್ಲಿ, ಕೆನ್-ಬೆಟ್ವಾ ಯೋಜನೆಯಿಂದ ವನ್ಯಜೀವಿಗಳಿಗಾಗಲೀ ಅಲ್ಲಿನ ಜನರಿಗಾಗಲೀ ಪ್ರಯೋಜನವಾಗುವುದಿಲ್ಲ. ಲಾಭಕ್ಕಿಂತ ವೆಚ್ಚವೇ ಹೆಚ್ಚಾಗುವುದರಿಂದ ಯೋಜನೆ ಕಾರ್ಯಸಾಧುವಲ್ಲ. ಹೀಗಾಗಿ ಯೋಜನೆಯನ್ನು ಕೈಬಿಡುವುದೇ ಮೇಲು' ಎಂಬ ಸಲಹೆಯನ್ನು ಕೊಟ್ಟಿದ್ದರೂ ಅದನ್ನು ಪರಿಗಣಿಸಿಲ್ಲ ಎಂಬ ಅಂಶ ಅರ್ಜಿಯಲ್ಲಿದೆ.

ಒಟ್ಟಾರೆಯಾಗಿ, ಕೆನ್-ಬೆಟ್ವಾ ಯೋಜನೆ ಕಾರ್ಯಗತವಾಗಬೇಕಾದರೆ ಸುಪ್ರೀಂ ಕೋರ್ಟ್ ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮುಂದೆ ಇರುವ ಎರಡು ಪ್ರಕರಣಗಳು ಇತ್ಯರ್ಥವಾಗಬೇಕು. ಯೋಜನೆಗೆ ಅನುಮೋದನೆ ನೀಡಿರುವ ಪ್ರಕ್ರಿಯೆ, ಅನುಸರಿಸಿರುವ ವಿಧಾನ, ಮೂಲಭೂತವಾಗಿ ಪರಿಸರ ಪರಿಣಾಮ ಮೌಲ್ಯಮಾಪನೆಯಲ್ಲಿರುವ ತಪ್ಪುಗಳು, ಉಲ್ಲಂಘನೆಯಾಗಿರುವ ಹಲವಾರು ನಿಯಮಗಳು, ಪರಿಣತರ ಅಭಿಪ್ರಾಯಗಳನ್ನು ಕಡೆಗಣಿಸಿರುವ ರೀತಿ ಮುಂತಾದವುಗಳೆಲ್ಲವನ್ನೂ ನ್ಯಾಯಾಲಯ ಪರಿಶೀಲಿಸಲಿದೆ. ಈ ಅಡೆತಡೆಗಳನ್ನು ದಾಟುವ ಮೊದಲೇ, ಕೆನ್-ಬೆಟ್ವಾ ಸೇರಿದಂತೆ ಉಳಿದೆಲ್ಲ ನದಿ ಸಂಪರ್ಕ ಯೋಜನೆಗಳು ತ್ವರಿತಗತಿಯಲ್ಲಿ ಮುನ್ನಡೆಯಲಿವೆಯೆಂದು ಸಂಭ್ರಮಿಸುವುದು ಬಹಳ ಅವಸರದ ನಡೆ ಎಂಬುದು ಪರಿಣತರ ಅಭಿಪ್ರಾಯ.

ಚುರುಮುರಿ

ವೀರನಾಲಿಗೆಗಳು

• ಸುಮಂಗಲಾ

ಕೊರೊನಾ ಹೆಮ್ಮಾರಿಯ ಅಬ್ಬರದಲ್ಲಿ ಬಸವಳಿದ ಭರತಮಾತೆಗೆ ಕಳೆದ ವಾರ ಪಾಕಿಸ್ತಾನ, ಇದೀಗ ಚೀನಾ ಕೂಡ ಸಹಾಯಹಸ್ತ ಚಾಚಿದ್ದನ್ನು ಅರಗಿಸಿಕೊಳ್ಳಲಾರದೇ ವಿಶ್ವಗುರುಗಳು ಚಿಂತಾಕ್ರಾಂತರಾಗಿದ್ದರು.

ಆತ್ಮನಿರ್ಭರ ಭಾರತವು ಹೀಗೆ ವ್ಯಾಕ್ಸೀನು, ರೆಮ್‌ಡಿಸಿವಿರ್, ಆಮ್ಲಜನಕದ ಅಗಾಧ ಕೊರತೆಯಿಂದ ಬಳಲುತ್ತ ಆತ್ಮಬರ್ಬರವಾಗುವುದೇ...

ಅಕಟಕಟಾ ಎನ್ನುತ್ತ ಗಡ್ಡವನ್ನು ನೀವಿಕೊಳ್ಳುತ್ತ ಕುಳಿತಿರಲಾಗಿ, ಈ ವರ್ಷದ ಪರಮ ವೀರನಾಲಿಗೆ ಚಕ್ರ ಪ್ರಶಸ್ತಿಗೆ ನಾಮಕರಣಗೊಂಡವರ ಪಟ್ಟಿಯನ್ನು ಶಾಣಕ್ಯರು ವಿಶ್ವಗುರುಗಳ ಮುಂದಿಟ್ಟರು.

ಟಿ.ವಿಯಲ್ಲಿ ಲಂಗುಲಗಾಮಿಲ್ಲದೆ ವದರುವ ಪುಂಗಿ ಆ್ಯಂಕರ್‌ಗಳು, ಕೊರೊನಾ ಯಾರಿಂದ ಬಂತು, ಹೇಗೆ ಓಡಿಸುವುದೆಂದು ಬಾಯಿಗೆ ಬಂದಂತೆ ಗಳಹುವ ರಾಜಕಾರಣಿಗಳು, ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯದ ತಜ್ಞರು, ಹೀಗೆ ಹಲವು ಕ್ಷೇತ್ರಗಳಿಂದ ಆಯ್ದ ಹೆಸರುಗಳನ್ನು ಪರಿಶೀಲಿಸಿ, ಅಂತಿಮ ಸುತ್ತಿನಲ್ಲಿ ಇಬ್ಬರ ಹೆಸರುಗಳಿದ್ದವು.

ಎರಡೂ ಹೆಸರುಗಳು ಕರುನಾಡಿನಿಂದ. ಆಪರೇಷನ್ ಕಮಲದ ನಂತರ ಎಷ್ಟೆಲ್ಲ ಸರ್ವಾಂಗೀಣ ಅಭಿವೃದ್ಧಿಯಾಗಿದೆ ಎಂದು ಅಚ್ಚರಿಗೊಳ್ಳುತ್ತ, ವಿಶ್ವಗುರುಗಳು ಪಟ್ಟಿಯಲ್ಲಿದ್ದ ನಾಲಿಗೆನಾಮಗಳ ಸಾಧನೆಯನ್ನು ನೋಡಿದರು. 'ಪಡಿತರ ಅಕ್ಕಿ ಸಾಲುವುದಿಲ್ಲ, ನಾವೇನು ಸಾಯುವುದೇ' ಎಂದು ಅಳಲು ತೋಡಿಕೊಂಡ ಪ್ರಜೆಯೊಬ್ಬರಿಗೆ ಸಚಿವರ ನಾಲಿಗೆಯು 'ಸತ್ತರೇ ಒಳ್ಳೆಯದು' ಎಂದು ಫಟಾಫಟ್ ಉತ್ತರಿಸಿತ್ತು.

ಮಾಜಿ ಸಂಸದರೊಬ್ಬರ ನಾಲಿಗೆಯು 'ಜನರಿಗೆ ಪಡಿತರ ಅಕ್ಕಿ ಕೊಡುವುದರಿಂದ, ಹರಾಮದ ಅಕ್ಕಿ ತಿನ್ನುತ್ತ ಕೆಲಸಕ್ಕೆ ಬರುತ್ತಿಲ್ಲ' ಎಂಬ ಭಯಂಕರ ಹೇಳಿಕೆ ನೀಡಿ, ಸಚಿವರೊಂದಿಗೆ ಮೊದಲ ಸ್ಥಾನಕ್ಕೆ ಪೈಪೋಟಿ ಒಡ್ಡಿತ್ತು.

ಈ ಮಾಜಿ ಸಂಸದರಿಗೆ ಪರಮ ವೀರನಾಲಿಗೆ ಚಕ್ರ ಪ್ರಶಸ್ತಿ ಮತ್ತು ಸಚಿವರಿಗೆ ವೀರನಾಲಿಗೆ ಚಕ್ರ ಪ್ರಶಸ್ತಿಯನ್ನು ನೀಡುವಂತೆ ಆಜ್ಞಾಪಿಸಿದ ವಿಶ್ವಗುರುಗಳು, ನಾಲಿಗೆ ಜಾರಿದ ಮಾತುಗಳಿಗೆ ಬೇಸರ ವ್ಯಕ್ತಪಡಿಸಿ ಎಂದು ಮುಖ್ಯಮಂತ್ರಿಗೆ ಕಿವಿಮಾತು ಹೇಳಿದರು!

ಸಂಗತ

ಕೇಳುತ್ತಿದೆಯೇ ಗಣಿಯಾಳದವರ ಮನದಾಳ?

ಸರ್ಕಾರಗಳ ಇಚ್ಛಾಶಕ್ತಿಯ ಕೊರತೆ ಮತ್ತು ಅವೈಜ್ಞಾನಿಕ ಯೋಜನೆಗಳೇ ಗಣಿ ಪ್ರದೇಶದ ಜನರ ದುಃಸ್ಥಿತಿಗೆ ಕಾರಣ ಎಂಬ ವಾದ ಕೇಳಿಬರುತ್ತಿದೆ

• ಶ್ರೀಗುರು

ಸುಮಾರು ಒಂದು ಕೋಟಿ ಜನ, ಭೂಮಿಯಾಳದ ಕತ್ತಲಿನ ಉಸಿರುಗಟ್ಟಿಸುವ ವಾತಾವರಣದಲ್ಲಿ ಮೂರು ಶಿಫ್ಟ್‌ಗಳಲ್ಲಿ ಕೆಲಸ ಮಾಡಿ ಮನೆಗಳಿಗೆ ಬೆಳಕು, ಫ್ಯಾಕ್ಟರಿಗಳಿಗೆ ಶಕ್ತಿ ನೀಡಿ, ತಾವು ಮಾತ್ರ ಎದೆಯ ಗೂಡಿನಲ್ಲಿ ಇಂಗಾಲ ತುಂಬಿಕೊಂಡು, ಬದುಕಿರುವಷ್ಟೂ ದಿನ ನರಳುತ್ತಾರೆ. ಇವರಿಗೆ ಸರಿಯಾದ ಶಿಕ್ಷಣವಿಲ್ಲ. ಇರಲು ಸರಿಯಾದ ಮನೆಗಳಿಲ್ಲ. ಇವರ ಮಕ್ಕಳಿಗೂ ಶಾಲೆಗಳಲ್ಲಿ ಜಾಗವಿಲ್ಲ. ದುಡಿಯುವ ಹಣ ಕುಡಿತಕ್ಕೆ, ಕಾಯಿಲೆಗೆ, ಉಳಿದರೆ ಉಣ್ಣಲಿಕ್ಕೆ.

ಅವರ ಶ್ರಮದಿಂದ ವಿದ್ಯುತ್ ಪಡೆಯುವ ನಾವು, ಬೇಕೆಂದ ಡಿಸೈನಿನ ಮನೆ, ಅಪಾರ್ಟ್‌ಮೆಂಟು, ಬಂಗಲೆ ಕಟ್ಟಿ, ಎ.ಸಿ ರೂಮು, ಝಗಮಗಿಸುವ ಬೆಳಕಿನ ಐಷಾರಾಮಿ ಲೋಕದಲ್ಲಿ ಮುಳುಗಿ ಹೋಗುತ್ತೇವೆ. ಆದರೆ ನಮಗೆ ಅನುಕೂಲ ಕಲ್ಪಿಸಲು ಅಪಾಯಕಾರಿ ಕಲ್ಲಿದ್ದಲು ಗಣಿಗಳಲ್ಲಿ ಜೀವ ಪಣಕ್ಕೊಡ್ಡಿ ದುಡಿಯುವ ಶ್ರಮಜೀವಿಗಳ ಕಿಂಚಿತ್ ನೆನಪೂ ನಮಗಾಗುವುದಿಲ್ಲ.

ಆದರೆ ಸರ್ಕಾರ ಪ್ರತಿವರ್ಷ ಮೇ 4ರಂದು, ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುವವರ ಶ್ರಮ–ತ್ಯಾಗಗಳನ್ನು ನೆನೆಸಿಕೊಳ್ಳಲು 'ಕೋಲ್ ಮೈನರ್ಸ್' ಡೇ ಆಚರಿಸುತ್ತದೆ. ನಮ್ಮ ಗಣಿಗಳಲ್ಲಿ ದೇಶದ ಅಭಿವೃದ್ಧಿಗೆ ಬೇಕಾದ ಶಕ್ತಿಯಿದೆ ಎಂದು ನಂಬಿದ್ದೇವೆ. ಒಡಿಶಾ, ಜಾರ್ಖಂಡ್, ಪಶ್ಚಿಮ ಬಂಗಾಳ, ಛತ್ತೀಸ್‌ಗಡ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಹೆಚ್ಚಿನ ಕಲ್ಲಿದ್ದಲು ನಿಕ್ಷೇಪಗಳಿವೆ.

ಕಳೆದ 250 ವರ್ಷಗಳಿಂದ ಕಲ್ಲಿದ್ದಲು ಗಣಿಗಾರಿಕೆ ನಡೆಸುತ್ತಿರುವ ನಾವು, ಕಳಪೆ ಕಲ್ಲಿದ್ದಲು ಸುಟ್ಟು, ಬೇಡಿಕೆಯ ಶೇ 70ಕ್ಕಿಂತ ಹೆಚ್ಚು ಶಕ್ತಿ ಸಂಪಾದಿಸಿ, ಬೇಕಾದ ಅಭಿವೃದ್ಧಿ ಕಾಣುತ್ತಿದ್ದೇವೆ. ಸುಡುವಿಕೆಯಿಂದ ಭೂಮಿಯ ಬಿಸಿ ಏರಿದೆ, ಅದನ್ನು ಕಡಿಮೆ ಮಾಡಿ ಎಂದು ಅಮೆರಿಕ ಮೂದಲಿಸಿದಾಗ, 'ನೀವು ನಿಮ್ಮ ಅಭಿವೃದ್ಧಿಗೆ ಇದನ್ನೇ ಬಳಸಿ ವಿಶ್ವದ ನಂಬರ್ ಒನ್ ಸ್ಥಾನದಲ್ಲಿದ್ದೀರಿ. ಈಗ ನಮಗೆ ಉಪದೇಶ ಮಾಡಲು ನೀವ್ಯಾರು? ನಮಗೆ ಸೋವಿ ಸಿಗುವುದು ಇದೊಂದೇ, ಇದನ್ನೇ ಇನ್ನಷ್ಟು ದಿನ ಬಳಸುತ್ತೇವೆ, ಅಭಿವೃದ್ಧಿಗೆ ಇದು ಅನಿವಾರ್ಯ' ಎಂದು ಧಮಕಿ ಹಾಕಿ ಗಣಿಗಳ ಮತ್ತಷ್ಟು ಆಳಕ್ಕಿಳಿದಿದ್ದೇವೆ.

ಅಭಿವೃದ್ಧಿಗಾಗಿ ನಮ್ಮ ಜನರ ಆರೋಗ್ಯ ಮತ್ತು ಪರಿಸರ ಎರಡನ್ನೂ ಪಣಕ್ಕಿಟ್ಟಿದ್ದೇವೆ. ಪ್ರಪಂಚದ ಒಟ್ಟು ನಿಕ್ಷೇಪದ ಕಾಲುಭಾಗ, ಅಂದರೆ 250 ಶತಕೋಟಿ ಟನ್ ಕಲ್ಲಿದ್ದಲು ನಿಕ್ಷೇಪ ಅಮೆರಿಕದಲ್ಲಿದೆ. ರಷ್ಯಾ 160, ಆಸ್ಟ್ರೇಲಿಯಾ 147, ಚೀನಾ 138 ಮತ್ತು ನಮ್ಮಲ್ಲಿ 101 ಶತಕೋಟಿ ಟನ್ ನಿಕ್ಷೇಪವಿದೆ. ವಿಶ್ವದ ಒಟ್ಟು ವಿದ್ಯುತ್ ಬೇಡಿಕೆಯ ಶೇ 40ರಷ್ಟು ಕಲ್ಲಿದ್ದಲಿನಿಂದ ಪೂರೈಕೆಯಾದರೆ, ವಿವಿಧ ಅವಶ್ಯಕತೆಗಳಿಗೆ ಬೇಕಾದ ಉಕ್ಕನ್ನು ಉತ್ಪಾದಿಸಲು ಬಳಸುವ ವಿದ್ಯುತ್ತಿನ ಮುಕ್ಕಾಲು ಪಾಲು ಕಲ್ಲಿದ್ದಲಿನ ಸ್ಥಾವರಗಳಿಂದ ದೊರೆಯುತ್ತಿದೆ.

ಭಾರತದ ಪ್ರಾಕೃತಿಕ ಸಮೃದ್ಧಿ ಇರುವ ಜಾಗಗಳೇ ದೇಶದ ಅತ್ಯಂತ ಹಿಂದುಳಿದ ಪ್ರದೇಶಗಳಾಗಿವೆ. ಎಲ್ಲೆಲ್ಲಿ ಗಣಿಗಾರಿಕೆ ನಡೆದಿದೆಯೋ ಅಲ್ಲಿನ ಪರಿಸರ ನಾಶವಾಗಿ, ಕಾಡು ಬರಿದಾಗಿ ಅಲ್ಲಿನ ಮೂಲನಿವಾಸಿಗಳು ನಿರಾಶ್ರಿತರಾಗಿದ್ದಾರೆ. ಗಣಿ ಪ್ರದೇಶದ ಜನಸಂಖ್ಯೆಯ ಶೇ 60 ಭಾಗದಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಅನಾರೋಗ್ಯ, ಅಪೌಷ್ಟಿಕತೆ, ಸಾವು, ವಲಸೆ ಸಾಮಾನ್ಯ ಸಂಗತಿಗಳಾಗಿಬಿಟ್ಟಿವೆ. ಆಹಾರ ಮತ್ತು ಕುಡಿಯುವ ನೀರಿಗಾಗಿ ದೊಂಬಿಗಳಾಗುತ್ತವೆ. ಶಿಕ್ಷಣ ವಂಚಿತ ಯುವಕರು, ಮಕ್ಕಳು ಅದಿರಿನ ಕಳ್ಳತನಕ್ಕಿಳಿದಿದ್ದಾರೆ.

ಇದರ ನಡುವೆ ಬುಡಕಟ್ಟು ಜನರ ಹಕ್ಕುಗಳಿಗಾಗಿ ಹೋರಾಡುವ ಮಾವೊವಾದಿಗಳು ಸರ್ಕಾರದ ವಿರುದ್ಧ ನಿಂತು ಹಿಂಸಾಚಾರದ ದಾರಿ ಹಿಡಿದಿದ್ದಾರೆ. ಬಡತನದ ಜೊತೆ ಅಭದ್ರತೆಯೂ ಸೇರಿಕೊಂಡು ಜನರ ಬದುಕು ಹೀನಾಯವಾಗಿದೆ. ಸರ್ಕಾರಗಳ ಇಚ್ಛಾಶಕ್ತಿಯ ಕೊರತೆ ಮತ್ತು ಅವೈಜ್ಞಾನಿಕ ಯೋಜನೆಗಳೇ ಗಣಿ ಪ್ರದೇಶದ ಜನರ ದುಃಸ್ಥಿತಿಗೆ ಕಾರಣ ಎಂಬ ವಾದ ಮೊದಲಾಗಿದೆ. 2017ರಲ್ಲಿ ಜರ್ಮನಿಯ ಬಾನ್‌ನಲ್ಲಿ ನಡೆದ COP 23 ವಾಯುಗುಣ ಶೃಂಗಸಭೆಯಲ್ಲಿ 2030ರ ವೇಳೆಗೆ ಕಲ್ಲಿದ್ದಲಿನ ಗಣಿಗಾರಿಕೆ ನಿಲ್ಲಿಸುತ್ತೇವೆ ಎಂದು 20 ದೇಶಗಳು ಸಹಿ ಹಾಕಿವೆ. ಪಟ್ಟಿಯಲ್ಲಿ, ಅತಿ ಹೆಚ್ಚು ಕಲ್ಲಿದ್ದಲು ಬಳಸುವ ಅಮೆರಿಕ, ಚೀನಾ, ರಷ್ಯಾ, ಆಸ್ಟ್ರೇಲಿಯಾ ಹೆಸರಿಲ್ಲ.



ಜಗತ್ತಿನಾದ್ಯಂತ ಕೆಲಸದಲ್ಲಿರುವ ಕಲ್ಲಿದ್ದಲು ಕಾರ್ಮಿಕರ ಹಿತ ಕಾಯಲು 'ವರ್ಲ್ಡ್ ಕೋಲ್ ಅಸೋಸಿಯೇಷನ್' ಇದೆ. ನಮ್ಮಲ್ಲಿ ಜಿಲ್ಲೆಗೊಂದರಂತೆ ಡಿಸ್ಟ್ರಿಕ್ಟ್ ಮಿನರಲ್ ಫೌಂಡೇಷನ್ (ಡಿಎಂಎಫ್) ಸ್ಥಾಪಿಸಲಾಗಿದೆ. 2015ರಲ್ಲಿ ಪ್ರಾರಂಭವಾದ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯು ಡಿಎಂಎಫ್‌ಗೆ ಅನುದಾನ ನೀಡಿ ಶೇ 60ರಷ್ಟು ಹಣವನ್ನು ಮಹಿಳೆ, ಮಕ್ಕಳು, ಕುಡಿಯುವ ನೀರು, ಆರೋಗ್ಯ ಮತ್ತು ಜೀವನ ನಿರ್ವಹಣೆಗೆ ಖರ್ಚು ಮಾಡುವ ಯೋಜನೆ ರೂಪಿಸಿದೆ. ಸಂವಿಧಾನದ 5 ಮತ್ತು 6ನೇ ಪರಿಚ್ಛೇದಗಳು ಸ್ಥಳೀಯ ಸಂಪನ್ಮೂಲಗಳ ಮೇಲೆ ಬುಡಕಟ್ಟು ಜನರಿಗೆ ಅಧಿಕಾರ ನೀಡಿ, ಗ್ರಾಮಸಭೆ ಮತ್ತು ಪಂಚಾಯಿತಿಗಳ ಅನುಮತಿ ಇಲ್ಲದೇ ಅಲ್ಲಿ ಯಾವ ಅಭಿವೃದ್ಧಿ ಕೆಲಸಗಳೂ ನಡೆಯಕೂಡದು ಎಂದಿವೆ.

ಇದನ್ನು ಅರಿತುಕೊಂಡ ಕೆಲ ಬುಡಕಟ್ಟುಗಳು ತಮ್ಮ ನೆಲ- ಜಲವನ್ನು ಕಾನೂನು ಹೋರಾಟದ ಮೂಲಕ ಕಾಪಾಡಿಕೊಂಡಿವೆ. ಆದರೆ ಸರ್ಕಾರದಿಂದ ಗುತ್ತಿಗೆ ಪಡೆದು ನಡೆಯುತ್ತಿರುವ ಗಣಿ ಕಾರ್ಮಿಕರ ಬದುಕು ಮೂರಾಬಟ್ಟೆಯಾಗಿದೆ.

ವಾಚಕರ ವಾಣಿ

ಪಕ್ಷಾತೀತ ಪ್ರಶಂಸೆಗೆ ಅರ್ಹರು

ಚುನಾವಣೆಯನ್ನು ದಿಟ್ಟವಾಗಿ ಎದುರಿಸುವುದು ಹೇಗೆ ಎಂಬುದನ್ನು ಪಶ್ಚಿಮ ಬಂಗಾಳದ ನಾಯಕಿ ಮಮತಾ ಬ್ಯಾನರ್ಜಿ ದೇಶಕ್ಕೆ ತೋರಿಸಿಕೊಟ್ಟಿದ್ದಾರೆ. ತಮ್ಮ ಅಶ್ವಮೇಧ ಕುದುರೆಯನ್ನು ಕಟ್ಟಿ ಹಾಕುವ ಧೀರರೇ ದೇಶದಲ್ಲಿ ಇಲ್ಲ ಎಂದುಕೊಂಡಿದ್ದ 'ಚುನಾವಣಾ-ಚತುರ' ಜೋಡಿಗೆ ಸೋಲು ಉಣಿಸಿದ್ದಾರೆ. 200ಕ್ಕೂ ಅಧಿಕ ಸ್ಥಾನಗಳನ್ನು ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ತಂದುಕೊಟ್ಟು, ಹೆಣ್ಣುಮಕ್ಕಳು ಸಬಲರು ಎಂಬುದನ್ನು ಇಂದಿರಾ ಗಾಂಧಿಯವರ ನಂತರ ಸಮರ್ಥವಾಗಿ ತೋರಿಸಿಕೊಟ್ಟ ನಾಯಕಿಯಾಗಿದ್ದಾರೆ. ಬಹಳ ಮುಖ್ಯವಾಗಿ, ಈ ನಾಯಕಿಯ ಪಾದರಸದಂತಹ ಗುಣ ಮತ್ತು ಸರಳವಾದ ವ್ಯಕ್ತಿತ್ವವು ಪಕ್ಷಾತೀತವಾದ ಪ್ರಶಂಸೆ ಪಡೆಯಲು ಯೋಗ್ಯವಾದುದು.

ರವಿಚಂದ್ರ ಎಂ., ಬೆಂಗಳೂರು

ಆತಂಕಕಾರಿ ಹೇಳಿಕೆಗೆ ಬೇಕು ಕಡಿವಾಣ

ಸಾಮಾಜಿಕ ಜಾಲತಾಣದಲ್ಲಿ ಒಂದು ವಿಡಿಯೊ ನೋಡಿದೆ. ಅದರಲ್ಲಿ ವ್ಯಕ್ತಿಯೊಬ್ಬರು ಹಂಚಿಕೊಂಡ ಧ್ವನಿ ಸಂದೇಶ ಹೀಗಿತ್ತು: ಲಾಕ್‌ಡೌನ್ ಇನ್ನೂ ಎರಡು ತಿಂಗಳು ಮುಂದುವರಿಯಲಿದೆ. ಆದ್ದರಿಂದ ಎಲ್ಲರೂ ಎರಡು ತಿಂಗಳಿಗಾಗುವಷ್ಟು ಆಹಾರ ಹಾಗೂ ಅವಶ್ಯಕ ವಸ್ತುಗಳನ್ನು ಶೇಖರಿಸಿಡುವ ಕೆಲಸ ಮಾಡುವುದು ಒಳ್ಳೆಯದು ಎಂಬ ರೀತಿಯಲ್ಲಿ ಅವರು ಐದು ನಿಮಿಷ ಮಾತನಾಡಿದ್ದಾರೆ.

ಈ ಧ್ವನಿಮುದ್ರಣ ಆಲಿಸಿದ ಜನರಲ್ಲಿ ಆತಂಕ ಮೂಡದೇ ಇರದು. ಪರಿಣಾಮ, ದಿನಸಿ ಹಾಗೂ ಅವಶ್ಯಕ ವಸ್ತುಗಳನ್ನು ಕೊಳ್ಳಲು ನೂಕುನುಗ್ಗಲು ಉಂಟಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕು ಹರಡುವ ಸಾಧ್ಯತೆ ಇರುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಇಂತಹ ಸಂದೇಶಗಳನ್ನು ಹರಡುವವರಿಗೆ ಕಡಿವಾಣ ಹಾಕಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಕೈ ಚೊಕ್ಕಟ ಇರಬೇಕು; ನೀರೂ ಚೊಕ್ಕಟ ಇರಬೇಕು

ಲಕ್ಷಾಂತರ ಜನರು ರಾಜಧಾನಿಯಿಂದ ಗುಳೆ ಹೋಗಿದ್ದಾರೆ. ಸಣ್ಣ ನಗರ, ಪಟ್ಟಣಗಳಲ್ಲಿ ಈ ಬೇಸಿಗೆಯಲ್ಲಿ ನೀರಿನ ಅಭಾವ ಜಾಸ್ತಿ ಇದೆ. ಇದ್ದಬದ್ದ ಕೆರೆ, ಹಳ್ಳಕೊಳ್ಳಗಳ ಜಲಮೂಲ ಬತ್ತುತ್ತಿದೆ, ಕೊಳಕು ಹೆಚ್ಚುತ್ತಿದೆ. ಈ ದಿನಗಳಲ್ಲೇ ಕಲುಷಿತ ನೀರಿನಿಂದಾಗಿ ಕಾಮಾಲೆ, ಅತಿಸಾರ, ವಿಷಮ ಶೀತಜ್ವರ (ಟೈಫಾಯಿಡ್), ದಢಾರ ಮುಂತಾದ ಕಾಯಿಲೆಗಳೂ ಹೆಚ್ಚುತ್ತವೆ. ಅಂಥ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಜಾಗವೂ ಇರಲಿಕ್ಕಿಲ್ಲ, ಆದ್ಯತೆಯೂ ಇರುವುದಿಲ್ಲ. ಕ್ಲಿನಿಕ್ ಅಥವಾ ಔಷಧ ಅಂಗಡಿಗಳಿಗೆ ಹೋಗಲು ವಾಹನಗಳೂ ಸಿಗದಂತೆ ಆಗಬಹುದು.

ನೀರಿನ ವಿಷಯದಲ್ಲಿ ತುಸುವೇ ಅಜಾಗ್ರತೆ ಉಂಟಾದರೂ ಕೋವಿಡ್ ಬದಲಿಗೆ ಬೇರೇನೋ ಅಮರಿಕೊಂಡು ವಿಷಮ ಪರಿಸ್ಥಿತಿ ಉಂಟಾದೀತು. ಮಕ್ಕಳಿಗೆ ಕೊರೊನಾ ಅಷ್ಟಾಗಿ ಬಾಧಿಸದಿದ್ದರೂ ಕೊಳೆನೀರಿನಿಂದ ಬರುವ ಕಾಯಿಲೆಗಳು ಮಕ್ಕಳನ್ನೇ ಹೆಚ್ಚಾಗಿ ಕಾಡುತ್ತವೆ. ಆರೋಗ್ಯ ಇಲಾಖೆಯ ಗಮನವೆಲ್ಲ ಕೋವಿಡ್ ಕಡೆ ಇರುವಾಗ, ನಮ್ಮ ಹುಷಾರಲ್ಲಿ ನಾವಿರಬೇಕಾದುದು ತುಂಬ ಅಗತ್ಯ. ಬೆಂಗಳೂರಿನ ಕಾದ ಕಾವಲಿಯಿಂದ ನೆಗೆದವರು ಸಣ್ಣ ಊರುಗಳ ವಿಷದ ಕೂಪಕ್ಕೆ ಬೀಳುವಂತೆ ಆಗಬಾರದು.

ನಾಗೇಶ ಹೆಗಡೆ, ಸಿದ್ರಾಮಪ್ಪ ದಿನ್ನಿ, ಬೆಂಗಳೂರು

ನಿರ್ಗತಿಕರ ಯೋಚನೆ ಬರಲಿಲ್ಲವೇ?

ಭಿಕ್ಷಾಟನೆ ಮಾಡುವ ಮಕ್ಕಳು ಲಾಕ್‌ಡೌನ್‌ನಿಂದಾಗಿ ಹಸಿವಿನಿಂದ ಕಂಗೆಟ್ಟು, ಜನರು ಕುಡಿದು ಬಿಸಾಡಿದ್ದ ಎಳನೀರಿನ ಕಾಯಿಗಳನ್ನು ಆಯ್ದು ತಿನ್ನುತ್ತಿದ್ದ ಅಮಾನವೀಯ ಸುದ್ದಿಯನ್ನು (ಪ್ರ.ವಾ., ಏ. 30) ಓದಿ ಮನಸ್ಸಿಗೆ ತುಂಬಾ ನೋವಾಯಿತು. ಕೊರೊನಾ ಸೋಂಕನ್ನು ತಡೆಯಲು ಸರ್ಕಾರ 14 ದಿನಗಳ ಲಾಕ್‌ಡೌನ್ ಜಾರಿ ಮಾಡಿದೆ. ಈ ಸಮಯದಲ್ಲಿ ಏನು ತೆರೆದಿರುತ್ತದೆ ಏನು ತೆರೆದಿರುವುದಿಲ್ಲ ಎಂಬುದನ್ನು ಸವಿಸ್ತಾರವಾಗಿ ಒಳಗೊಂಡ ಮಾರ್ಗಸೂಚಿ ಸಿದ್ಧಪಡಿಸಿದ ಸರ್ಕಾರಕ್ಕೆ, ರಸ್ತೆ ಬದಿಯ ನಿರ್ಗತಿಕರ ಹಸಿವನ್ನು ನೀಗಿಸುವ ಕುರಿತು ಕಿಂಚಿತ್ ಯೋಚನೆಯೂ ಬಾರದಿದ್ದುದು ನೋವಿನ ಸಂಗತಿ.

ಕೋವಿಡ್ ಸೋಂಕಿಗಿಂತ ಹಸಿವಿನಿಂದ ಸಾಯುವುದು ಘೋರವಾದುದು. ಎಲ್ಲರಂತೆ 14 ದಿನಗಳಿಗಾಗುವಷ್ಟು ಆಹಾರ ಅಥವಾ ಹಣವನ್ನು ಸಂಗ್ರಹಿಸುವ ಸಾಮರ್ಥ್ಯ ನಿರ್ಗತಿಕರಲ್ಲಿ ಇರುವುದಿಲ್ಲ. ಅವರು ಹೊಟ್ಟೆ ತುಂಬಿಸಿಕೊಳ್ಳಲು ದಿನವೂ ಹೆಣಗಾಡಬೇಕಾಗಿರುತ್ತದೆ. ಇಂತಹವರ ಹೊಟ್ಟೆ ಮೇಲೆ ಬರೆ ಎಳೆಯದೆ ಸರ್ಕಾರ ಕೂಡಲೇ ನಿರ್ಗತಿಕ ಕೇಂದ್ರಗಳನ್ನು ತೆರೆದು, ಅವರ ಹಸಿವನ್ನು ನೀಗಿಸಲಿ.

ಶ್ರೀಧರ ಎಸ್. ವಾಣಿ, ಕೊಪ್ಪಳ

ಅನರ್ಹರ ಪತ್ತೆ ಅಭಿಯಾನ ಚುರುಕಾಗಲಿ

1.31 ಲಕ್ಷ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿರುವ ಆಹಾರ ಇಲಾಖೆಯು ಮೇ ತಿಂಗಳಿನಿಂದ ಇವುಗಳಿಗೆ ಆಹಾರಧಾನ್ಯ ವಿತರಣೆ ಸ್ಥಗಿತಗೊಳಿಸಲು ನಿರ್ಧರಿಸಿದೆ (ಪ್ರ.ವಾ., ಏ. 30). ಬಹುಪಾಲು ಸ್ಥಳೀಯ ಮಟ್ಟದ ರಾಜಕಾರಣಿಗಳು ಮತ್ತು ಅವರ ಹಿಂಬಾಲಕರು ತಮಗೆ ಬೇಕಾದವರಿಗೆ ಹಾಗೂ ತಮ್ಮ ವೋಟ್ ಬ್ಯಾಂಕಿನಲ್ಲಿ ಇರುವವರಿಗೆ ಸರ್ಕಾರಿ ಸೌಲಭ್ಯಗಳು ಕೈತಪ್ಪದಂತೆ ನೋಡಿಕೊಳ್ಳುವುದು ಮತ್ತು ಅವರಿಗೆ ಆಯಾ ಇಲಾಖೆಯ ಭ್ರಷ್ಟ ಸಿಬ್ಬಂದಿ ಸಾಥ್ ನೀಡುವುದು, ವಿವಿಧ ಯೋಜನೆಗಳ ಸೌಲಭ್ಯಗಳು ಅನರ್ಹರ ಪಾಲಾಗುವುದಕ್ಕೆ ಪ್ರಮುಖ ಕಾರಣ.

ವಿಳಂಬವಾದರೂ ಇಲಾಖೆಯ ಈ ಕ್ರಮ ಸ್ತುತ್ಯರ್ಹ. ಎಂದೋ ಆಗಬೇಕಾಗಿದ್ದ ಕೆಲಸ ಈಗಲಾದರೂ ಆಗುತ್ತಿದೆಯಲ್ಲ ಎಂಬುದೇ ಸಮಾಧಾನಕರ ವಿಷಯ. ಪತ್ತೆ ಕಾರ್ಯ ಹೀಗೇ ಮುಂದುವರಿದರೆ, ಇನ್ನಷ್ಟು ದೊಡ್ಡ ಪ್ರಮಾಣದಲ್ಲಿಯೇ ಪಡಿತರ ಚೀಟಿಗಳು ದೊರೆಯುವುದರಲ್ಲಿ ಸಂಶಯವಿಲ್ಲ. ಸಂಬಂಧಿಸಿದ ಎಲ್ಲ ಇಲಾಖೆಗಳಲ್ಲಿಯೂ ಸರ್ಕಾರಿ ಸೌಲಭ್ಯ ಪಡೆಯುತ್ತಿರುವ ಅನರ್ಹರನ್ನು ಪತ್ತೆ ಹಚ್ಚುವ ಅಭಿಯಾನವನ್ನೇ ಸಮರೋಪಾದಿಯಲ್ಲಿ ಕೈಗೊಂಡರೆ, ಸರ್ಕಾರದ ಬೊಕ್ಕಸಕ್ಕೆ ಕನ್ನ ಹಾಕುವುದನ್ನು ತಪ್ಪಿಸಿದಂತಾಗುತ್ತದೆ. ಜೊತೆಗೆ, ಸೌಲಭ್ಯ ಪಡೆದುಕೊಂಡ ಅನರ್ಹರು ಮತ್ತು ಅದಕ್ಕೆ ಕಾರಣರಾದ ಆಯಾ ಇಲಾಖೆಯ ಸಿಬ್ಬಂದಿಗೆ ಶಿಕ್ಷೆಯಾಗುವಂತೆ ನೋಡಿಕೊಂಡರೆ, ಇಂತಹ ಅಕ್ರಮಗಳಿಗೆ ಕಡಿವಾಣ ಬೀಳುತ್ತದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂಕ್ಷಿಪ್ತ ಸುದ್ದಿ

ಟಿಎಂಸಿ ಜಯಭೇರಿಗೆ ಮಮತಾ ಕಾರಣ: ಬಿಜೆಪಿ ಅಭಿಪ್ರಾಯ

ಕೋಲ್ಕತ್ತ (ಪಿಟಿಐ): ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಂದಾಗಿಯೇ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಜಯಭೇರಿ ಬಾರಿಸಿತು ಎಂದು ಬಿಜೆಪಿ ಹೇಳಿದೆ.

'ರಾಜ್ಯದಲ್ಲಿ ಪಕ್ಷವು ಸೋಲಲು ಏನು ಕಾರಣಗಳು ಎನ್ನುವ ಬಗ್ಗೆ ಆತ್ಮವಿಮರ್ಶೆ ಮಾಡಲಾಗುವುದು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗಿಯಾ ತಿಳಿಸಿದ್ದಾರೆ.

'ಪಶ್ಚಿಮ ಬಂಗಾಳದ ಜನತೆ ದೀದಿ ಅವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ನಮ್ಮ ಪಕ್ಷಕ್ಕೆ ಯಾವ ಕಾರಣಗಳಿಂದ ಹಿನ್ನಡೆಯಾಯಿತು ಎನ್ನುವ ಬಗ್ಗೆ ವಿಶ್ಲೇಷಣೆ ನಡೆಸಲಾಗುವುದು. ಪಕ್ಷದ ವೇದಿಕೆಯಲ್ಲಿ ಸಮಗ್ರವಾಗಿ ಚರ್ಚಿಸಲಾಗುವುದು' ಎಂದು ಹೇಳಿದ್ದಾರೆ.

ವಿಜಯೋತ್ಸವ ಆಚರಿಸಿದರೆ ಎಫ್‌ಐಆರ್‌ಗೆ ಆದೇಶ

ನವದೆಹಲಿ (ಪಿಟಿಐ): ವಿಧಾನಸಭೆ ಚುನಾವಣೆಯ ಮತ ಎಣಿಕೆ ನಡೆದ ಬಳಿಕ ವಿಜಯೋತ್ಸವ ಆಚರಿಸುವವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಮತ್ತು ಸಂಬಂಧಿಸಿದ ಪೊಲೀಸ್ ಠಾಣೆಯ ಮುಖ್ಯ ಅಧಿಕಾರಿಯನ್ನು ಅಮಾನತುಗೊಳಿಸಬೇಕು ಎಂದು ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಈ ಬಗ್ಗೆ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳಿಗೆ ಆಯೋಗ ಸೂಚನೆ ನೀಡಿದೆ. ಚುನಾವಣೆ ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆ ಆಯ್ಕೆಯಾದ ಅಭ್ಯರ್ಥಿಗಳ ಬೆಂಬಲಿಗರು ವಿಜಯೋತ್ಸವ ಆಚರಿಸುತ್ತಿರುವುದನ್ನು ಗಮನಿಸಿ ಆಯೋಗ ಈ ಆದೇಶ ಹೊರಡಿಸಿದೆ.

ಚುನಾವಣಾ ತಂತ್ರ ಪರಿಣತ ಪ್ರಶಾಂತ್ ಕಿಶೋರ್ ನೇಪಥ್ಯಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್‌ನ ಭರ್ಜರಿ ಗೆಲುವಿನ ಹಿಂದಿರುವ ಶಕ್ತಿಗಳಲ್ಲಿ, ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ (ಪಿಕೆ) ಅವರೂ ಒಬ್ಬರು.

ಈ ಹಿಂದೆಯೂ ವಿವಿಧ ರಾಜ್ಯಗಳಲ್ಲಿ ಬೇರೆಬೇರೆ ಪಕ್ಷಗಳಿಗಾಗಿ ಕಾರ್ಯತಂತ್ರ ಗೆಲುವಿಗೆ ಕಾರಣರಾಗಿದ್ದ ಪ್ರಶಾಂತ್, ಈಗ ಈ ವೃತ್ತಿಯನ್ನು ತ್ಯಜಿಸುವುದಾಗಿ ಹೇಳಿದ್ದಾರೆ. ಮಮತಾ ಅವರ ಗೆಲುವು ಖಚಿತವಾಗುತ್ತಿರುವುದು ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಎರಡಂಕಿಗಿಂತ ಹೆಚ್ಚಿನ ಸ್ಥಾನಗಳು ಲಭಿಸದು ಎಂಬುದು ಖಚಿತವಾಗುತ್ತಿದ್ದಂತೆ, ಸುದ್ದಿ ವಾಹಿನಿಗಳಿಗೆ ನೀಡಿದ ಸಂದರ್ಶನದಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ.

'ಈವರೆಗೆ ಏನು ಮಾಡುತ್ತಿದ್ದೆನೋ ಅದನ್ನು ಮುಂದುವರಿಸಲು ನಾನು ಬಯಸುವುದಿಲ್ಲ. ನಾನು ಸಾಕಷ್ಟು ಕೆಲಸ ಮಾಡಿದ್ದೇನೆ. ಈಗ ಸ್ವಲ್ಪ ಬಿಡುವು ತೆಗೆದುಕೊಂಡು ಬೇರೇನನ್ನಾದರೂ ಮಾಡುವ ಸಮಯ ಬಂದಿದೆ. ಈ ಸ್ಥಾನವನ್ನು ತ್ಯಜಿಸಲು ನಾನು ಬಯಸುತ್ತೇನೆ' ಎಂದು ಅವರು ಹೇಳಿದ್ದಾರೆ. ಜತೆಯಲ್ಲೇ, ರಾಜಕೀಯವನ್ನು ಪ್ರವೇಶಿಸುವುದಿಲ್ಲ ಎಂದೂ ಸ್ಪಷ್ಟಪಡಿಸಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯು ಅಸಾಧಾರಣ ಶಕ್ತಿಯಾಗಿದೆ' ಎಂಬ ತಮ್ಮ ನಿಲುವನ್ನು ಅವರು ಸಮರ್ಥಿಸಿಕೊಂಡಿದ್ದಾರೆ. ಆದರೆ, 'ಮೋದಿ ಅವರ ಜನಪ್ರಿಯತೆ ಹೆಚ್ಚಿದೆ ಎಂದರೆ ಬಿಜೆಪಿಯು ಎಲ್ಲಾ ಚುನಾವಣೆಗಳನ್ನು ಗೆಲ್ಲುತ್ತದೆ ಎಂದು ಅರ್ಥವಲ್ಲ' ಎಂದಿದ್ದಾರೆ.

ವೈರಲ್ ಆದ ಟ್ವೀಟ್: ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ ಭಾರಿ ಗೆಲುವು ಖಚಿತವಾಗುತ್ತಿದ್ದಂತೆಯೇ ಪ್ರಶಾಂತ್ ಅವರು ಕಳೆದ ಡಿಸೆಂಬರ್‌ನಲ್ಲಿ ಮಾಡಿದ್ದ ಒಂದು ಟ್ವೀಟ್ ಟ್ವಿಟರ್‌ನಲ್ಲಿ ಪುನಃ ಹರಿದಾಡಿತು.

ಡಿಸೆಂಬರ್ 21ರಂದು ಬಿಜೆಪಿಗೆ ಸವಾಲು ಹಾಕುವ ರೀತಿಯಲ್ಲಿ ಮಾಡಿದ್ದ ಆ ಟ್ವೀಟ್‌ನಲ್ಲಿ ಅವರು, '294 ಸದಸ್ಯಬಲದ ವಿಧಾನಸಭೆಯಲ್ಲಿ, ಕೇಂದ್ರದಲ್ಲಿ ಆಡಳಿತಾರೂಢ ಪಕ್ಷವು ಎರಡಂಕಿ ಸಂಖ್ಯೆಯನ್ನು ದಾಟಲೂ ಹೆಣಗಾಡಬೇಕಾಗುತ್ತದೆ. ಈ ಟ್ವೀಟ್ ಅನ್ನು ಸೇವ್ ಮಾಡಿಟ್ಟುಕೊಳ್ಳಿ. ಕೇಂದ್ರಕ್ಕೆ ಬೆಂಬಲವಾಗಿ ನಿಂತಿರುವ ಮಾಧ್ಯಮದ ಒಂದು ಭಾಗದವರಿಗೆ ಹೇಳುತ್ತಿದ್ದೇನೆ, ಬಿಜೆಪಿಯು ಎರಡಂಕಿ ಸಾಧನೆ ಮಾಡಲು ಯಶಸ್ವಿಯಾದರೆ ನಾನು ಈ ಜಾಗವನ್ನು ಖಾಲಿಮಾಡುತ್ತೇನೆ' ಎಂದಿದ್ದರು.

ಈ ಟ್ವೀಟ್‌ಗೆ ಪ್ರತಿ ಟ್ವೀಟ್ ಮಾಡಿದ್ದ ಬಿಜೆಪಿಯ ಕೈಲಾಶ್ ವಿಜಯವರ್ಗೀಯ 'ಬಂಗಾಳದಲ್ಲಿ ಎದ್ದಿರುವ ಬಿಜೆಪಿಯ ಸುನಾಮಿಯ ಫಲವಾಗಿ ಅಲ್ಲಿ ನಮ್ಮ ಸರ್ಕಾರ ರಚನೆಯಾದ ನಂತರ, ದೇಶವು ಒಬ್ಬ ಚುನಾವಣಾ ನೀತಿ ನಿರೂಪಕನನ್ನು ಕಳೆದುಕೊಳ್ಳಲಿದೆ' ಎಂದಿದ್ದರು.

ಪ್ರಶಾಂತ್ ಅವರ ಹಳೆಯ ಟ್ವೀಟ್ ಅನ್ನು ಉಲ್ಲೇಖಿಸಿ ಅನೇಕ ಮಂದಿ ಭಾನುವಾರ ಟ್ವೀಟ್‌ಗಳನ್ನು ಮಾಡಿದ್ದಾರೆ. 'ಬಿಜೆಪಿಯು ಬಂಗಾಳದಲ್ಲಿ ಪ್ರಬಲ ಶಕ್ತಿಯಾಗಿ ಹೊರಹೊಮ್ಮುವುದು ಸದ್ಯಕ್ಕೆ ಅಸಾಧ್ಯ. ಪ್ರಶಾಂತ್ ಅವರು ಇನ್ನೂ ಕಣದಲ್ಲಿದ್ದಾರೆ' ಎಂದು ಹಲವರು ಟ್ವೀಟ್ ಮಾಡಿದ್ದಾರೆ.

ಮತ ಎಣಿಕೆ ಆರಂಭವಾದ ಮೊದಲ ಕೆಲವು ಗಂಟೆಗಳ ಕಾಲ ಬಿಜೆಪಿ –ಟಿಎಂಸಿ ಮಧ್ಯೆ ತೀವ್ರ ಪೈಪೋಟಿ ನಡೆಯುವ ಲಕ್ಷಣಗಳು ಗೋಚರಿಸಿದ್ದವು. ಆ ಸಂದರ್ಭದಲ್ಲಿ ಕೆಲವರು, 'ಪ್ರಶಾಂತ್ ಅವರು ಬೇರೆ ಉದ್ಯೋಗ ಹುಡುಕುವುದು ಸೂಕ್ತ' ಎಂದು ಟ್ವೀಟ್ ಮಾಡಿದ್ದರು.

'ಬಿಜೆಪಿ ಪಕ್ಷಪಾತಿ ಚುನಾವಣಾ ಆಯೋಗ'

ಚುನಾವಣಾ ಆಯೋಗದ ಕಾರ್ಯವೈಖರಿಯ ಬಗ್ಗೆ, ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಆಯೋಗವು ನಡೆದುಕೊಂಡಿರುವ ರೀತಿಗೆ ಪ್ರಶಾಂತ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿಗೆ ಕಠಿಣ ಸ್ಪರ್ಧೆ ಇತ್ತು. ಚುನಾವಣಾ ಆಯೋಗವು ಕಣ್ಣಿಗೆ ರಾಚುವಷ್ಟು ಪಕ್ಷಪಾತಿಯಾಗಿತ್ತು. ಇದಕ್ಕಿಂತ ಹೆಚ್ಚು ಪಕ್ಷಪಾತಿಯಾಗಿದ್ದ ಚುನಾವಣಾ ಆಯೋಗವನ್ನು ನಾನು ಈವರೆಗೆ ನೋಡಿಲ್ಲ. ಬಿಜೆಪಿಗೆ ಸಹಾಯ ಮಾಡಲು ಈ ಆಯೋಗವು ಬೇಕಾದ ಎಲ್ಲವನ್ನೂ ಮಾಡಿದೆ ಎಂದು ಅವರು ಆರೋಪಿಸಿದ್ದಾರೆ.

'ಪ್ರಚಾರದಲ್ಲಿ ಧರ್ಮದ ಬಳಕೆಯಿಂದ ಆರಂಭಿಸಿ ಮತದಾನದ ದಿನಾಂಕವನ್ನು ನಿರ್ಧರಿಸುವುದು, ಕಾನೂನುಗಳನ್ನು ತಿರುಚುವಲ್ಲಿಯವರೆಗೆ ಆಯೋಗವು ಬಿಜೆಪಿಗಾಗಿ ಎಲ್ಲವನ್ನೂ ಮಾಡಿದೆ. ಬಿಜೆಪಿಯ ವಿಸ್ತರಿತ ಸಂಸ್ಥೆಯಂತೆ ಆಯೋಗ ಕೆಲಸ ಮಾಡಿದೆ' ಎಂದು ಅವರು ಆರೋಪಿಸಿದರು.

'ನಮಗೆ ಪ್ರಚಾರ ನಡೆಸುವುದೇ ಸವಾಲಾಗಿತ್ತು. ಪಶ್ಚಿಮ ಬಂಗಾಳದಲ್ಲಿ ನಾವೇ ಗೆಲ್ಲಲಿದ್ದೇವೆ ಎಂಬ ಬೃಹತ್ ಪ್ರಚಾರಾಂದೋಲನ ನಡೆಸಲು ಬಿಜೆಪಿ ಪ್ರಯತ್ನಿಸಿತ್ತು. ಆದರೆ, ಒಳ್ಳೆಯ ಸಾಧನೆ ಮಾಡುತ್ತೇವೆ, ಬಯಸಿದ್ದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಜನರು ನೀಡುತ್ತಾರೆ ಎಂಬ ವಿಶ್ವಾಸ ನಮಗಿತ್ತು' ಎಂದಿದ್ದಾರೆ.

ಡಬಲ್ ಗೆಲುವು

ಪ್ರಶಾಂತ್ ಈ ಬಾರಿ ಡಬಲ್ ಗೆಲುವು ಸಾಧಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅವರು ಟಿಎಂಸಿಗಾಗಿ ಕಾರ್ಯತಂತ್ರ ಹೆಣೆದರೆ, ತಮಿಳುನಾಡಿನಲ್ಲಿ ಅವರು ಡಿಎಂಕೆ ಪರವಾಗಿ ಕೆಲಸ ಮಾಡಿದ್ದಾರೆ. ಅಲ್ಲಿ ಒಂದು ದಶಕದ ಕಾಲ ವಿರೋಧಪಕ್ಷದ ಸ್ಥಾನದಲ್ಲಿದ್ದ ಡಿಎಂಕೆಯು ಗೆಲುವು ದಾಖಲಿಸಿದೆ.

ಕಿಶೋರ್ ಅವರು 2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ, 2015ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ನಿತೀಶ್ ಕುಮಾರ್ ಅವರ ಜೆಡಿಯುಗೆ ಚುನಾವಣಾ ಕಾರ್ಯತಂತ್ರ ರೂಪಿಸಿ, ಆ ಪಕ್ಷಗಳ ಗೆಲುವಿಗೆ ಕಾರಣರಾಗಿದ್ದರು. ಆದರೆ, ಪಶ್ಚಿಮ ಬಂಗಾಳ ಅವರಿಗೆ ದೊಡ್ಡ ಸವಾಲಾಗಿತ್ತು.

ವೈದ್ಯಕೀಯ ಆಕ್ಸಿಜನ್ ಸಿಲಿಂಡರ್ ಉಚಿತ ವಿತರಣೆ
'ಪ್ರಾಣವಾಯು' ಪೂರೈಸುವ ಉದ್ಯಮಿ

• ಗುರು ಪಿ.ಎಸ್.

ಯತೀಶ್ ಬಾಬು

ಬೆಂಗಳೂರು: ನಗರದಲ್ಲಿ ಕೋವಿಡ್ ರೋಗಿಗಳು ಹಾಸಿಗೆ ಮತ್ತು ವೈದ್ಯಕೀಯ ಆಕ್ಸಿಜನ್ ಕೊರತೆ ಎದುರಿಸುತ್ತಿದ್ದಾರೆ. ಈ ಸಮಸ್ಯೆಯನ್ನು ಮನಗಂಡಿರುವ ಸಾಫ್ಟ್‌ವೇರ್ ಕಂಪನಿಯೊಂದರ ಮುಖ್ಯಸ್ಥ ಯತೀಶ್ ಬಾಬು ತೀರಾ ಅಗತ್ಯವಿರುವವರಿಗೆ ಉಚಿತವಾಗಿ ವೈದ್ಯಕೀಯ ಆಮ್ಲಜನಕ ಪೂರೈಸುವ ಮೂಲಕ ಮಾನವೀಯತೆ ಮೆರೆಯುತ್ತಿದ್ದಾರೆ.

'ಹಲವು ಆಸ್ಪತ್ರೆಗಳಲ್ಲಿ ಆಕ್ಸಿಜನ್ ಸಿಲಿಂಡರ್ ಖಾಲಿಯಾಗಿದೆ. ಪ್ರಕರಣಗಳು ವಿಪರೀತ ವೇಗದಲ್ಲಿ ಹೆಚ್ಚಾಗುತ್ತಿರುವುದರಿಂದ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಈ ಸಂದರ್ಭದಲ್ಲಿ ಸರ್ಕಾರ ಅಥವಾ ವ್ಯವಸ್ಥೆಯನ್ನು ದೂರುತ್ತಾ ಕೂರುವುದಕ್ಕಿಂತ ನನ್ನ ಕೈಲಾದ ನೆರವು ನೀಡಬಹುದಲ್ಲ ಎನಿಸಿ ಈ ಕಾರ್ಯ ಆರಂಭಿಸಿದ್ದೇನೆ' ಎಂದು ಯತೀಶ್ ಹೇಳಿದರು.

'ಸಂಬಂಧಿಕರು ಅಥವಾ ಸ್ನೇಹಿತರಿಗೆ ಸಮಸ್ಯೆ ಎದುರಾದಾಗ ಬೇಕಾಗುತ್ತದೆ ಎಂದು ಸಿಲಿಂಡರ್‌ಗಳನ್ನು ಖರೀದಿಸಿ ಇಟ್ಟುಕೊಂಡಿದ್ದೆ. ಪರಿಚಿತರಲ್ಲಿ ಯಾರಿಗೂ ಅಂತಹ ತೊಂದರೆ ಎದುರಾಗಿಲ್ಲ. ಈ ನಡುವೆ, ಆಕ್ಸಿಜನ್ ಕೊರತೆ ಹೆಚ್ಚಾಗಿರುವುದು ಗಮನಕ್ಕೆ ಬಂದಿತು. ಈಗ ಉಚಿತವಾಗಿ ವಿತರಣೆ ಮಾಡುತ್ತಿದ್ದೇನೆ' ಎಂದು ತಿಳಿಸಿದರು.

ಒಳ್ಳೆ ಸುದ್ದಿ

'ಆಕ್ಸಿಜನ್ ಪೂರೈಕೆ ಕಾರ್ಯ ಆರಂಭಿಸಿದ ನಂತರ ಸಮಾನಮನಸ್ಕ ಸ್ನೇಹಿತರು, ಅಧಿಕಾರಿಗಳು ಕೈ ಜೋಡಿಸುತ್ತಿದ್ದಾರೆ. ಬೇಕಾದ ನೆರವು ನೀಡುತ್ತಿದ್ದಾರೆ. ಕರೆಗಳ ಸಂಖ್ಯೆ ಹೆಚ್ಚಾದರೂ ಆಕ್ಸಿಜನ್ ಪೂರೈಸುವ ವಿಶ್ವಾಸವಿದೆ' ಎಂದು ಅವರು ಹೇಳಿದರು.

ಹೃದ್ರೋಗ, ಕ್ಯಾನ್ಸರ್‌ನಂತಹ ಸಮಸ್ಯೆಯಿಂದ ಬಳಲುತ್ತಿದ್ದವರಿಗೆ ಸಹ ಉಚಿತವಾಗಿ ಔಷಧ ಪೂರೈಕೆ ಮಾಡಿದ್ದಾರೆ. ಈಗ ಬೀದಿ ಬದಿಯಲ್ಲಿ ಊಟವಿಲ್ಲದೆ ನರಳುತ್ತಿರುವವರಿಗೂ ಉಚಿತವಾಗಿ ಆಹಾರ ಪೂರೈಸುತ್ತಿದ್ದಾರೆ.

ಆಕ್ಸಿಜನ್ ಸಿಲಿಂಡರ್ ಮತ್ತು ಆಹಾರಕ್ಕಾಗಿ– 98459 00666 ಸಂಪರ್ಕಿಸಬಹುದು.

ಕೇರಳದ ಜನತೆಗೆ ಧನ್ಯವಾದ ಸಲ್ಲಿಸಿದ ಸೀತಾರಾಂ ಯೆಚೂರಿ

ನವದೆಹಲಿ (ಪಿಟಿಐ): ಸಿಪಿಎಂ ನೇತೃತ್ವದ ಎಲ್‌ಡಿಎಫ್ ಬಗ್ಗೆ ವಿಶ್ವಾಸವಿಟ್ಟ ಕೇರಳ ಮತದಾರರಿಗೆ ಧನ್ಯವಾದಗಳು ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ತಿಳಿಸಿದ್ದಾರೆ.

ಜನರು ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪಕ್ಷವು ನಿರಂತರ ಹೋರಾಟ ನಡೆಸಲಿದೆ ಎಂದು ಅವರು ತಿಳಿಸಿದ್ದಾರೆ.

ಕೋವಿಡ್ ನಿಯಂತ್ರಿಸುವ ವೇಳೆ ಎದುರಾದ ಹಲವು ಸವಾಲುಗಳನ್ನು ಎಲ್‌ಡಿಎಫ್ ಸರ್ಕಾರ ನಿವಾರಿಸಿತ್ತು. ಜತೆಗೆ, ಸಾಂಕ್ರಾಮಿಕ ಕಾಯಿಲೆಯನ್ನು ಯಾವ ರೀತಿ ಎದುರಿಸಬೇಕು ಎನ್ನುವುದನ್ನು ವಿಶ್ವಕ್ಕೆ ತೋರಿಸಿಕೊಟ್ಟಿತು ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಸಂವಾದ

facebook LIVE

ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ

ಪ್ರಾದೇಶಿಕ ಪಕ್ಷಗಳು V/S ರಾಷ್ಟ್ರೀಯ ಪಕ್ಷಗಳು

ಸಂವಾದದಲ್ಲಿ ಪಾಲ್ಗೊಳ್ಳುವವರು

ವೈ.ಎಸ್.ವಿ. ದತ್ತಾ
ರಾಜ್ಯ ಜೆಡಿಎಸ್ ಮುಖಂಡ

ಸೈಯದ್ ನಾಸಿರ್ ಹುಸೇನ್
ರಾಜ್ಯಸಭಾ ಸದಸ್ಯ, ಕಾಂಗ್ರೆಸ್



ಕ್ಯಾ.ಗಣೇಶ ಕಾರ್ಣಿಕ್
ಬಿಜೆಪಿ ರಾಜ್ಯ ವಕ್ತಾರ

ಸೋಮವಾರ, 03- 05-2021 ಸಮಯ: ಮಧ್ಯಾಹ್ನ 12ರಿಂದ 1

fb.com/prajavani.net

ಕಾಂಗ್ರೆಸ್, ಬಿಜೆಪಿ ಕಾರ್ಯಕರ್ತರ ಜಗಳ

ಪ್ರಜಾವಾಣಿ ವಾರ್ತೆ

ರಾಯಚೂರು: ಮಸ್ಕಿ ಉಪಚುನಾವಣೆ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಕ್ಷೇತ್ರದ ವ್ಯಾಪ್ತಿಯ ಬೆಂಚಿಮರಡಿ, ತುರ್ವಿಹಾಳ, ಗುಂಡಾ ಗ್ರಾಮಗಳಲ್ಲಿ ಕಾಂಗ್ರೆಸ್– ಬಿಜೆಪಿ ಕಾರ್ಯಕರ್ತರ ಮಧ್ಯೆ ಜಗಳ, ಹೊಡೆದಾಡಿಕೊಂಡಿರುವ ಪ್ರಕರಣಗಳಾಗಿವೆ.

ಬಿಜೆಪಿ ಕಾರ್ಯಕರ್ತರ ಮನೆಗಳ ಎದುರು ಪಟಾಕಿ ಸಿಡಿಸಿದ್ದಲ್ಲದೆ ಘೋಷಣೆ ಕೂಗಿರುವುದು ಪರಿಸ್ಥಿತಿ ಹದಗೆಡಲು ಕಾರಣ ಎನ್ನಲಾಗಿದೆ. ಗುಂಡಾ ಗ್ರಾಮದಲ್ಲಿ ಬಿಜೆಪಿಯ ಅಮರೇಶ ಅಮರಣ್ಣ, ಗಣೇಶ ತಿರುಪತೆಪ್ಪ, ಅಮರೇಶ ಹನುಮಂತ ಮತ್ತು ಗಂಗಪ್ಪ ಕಬೀರಪ್ಪ ಅವರ ಮೇಲೆ ಕಾಂಗ್ರೆಸ್ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ತುರ್ವಿಹಾಳ ಮತ್ತು ಕವಿತಾಳ ಠಾಣೆ ಪೊಲೀಸರು ಗಾಯಾಳುಗಳಿಂದ ಹೇಳಿಕೆ ಪಡೆದಿದ್ದು, ಪ್ರಕರಣ ದಾಖಲಿಸಲಾಗುವುದು ಎಂದು ತಿಳಿಸಿದ್ದಾರೆ.

ಸಿಂಧನೂರು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದ್ದ ಬಿಜೆಪಿ ಕಾರ್ಯಕರ್ತರನ್ನು ಮಾಜಿ ಶಾಸಕ ಪ್ರತಾಪಗೌಡ ಅವರು ಭೇಟಿಮಾಡಿದರು.

'ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಗೆದ್ದ ತಕ್ಷಣವೇ ಕಾಂಗ್ರೆಸ್‌ನವರು ಹಲವು ಗ್ರಾಮಗಳಲ್ಲಿ ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಆರೋಪಿಸಿದರು.

ಮಮತಾ ಪಶ್ಚಿಮ ಬಂಗಾಳದ ಹುಲಿ; ಶಿವಸೇನಾ

ಮುಂಬೈ (ಪಿಟಿಐ): 'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪಶ್ಚಿಮ ಬಂಗಾಳದ ಹುಲಿ' ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಹೇಳಿದ್ದಾರೆ.

'ಮಮತಾ ಅವರನ್ನು ಸೋಲಿಸುವುದು ಸುಲಭವಲ್ಲ. ಮಮತಾ ಅವರನ್ನು ಸೋಲಿಸಲು ಬಿಜೆಪಿ ಬಹಳ ಶ್ರಮಪಟ್ಟಿತು. ಅಪಾರ ಹೂಡಿಕೆ ಮಾಡಿತು' ಎಂದು ಅವರು ಹೇಳಿದ್ದಾರೆ.

'ಮಮತಾ ಅವರು ಬಿಜೆಪಿಯ ಸವಾಲುಗಳನ್ನು ಸ್ವೀಕರಿಸಿ ಒಂದು ಕ್ಷೇತ್ರದಿಂದ ಮಾತ್ರ ಸ್ಪರ್ಧಿಸಿದರು' ಎಂದು ಅವರು ತಿಳಿಸಿದ್ದಾರೆ.

ಹಣ್ಣು, ತರಕಾರಿ ದರ ವಿಪರೀತ ಏರಿಕೆ

ಒಂದನೇ ಪುಟದಿಂದ...

'ಬೇಸಿಗೆ ಹಾಗೂ ಆರೋಗ್ಯ ದೃಷ್ಟಿಯಿಂದ ಮನೆಯಲ್ಲಿ ಎಲ್ಲರೂ ಹಣ್ಣುಗಳನ್ನು ಹೆಚ್ಚಾಗಿ ಸೇವಿಸುತ್ತಿದ್ದೇವೆ. ಕಳೆದ ವಾರ ಕಡಿಮೆ ಇದ್ದ ಹಣ್ಣಿನ ದರಗಳೆಲ್ಲ ಈಗ ದಿಢೀರ್ ಏರಿಕೆ ಕಂಡಿವೆ. ಇದನ್ನು ಪ್ರಶ್ನಿಸಿದಾಗ, ಕೊರೊನಾ ಇರುವುದರಿಂದ ಹಣ್ಣುಗಳಿಗೆ ಬೇಡಿಕೆ ಹೆಚ್ಚಾಗಿದೆ. ಹಾಗಾಗಿ, ದರ ಏರಿದೆ, ಇಷ್ಟವಿದ್ದರೆ ಖರೀದಿಸಿ ಎಂದು ವ್ಯಾಪಾರಿಗಳು ದಬಾಯಿಸುತ್ತಾರೆ. ಬೆಲೆ ಏರಿಕೆಯಿಂದ ಮಧ್ಯಮ ವರ್ಗದ ಜನರಿಗೆ ಹೆಚ್ಚು ಸಮಸ್ಯೆಯಾಗಿದೆ' ಎಂದು ಹೆಬ್ಬಾಳದ ನಿವಾಸಿ ರೋಜಾ ಹೇಳಿದರು.

ಒಂದು ನಿಂಬೆ ಹಣ್ಣಿಗೆ ₹10: ಕೊರೊನಾ ಕರ್ಫ್ಯೂ ಜಾರಿಯಾದ ಬಳಿಕ ನಿಂಬೆಹಣ್ಣಿಗೆ ಬೇಡಿಕೆ ಹೆಚ್ಚಾಗಿದ್ದು, ಒಂದು ನಿಂಬೆಹಣ್ಣನ್ನು ₹10ರಿಂದ ಗರಿಷ್ಠ ₹15ರಂತೆ ಮಾರಾಟವಾಗುತ್ತಿದೆ.

'ಒಂದು ವಾರದಿಂದ ಅಂಗಡಿಗೆ ಬರುವ ಗ್ರಾಹಕರು ಹೆಚ್ಚಾಗಿ ನಿಂಬೆಹಣ್ಣು ಕೇಳುತ್ತಿದ್ದಾರೆ. ಮೊದಲು ₹10ಕ್ಕೆ ಐದರಿಂದ ಆರು ನಿಂಬೆ ಹಣ್ಣುಗಳನ್ನು ಮಾರುತ್ತಿದ್ದೆವು. ಈಗ ನಿಂಬೆಗೆ ಭಾರಿ ಬೇಡಿಕೆ ಇರುವುದರಿಂದ ಬೆಲೆಯೂ ಏರಿದೆ' ಎಂದು ನಿಂಬೆಹಣ್ಣಿನ ವ್ಯಾಪಾರಿ ಕೃಷ್ಣಪ್ಪ ತಿಳಿಸಿದರು.

ದರಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಹಣ್ಣುಗಳು	ಸಗಟು ದರ	ಚಿಲ್ಲರೆ ದರ
ದಾಳಿಂಬೆ	150	250
ದ್ರಾಕ್ಷಿ	80	130
ಸೇಬು	130	150
ಮೂಸಂಬಿ	85	140
ಕಿತ್ತಳೆ	140	160
ಸಪೋಟ	50	70
ಸೀಬೆ	70	70
ಮಾವು	70	90
ಪಪ್ಪಾಯ	30	30
ಕಲ್ಲಂಗಡಿ	15	25

ತರಕಾರಿ	ಸಗಟು ದರ	ಚಿಲ್ಲರೆ ದರ (ಸರಾಸರಿ)
ಬೆಳ್ಳುಳ್ಳಿ	60	90
ಶುಂಠಿ	30	50
ಬಟಾಣಿ	100	140
ಈರುಳ್ಳಿ	18	25
ಬೀನ್ಸ್	40	50
ಕ್ಯಾರೆಟ್	15	30
ಮೆಣಸಿನ ಕಾಯಿ	30	40
ಆಲೂಗಡ್ಡೆ	16	25
ಬೆಂಡೆಕಾಯಿ	10	20
ಟೊಮೆಟೊ	8	15

ಅಸ್ಸಾಂ, ಕೇರಳ ಚುನಾವಣೆಯಲ್ಲಿ ವ್ಯಾಪಕ ಪ್ರಚಾರ ನಡೆಸಿದ್ದ ಕಾಂಗ್ರೆಸ್ ನಾಯಕರು

ಮತದಾರರನ್ನು ಸೆಳೆಯದ ರಾಹುಲ್, ಪ್ರಿಯಾಂಕಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇರಳ ಮತ್ತು ಅಸ್ಸಾಂ ವಿಧಾನಸಭೆ ಚುನಾವಣೆಗಳಲ್ಲಿ ವ್ಯಾಪಕ ಪ್ರಚಾರ ನಡೆಸಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತದಾರರನ್ನು ಸೆಳೆಯುವಲ್ಲಿ ವಿಫಲರಾಗಿರುವುದು ಫಲಿತಾಂಶದಲ್ಲಿ ಗೋಚರಿಸಿದೆ.

ಲೋಕಸಭೆ ಚುನಾವಣೆ ಬಳಿಕ ಹಲವು ಸೋಲುಗಳನ್ನು ಅನುಭವಿಸಿ ಕಂಗೆಟ್ಟಿದ್ದ ಕಾಂಗ್ರೆಸ್‌ಗೆ, ಈ ರಾಜ್ಯಗಳ ಮತದಾರರು ಬೆಂಬಲಿಸುವ ಬಗ್ಗೆ ಅಪಾರ ನಿರೀಕ್ಷೆ ಹೊಂದಿದ್ದರು. ಇದರಿಂದ, ಪಕ್ಷದ ಪುನಃಶ್ಚೇತನಕ್ಕೂ ಅನುಕೂಲಕರ ವಾತಾವರಣ ಸೃಷ್ಟಿಯಾಗುತ್ತಿತ್ತು.

ಅಸ್ಸಾಂ ಮತ್ತು ಕೇರಳದಲ್ಲಿ ಜಯಗಳಿಸಿದರೆ ರಾಹುಲ್ ಗಾಂಧಿ ಅವರನ್ನು ಮತ್ತೆ ಪಕ್ಷದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು ಎಂದು ಪಕ್ಷದ ಹಲವು ನಾಯಕರು ಪ್ರತಿಪಾದಿಸಿದ್ದರು.

ಕೇರಳದಲ್ಲಿ ಪಕ್ಷ ಉತ್ತಮ ಪ್ರದರ್ಶನ ನೀಡಲಿದೆ ಎನ್ನುವ ನಿರೀಕ್ಷೆಯನ್ನು ರಾಹುಲ್ ಹೊಂದಿದ್ದರು. 2019ರ ಲೋಕಸಭೆ ಚುನಾವಣೆಯಲ್ಲಿ ಅಮೇಠಿಯಲ್ಲಿ ಆಘಾತಕಾರಿ ಸೋಲು ಅನುಭವಿಸಿದ್ದರೂ ಕೇರಳದ ವಯನಾಡು ಮತದಾರರು 'ಕೈ' ಹಿಡಿದಿದ್ದರು. ಹೀಗಾಗಿ, ಈ ರಾಜ್ಯದ ಮತದಾರರ ಬಗ್ಗೆ ಅಪಾರ ಭರವಸೆ ಹೊಂದಿದ್ದರು.

> **ಕೇರಳ ಮತ್ತು ಅಸ್ಸಾಂನಲ್ಲಿ ನಮ್ಮ ನಿರೀಕ್ಷೆಯಂತೆ ಫಲಿತಾಂಶ ದೊರೆತಿಲ್ಲ. ನಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತೇವೆ. ಪಕ್ಷ ಸಂಘಟನೆ ಬಗ್ಗೆ ಕ್ರಮಕೈಗೊಳ್ಳಲಿದ್ದೇವೆ**
>
> **ರಣದೀಪ್ ಸಿಂಗ್ ಸುರ್ಜೇವಾಲಾ**
> ಕಾಂಗ್ರೆಸ್ ವಕ್ತಾರ

ತಮಿಳುನಾಡಿನಲ್ಲಿ ಸ್ಪರ್ಧಿಸಿದ್ದ 25 ಸ್ಥಾನಗಳ ಪೈಕಿ 17ರಲ್ಲಿ ಕಾಂಗ್ರೆಸ್ ಜಯಸಾಧಿಸಿದೆ. ಚುನಾವಣೆ ಪ್ರಚಾರ ಸಂದರ್ಭದಲ್ಲಿ ಈ ರಾಜ್ಯದಲ್ಲಿ ರಾಹುಲ್ ಗಾಂಧಿ ಅವರು ವಿದ್ಯಾರ್ಥಿಗಳು ಸೇರಿದಂತೆ ಎಲ್ಲ ವರ್ಗದ ಮತದಾರರ ಜತೆ ಸಮಾಲೋಚನೆ ನಡೆಸುವ ಪ್ರಯತ್ನ ಮಾಡಿದ್ದರು. ಜಲ್ಲಿಕಟ್ಟುವಿನಲ್ಲೂ ಸಹ ಭಾಗವಹಿಸಿದ್ದರು. ಆದರೆ, ಸೀಟುಗಳ ಹಂಚಿಕೆ ಸಂದರ್ಭದಲ್ಲಿ ಡಿಎಂಕೆ ಕೇವಲ 25 ಸ್ಥಾನಗಳನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿತು. ಇದರಿಂದ, ರಾಹುಲ್ ಆಸಕ್ತಿ ಕಳೆದುಕೊಂಡರು ಎಂದು ವಿಶ್ಲೇಷಿಸಲಾಗಿದೆ.

ಈ ಚುನಾವಣಾ ಫಲಿತಾಂಶದಿಂದಾಗಿ, ಕಾಂಗ್ರೆಸ್‌ಗೆ ಪೂರ್ಣಾವಧಿಯಾಗಿ ಅಧ್ಯಕ್ಷರನ್ನು ನೇಮಿಸುವಂತೆ ಒತ್ತಾಯಿಸಿದ್ದ ಪಕ್ಷದ 'ಜಿ–23' ನಾಯಕರ ಬೇಡಿಕೆಗೂ ಬಲಬಂದಂತಾಗಿದೆ.

ಇತ್ತೀಚೆಗೆ, ಕಾಂಗ್ರೆಸ್ ಪಕ್ಷವು ಪಂಜಾಬ್, ರಾಜಸ್ಥಾನ ಮತ್ತು ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗಳಲ್ಲಿ ಜಯಗಳಿಸಿತ್ತು. ಆದರೆ, ಈ ಗೆಲುವಿಗೆ ಬಲಿಷ್ಠವಾದ ಸ್ಥಳೀಯ ನಾಯಕರೇ ಕಾರಣರಾಗಿದ್ದರು ಎಂದು ವಿಶ್ಲೇಷಿಸಲಾಗಿತ್ತು.

ಮಹಾರಾಷ್ಟ್ರದಲ್ಲೂ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ದೃಷ್ಟಿಯಿಂದ ಶಿವಸೇನಾ, ಎನ್‌ಸಿಪಿ ಜತೆ ಕಾಂಗ್ರೆಸ್ ಕೈಜೋಡಿಸಬೇಕಾಯಿತು.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ 3 ಮೇ 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ಸಪ್ತಮಿ ಗಂ. 31-36 (ಸಾ. 6-44) ಸೋಮವಾರ ನಿತ್ಯ ನಕ್ಷತ್ರ ಉತ್ತರಾಷಾಢ ಗಂ. 18-4 (ಹ. 1-19) ಶುಭ ನಾಮ ಯೋಗ ಗಂ 50-17 ಭದ್ರೆ ಕರಣ ಗಂ. 3-27 ವಿಷ ಗಂ. 27-52 ಅಮೃತ ಗಂ. 3-18 ಪುನರಮೃತ ಗಂ. 51-24 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-02 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 7

ಮೇಷ: ಯಂತ್ರೋಪಕರಣಗಳ ಖರೀದಿ ಸಾಧ್ಯತೆ. ವಾಹನಗಳ ವ್ಯವಹಾರದಿಂದಾಗಿ ಉತ್ತಮ ಲಾಭ. ಕುಟುಂಬ ಸಮೇತ ಪ್ರಯಾಣ ನಡೆಸುವ ಸಾಧ್ಯತೆ ಕಂಡುಬರುವುದು. ಪ್ರಿಯ ವ್ಯಕ್ತಿಗಳ ದರ್ಶನದಿಂದ ಸಂತಸ ಮೂಡಲಿದೆ.

ವೃಷಭ: ತಾಂತ್ರಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ಸ್ವಲ್ಪ ಮಟ್ಟಿನ ಬಿಡುವು. ಹೊಸ ಉದ್ಯಮ ಸ್ಥಾಪನೆ ವಿಚಾರವಾಗಿ ಪರಿಣತರ ಸಲಹೆ ಪಡೆಯಲಿದ್ದೀರಿ. ಹಿರಿಯರ ಸಲಹೆ ಸಹಕಾರದಿಂದಾಗಿ ವ್ಯವಹಾರದಲ್ಲಿ ಸುಧಾರಣೆ.

ಮಿಥುನ: ವಿವಾಹಾಕಾಂಕ್ಷಿಗಳಿಗೆ ಕಂಕಣಭಾಗ್ಯ ಕೂಡಿ ಬರಲಿದೆ. ಸರ್ಕಾರಿ ನೌಕರರಿಗೆ ಸಹೋದ್ಯೋಗಿಗಳಿಂದ ಉತ್ತಮ ಸಹಕಾರ. ಸಹೋದರಿಯರಿಂದ ಸಂತೋಷದ ವಿಷಯಗಳು ಕೇಳಿಬರಲಿವೆ. ಮನೆಯಲ್ಲಿ ಸಂತಸ.

ಕರ್ಕಾಟಕ: ಯಂತ್ರೋಪಕರಣಗಳ ವ್ಯವಹಾರದಲ್ಲಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದ್ದು ದಿನದ ಮಟ್ಟಿಗೆ ವ್ಯವಹಾರಕ್ಕೆ ಕೈಹಾಕದಿರುವುದು ಉತ್ತಮ. ಹಿರಿಯರ ಆರೋಗ್ಯದಲ್ಲಿ ಚೇತರಿಕೆ. ಬಂಧುಗಳ ಆಗಮನ.

ಸಿಂಹ: ರಾಜಕೀಯ ವ್ಯಕ್ತಿಗಳಿಗೆ ವಿಶೇಷವಾಗಿ ಮಹಿಳಾ ರಾಜಕಾರಣಿಗಳಿಗೆ ಉತ್ತಮಕಾಲವಾಗಿದ್ದು ಉನ್ನತ ಹುದ್ದೆಯನ್ನು ಏರುವ ಸಾಧ್ಯತೆಗಳು ಕಂಡುಬರುತ್ತಿದೆ. ಸ್ವಯಂ ಉದ್ಯೋಗಿಗಳಿಗೆ ಆದಾಯದಲ್ಲಿ ಹೆಚ್ಚಳವಾಗಲಿದೆ.

ಕನ್ಯಾ: ಕೃಷಿ ಕ್ಷೇತ್ರದಲ್ಲಿ ದುಡಿಯುವವರಿಗೆ ಅನಿರೀಕ್ಷಿತ ಬಿಡುವಿನಿಂದಾಗಿ ಆಲಸ್ಯ. ತರಕಾರಿ, ಹೂವು ಹಣ್ಣು ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಇಳಿಕೆ. ಪ್ರಯಾಣದಲ್ಲಿ ಹಿತಾನುಭವ. ದೇವತಾದರ್ಶನ ಭಾಗ್ಯ.

ತುಲಾ: ಸ್ವಯಂ ಉದ್ಯೋಗ ನಡೆಸುತ್ತಿರುವವರಿಗೆ ಉತ್ತಮ ವ್ಯವಹಾರ. ಸಂಬಂಧಿಕರ ನೆರವಿಗಾಗಿ ಧಾವಿಸಬೇಕಾದ ಅನಿವಾರ್ಯತೆ ಉಂಟಾದೀತು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ.

ವೃಶ್ಚಿಕ: ಕ್ರೀಡಾಪಟುಗಳಿಗೆ ಸ್ಪರ್ಧೆಗಳಲ್ಲಿ ಹಿನ್ನಡೆ. ಸಂಶೋಧಕರು, ವಿಜ್ಞಾನಿಗಳಿಗೆ ಉದ್ಯೋಗದಲ್ಲಿ ಪ್ರಗತಿಯೊಂದಿಗೆ ಪದೋನ್ನತಿ. ಸಂಗಾತಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯ. ಮಾನಸಿಕ ಕಿರಿಕಿರಿ.

ಧನು: ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆ ನಡೆಸುವವರಿಗೆ ವ್ಯವಹಾರದಲ್ಲಿ ಹೆಚ್ಚಳ. ಚಿನ್ನ, ಬೆಳ್ಳಿ ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಕೊರತೆ ತಲೆದೋರಲಿದೆ. ಸಂಸಾರಿಕ ನೆಮ್ಮದಿ ದೊರಕಲಿದೆ.

ಮಕರ: ಹೊಸದಾಗಿ ಪ್ರಾರಂಭಿಸಿರುವ ಉದ್ಯಮದಲ್ಲಿ ಪ್ರಗತಿ. ಮಹಿಳೆಯರಿಗೆ ರಾಜಕೀಯದಲ್ಲಿ ಉನ್ನತ ಸ್ಥಾನಮಾನ ದೊರಕುವ ಸಾಧ್ಯತೆ. ವಿವಾಹಾಕಾಂಕ್ಷಿಗಳಿಗೆ ವಿವಾಹ ಸಂಬಂಧಿ ಮಾತುಕತೆಗಳು ನಡೆಯಲಿವೆ.

ಕುಂಭ: ಆದಾಯ ತರುವ ಹೊಸ ಯಂತ್ರವೊಂದನ್ನು ಖರೀದಿಸಲಿದ್ದೀರಿ. ರೈತಾಪಿ ವರ್ಗದವರಿಗೆ ಆಶಾದಾಯಕ ವಾತಾವರಣ. ಗೆಡ್ಡೆ ಗೆಣಸುಗಳ ಬೆಳೆಗಾರರಿಗೆ ಹೆಚ್ಚಿನ ಆದಾಯ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ಮೀನ: ಸರ್ಕಾರದಿಂದ ಆಗಬೇಕಾದ ಕೆಲಸಗಳು ವಿಳಂಬವಾಗುವ ಸಾಧ್ಯತೆ. ದಿನನಿತ್ಯದ ವ್ಯಾಪಾರ ವ್ಯವಹಾರ ಸುಗಮವಾಗಿ ಸಾಗಲಿದೆ. ನಿರೀಕ್ಷಿತ ಆದಾಯ. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ. ಆರೋಗ್ಯದಲ್ಲಿ ವ್ಯತ್ಯಯ.

ನಿಮ್ಮ ಜನ್ಮದಿನ 3-ಮೇ ಈ ದಿನ ಅತ್ಯಂತ ಶುಭಕರ. ಅತಿಯಾದ ಆತ್ಮವಿಶ್ವಾಸದಿಂದಾಗಿ ಎಲ್ಲವನ್ನೂ ಜಯಿಸುತ್ತೇನೆಂಬ ಹುಂಬತನದಿಂದಾಗಿ ಸಂಕಷ್ಟಕ್ಕೀಡಾಗುವ ಸಾಧ್ಯತೆ. ಆಸ್ತಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಹಿನ್ನಡೆ. ನಿರೀಕ್ಷಿತ ಆದಾಯ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ಜೀವನವು ನೆಮ್ಮದಿ ನೀಡಲಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಮತ್ತೊಂದು ಪ್ರಯತ್ನ

ಮಹೋಷಧಕುಮಾರನಿಂದ ಅಪಮಾನಿತನಾದ ಕೇವಟ್ಟ ಅದನ್ನು ಮರೆತಿರಲಿಲ್ಲ. ಹಣೆಯ ಮತ್ತು ಮೂಗಿನ ಮೇಲೆ ಆದ ಗಾಯಗಳು ಅಪಮಾನವನ್ನು ಮೇಲಿಂದ ಮೇಲೆ ನೆನಪಿಸುತ್ತಿದ್ದವು. ಆತ ಸೇಡು ತೀರಿಸಿಕೊಳ್ಳಲು ಯೋಜಿಸಿ ರಾಜ ಬ್ರಹ್ಮದತ್ತನ ಬಳಿಗೆ ಬಂದ. ಅವನಿಗೆ ಈಗಾಗಲೇ ಸೋಲಿನಿಂದ ಮುಖಭಂಗವಾಗಿದೆ. ಕೇವಟ್ಟ ಹೊಸ ಉಪಾಯ ಹೇಳಿದ, 'ಸ್ವಾಮಿ, ವಿದೇಹ ರಾಜನ ಮೇಲೆ ಹಾಗೂ ಮಹೋಷಧಕುಮಾರನ ಮೇಲೆ ಸೇಡು ತೀರಿಸಿಕೊಳ್ಳುವ ಉಪಾಯವೊಂದಿದೆ. ತಾವು ಅಪ್ಪಣೆ ನೀಡಿದರೆ ಹೇಳುತ್ತೇನೆ'. ಅದೇನು ಎಂದು ರಾಜ ಕೇಳಿದಾಗ, 'ಪ್ರಭೂ, ತಮ್ಮ ಮಗಳು ಪಂಚಾಲಚಂಡಿ ಅಪ್ಸರೆಯಂಥ ಸುಂದರಿ. ಆಕೆಯ ಸೌಂದರ್ಯವನ್ನು ವರ್ಣಿಸಿ, ಪ್ರಚಾರಗೊಳಿಸೋಣ. ಅದರಿಂದ ವಿದೇಹರಾಜನ ಮನದಲ್ಲಿ ಕಾಮಭೋಗದ ಲಾಲಸೆಯನ್ನು ಹುಟ್ಟಿಸಿ, ಮುಳ್ಳಿಗೆ ಚುಚ್ಚಿಕೊಂಡ ಮೀನಿನಂತೆ, ಮಹೋಷಧಕುಮಾರರನ್ನು ಇಲ್ಲಿಗೆ ಕರೆತಂದು ಕೊಲ್ಲಿಸಿಬಿಡೋಣ' ಎಂದ. ಈ ಗುಪ್ತ ಮಾತುಕತೆ ನಡೆದದ್ದು ಅರಮನೆಯ ಮೇಲಂತಸ್ತಿನಲ್ಲಿ, ಯಾರೂ ಇಲ್ಲದಾಗ. ಅಲ್ಲಿ ಇದ್ದದ್ದು ರಾಜನಿಗೆ ಅತ್ಯಂತ ಪ್ರಿಯವಾದ ಮೈನಾ ಹಕ್ಕಿ ಮಾತ್ರ. ಅದು ಈ ಯೋಜನೆಯನ್ನು ಕೇಳಿಸಿಕೊಂಡಿತು.

ರಾಜ ಕೇವಟ್ಟನ ಮಾತನ್ನು ಒಪ್ಪಿದ. ಅರಮನೆಯ ದರ್ಬಾರಿನ ಕವಿಗಳಿಗೆ ಹೇಳಿ ಮಗಳು ಪಂಚಾಲಚಂಡಿಯ ರೂಪವರ್ಣನೆಯ ಕಾವ್ಯಗಳನ್ನು, ಕಥೆ, ಕಾದಂಬರಿಗಳನ್ನು ಬರೆಯಿಸಿದ. ಅರಮನೆಯ ಚಿತ್ರಕಾರರು ಆಕೆಯ ಅತ್ಯದ್ಭುತ ಚಿತ್ರಗಳನ್ನು ಬರೆದರು. ಹಾಡುಗಾರರು ಸೌಂದರ್ಯದ ವರ್ಣನೆಯ ಹಾಡುಗಳನ್ನು ಮಾಡಿ ಊರು ಊರುಗಳಲ್ಲಿ ಪ್ರಚಾರ ಮಾಡಿದರು. ಕುಶಲಕರ್ಮಿಗಳು ಕವನಗಳನ್ನು ತಾಮ್ರದ ಎಲೆಗಳ ಮೇಲೆ ಬರೆದು ಹಾರುವ ಪಕ್ಷಿಗಳ ಕುತ್ತಿಗೆಗಳಿಗೆ ಕಟ್ಟಿದರು. ಅವು ಹಾರಿಹೋದಲ್ಲಿ ಅವುಗಳನ್ನು ಬೀಳಿಸಿ ಪ್ರಚಾರ ಮಾಡಿದವು. ನಂತರ ಇನ್ನೊಂದು ತರಹದ ಪ್ರಚಾರ ಪ್ರಾರಂಭವಾಯಿತು. ಅದೆಂದರೆ, ಇಂಥ ಅಸಾಮಾನ್ಯ ರೂಪಸಿಗೆ ತಕ್ಕುದಾದವನು ಕೇವಲ ವಿದೇಹರಾಜ. ಅವನ ಸಮಾನರು ಯಾರೂ ಇಲ್ಲ. ಪಂಚಾಲಚಂಡಿಯ ಮನಸ್ಸು ಕೂಡ ಆ ರಾಜನಲ್ಲೇ ಇದೆ, ಇತ್ಯಾದಿ, ಇತ್ಯಾದಿ. ಈ ವಿಷಯ ವಿದೇಹರಾಜನನ್ನು ತಲುಪಿತು. ಅವನಿಗೆ ವಿಪರೀತ ಸಂತೋಷ. ಅಂಥ ಸುಂದರಿ ತನ್ನನ್ನು ಮೆಚ್ಚು ಮದುವೆಯಾಗುತ್ತಾಳೆಂದು ತಿಳಿದು ಉಬ್ಬಿ ಹೋದ.

ಅದನ್ನು ತಿಳಿದು ಕೇವಟ್ಟ, ಬೆಲೆಬಾಳುವ ಕಾಣಿಕೆಗಳನ್ನು ತೆಗೆದುಕೊಂಡು ಮಿಥಿಲೆಗೆ ಬಂದು ರಾಜನನ್ನು ಕಂಡು, ಹಿಂದೆ ದಾಳಿ ಮಾಡಿದ ತಪ್ಪಿಗೆ ಕ್ಷಮೆ ಕೇಳಿದ. ನಂತರ, ಪಂಚಾಲಚಂಡಿಯ ಮದುವೆಯ ಪ್ರಸ್ತಾಪವನ್ನು ಮಾಡಿದ. ಅವನಿಗೆ ಮಹೋಷಧಕುಮಾರನ ಬುದ್ಧಿವಂತಿಕೆಯ ಮೇಲೆ ಭಯ. ಅವನ ಬಗ್ಗೆಯೂ ಅಪಸ್ವರದ ಮಾತು ಎತ್ತಿದ. 'ಸ್ವಾಮಿ, ತಮ್ಮಂತಹ ಪ್ರಚಂಡರಾದ ರಾಜರಿಗೆ ಮಹೋಷಧ ತಕ್ಕ ಮಂತ್ರಿ ಅಲ್ಲ. ಅವನು ಸಮರ್ಥನಾಗಿದ್ದರೆ ಈ ಹೊತ್ತಿಗೆ ತಾವು ಜಂಬೂದ್ವೀಪದ ಚಕ್ರವರ್ತಿಗಳಾಗಿರಬೇಕಿತ್ತು' ಎಂದು ಕೊಂಕು ಮಾತನಾಡಿದ. ಕೇವಟ್ಟ ತೆರಳಿದ ಮೇಲೆ ರಾಜ ಕುಮಾರನೊಂದಿಗೆ ವಿಷಯ ತಿಳಿಸಿ, ತನಗೆ ಮದುವೆಯಲ್ಲಿ ಆಸಕ್ತಿ ಇದೆ ಎಂದು ಒತ್ತಿ ಹೇಳಿದ. ಮಹೋಷಧಕುಮಾರನಿಗೆ ಈ ಯೋಜನೆಯಲ್ಲಿ ಅಪಾಯವಿದೆ ಎನ್ನಿಸಿತು. 'ಪ್ರಭೂ, ನನಗೆ ಒಂದು ವಾರದ ಅವಕಾಶ ಕೊಡಿ. ಎಲ್ಲವನ್ನು ಪರೀಕ್ಷಿಸಿ ಹೇಳುತ್ತೇನೆ, ಅವಸರಬೇಡ' ಎಂದು ಹೇಳಿ ತನ್ನ ಮನೆಗೆ ಬಂದು ಎಲ್ಲವನ್ನೂ ಚಿಂತಿಸಿದ. ಅವನಿಗೆ ಹೊಸದೊಂದು ದಾರಿ ಹೊಳೆಯಿತು. ❖

ಪದಬಂಧ 4585
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವೀರಶೈವರ ಸ್ಮಶಾನವಿದು (4)
3.ಸುಗಂಧಯುಕ್ತ ನೀರು (3)
5.ತಿರುಗಿದಾಗ ವಿಸ್ತಾರವಾದ ಜಾಗ ಕಾಣುತ್ತಿದೆಯಲ್ಲಾ? (3)
7.ನಾಕದಲ್ಲಿ ತೂರಿಸಿದ ಮೂಗು (3)
8.ಮಾನಸಿಕ ಪ್ರಭಾವ ಬೀರಿ ವಶಪಡಿಸಿಕೊಳ್ಳುವುದು (5)
11.ಇದು ಪುಷ್ಪದ ಶರ (3)
12.ಚೆಂಬು ಇಲ್ಲಿದೆ (3)
15.ಮಂದಿ ಬಳಿಯಿರುವ ತಾಯಿ (3)
16.ಕೊನೆಗೆ ಜಯವಿದ್ದರೂ ಇದು ಸೋಲು! (4)

ಮೇಲಿಂದ ಕೆಳಕ್ಕೆ
1.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
2.ಇದು ಅಪ್ಪಟ ಸುಳ್ಳು (2)
3.ಪದ ಹೇಳಿ ಪಡೆದ ಬಿಲ್ಲೆ (3)
4.ದೃಢಪಡಿಸುವ ಸಾಧನ (4)
6.ದೇವರ ಹೆಸರಿನಲ್ಲಿ ಬಿಟ್ಟ ಗೂಳಿ (3)
7.ಹೆಸರಿಡುವ ಶಾಸ್ತ್ರ (5)
9.ತಿರುವುಮುರುವಾಗಿರುವ ಪದ್ಯದ ಸಾಲು (3)
10.ಮಲಯದಲ್ಲಿರುವ ಶ್ರೀಗಂಧ (4)
11.ಸುಮಗಳನ್ನು ಜೋಡಿಸಿಡುವ ಕರಂಡಕ (3)
13.ಮೆಳೆಯ ಹತ್ತಿರವಿರುವ ಸ್ನೇಹಿತ (3)
14.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)



4584ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾಗಾಡಂಬರ3.ವಿಧಾತ
5.ವನಚರಿ8.ಬಹುವಚನ
11.ಪರವಶ13.ಯದೃಚ್ಛೆ
14.ಆಸೆಬುರುಕ

ಮೇಲಿಂದ ಕೆಳಕ್ಕೆ: 1.ವಾನಪ್ರಸ್ಥ
2.ಬರ್ಬರ4.ತಣಿರಿಪ6.ನಯನ
7.ನವಣೆ8.ಬಡವ9.ತಾಪತ್ರಯ
10.ಆಕಸ್ಮಿಕ12.ವರಸೆ

ಸುಡೊಕು 4971

2		6					5	9
			5		6	3		2
3							6	
	2				5			4
			2		7			6
	7					5		
7		9			8		4	
4				3			8	
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4970 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಒಣ ಮೆಣಸಿನ ಕಾಯಿ ಇ-ಟೆಂಡರ್ ಸ್ಥಗಿತ

ಬ್ಯಾಡಗಿ: ಕೋವಿಡ್ ಕಾರಣದಿಂದ ಪಟ್ಟಣದ ಮಾರುಕಟ್ಟೆಯಲ್ಲಿ ನಡೆಯುವ ಒಣ ಮೆಣಸಿನಕಾಯಿ ಇ-ಟೆಂಡರ್‌ಅನ್ನು ಮೇ 11ರವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ಎಪಿಎಂಸಿ ಕಾರ್ಯದರ್ಶಿ ಎಸ್. ಬಿ. ನ್ಯಾಮಗೌಡ ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ ಪ್ರತಿದಿನ ಬೆಳಿಗ್ಗೆ 6ರಿಂದ ಮಧ್ಯಾಹ್ನ 12ರವರೆಗೆ ಒಣ ಮೆಣಸಿನಕಾಯಿ ವ್ಯಾಪಾರ ವಹಿವಾಟು ಹಾಗೂ ಇತರೆ ಚಟುವಟಿಕೆಗಳನ್ನು ವರ್ತಕರು ನಡೆಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹220-360

ದ್ವಿತಳಿ (ಬಿ.ವಿ) ₹260-440

ಏಪ್ರಿಲ್‌ನಲ್ಲಿ ರಫ್ತು ವಹಿವಾಟು ಮೂರು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಏಪ್ರಿಲ್‌ನಲ್ಲಿ ಮೂರುಪಟ್ಟು ಹೆಚ್ಚಾಗಿದ್ದು ₹ 2.23 ಲಕ್ಷ ಕೋಟಿಗೆ ತಲುಪಿದೆ. ಕೇಂದ್ರ ವಾಣಿಜ್ಯ ಸಚಿವಾಲಯವು ಭಾನುವಾರ ಈ ಮಾಹಿತಿ ಬಿಡುಗಡೆ ಮಾಡಿದೆ.

ಎಂಜಿನಿಯರಿಂಗ್, ಹರಳು, ಚಿನ್ನಾಭರಣ ಮತ್ತು ಪೆಟ್ರೋಲಿಯಂ ಉತ್ಪನ್ನ ವಲಯಗಳ ಉತ್ತಮ ಬೆಳವಣಿಗೆಯಿಂದ ರಫ್ತು ವಹಿವಾಟು ಈ ಪ್ರಮಾಣದ ಹೆಚ್ಚಳ ಕಂಡಿದೆ.

2020ರ ಏಪ್ರಿಲ್‌ನಲ್ಲಿ ರಫ್ತು ವಹಿವಾಟಿನ ಮೌಲ್ಯ ₹ 75,258 ಕೋಟಿಗಳಷ್ಟಿತ್ತು. ಇದಕ್ಕೆ ಹೋಲಿಸಿದರೆ 2021ರ ಏಪ್ರಿಲ್‌ನಲ್ಲಿ ಆಗಿರುವ ರಫ್ತು ವಹಿವಾಟಿನ ಮೌಲ್ಯವು ಶೇಕಡ 197ರಷ್ಟು ಏರಿಕೆ ಕಂಡಿದೆ.

ವ್ಯಾಪಾರ ಕೊರತೆ ಅಂತರವು 2020ರ ಏಪ್ರಿಲ್‌ನಲ್ಲಿ ₹ 51,208 ಕೋಟಿ ಆಗಿತ್ತು. 2021ರ ಏಪ್ರಿಲ್‌ನಲ್ಲಿ ಇದು ₹ 1.12 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಆಮದು ವಹಿವಾಟು ಸಹ ಮೂರು ಪಟ್ಟು ಏರಿಕೆ ಆಗಿದ್ದು, ₹ 3.36 ಲಕ್ಷ

ಕೋಟಿ ಆಗಿದೆ. 2020ರ ಏಪ್ರಿಲ್‌ನಲ್ಲಿ ಇದು ₹ 1.26 ಲಕ್ಷ ಕೋಟಿಯಷ್ಟಿತ್ತು.

ಕೋವಿಡ್–19 ಸಾಂಕ್ರಾಮಿಕ ನಿಯಂತ್ರಿಸಲು ಲಾಕ್‌ಡೌನ್ ಹೇರಿದ್ದರಿಂದ 2020ರ ಏಪ್ರಿಲ್‌ನಲ್ಲಿ ರಫ್ತು ವಹಿವಾಟು ಶೇ 60.28ರಷ್ಟು ಕುಸಿತ ಕಂಡಿತ್ತು. 2021ರ ಮಾರ್ಚ್‌ನಲ್ಲಿ ರಫ್ತು ವಹಿವಾಟು ಶೇ 60.29ರಷ್ಟು ಏರಿಕೆ ಆಗಿದೆ.

ಚಿನ್ನದ ಆಮದು ₹ 20,942 ಕೋಟಿಯಿಂದ ₹ 45,288 ಕೋಟಿಗೆ ಏರಿಕೆಯಾಗಿದೆ. ತೈಲ ಆಮದು ₹ 34,410 ಕೋಟಿಯಿಂದ ₹ 79,920 ಕೋಟಿಗೆ ಏರಿಕೆ ಆಗಿದೆ.

ಸಾಲ: ಜಾಮೀನು ನೀಡುವ ಮುನ್ನ...

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಸಾಲ ಕೊಡುವವರು, ಸಾಲ ತೆಗೆದುಕೊಳ್ಳುವವರ ನಡುವೆ ಸೇತುವೆಯಂತೆ ಇರುವವ ಜಾಮೀನುದಾರ ಅಥವಾ ಖಾತರಿದಾರ. ನೀವು ಯಾರಾದರೂ ಸಂಬಂಧಿಕರು, ಸ್ನೇಹಿತರು ಅಥವಾ ಪರಿಚಯಸ್ಥರ ಸಾಲಕ್ಕೆ ಖಾತರಿದಾರ ಆಗುವ ಮುನ್ನ ಅಳೆದು–ತೂಗಿ ನಿರ್ಧಾರಕ್ಕೆ ಬರಬೇಕು. ಸಾಲಕ್ಕೆ ಖಾತರಿದಾರ ಆಗುವುದೆಂದರೆ ಬೇರೆಯವರ ಹಣಕಾಸಿನ ಹೊರೆ ಹೊರುವ ದೊಡ್ಡ ಜವಾಬ್ದಾರಿ ವಹಿಸಿಕೊಂಡಂತೆ. ಪೂರ್ವಾಪರ ಯೋಚಿಸದೆ ಬೇರೆಯವರ ಸಾಲದ ಜಾಮೀನು ಕರಾರಿಗೆ ಸಹಿ ಹಾಕಿದರೆ, ಸಾಲದ ಬಲೆಯಲ್ಲಿ ನೀವೇ ಸಿಲುಕಿ ಪರದಾಡುವ ಪರಿಸ್ಥಿತಿಯೂ ಬರಬಹುದು.

ಬ್ಯಾಂಕ್‌ಗಳು ಖಾತರಿದಾರರನ್ನು ಕೇಳುವುದು ಯಾವಾಗ?: ಸಾಲ ಪಡೆಯುವ ವ್ಯಕ್ತಿಗೆ ಸಾಲ ಮರುಪಾವತಿ ಸಾಮರ್ಥ್ಯ ಕಡಿಮೆ ಇದೆ ಅನಿಸಿದರೆ ಅಥವಾ ಸಾಲ ಪಡೆಯಲು ನಿರ್ದಿಷ್ಟ ವ್ಯಕ್ತಿಗೆ ಅಗತ್ಯ ಅರ್ಹತೆ ಇಲ್ಲ ಎನ್ನುವ ಸಂದರ್ಭದಲ್ಲಿ ಬ್ಯಾಂಕ್‌ಗಳು ಖಾತರಿದಾರನನ್ನು (Guarantor) ಕೇಳುತ್ತವೆ. ಬ್ಯಾಂಕ್‌ಗಳು ಅಡಮಾನ ಸಾಲ ಅಥವಾ ಅಡಮಾನ ರಹಿತ ಸಾಲಗಳಿಗೂ ಖಾತರಿದಾರರನ್ನು ಕೇಳಬಹುದು.

ಕ್ರೆಡಿಟ್ ಸ್ಕೋರ್ ಕಡಿಮೆ ಇದ್ದಾಗ, ಸಾಲದ ಮೊತ್ತ ಜಾಸ್ತಿ ಇದ್ದಾಗ, ಸಾಲ ಪಡೆಯುವ ವ್ಯಕ್ತಿಗೆ ಹೆಚ್ಚು ವಯಸ್ಸಾಗಿದ್ದರೆ ಕೂಡ ಬ್ಯಾಂಕ್‌ಗಳು ಸಾಲಕ್ಕೆ ಖಾತರಿದಾರರನ್ನು ಕೇಳುತ್ತವೆ.

ಜಾಮೀನುದಾರ / ಖಾತರಿದಾರ ಆಗುವುದೆಂದರೆ?: ಜಾಮೀನುದಾರ ಅಥವಾ ಖಾತರಿದಾರ ಆಗುವುದೆಂದರೆ ಸಾಲ ಪಡೆದ ವ್ಯಕ್ತಿಯು ಒಂದೊಮ್ಮೆ ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡದಿದ್ದರೆ ಅದರ ಹೊಣೆಯನ್ನು ತಾನು ಹೊರುತ್ತೇನೆ ಎಂಬ ವಾಗ್ದಾನ ಮಾಡಿದಂತೆ. ಅಂದರೆ, ಸಾಲಕ್ಕೆ ಕರಾರು ಮಾಡಿರುವ ವ್ಯಕ್ತಿಯು ಬ್ಯಾಂಕ್ ಸಾಲ ಕಟ್ಟದಿದ್ದರೆ ಖಾತರಿದಾರನು ತನ್ನ ಜೇಬಿನಿಂದ ಆ ಹಣ ಕಟ್ಟಬೇಕಾಗುತ್ತದೆ.

ಖಾತರಿದಾರನ ಜವಾಬ್ದಾರಿ ಎಷ್ಟಿರುತ್ತೆ ಗೊತ್ತಾ?: ನಿಮ್ಮ ಸಂಬಂಧಿಕರು ಬ್ಯಾಂಕ್‌ನಿಂದ ₹ 2 ಲಕ್ಷ ಸಾಲ ತೆಗೆದುಕೊಂಡಿದ್ದು, ಆ ಹಣವನ್ನು ಮೂರು ವರ್ಷಗಳ ಒಳಗೆ ಬ್ಯಾಂಕಿಗೆ ಮರುಪಾವತಿ ಮಾಡದಿದ್ದರೆ ನೀವೇ ಬಡ್ಡಿ ಸಮೇತ ಆ ಹಣವನ್ನು ಕಟ್ಟುವುದಾಗಿ ಜಾಮೀನು ಕೊಟ್ಟಿರುತ್ತೀರಿ ಎಂದಿಟ್ಟುಕೊಳ್ಳಿ. ಆಗ ಬ್ಯಾಂಕ್ ನಿಮ್ಮ ಬಳಿ ಬಂದು ಬಡ್ಡಿ ಸಮೇತ ಬಾಕಿ ಹಣ ವಸೂಲಿ ಮಾಡಬಹುದು. 'ನನ್ನನ್ನೇಕೆ ಕೇಳುತ್ತೀರಾ? ಸಾಲ ಪಡೆದವನು ಇದ್ದಾನಲ್ಲಾ, ಅವನ ಬಳಿ ಹೋಗಿ ವಸೂಲಿ ಮಾಡಿ' ಎಂದು ಹೇಳುವಂತಿಲ್ಲ.

ಒಂದೊಮ್ಮೆ, ಸಾಲ ಪಡೆಯುವಾಗ ಬ್ಯಾಂಕಿಗೆ ಭದ್ರತೆಯಾಗಿ ಕೊಟ್ಟಿರುವ ಸ್ಥಿರಾಸ್ತಿ ಹಾಗೂ ಚರಾಸ್ತಿ ಹರಾಜು ಮಾಡಿದ ಬಳಿಕವೂ ಬ್ಯಾಂಕಿನ ಸಾಲ ತೀರದೇಹೋದರೆ ಉಳಿದ ಹಣ ಕಟ್ಟುವಂತೆಯೂ ಬ್ಯಾಂಕಿನವರು ನಿಮ್ಮನ್ನು ಕೇಳಬಹುದು.

ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ: ನೀವು ಬೇರೆಯವರು ಪಡೆದಿರುವ ಸಾಲಕ್ಕೆ ಖಾತರಿದಾರರಾಗಿದ್ದು ಸಾಲ ಪಡೆದವರು ಮರುಪಾವತಿ ಮಾಡದಿದ್ದರೆ ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಉಂಟಾಗುತ್ತದೆ. ಹಾಗಾಗಿ ಸಾಲಕ್ಕೆ ಖಾತರಿ ನೀಡುತ್ತಿರುವವರು ಆಗಾಗ ಕ್ರೆಡಿಟ್ ಸ್ಕೋರ್ ಪರೀಕ್ಷಿಸಿಕೊಳ್ಳಬೇಕು. ಸಾಲ ಪಡೆದಿರುವ ವ್ಯಕ್ತಿ ಕಂತುಗಳನ್ನು ಸರಿಯಾಗಿ ಪಾವತಿ ಮಾಡುತ್ತಿದ್ದಾನೆಯೇ ಎನ್ನುವುದನ್ನು ಗಮನಿಸಿಕೊಳ್ಳಬೇಕು.

ಒಮ್ಮೆ ಖಾತರಿದಾರ ಆದರೆ ಹೊರಬರುವುದು ಕಷ್ಟ: ಒಮ್ಮೆ ನೀವು ಸಾಲಕ್ಕೆ ಖಾತರಿದಾರ ಆದರೆ ಆ ಜವಾಬ್ದಾರಿಯಿಂದ ಹೊರಬರುವುದು ಕಷ್ಟ. ಬ್ಯಾಂಕಿನವರು ಮತ್ತು ಸಾಲ ಪಡೆದಿರುವವರು ಸೇರಿ ಪರ್ಯಾಯ ಖಾತರಿದಾರರನ್ನು ಹುಡುಕಿದಲ್ಲಿ ಮಾತ್ರ ಖಾತರಿದಾರನ ಹೊಣೆಗಾರಿಕೆಯಿಂದ ಹೊರಬರಬಹುದು. ಆದರೆ ಈ ರೀತಿ ಬೇರೆಯವರನ್ನು ಹುಡುಕಿಕೊಳ್ಳುವುದು ವಾಸ್ತವದಲ್ಲಿ ಕಷ್ಟ. ಹಾಗಾಗಿ ಸಾಲಕ್ಕೆ ಖಾತರಿದಾರರಾಗುವ ಮುನ್ನ ಆಲೋಚಿಸಿ ಮುನ್ನಡೆಯುವುದು ಒಳಿತು.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಅನಿಶ್ಚಿತತೆಯ ನಡುವೆ ಎದ್ದುನಿಂತ ಸೂಚ್ಯಂಕಗಳು

ಏಪ್ರಿಲ್ ತಿಂಗಳಲ್ಲಿ ಷೇರುಪೇಟೆ ಸೂಚ್ಯಂಕಗಳು ಆರಕ್ಕೇರದ, ಮೂರಕ್ಕಿಳಿಯದ ಸ್ಥಿತಿಯಲ್ಲೇ ಇದ್ದವು. ಕಳೆದ ವಾರದ ವಹಿವಾಟಿನ ವಿಚಾರಕ್ಕೆ ಬರುವುದಾದರೆ ಷೇರುಪೇಟೆ ಸೂಚ್ಯಂಕಗಳು ಸಕಾರಾತ್ಮಕವಾಗಿ ಕಂಡುಬಂದಿವೆ. 48,782 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 1.88ರಷ್ಟು ಜಿಗಿತ ಕಂಡಿದೆ. 14,631 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2ರಷ್ಟು ಏರಿಕೆಯಾಗಿದೆ. ಸೆನ್ಸೆಕ್ಸ್ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.8 ಮತ್ತು ಶೇ 3ರಷ್ಟು ಹೆಚ್ಚಳ ದಾಖಲಿಸಿವೆ.

ಟಿವಿಎಸ್, ಬಜಾಜ್ ಆಟೊ, ಹಿಂದೂಸ್ಥಾನ್ ಯುನಿಲಿವರ್, ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಬಜಾಜ್ ಫೈನಾನ್ಸ್ ಸೇರಿ ಇನ್ನೂ ಕೆಲವು ಮುಂಚೂಣಿ ಕಂಪನಿಗಳು ಮಾರ್ಚ್ ತ್ರೈಮಾಸಿಕದಲ್ಲಿ ಉತ್ತಮ ಸಾಧನೆ ತೋರಿರುವುದು ಮತ್ತು ಜಾಗತಿಕ ವಿದ್ಯಮಾನಗಳು ದೇಶಿ ಮಾರುಕಟ್ಟೆಗೆ ಪೂರಕವಾಗಿರುವುದು ಷೇರುಪೇಟೆಯ ಉತ್ಸಾಹಕ್ಕೆ ಕಾರಣವಾಗಿವೆ.

ಆದರೆ ಹೆಚ್ಚುತ್ತಿರುವ ಕೋವಿಡ್–19 ಪ್ರಕರಣಗಳು, ಲಾಕ್‌ಡೌನ್ ವಿಸ್ತರಣೆ, ವೈದ್ಯಕೀಯ ಆಮ್ಲಜನಕದ ಕೊರತೆ, ಲಸಿಕೆ ಕೊರತೆ ಸೇರಿ ಕೆಲವು ಅಂಶಗಳು ಹೂಡಿಕೆದಾರರನ್ನು ಚಿಂತೆಗೆ ದೂಡಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 9ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.5ರಷ್ಟು, ಮೂಲಸೌಕರ್ಯ ಶೇ 3ರಷ್ಟು ಮತ್ತು ಐ.ಟಿ. ವಲಯ ಶೇ 1ರಷ್ಟು ಗಳಿಕೆ ದಾಖಲಿಸಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,456 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 3,399.17 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಬಜಾಜ್ ಫೈನಾನ್ಸ್ ಶೇ 16.80ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 12.98ರಷ್ಟು, ಟಾಟಾ ಸ್ಟೀಲ್ ಶೇ 11.71ರಷ್ಟು, ಬಜಾಜ್ ಫಿನ್‌ಸರ್ವ್ ಶೇ 1.80ರಷ್ಟು ಮತ್ತು ಇಂಡಸ್ ಇಂಡ್ ಬ್ಯಾಂಕ್ ಶೇ 9.99ರಷ್ಟು ಗಳಿಕೆ ಕಂಡಿವೆ.

ಎಚ್‌ಸಿಎಲ್ ಟೆಕ್ ಶೇ 5.93ರಷ್ಟು, ಬ್ರಿಟಾನಿಯಾ ಶೇ 5.51ರಷ್ಟು, ಮಾರುತಿ ಸುಜುಕಿ ಶೇ 3.30ರಷ್ಟು, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 3.26ರಷ್ಟು, ಎಚ್‌ಡಿಎಫ್‌ಸಿ ಶೇ 3.09ರಷ್ಟು ಕುಸಿದಿವೆ.

ಮುನ್ನೋಟ: ಈವಾರ ಎಸ್‌ಬಿಐ ಲೈಫ್, ಥೈರೋಕೇರ್, ಡಾಬರ್, ಎಚ್‌ಡಿಎಫ್‌ಸಿ, ಸಿಟಾಡೆಲ್, ಎಂಆರ್‌ಪಿಎಲ್, ಕ್ರಾಫ್ಟ್ಸ್‌ಮೆನ್ ಆಟೋಮೇಷನ್, ಬ್ಲೂಡಾರ್ಟ್, ಅದಾನಿ ಪೋರ್ಟ್ಸ್, ಹೋಮ್ ಫಸ್ಟ್ ಫೈನಾನ್ಸ್, ಜಿಲೆಟ್, ಸಿಯೆಟ್, ಅದಾನಿ ಪವರ್, ಟಾಟಾ ಸ್ಟೀಲ್, ಅದಾನಿ ಟ್ರಾನ್ಸ್‌ಮಿಷನ್, ರೇಮಂಡ್, ಟಾಟಾ ಕೆಮಿಕಲ್ಸ್, ಐಐಎಫ್‌ಎಲ್, ಪವರ್ ಇಂಡಿಯಾ, ಹೀರೊ ಮೋಟೊ, ಆರ್‌ಬಿಎಲ್ ಬ್ಯಾಂಕ್, ಏಂಜಲ್ ಬ್ರೋಕಿಂಗ್ ಸೇರಿ ಕೆಲವು ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಕೋವಿಡ್ ಪ್ರಕರಣಗಳ ನಿಯಂತ್ರಣ ಮತ್ತು ಲಸಿಕೆ ಕಾರ್ಯಕ್ರಮಕ್ಕೆ ಎಷ್ಟರಮಟ್ಟಿಗೆ ವೇಗ ಸಿಗಲಿದೆ ಎನ್ನುವುದರ ಮೇಲೆ ಷೇರು ಮಾರುಕಟ್ಟೆ ಸೂಚ್ಯಂಕಗಳ ದಿಕ್ಕು ನಿರ್ಧಾರವಾಗಲಿದೆ. ಅಂತರರಾಷ್ಟ್ರೀಯ ವಿದ್ಯಮಾನಗಳೂ ಪರಿಣಾಮ ಬೀರಲಿವೆ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ಅಶ್ವತ್ಥಾಚಾರ್

ಜನನ: 18.02.1955 ಮರಣ: 26.04.2021

26.04.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ವೈಕುಂಠ ಸಮಾರಾಧನೆಯನ್ನು ದಿ: 07.05.2021 ಶುಕ್ರವಾರ ನಮ್ಮ ಸ್ವಗೃಹದಲ್ಲಿ ನಂ. 288, 5ನೇ ಮುಖ್ಯರಸ್ತೆ, ಕೆಸಿಎಚ್‌ಎಸ್ ಲೇಔಟ್, ನಾಗದೇವನಹಳ್ಳಿ, ಕೆಂಗೇರಿ, ಬೆಂಗಳೂರು–56 ಇಲ್ಲಿ ನೆರವೇರಿಸಲಾಗುವುದು

ದುಃಖತಪ್ತರು: ಕುಟುಂಬದವರು ಮತ್ತು ಬಂಧುಮಿತ್ರರು.

1940-2021

ಶ್ರೀ ಟಿ. ಮರಿಯಣ್ಣರವರು

ದಿನಾಂಕ 24–4–2021ನೇ ಶನಿವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ವೈಕುಂಠ ಸಮಾರಾಧನೆಯನ್ನು

ದಿನಾಂಕ 4–5–2021ನೇ ಮಂಗಳವಾರ ಮೃತರ ಸ್ವಗೃಹ # 968/25, 13ನೇ ಮೈನ್, 4ನೇ ಅಡ್ಡರಸ್ತೆ, ಪೈಪ್‌ಲೈನ್, ಹನುಮಂತನಗರ, ಬೆಂಗಳೂರು. ಇಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಭೋಜನ : ಮಧ್ಯಾಹ್ನ 12–30ಕ್ಕೆ

ಇಂತಿ ದುಃಖತಪ್ತರು

ಸಾವಿತ್ರಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗು ಬಂಧು–ಮಿತ್ರರು

ವೈಕುಂಠ ಸಮಾರಾಧನೆ

ಶ್ರೀಮತಿ ಗೌರಮ್ಮ

ದಿ. G.H. ಮುನಿರೆಡ್ಡಿಯವರ ಧರ್ಮಪತ್ನಿ ಇವರು ದಿನಾಂಕ 21–04–2021ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಇವರ ವೈಕುಂಠ ಸಮಾರಾಧನೆಯನ್ನು ದಿನಾಂಕ 3–05–2021ನೇ ಸೋಮವಾರ ಬೆಳಿಗ್ಗೆ 10:30 ರಿಂದ 12 ಗಂಟೆಯವರೆಗೆ ಅವರ ಸ್ವಗೃಹ ಗೋಣಿಘಟ್ಟಪುರ ಗ್ರಾಮದಲ್ಲಿ ನೆರವೇರಿಸಲಾಗುವುದು.

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು: ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು–ವರ್ಗದವರು.

VYKUNTA SAMARADHANE

DOB: 30.08.1947

DOD: 23.04.2021

Sri. C. GOPAL REDDY (Kodihalli)

Senior Congress Leader & Retd. NSSO Officer

Vykunta Samaradhane of Sri C. Gopal Reddy, who left for his heavenly abode will be held on 03.05.2021, Monday at Demises Residency "Rajani Nilaya", #2143/B, 6th Cross, 60 ft. road, HAL 3rd Stage, Kodihalli, Bangalore - 560 008. Mobile: 99450 50505.

In deep sorrow: Family, Relatives & Friends.

ಅಗತ್ಯ ವಸ್ತುಗಳ ವಿತರಣೆ: ರ‍್ಯಾಪಿಡೊ ಒಪ್ಪಂದ

ಬೆಂಗಳೂರು: ಓಡಾಟಕ್ಕೆ ನಿರ್ಬಂಧಗಳು ಇರುವ ಸಂದರ್ಭದಲ್ಲಿ ಜನರಿಗೆ ಅಗತ್ಯ ವಸ್ತುಗಳನ್ನು ತಲುಪಿಸಲು ರ‍್ಯಾಪಿಡೊ ಕಂಪನಿಯು ಸ್ವಿಗ್ಗಿ, ಜೊಮ್ಯಾಟೊ, ಬಿಗ್‌ಬಾಸ್ಕೆಟ್, ಡೆಲಿವರಿ, ಪ್ರಾಕ್ಟೊ, ಗ್ರ್ಯಾಬ್, ಎಕ್ಸ್‌ಪ್ರೆಸ್ ಬೀ ಮತ್ತು ಉಡಾನ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಬೆಂಗಳೂರು, ದೆಹಲಿ–ಎನ್‌ಸಿಆರ್, ಚೆನ್ನೈ, ಕೋಲ್ಕತ್ತ, ವಿಜಯವಾಡ, ತಿರುಪತಿ ಮತ್ತು ಗುಂಟೂರು ಪ್ರದೇಶಗಳಲ್ಲಿ ಅಗತ್ಯವಸ್ತುಗಳನ್ನು ತಲುಪಿಸಲು ರ‍್ಯಾಪಿಡೊ ನೆರವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೋವಿಡ್ ನಿಯಂತ್ರಣಕ್ಕೆ ಸ್ಥಳೀಯ ನಿರ್ಬಂಧಗಳು

ಏಪ್ರಿಲ್‌ನಲ್ಲಿ ಇಂಧನ ಬೇಡಿಕೆ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್–19ರ ಎರಡನೇ ಅಲೆ ನಿಯಂತ್ರಿಸಲು ಸ್ಥಳೀಯವಾಗಿ ನಿರ್ಬಂಧಗಳು ಜಾರಿಯಾದ ಕಾರಣ ಏಪ್ರಿಲ್‌ನಲ್ಲಿ ಇಂಧನ ಮಾರಾಟ ಇಳಿಕೆ ಕಂಡಿದೆ.

2019ರ ಏಪ್ರಿಲ್‌ನಲ್ಲಿ ಇದ್ದ ಒಟ್ಟಾರೆ ಇಂಧನ ಬೇಡಿಕೆಗೆ ಹೋಲಿಸಿದರೆ 2021ರ ಏಪ್ರಿಲ್ ಅಂತ್ಯಕ್ಕೆ ಶೇಕಡ 7ರಷ್ಟು ಇಳಿಕೆ ಆಗಿದೆ ಎಂದು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ಮಾರುಕಟ್ಟೆ ವಿಭಾಗದ ನಿರ್ದೇಶಕ ಅರುಣ್ ಸಿಂಗ್ ತಿಳಿಸಿದ್ದಾರೆ.

2020ರ ಏಪ್ರಿಲ್‌ನಲ್ಲಿ ವಿಧಿಸಿದ ಲಾಕ್‌ಡೌನ್‌ನಿಂದಾಗಿ ಬಹುತೇಕ ಎಲ್ಲ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಆ ತಿಂಗಳಿನಲ್ಲಿ ಇಂಧನ

ಮಾರಾಟವು ಅರ್ಧಕ್ಕಿಂತ ಹೆಚ್ಚು ಇಳಿಕೆ ಕಂಡಿತ್ತು. ಹೀಗಾಗಿ 2021ರ ಏಪ್ರಿಲ್ ತಿಂಗಳ ಮಾರಾಟದ ಅಂಕಿ–ಅಂಶವನ್ನು 2020ರ ಏಪ್ರಿಲ್ ತಿಂಗಳ ಮಾರಾಟದೊಂದಿಗೆ ಹೋಲಿಸುವುದು ಅಷ್ಟು ಸಮಂಜಸ ಆಗುವುದಿಲ್ಲ ಎಂದು ಅವರು ಹೇಳಿದ್ದಾರೆ.

ಕೋವಿಡ್‌ನ ಎರಡನೇ ಅಲೆಯು ಜೂನ್ ವೇಳೆಗೆ ಕಡಿಮೆ ಆಗುವ ನಿರೀಕ್ಷೆ ಇದ್ದು, ಆ ವೇಳೆಗೆ ಸ್ಥಳೀಯ ಇಂಧನ ಬೇಡಿಕೆಯು ಏರಿಕೆ ಕಾಣಲು ಆರಂಭಿಸಲಿದೆ ಎಂದೂ ಅವರು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಇಂಧನ ಮಾರಾಟ ಕಂಪನಿಗಳ ಪ್ರಾಥಮಿಕ ಮಾಹಿತಿಯ ಪ್ರಕಾರ, ಪೆಟ್ರೋಲ್ ಮಾರಾಟ 21.4 ಲಕ್ಷ ಟನ್‌ಗಳಿಗೆ ಇಳಿಕೆ ಆಗಿದೆ. ಆಗಸ್ಟ್ ಬಳಿಕ ಆಗಿರುವ ಕನಿಷ್ಠ ಪ್ರಮಾಣದ ಮಾರಾಟ ಇದಾಗಿದೆ.

ವಿಮಾನ ಇಂಧನ (ಎಟಿಎಫ್) ಮಾರಾಟವು ಮಾರ್ಚ್‌ಗೆ ಹೋಲಿಸಿದರೆ ಏಪ್ರಿಲ್‌ನಲ್ಲಿ 11.5ರಷ್ಟು ಇಳಿಕೆ ಅಗಿದೆ. ಅದೇ ರೀತಿ ಎಲ್‌ಪಿಜಿ ಮಾರಾಟವು ಮಾರ್ಚ್‌ಗೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಶೇ 3.3ರಷ್ಟು ಕಡಿಮೆ ಆಗಿದೆ.

ಜಿಎಸ್‌ಟಿಆರ್–3ಬಿ ವಿಳಂಬಕ್ಕೆ ಶುಲ್ಕ ಇಲ್ಲ

ನವದೆಹಲಿ (ಪಿಟಿಐ): ಮಾರ್ಚ್ ಮತ್ತು ಏಪ್ರಿಲ್‌ಗೆ ಸಂಬಂಧಿಸಿದಂತೆ ಜಿಎಸ್‌ಟಿಆರ್–3ಬಿ ಸಲ್ಲಿಕೆ ಹಾಗೂ ತೆರಿಗೆ ಪಾವತಿಯಲ್ಲಿನ ವಿಳಂಬಕ್ಕೆ ತೆರಬೇಕಾದ ಶುಲ್ಕವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಿದೆ. ಅಲ್ಲದೆ ವಿಳಂಬ ಪಾವತಿಗೆ ವಿಧಿಸುತ್ತಿದ್ದ ಬಡ್ಡಿ ದರವನ್ನೂ ಕಡಿತ ಮಾಡಿದೆ.

ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯ ಸಂದರ್ಭದಲ್ಲಿ ತೆರಿಗೆ ಪಾವತಿದಾರು ಜಿಎಸ್‌ಟಿ ನಿಯಮಗಳನ್ನು ಪಾಲಿಸುವಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ವಾರ್ಷಿಕ ₹ 5 ಕೋಟಿಗಿಂತಲೂ ಅಧಿಕ ಮೊತ್ತದ ವಹಿವಾಟು ನಡೆಸುವವರಿಗೆ ಜಿಎಸ್‌ಟಿಆರ್–3ಬಿ ಸಲ್ಲಿಸಲು 15 ದಿನಗಳ ಹೆಚ್ಚುವರಿ ಕಾಲಾವಕಾಶ ನೀಡಲಾಗಿದೆ. ವಿಳಂಬ ಶುಲ್ಕ ಇಲ್ಲದೆಯೇ ತೆರಿಗೆ ಪಾವತಿಸಲು ಅವಕಾಶ ನೀಡಲಾಗಿದೆ.

ವಾರ್ಷಿಕ ₹ 5 ಕೋಟಿಯವರೆಗಿನ ವಹಿವಾಟು ನಡೆಸುವವರಿಗೆ ಜಿಎಸ್‌ಟಿಆರ್–3ಬಿ ಸಲ್ಲಿಸಲು 30 ದಿನಗಳ ಹೆಚ್ಚುವರಿ ಕಾಲಾವಕಾಶ ಸಿಗಲಿದೆ. ವಿಳಂಬ ಶುಲ್ಕ ಇರುವುದಿಲ್ಲ ಎಂದು ಹೇಳಿದೆ.

ತಡವಾಗಿ ರಿಟರ್ನ್ಸ್ ಸಲ್ಲಿಸುವವರಿಗೆ ಬಡ್ಡಿ ದರ ಇಳಿಕೆ ಮಾಡಲಾಗಿದೆ. 15 ದಿನಗಳ ಹೆಚ್ಚುವರಿ ಅವಧಿಗೆ ಶೇಕಡ 9ರ ಬಡ್ಡಿದರ ಅನ್ವಯವಾಗಲಿದ್ದು, ಆ ಬಳಿಕ ಶೇ 18ರಷ್ಟು ಬಡ್ಡಿದರ ತೆರಬೇಕಾಗುತ್ತದೆ. ಈ ವಿನಾಯಿತಿಗಳು ಏಪ್ರಿಲ್ 18ರಿಂದಲೇ ಜಾರಿಗೆ ಬರಲಿವೆ ಎಂದು ಸಿಬಿಐಸಿ ಅಧಿಸೂಚನೆ ತಿಳಿಸಿದೆ.

ಜಿಎಸ್‌ಟಿಆರ್–1 ಸಲ್ಲಿಕೆ ಅವಧಿಯನ್ನು ಮೇ 11ರಿಂದ ಮೇ 26ರವರೆಗೆ ವಿಸ್ತರಿಸಲಾಗಿದೆ. ಕಂಪೋಸಿಷನ್ ಸ್ಕೀಮ್ ಆಯ್ಕೆ ಮಾಡಿಕೊಂಡಿರುವವರಿಗೆ ಜಿಎಸ್‌ಟಿಆರ್–4 ಸಲ್ಲಿಸಲು ಮೇ 31ರವರೆಗೆ ಅವಕಾಶ ನೀಡಲಾಗಿದೆ.

ಕಂಪನಿಗಳ ವಿದೇಶಿ ಸಾಲ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ಬಾಹ್ಯ ವಾಣಿಜ್ಯ ಸಾಲದ (ಇಸಿಬಿ) ಮೂಲಕ ಭಾರತದ ಕಂಪನಿಗಳು ಮಾರ್ಚ್‌ನಲ್ಲಿ ಪಡೆದಿರುವ ಸಾಲದ ಮೊತ್ತವು ಹಿಂದಿನ ವರ್ಷದ ಮಾರ್ಚ್‌ಗೆ ಹೋಲಿಸಿದರೆ ಶೇಕಡ 24ರಷ್ಟು ಹೆಚ್ಚಾಗಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಕಂಪನಿಗಳು ಪಡೆದಿರುವ ಸಾಲವು 2020ರ ಮಾರ್ಚ್‌ನಲ್ಲಿ ₹ 55,056 ಕೋಟಿಗಳಷ್ಟಿತ್ತು. ಇದು 2021ರ ಮಾರ್ಚ್‌ನಲ್ಲಿ ₹ 68,302 ಕೋಟಿಗಳಿಗೆ ತಲುಪಿದೆ. ಐಆರ್‌ಎಫ್‌ಸಿ, ಒಎನ್‌ಜಿಸಿ ವಿದೇಶ್ ರೋವುಮಾ ಮತ್ತು ಆರ್‌ಇಸಿ ಲಿಮಿಟೆಡ್, ಅದಾನಿ ಹೈಬ್ರಿಡ್ ಎನರ್ಜಿ ಜೈಸಲ್ಮೇರ್, ಭಾರ್ತಿ ಏರ್‌ಟೆಲ್, ಪಿಜಿಪಿ ಗ್ಲಾಸ್ ಮತ್ತು ಎನ್‌ಟಿಪಿಸಿ ಸೇರಿದಂತೆ ಹಲವು ಕಂಪನಿಗಳು ಬಂಡವಾಳ ಸಂಗ್ರಹಿಸಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹427

ನಿಧನ ವಾರ್ತೆ

ಆಸ್ಕರ್ ಪುರಸ್ಕೃತೆ,ಹಿರಿಯ ನಟಿ ಒಲಿಂಪಿಯಾ ಡುಕಾಕಿಸ್

ಒಲಿಂಪಿಯಾ ಡುಕಾಕಿಸ್

ಮೇಪಲ್‌ವುಡ್, ಅಮೆರಿಕ (ಎಪಿ): ರಂಗಭೂಮಿ ಮತ್ತು ಹಾಲಿವುಡ್‌ನ ಹಿರಿಯ ನಟಿ ಒಲಿಂಪಿಯಾ ಡುಕಾಕಿಸ್ (89) ಅವರು ಶನಿವಾರ ನ್ಯೂಯಾರ್ಕ್‌ನಲ್ಲಿ ನಿಧನರಾದರು.

ಕೆಲವು ತಿಂಗಳುಗಳಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

ಮೆಸಾಚುಸೆಟ್ಸ್‌ನವರಾದ ಡುಕಾಕಿಸ್, ರೊಮ್ಯಾಂಟಿಕ್ ಹಾಸ್ಯ ಪ್ರಧಾನ ಚಿತ್ರ 'ಮೂನ್ ಸ್ಟ್ರಕ್'ನಲ್ಲಿ ತಾಯಿಯ ಪಾತ್ರದಲ್ಲಿ ಗಮನಸೆಳೆಯುವ ನಿರ್ವಹಣೆ ನೀಡಿದ್ದರು. ಈ ಪಾತ್ರಕ್ಕಾಗಿ ಅವರಿಗೆ ಆಸ್ಕರ್ ಪ್ರಶಸ್ತಿ (1988ರಲ್ಲಿ) ಒಲಿದಿತ್ತು.

ಪೋಷಕ ಪಾತ್ರಗಳ ಮೂಲಕವೇ ಅವರು ಹೆಸರು ಮಾಡಿದ್ದರು. ಸುಮಾರು 62 ಚಿತ್ರಗಳು, 51 ಟಿವಿ ಸರಣಿ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಿದ್ದರು.

ಅವರ ಪತಿ, ನಟ ಲೂಯಿಸ್ ಜೋರಿಕ್ ಅವರು 2018ರಲ್ಲಿ ನಿಧನರಾಗಿದ್ದರು.

ಶೀಘ್ರ ಭಾರತಕ್ಕೆ ವಾಪಸು: ಆದಾರ್ ಪೂನಾವಾಲಾ

ಮುಂಬೈ (ಪಿಟಿಐ): 'ಲಂಡನ್‌ನಿಂದ ಭಾರತಕ್ಕೆ ಕೆಲವೇ ದಿನಗಳಲ್ಲಿ ವಾಪಸು ಬರುತ್ತೇನೆ' ಎಂದು ಕೊವಿಶೀಲ್ಡ್ ಲಸಿಕೆ ಉತ್ಪಾದಿಸುವ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್‌ನ ಸಿಇಒ ಆದಾರ್ ಪೂನಾವಾಲಾ ಹೇಳಿದ್ದಾರೆ.

ಲಸಿಕೆ ಉತ್ಪಾದನೆ ಕುರಿತಂತೆ ಇರುವ ತೀವ್ರ ಒತ್ತಡ ಕುರಿತ ಮಾತುಗಳ ಹಿಂದೆಯೇ ಅವರು ಈ ಹೇಳಿಕೆ ನೀಡಿದ್ದಾರೆ. ದೇಶದಲ್ಲಿ ಕೋವಿಡ್ ಸೋಂಕು ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿದ್ದಂತೆ ಲಸಿಕೆಗೂ ತೀವ್ರತರದ ಬೇಡಿಕೆ ಕಂಡುಬಂದಿದೆ.

'ಬ್ರಿಟನ್‌ನಲ್ಲಿನ ನನ್ನ ಎಲ್ಲ ಭಾಗಿದಾರರು, ಪಾಲುದಾರರ ಜೊತೆಗೆ ವಿಸ್ತೃತವಾದ ಚರ್ಚೆ ನಡೆಸಿದ್ದೇನೆ. ಪುಣೆಯಲ್ಲಿ ಕೋವಿಶೀಲ್ಡ್ ಲಸಿಕೆ ಉತ್ಪಾದನೆ ತ್ವರಿತಗತಿಯಲ್ಲಿ ನಡೆಯುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಕೆಲವೇ ದಿನಗಳಲ್ಲಿ ದೇಶಕ್ಕೆ ಮರಳಲಿದ್ದು, ಸಂಸ್ಥೆಯ ಕಾರ್ಯ ಚಟುವಟಿಕೆಯನ್ನು ಪರಿಶೀಲಿಸುತ್ತೇನೆ' ಎಂದು ಅವರು ಮಧ್ಯರಾತ್ರಿ ಟ್ವೀಟ್ ಮಾಡಿದ್ದಾರೆ.

ಈ ವಾರದ ಆರಂಭದಲ್ಲಿ ಭಾರತ ಸರ್ಕಾರ ಪೂನಾವಾಲಾ ಅವರಿಗೆ ವೈ ಶ್ರೇಣಿಯ ಭದ್ರತೆಯನ್ನು ಒದಗಿಸಿತ್ತು.

ದ ಟೈಮ್ಸ್ ಪತ್ರಿಕೆಗೆ ನೀಡಿದ್ದ ಸಂದರ್ಶನದಲ್ಲಿ, ಭಾರತದಲ್ಲಿ ನನಗೆ ಕೆಲವು ಪ್ರಭಾವಿಗಳಿಗೆ ತೀವ್ರ ಒತ್ತಡ ಬರುತ್ತಿದೆ ಎಂದು ಹೇಳಿಕೊಂಡಿದ್ದರು. ಇದೇ ಒತ್ತಡದಿಂದಾಗಿ ಪತ್ನಿ, ಮಕ್ಕಳ ಜೊತೆಗೆ ಅವರು ಲಂಡನ್‌ಗೆ ತೆರಳಿದ್ದಾಗಿಯೂ ತಿಳಿಸಿದ್ದರು.

'ಅಂತಹ ಪರಿಸ್ಥಿತಿಗೆ ಮರಳಲು ಬಯಸದೇ ತಕ್ಷಣಕ್ಕೆ ಇಲ್ಲಿ ನನ್ನ ವಾಸ್ತವ್ಯದ ಅವಧಿಯನ್ನು ವಿಸ್ತರಿಸಿದ್ದೇನೆ. ಎಲ್ಲ ಭಾರವು ನನ್ನ ಮೇಲಿದೆ. ಆದರೆ, ಒಬ್ಬನೇ ನಿಭಾಯಿಸಲಾಗದು. ಇಂಥ ಸ್ಥಿತಿಯಲ್ಲಿ ಅಲ್ಲಿರಲು ಬಯಸುವುದಿಲ್ಲ. ಕೆಲವರಿಗೆ ಲಸಿಕೆ ಒದಗಿಸಲು ಆಗುತ್ತಿಲ್ಲ ಎಂದರೆ, ಅವರು ಏನೆಲ್ಲಾ ಮಾಡಬಹುದು ಎಂದು ಊಹಿಸಿಕೊಳ್ಳಿ' ಎಂದೂ ಸಂದರ್ಶನದಲ್ಲಿ ಹೇಳಿಕೊಂಡಿದ್ದರು.

'ಸಂಭವನೀಯ ಬೆದರಿಕೆ ಕಾರಣ ಪೂನಾವಾಲಾ ಅವರಿಗೆ ಭದ್ರತೆ ನೀಡಿದ್ದು, ಸಿಆರ್‌ಪಿಎಫ್‌ನ ಶಸ್ತ್ರಸಜ್ಜಿತ ಸಿಬ್ಬಂದಿ ಒದಗಿಸಲಾಗಿತ್ತು. ವೈ ಶ್ರೇಣಿ ಭದ್ರತೆಯಡಿ 4–5 ಕಮ್ಯಾಂಡೊಗಳನ್ನು ನೀಡಲಾಗುತ್ತದೆ' ಎಂದು ಮೂಲಗಳು ತಿಳಿಸಿದ್ದವು.

ಭೂಮಿಗೆ ಮರಳಿದ ನಾಲ್ವರು ಗಗನಯಾತ್ರಿಗಳು

ಕೇಪ್ ಕಾನಾವೆರಲ್, ಅಮೆರಿಕ (ಎ.ಪಿ): ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಿಂದ ನಾಲ್ವರು ಗಗನಯಾತ್ರಿಗಳು ಭಾನುವಾರ ಸ್ಪೇಸ್‌ಎಕ್ಸ್‌ನ ರಿಸೈಲೆನ್ಸ್ ಹೆಸರಿನ ಉಡಾವಣಾ ನೌಕೆಯ ಮೂಲಕ ಮರಳಿದ್ದಾರೆ. 'ಅಪೊಲೊ 8'ರ ಬಳಿಕ ರಾತ್ರಿ ವೇಳೆ ಭೂಮಿಗೆ ಇಳಿದ ಎರಡನೇ ಯಶಸ್ವಿ ಹಿಂಪಯಣ ಇದಾಗಿದೆ.

ಗಗನಯಾತ್ರಿಗಳನ್ನು ಹೊತ್ತ ನೌಕೆಯು ಆರೂವರೆ ಗಂಟೆಗಳ ಸತತ ಪ್ರಯಾಣದ ನಂತರ ಪನಾಮಾ ನಗರದ ಕರಾವಳಿಯ ಸಮುದ್ರ ಭಾಗದಲ್ಲಿ ಬೆಳಗಿನ ಜಾವ ಮೂರು ಗಂಟೆಗೆ ಇಳಿಯಿತು. ಅಮೆರಿಕದ ಮೂವರು, ಜಪಾನ್‌ನ ಒಬ್ಬರು ಗಗನಯಾತ್ರಿಗಳು ಇದ್ದರು. ರೀಸೈಲೆನ್ಸ್ ನೌಕೆಯನ್ನು ಕಳೆದ ನವೆಂಬರ್ ತಿಂಗಳು ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲಾಗಿತ್ತು.

ರಾತ್ರಿಯ ಮಹತ್ವ: ಗಗನಯಾತ್ರಿಗಳು ಬಹುತೇಕ ಹಗಲು ಹೊತ್ತಿನಲ್ಲೇ ಭೂಮಿಗೆ ಮರಳುವುದು ವಾಡಿಕೆ. ಆದರೆ ತೀರಾ ಅಪರೂಪಕ್ಕೆ ಎಂಬಂತೆ ರಾತ್ರಿ ಹೊತ್ತಲ್ಲಿ ಸಹ ಭೂಮಿಗೆ

ಸ್ಪೇಸ್‌ಎಕ್ಸ್‌ನ ರೀಸೈಲೆನ್ಸ್ ಹೆಸರಿನ ನೌಕೆಯಲ್ಲಿ ಬಂದಿಳಿದ ಗಗನಯಾತ್ರಿಗಳಾದ ಶನನ್ ವಾಕರ್, ವಿಕ್ಟರ್ ಗ್ಲೋವರ್, ಮೈಕ್ ಹಾಕಿನ್ಸ್ ಮತ್ತು ಜಪಾನ್‌ನ ಸೋಯ್ಚಿ ನೊಗುಚಿ ಚಿತ್ರವನ್ನು ನಾಸಾ ಬಿಡುಗಡೆ ಮಾಡಿದೆ

ಮರಳುವ ಸಂದರ್ಭ ಇರುತ್ತದೆ. ಚಂದ್ರನತ್ತ ಮಾನವನ ಮೊದಲ ಪ್ರಯಾಣವಾಗಿದ್ದ ಅಪೊಲೊ 8ರಲ್ಲಿದ್ದ ಗಗನಯಾನಿಗಳು 1968ರ ಡಿಸೆಂಬರ್ 27ರಂದು ರಾತ್ರಿ ಹೊತ್ತಲ್ಲಿ ಪೆಸಿಫಿಕ್ ಸಾಗರದಲ್ಲಿ ಬಂದಿಳಿದಿದ್ದರು. ಎಂಟು ವರ್ಷಗಳ ಬಳಿಕ ಸೋವಿಯತ್‌ನ ಗಗನನೌಕೆಯೊಂದು ಸಹ ಕಜಕಿಸ್ತಾನದಲ್ಲಿನ ಸರೋವರಕ್ಕೆ ಬಂದಿಳಿದಿತ್ತು, ಆದರೆ ಅದು ಸ್ಫೋಟಿಸಿತ್ತು. ಆ ಬಳಿಕ ಇದೇ ಮೊದಲ ಬಾರಿಗೆ ಗಗನನೌಕೆಯೊಂದ ರಾತ್ರಿ ಹೊತ್ತು ಭೂಮಿಗೆ ಬಂದಿಳಿದಿದೆ. ಯಾವುದೇ ಪರಿಸ್ಥಿತಿ ಎದುರಿಸಲು ಸಜ್ಜಾಗಿರಬೇಕು ಎಂಬ ನಿಟ್ಟಿನಲ್ಲಿ ರಾತ್ರಿ ಹೊತ್ತಲ್ಲೇ ಭೂಮಿಗೆ ಇಳಿಯುವುದಕ್ಕಾಗಿ ಸ್ಪೇಸ್‌ಎಕ್ಸ್ ಇದರ ಬಗ್ಗೆ ಬಹಳ ತಯಾರಿ ನಡೆಸಿತ್ತು.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಪ್ರಯಾಣಿಸದಂತೆ ಇಸ್ರೇಲ್ ನಿರ್ಬಂಧ

ಜೆರುಸಲೇಂ: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭಾರತ ಸೇರಿದಂತೆ ಒಟ್ಟು ಆರು ದೇಶಗಳಿಗೆ ಪ್ರಯಾಣಿಸದಂತೆ ಇಸ್ರೇಲ್ ಸರ್ಕಾರ ನಿರ್ಬಂಧ ವಿಧಿಸಿದೆ.

ಇಸ್ರೇಲ್‌ನ ನಾಗರಿಕರು ಉಕ್ರೇನ್, ಬ್ರೆಜಿಲ್, ದಕ್ಷಿಣ ಆಫ್ರಿಕಾ, ಭಾರತ, ಮೆಕ್ಸಿಕೊ ಮತ್ತು ಟರ್ಕಿಗೆ ಪ್ರವಾಸ ಕೈಗೊಳ್ಳಬಾರದೆಂದು ಪ್ರಧಾನಿ ಕಚೇರಿ ಮತ್ತು ಆರೋಗ್ಯ ಸಚಿವಾಲಯವು ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಈ ನಿರ್ಬಂಧವು ಮೇ 3ರಿಂದ ಮೇ 16ರ ತನಕ ಜಾರಿಯಲ್ಲಿರಲಿದೆ.

ಭಾರತಕ್ಕೆ ವೈದ್ಯಕೀಯ ಪರಿಕರಗಳನ್ನು ರವಾನಿಸಿದ ತೈವಾನ್

ತೈಪೆ(ತೈವಾನ್): ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ನೆರವಾಗುವ ಸಂಬಂಧ ತೈವಾನ್ ರಾಷ್ಟ್ರ, ಆಮ್ಲಜನಕದ 150 ಕಾನ್ಸನ್‌ಟ್ರೇಟರ್ ಮತ್ತು 500 ಸಿಲಿಂಡರ್‌ಗಳನ್ನು ಕಳುಹಿಸಿಕೊಟ್ಟಿದೆ ಎಂದು ತೈವಾನ್ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಭಾನುವಾರ ಬೆಳಿಗ್ಗೆ ಚೀನಾ ಏರ್‌ಲೈನ್ಸ್ ಕಾರ್ಗೊ ವಿಮಾನದ ಮೂಲಕ ಈ ಎಲ್ಲ ವೈದ್ಯಕೀಯ ಪರಿಕರಗಳು ರವಾನೆಯಾಗಿದೆ. ಈ ಪರಿಕರಗಳನ್ನು ಭಾರತದ ರೆಡ್‌ಕ್ರಾಸ್ ಸಂಸ್ಥೆ ಸ್ವೀಕರಿಸಲಿದೆ ಎಂದು ತೈವಾನ್‌ನ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಭಾರತಕ್ಕೆ ಅಗತ್ಯವಿರುವ ನೆರವು ನೀಡುವುದಾಗಿ ತೈವಾನ್ ತಿಳಿಸಿದೆ.

'ತೈವಾನ್, ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳು ಮತ್ತು ಸಿಲಿಂಡರ್‌ಗಳು ತೈವಾನ್ ಪ್ರೀತಿಯಿಂದ ಕಳುಹಿಸಿಕೊಡುತ್ತಿದೆ. ಇನ್ನಷ್ಟು ನೆರವು ಶೀಘ್ರದಲ್ಲೇ ಭಾರತದಲ್ಲಿರುವ ನಮ್ಮ ಸ್ನೇಹಿತರಿಗಾಗಿ ತಲುಪಲಿದೆ. #ಇಂಡಿಯಾ ಸ್ಟೇಸ್ಟ್ರಾಂಗ್!" ಎಂಬ ಹ್ಯಾಷ್‌ಟ್ಯಾಗ್ ಸೇರಿಸಿ ವಿದೇಶಾಂಗ ಸಚಿವ ಜೋಸೆಫ್ ವು ಟ್ವೀಟ್ ಮಾಡಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

ವ್ಯಾಪಾರ

Business to Business

Hotel & Restaurant

BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/9606701007

ಭವಿಷ್ಯ

Astrology

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹೆಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ, 25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Multiple Vacancy

GRAMIN ROJGAR Kalyan Sansthan is recruiting for various posts. Applications are being invited for Karnataka. Visit www.grks.org for details

Part-Time Jobs

ಮನೆಯಿಂದಲೇ ಕಂಪ್ಯೂಟರ್ ಆಫ್ ಲೈನ್ ಡೆಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ವಾರಕ್ಕೆ 3000/- ವಯಸ್ಸಿನ ಮಿತಿಯಿಲ್ಲ 9902603707, 9686115054

Classifieds

Book Your Classifieds Ads

Online Log in to dhclassifieds.com

For More Details Call
9880856233 • 9886213331
Email: Santhoshkumar@deccanherald.co.in

REMEMBRANCE & OBITUARIES

If you wish to pay homage to your loved ones who have left for their heavenly abode or just want to express gratitude to your kith and kin, we would be honoured to guide you with all that is necessary to express your wishes in our esteemed newspapers,

DECCAN HERALD & PRAJAVANI

Please contact us at :

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
E-mail: dhclassifieds@deccanherald.co.in

ಕೋವಿಡ್: ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಚರ್ಚೆ

ವೈದ್ಯ, ನರ್ಸಿಂಗ್ ವಿದ್ಯಾರ್ಥಿಗಳ ಸೇವೆ ಬಳಕೆ

ನವದೆಹಲಿ (ಪಿಟಿಐ): ಕೋವಿಡ್–19 ಪಿಡುಗಿನ ವಿರುದ್ಧ ದೇಶ ನಡೆಸುತ್ತಿರುವ ಹೋರಾಟದಲ್ಲಿ ವೈದ್ಯಕೀಯ ಮತ್ತು ನರ್ಸಿಂಗ್ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿರುವ ಹಾಗೂ ಕೋರ್ಸ್ ಪೂರ್ಣಗೊಳಿಸಿರುವವರನ್ನು ತೊಡಗಿಸಿಕೊಳ್ಳಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ಕೋವಿಡ್–19 ಪರಿಸ್ಥಿತಿ ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾನುವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಕುರಿತು ಪ್ರಸ್ತಾಪವಾಯಿತು ಎಂದು ಮೂಲಗಳು ಹೇಳಿವೆ.

ಈ ಸಭೆಯಲ್ಲಿ ಕೈಗೊಂಡ ನಿರ್ಧಾರಗಳ ಕುರಿತ ಹೆಚ್ಚಿನ ವಿವರಗಳು ಸೋಮವಾರ ಬಹಿರಂಗವಾಗುವ ಸಾಧ್ಯತೆಗಳಿವೆ ಎಂದು ಇದೇ ಮೂಲಗಳು ಹೇಳಿವೆ.

‘ಸ್ನಾತಕೋತ್ತರ ಪದವಿ ಪ್ರವೇಶ ಪಡೆಯಲಿಕ್ಕಿರುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ನೀಟ್) ಮುಂದೂಡುವುದು. ಈ ಪರೀಕ್ಷೆಗಾಗಿ ಅಧ್ಯಯನ ಮಾಡುತ್ತಿರುವ ಎಂಬಿಬಿಎಸ್ ಪದವೀಧರರನ್ನು ಕೋವಿಡ್ ಕರ್ತವ್ಯಕ್ಕೆ ಸೇರಿಕೊಳ್ಳುವಂತೆ ಪ್ರೋತ್ಸಾಹಿಸುವ ಬಗ್ಗೆ ಸಭೆಯಲ್ಲಿ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ’ ಎಂದು ಮೂಲಗಳು ಹೇಳಿವೆ.

‘ಎಂಬಿಬಿಎಸ್ ಹಾಗೂ ನರ್ಸಿಂಗ್ ಕೋರ್ಸ್‌ನ ಅಂತಿಮ ವರ್ಷದ ವಿದ್ಯಾರ್ಥಿಗಳ ಸೇವೆಯನ್ನು ಸಹ ಪಡೆಯುವ ಬಗ್ಗೆ ಸಭ ಚರ್ಚಿಸಿದ್ದು, ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ’ ಎಂದು ಹೇಳಿವೆ.

‘ಈಗಾಗಲೇ ಕೋವಿಡ್–19 ಕರ್ತವ್ಯದ ಮೇಲಿರುವವರಿಗೆ ಮುಂದಿನ ದಿನಗಳಲ್ಲಿ ನಡೆಯುವ ನೇಮಕಾತಿಯಲ್ಲಿ ಆದ್ಯತೆ ಹಾಗೂ ಪ್ರೋತ್ಸಾಹ ಧನ ನೀಡುವ ಬಗ್ಗೆಯೂ ಚರ್ಚೆ ನಡೆದಿದೆ’ ಎಂದು ಇವೇ ಮೂಲಗಳು ಹೇಳಿವೆ.

ಲಸಿಕೆ ದರ: ಸ್ವದೇಶಿ ಜಾಗರಣ ಮಂಚ್ ಆಕ್ಷೇಪ

ನವದೆಹಲಿ (ಪಿಟಿಐ): ‘ರಾಜ್ಯ ಸರ್ಕಾರ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಕೋವಿಡ್–19 ಲಸಿಕೆ ತಯಾರಕರು ಘೋಷಿಸಿರುವ ಬೆಲೆ ದುಬಾರಿಯಾಗಿದೆ’ ಎಂದು ಆರ್‌ಎಸ್‌ಎಸ್ ಅಂಗಸಂಸ್ಥೆ ಸ್ವದೇಶಿ ಜಾಗರಣ್ ಮಂಚ್(ಎಸ್‌ಜೆಎಂ) ತಿಳಿಸಿದೆ.

ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಬೆಲೆಗಳನ್ನು ಉಲ್ಲೇಖಿಸಿ ಹೇಳಿರುವ ಸಂಘಟನೆ, ಲಸಿಕೆಗಳನ್ನು ಹೆಚ್ಚು ಕೈಗೆಟಕುವಂತೆ ಮಾಡಲು ಕೇಂದ್ರವು ವೆಚ್ಚವನ್ನು ಭರಿಸಬೇಕು ಎಂದಿದೆ.

‘ಜನರಿಗೆ ಅಗತ್ಯಕ್ಕೆ ಅನುಗುಣವಾಗಿ ಲಭ್ಯವಾಗುವುದರ ಜೊತೆಗೆ ಕೈಗೆಟಕುವ ಬೆಲೆಗೆ ದೊರಕುವಂತಾಗಲು ಹೆಚ್ಚಿನ ಕಂಪನಿಗಳಿಗೆ ಲಸಿಕೆ ತಯಾರಿಸಲು ಅವಕಾಶ ನೀಡಬೇಕು’ ಎಂದು ಮಂಚ್‌ನ ಸಹ ಸಂಚಾಲಕ ಅಶ್ವನಿ ಮಹಾಜನ್ ಒತ್ತಾಯಿಸಿದ್ದಾರೆ.

‘ಕೋವಿಡ್: ಸ್ವರೂಪ ಅಂದಾಜು ವಿಫಲ’

ನವದೆಹಲಿ (ಪಿಟಿಐ): ದೇಶದಲ್ಲಿ ಕೊರೊನಾ ವೈರಸ್ ಸೋಂಕಿನ ಎರಡನೇ ಅಲೆ ಕುರಿತು ನಿಖರವಾಗಿ ಮುನ್ಸೂಚನೆ ನೀಡುವುದು ಸಾಧ್ಯವಾಗಲಿಲ್ಲ ಎಂದು ವಿಜ್ಞಾನಿಗಳ ತಂಡವೊಂದು ಭಾನುವಾರ ಹೇಳಿದೆ.

ಕೊರೊನಾ ವೈರಸ್‌ನ ಎರಡನೇ ಅಲೆ, ಅದರಿಂದಾಗುವ ಹಾನಿ ಕುರಿತು ಈ ವಿಜ್ಞಾನಿಗಳ ಈ ತಂಡ ಗಣಿತ ಮಾದರಿಯೊಂದರ ಆಧಾರದ ಮೇಲೆ ಸಂಶೋಧನೆ ಕೈಗೊಂಡಿದೆ.

‘ಎರಡನೇ ಅಲೆ ವೇಳೆ ಕೊರೊನಾ ವೈರಸ್ ಸೋಂಕು ಎಷ್ಟು ವೇಗವಾಗಿ ಪ್ರಸರಣವಾಗುತ್ತದೆ, ವೈರಸ್‌ನ ಸ್ವರೂಪ ಹೇಗಿರಲಿದೆ ಹಾಗೂ ಎಷ್ಟು ದಿನಗಳ ವರೆಗೆ ಇದು ಬಾಧಿಸಲಿದೆ ಎಂಬ ಅಂಶಗಳ ಕುರಿತು ಅಂದಾಜಿಸಲು ಆಗಲಿಲ್ಲ’ ಎಂದೂ ವಿಜ್ಞಾನಿಗಳು ಹೇಳಿದ್ದಾರೆ.

ಈ ಕುರಿತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪ್ರಕಟಣೆಯನ್ನು ಬಿಡುಗಡೆ ಮಾಡಿದೆ. ಐಐಟಿ–ಕಾನ್ಪುರ ಪ್ರಾಧ್ಯಾಪಕ ಮಣೀಂದ್ರ ಅಗ್ರವಾಲ್, ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್‌ನ ಡೆಪ್ಯುಟಿ ಚೀಫ್ ಮಾಧುರಿ ಕಾನಿಟ್ಕರ್, ಐಐಟಿ–ಹೈದರಾಬಾದ್‌ನ ಪ್ರಾಧ್ಯಾಪಕ ಎಂ.ವಿದ್ಯಾಸಾಗರ ಅವರು ಈ ಪ್ರಕಟಣೆಗೆ ಸಹಿ ಹಾಕಿದ್ದಾರೆ.

‘ಸೂತ್ರ’ ಮಾದರಿ ಆಧಾರದಲ್ಲಿ ಸಂಶೋಧನೆ ಕೈಗೊಂಡಿದ್ದ ವಿಜ್ಞಾನಿಗಳು ಮಾರ್ಚ್‌ನಲ್ಲಿ ಎರಡನೇ ಅಲೆ ಕಾಣಿಸಿಕೊಳ್ಳುವುದಾಗಿ ಎಚ್ಚರಿಸಿದ್ದರು. ಅವರ ಎಚ್ಚರಿಕೆಯನ್ನು ಕಡೆಗಣಿಸಲಾಗಿತ್ತು ಎಂಬ ವರದಿಗಳನ್ನು ಈ ವಿಜ್ಞಾನಿಗಳು ತಳ್ಳಿಹಾಕಿದ್ದಾರೆ.

‘2ನೇ ಅಲೆಯು ಏಪ್ರಿಲ್‌ನ ಮೂರನೇ ವಾರದಲ್ಲಿ ಗರಿಷ್ಠ ಮಟ್ಟ ತಲುಪಲಿದ್ದು, ಪ್ರತಿ ದಿನ 1 ಲಕ್ಷದಷ್ಟು ಪ್ರಕರಣಗಳು ವರದಿಯಾಗಲಿವೆ ಎಂಬುದಾಗಿ ಗಣಿತ ಮಾದರಿ ಆಧಾರದಲ್ಲಿ ಅಂದಾಜಿಸಲಾಗಿತ್ತು’ ಎಂದು ಈ ವಿಜ್ಞಾನಿಗಳು ವಿವರಿಸಿದ್ದಾರೆ.

‘ಸೋಂಕು ಪ್ರಸರಣ ಕುರಿತು ಕೇಂದ್ರ ಸರ್ಕಾರ ಏಪ್ರಿಲ್ 2ರಂದು ನಮ್ಮ ಅಭಿಪ್ರಾಯ ಕೇಳಿತ್ತು. ಏಪ್ರಿಲ್ ಮೂರನೇ ವಾರದಲ್ಲಿ ಗರಿಷ್ಠ ಸಂಖ್ಯೆಯ ಪ್ರಕರಣಗಳು ಪತ್ತೆಯಾಗಬಹುದು ಎಂದು ಸರ್ಕಾರಕ್ಕೆ ಮುನ್ಸೂಚನೆಯನ್ನು ನೀಡಲಾಗಿತ್ತು’ ಎಂದೂ ಹೇಳಿದ್ದಾರೆ.

‘ಕೊರೊನಾ ವೈರಸ್ ಬಹಳ ಕ್ಷಿಪ್ರಗತಿಯಲ್ಲಿ ತನ್ನ ಸ್ವರೂಪವನ್ನು ಬದಲಾಯಿಸುತ್ತಿದೆ. ಇಂಥ ಸನ್ನಿವೇಶದಲ್ಲಿ ವೈರಸ್‌ನಿಂದಾಗುವ ಹಾನಿ ಕುರಿತು ನಿರಂತರ ಅಧ್ಯಯನ ನಡೆಸಬೇಕಾಗುತ್ತದೆ. ಕೆಲವೊಮ್ಮೆ ಪ್ರತಿನಿತ್ಯ ಅದರ ಬಗ್ಗೆ ಸಂಶೋಧನೆ ಅಗತ್ಯ’ ಎಂದೂ ವಿಜ್ಞಾನಿಗಳು ಹೇಳಿದ್ದಾರೆ.



ತಜ್ಞರ ಸಮಿತಿ ವರದಿ ಆಧರಿಸಿ ಕರ್ಫ್ಯೂ ವಿಸ್ತರಣೆ ತೀರ್ಮಾನ– ಬೊಮ್ಮಾಯಿ

ಬೆಂಗಳೂರು: ‘ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ರಾಜ್ಯದಲ್ಲಿ ಹೇರಿರುವ ಲಾಕ್‌ಡೌನ್ ಮಾದರಿಯ ಕರ್ಫ್ಯೂ ವಿಸ್ತರಿಸುವ ಕುರಿತು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ನೀಡುವ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಬೊಮ್ಮಾಯಿ, ಶನಿವಾರ ರಾತ್ರಿ ಆ ಜಿಲ್ಲೆಯ ಕೋವಿಡ್ ಪರಿಸ್ಥಿತಿ ಕುರಿತು ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

‘ಸದ್ಯ ಇದೇ 12ರವರೆಗೆ ಕರ್ಫ್ಯೂ ಜಾರಿಗೊಳಿಸಲಾಗಿದೆ. ಈ ಅವಧಿ ಮುಗಿಯುವ ಎರಡು ದಿನ ಮೊದಲು, ಅಂದರೆ ಮೇ 10ರ ವೇಳೆಗೆ ರಾಜ್ಯದಲ್ಲಿನ ಕೋವಿಡ್ ಸ್ಥಿತಿಗತಿ, ಸೋಂಕು ಹರಡುವಿಕೆ ಪ್ರಮಾಣದ ಕುರಿತು ತಾಂತ್ರಿಕ ಸಲಹಾ ಸಮಿತಿ ಪರಿಶೀಲಿಸಲಿದೆ’ ಎಂದರು. ‘ಕೋವಿಡ್ ಪರಿಸ್ಥಿತಿ ವಾಸ್ತವ ಅಂಶವನ್ನು ತಾಂತ್ರಿಕ ಸಲಹಾ ಸಮಿತಿ ಪರಾಮರ್ಶಿಸಿದ ಬಳಿಕ, ಸೂಕ್ತ ನಿರ್ಧಾರವನ್ನು ಸಮಿತಿ ಕೈಗೊಳ್ಳಲಿದೆ. ಬಳಿಕ ಕರ್ಫ್ಯೂ ವಿಸ್ತರಿಸಬೇಕೊ, ಬೇಡವೊ ಅಥವಾ ಬೇರೆ ಯಾವುದಾದರೂ ಹೊಸ ಕ್ರಮ ಅನುಸರಿಸಬೇಕೊ ಎಂಬ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರ್ಧರಿಸಲಾಗುವುದು’ ಎಂದು ಬೊಮ್ಮಾಯಿ ಹೇಳಿದರು.

ಪಥಸಂಚಲನ ಕೋವಿಡ್–19 ಪ್ರಸರಣ ತಡೆಗಾಗಿ ರಾಜಸ್ಥಾನದ ಜೈಪುರದಲ್ಲಿ ಲಾಕ್‌ಡೌನ್ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಅಶ್ವಾರೂಢ ಪೊಲೀಸರು ಭಾನುವಾರ ಪಥಸಂಚಲನ ನಡೆಸಿದರು –ಪಿಟಿಐ ಚಿತ್ರ

ಸಾ.ರಾ.ಸ್ನೇಹ ಬಳಗದಿಂದ 200 ಬೆಡ್‌ಗಳ ಆಸ್ಪತ್ರೆ

ಮೈಸೂರು: ‘ಸಾ.ರಾ.ಸ್ನೇಹ ಬಳಗದಿಂದ ಜಿಲ್ಲೆಯ ಕೆ.ಆರ್. ನಗರದಲ್ಲಿ 200 ಬೆಡ್‌ಗಳ ಸುಸಜ್ಜಿತ ಆಸ್ಪತ್ರೆ ಸಿದ್ಧಪಡಿಸಲಾಗಿದ್ದು, ಮುಂದಿನ ವಾರ ತಾಲ್ಲೂಕು ಆಡಳಿತಕ್ಕೆ ಹಸ್ತಾಂತರಿಸಲಾಗುವುದು’ ಎಂದು ಕೆ.ಆರ್. ನಗರ ಕ್ಷೇತ್ರದ ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಭಾನುವಾರ ತಿಳಿಸಿದರು.

‘ಆಸ್ಪತ್ರೆಗೆ ಎಲ್ಲ ಸೌಲಭ್ಯ ಒದಗಿಸಲಾಗಿದೆ. ಕೋವಿಡ್ ಕೇರ್ ಸೆಂಟರ್ ಆಗಿ ಬಳಸಲಾಗುವುದು. ಬಳಗದ ಸದಸ್ಯರು ತಮ್ಮದೇ ಹಣದಿಂದ ಆಸ್ಪತ್ರೆ ನಿರ್ಮಿಸಿದ್ದಾರೆ. ತಾಲ್ಲೂಕು ಆಡಳಿತ ನಿರ್ವಹಣೆ ಮಾಡಲಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

‘ಕೆ.ಆರ್.ನಗರ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸಲು ಮೂವರು ವೈದ್ಯರನ್ನು ಬಳಗದಿಂದ ನೇಮಕ ಮಾಡಲಾಗಿದೆ. ಅವರಿಗೆ ತಿಂಗಳಿಗೆ ₹ 1 ಲಕ್ಷ ವೇತನ ನೀಡಲಾಗುವುದು. ಸರ್ಕಾರವು ₹ 60 ಸಾವಿರ ವೇತನ ನೀಡುವುದರಿಂದ ವೈದ್ಯರು ಕೆಲಸಕ್ಕೆ ಮುಂದೆ ಬರುವುದಿಲ್ಲ. ಕೋವಿಡ್‌ನಿಂದ ಮೃತಪಟ್ಟವರ ಶವ ಸಾಗಿಸಲು ಒಂದು ವಾಹನ ಮತ್ತು ಕೋವಿಡ್ ಪಾಸಿಟಿವ್ ಆದವರನ್ನು ಕರೆದೊಯ್ಯಲು ₹ 14 ಲಕ್ಷ ಮೌಲ್ಯದ ಹೊಸ ಆಂಬುಲೆನ್ಸ್ ಕೊಡುಗೆಯಾಗಿ ನೀಡಲಾಗಿದೆ’ ಎಂದರು.

‘ರೋಲ್ ಮಾಡೆಲ್’ ಬೇಕು: ‘ಕೋವಿಡ್ ನಿರ್ವಹಣೆಯಲ್ಲಿ ಮೈಸೂರು ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ನಮಗೆ ರೋಲ್ ಮಾಡೆಲ್ ಆಗುವಂತಹ ಅಧಿಕಾರಿಗಳು ಬೇಕೇ ಹೊರತು, ಮಾಡೆಲ್ ಅಲ್ಲ’ ಎಂದು ಸಾ.ರಾ.ಮಹೇಶ್, ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಮತ್ತೆ ಅಸಮಾಧಾನ ಹೊರಹಾಕಿದರು.

59 ಕೋಟಿ ಜನರಿಗೆ ಲಸಿಕೆ ನೀಡಲು 122 ಕೋಟಿ ಡೋಸ್ ಬೇಕು: ಕೇಂದ್ರ

ನವದೆಹಲಿ: ‘18ರಿಂದ 45 ವರ್ಷದೊಳಗಿನ 59 ಕೋಟಿ ಜನರಿಗೆ ಲಸಿಕೆ ನೀಡಲು 122 ಕೋಟಿ ಡೋಸ್‌ಗಳ ಅವಶ್ಯಕತೆಯಿದೆ’ ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

‘ಲಸಿಕೆಯೇ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಅತಿ ಕಡಿಮೆ ಸಮಯದಲ್ಲಿ ಶೇಕಡ 100ರಷ್ಟು ಲಸಿಕೆ ನೀಡಲು ಸರ್ಕಾರ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ’ ಎಂದು ಕೇಂದ್ರ ಸರ್ಕಾರವು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿದೆ.

‘ಕೇಂದ್ರ ಸರ್ಕಾರವು ವಿದೇಶಿ ಲಸಿಕೆಗಳ ತುರ್ತು ಬಳಕೆಗೆ ಅನುಮತಿ ನೀಡುವ ಕೆಲಸವನ್ನು ತ್ವರಿತವಾಗಿ ಮಾಡುತ್ತಿದೆ. ಸ್ಥಳೀಯವಾಗಿ ಉತ್ಪಾದಿಸಲಾಗುತ್ತಿರುವ ರಷ್ಯಾ ನಿರ್ಮಿತ ಸ್ಪುಟ್ನಿಕ್ ವಿ ಲಸಿಕೆಯು ಜುಲೈ ತಿಂಗಳಲ್ಲಿ ಲಭ್ಯವಾಗಲಿದೆ. ಜುಲೈ ವೇಳೆಗೆ 80 ಲಕ್ಷ ಮತ್ತು ಆಗಸ್ಟ್ ವೇಳೆಗೆ 1.6 ಕೋಟಿ ಲಸಿಕೆಯ ಡೋಸ್‌ಗಳು ಲಭ್ಯವಾಗಬಹುದು ಎಂದು ಅಂದಾಜಿಸಲಾಗಿದೆ’ ಎಂದಿದೆ.

ಆಕ್ಸಿಜನ್ ಕೊರತೆ: ದೆಹಲಿಯ ಎರಡು ಆಸ್ಪತ್ರೆಗಳ ಸಿಬ್ಬಂದಿಯ ಮೊರೆ

ಜೀವಗಳು ಅಪಾಯದಲ್ಲಿವೆ, ತಕ್ಷಣ ಸ್ಪಂದಿಸಿ

ನವದೆಹಲಿ (ಪಿಟಿಐ): ‘ಜೀವ ಅಪಾಯದಲ್ಲಿದೆ. ದೊಡ್ಡ ದುರಂತವೇ ಸಂಭವಿಸಬಹುದು’. ಹೀಗೆಂದು, ದೆಹಲಿಯ ಎರಡು ಆಸ್ಪತ್ರೆಗಳು ವೈದ್ಯಕೀಯ ಆಮ್ಲಜನಕದ ಅಭಾವ ಕುರಿತಂತೆ ಎಚ್ಚರಿಕೆಯ ಸಂದೇಶವನ್ನು ಆಡಳಿತಕ್ಕೆ ಭಾನುವಾರ ರವಾನಿಸಿವೆ.

ಮಧುಕರ್ ರೇನ್‌ಬೋ ಮಕ್ಕಳ ಆಸ್ಪತ್ರೆಯ ಅಧಿಕಾರಿಯೊಬ್ಬರು ಭಾನುವಾರ ಮಧ್ಯಾಹ್ನ ಆಕ್ಸಿಜನ್ ಕೊರತೆ ಮಾಹಿತಿ ನೀಡಿದ್ದು, ‘ಇಲ್ಲಿ ನಾಲ್ಕು ಶಿಶುಗಳು ಸೇರಿದಂತೆ 50 ಜನರು ಆಕ್ಸಿಜನ್ ಅವಲಂಭಿಸಿದ್ದಾರೆ. ಅವರ ಜೀವ ಅಪಾಯದಲ್ಲಿದೆ’ ಎಂದಿದ್ದಾರೆ.

ಆಸ್ಪತ್ರೆಯಲ್ಲಿ ಒಟ್ಟಾರೆ 80 ರೋಗಿಗಳು ಇದ್ದಾರೆ. ಇವರಲ್ಲಿ ಕೋವಿಡ್‌ನಿಂದ ಬಳಲುತ್ತಿರುವವರು ಹಾಗೂ 15 ನವಜಾತ ಶಿಶುಗಳು ಕೂಡಾ ಸೇರಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಆಸ್ಪತ್ರೆಯಲ್ಲಿ ದ್ರವೀಕೃತ ವೈದ್ಯಕೀಯ ಆಕ್ಸಿಜನ್‌ನ ದಾಸ್ತಾನು ಸೌಲಭ್ಯವಿಲ್ಲ. ಪೂರ್ಣವಾಗಿ ಖಾಸಗಿಯವರು ಪೂರೈಸುವ ಆಕ್ಸಿಜನ್ ಸಿಲಿಂಡರ್‌ಗಳನ್ನೇ ಅವಲಂಬಿಸಬೇಕಾಗಿದೆ. ಸರಬರಾಜು ವ್ಯತ್ಯಯದಿಂದಾಗಿ ನಿತ್ಯ ಬವಣೆಯಾಗಿದೆ. ಆಸ್ಪತ್ರೆಗೆ ನಿತ್ಯ ಕನಿಷ್ಠ 125 ಆಕ್ಸಿಜನ್ ಸಿಲಿಂಡರ್‌ಗಳ ಅಗತ್ಯವಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಧಿಕಾರಿಗಳ ಗಮನವನ್ನು ಸೆಳೆಯಲು ಆಸ್ಪತ್ರೆಯು ಈ ಕುರಿತು ಟ್ವೀಟ್ ಕೂಡಾ ಮಾಡಿದೆ. ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಆಪ್ ಶಾಸಕ ರಾಘವ್ ಛಾದಾ, ‘ನಾವು ಐದು ಡಿ ಮಾದರಿಯ ಆಕ್ಸಿಜನ್ ಸಿಲಿಂಡರ್‌ಗಳನ್ನು ವ್ಯವಸ್ಥೆ ಮಾಡಿದ್ದೇವೆ. ಸರ್ಕಾರದ ಆಮ್ಲಜನಕ ಮೀಸಲು ಪ್ರಮಾಣ ಕಡಿಮೆ ಇದ್ದು, ಪೂರೈಕೆಯೂ ಕಡಿಮೆ ಆಗಿದೆ’ ಎಂದು ತಿಳಿಸಿದ್ದಾರೆ.

ಇನ್ನೊಂದೆಡೆ, ಟ್ರಿಟೋನ್ ಆಸ್ಪತ್ರೆಯ ಡಾ. ದೀಪಾಲಿ ಗುಪ್ತಾ ಅವರು, ‘ತೀವ್ರ ನಿಗಾ ಘಟಕಕ್ಕೆ ಆಕ್ಸಿಜನ್ ಪೂರೈಕೆಯ ವ್ಯವಸ್ಥೆ ಮಾಡಲು ಇನ್ನಿಲ್ಲದ ಸಮಸ್ಯೆಯಾಗುತ್ತಿದೆ’ ಎಂದು ಹೇಳಿದ್ದಾರೆ. ‘ಒಂದು ವಾರದಿಂದ ಕಷ್ಟ ಪಡುತ್ತಿದ್ದೇವೆ. ಆಕ್ಸಿಜನ್ ಸಿಲಿಂಡರ್‌ಗಳ ಪೂರೈಕೆ ಖಾತರಿ ಸಿಗದಿದ್ದರೆ ದೊಡ್ಡ ದುರಂತವೇ ಸಂಭವಿಸಬಹುದು’ ಎಂದು ಅವರು ಹೇಳಿದ್ದರು.

ಈ ಆಸ್ಪತ್ರೆಗೂ ಐದು 2 ಮಾದರಿ ಸಿಲಿಂಡರ್‌ಗಳ ವ್ಯವಸ್ಥೆ ಮಾಡಿದ್ದು, ಆಸ್ಪತ್ರೆ ಸಿಬ್ಬಂದಿ ಇವುಗಳನ್ನು ಪಡೆಯಲು ಬರುತ್ತಿದ್ದಾರೆ. ಶೀಘ್ರ ಸಮಸ್ಯೆ ಬಗೆಹರಿಯುವ ವಿಶ್ವಾಸವಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ದಕ್ಷಿಣ ದೆಹಲಿಯಲ್ಲಿರುವ ಬಾತ್ರಾ ಆಸ್ಪತ್ರೆಯಲ್ಲಿ ವೈದ್ಯಕೀಯ ಆಕ್ಸಿಜನ್ ಕೊರತೆಯಿಂದಾಗಿ ಶನಿವಾರ ಹಿರಿಯ ವೈದ್ಯರೊಬ್ಬರು ಸೇರಿದಂತೆ 12 ಕೋವಿಡ್ ರೋಗಿಗಳು ಅಸುನೀಗಿದ್ದರು.

ಸೋಂಕಿತರ ಸಂಖ್ಯೆ ಮತ್ತೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಮತ್ತೆ ಹೆಚ್ಚಿದೆ. 37,733 ಮಂದಿಯಲ್ಲಿ ಭಾನುವಾರ ಹೊಸದಾಗಿ ಸೋಂಕು ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಒಟ್ಟು ಸಂಖ್ಯೆ 16 ಲಕ್ಷದ ಗಡಿ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 4.21 ಲಕ್ಷಕ್ಕೆ ತಲುಪಿದೆ. ಕಳೆದ 24 ಗಂಟೆಗಳಲ್ಲಿ 217 ಮಂದಿ ಸತ್ತಿದ್ದಾರೆ.

ಭಾನುವಾರ ಒಟ್ಟು 1.58 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಹಿಂದಿನ ಎರಡು ದಿನಗಳಿಗೆ ಹೋಲಿಸಿದರೆ ಇದು ತೀರಾ ಕಡಿಮೆ. ಸೋಂಕು ದೃಢ ಪ್ರಮಾಣ ಶೇ 23.82ಕ್ಕೆ ಏರಿದ್ದು, ಮರಣ ಪ್ರಮಾಣ ದರವು ಶೇ 0.57ಕ್ಕೆ ತಗ್ಗಿದೆ.

ಬೆಂಗಳೂರಿನಲ್ಲಿ ಹೊಸದಾಗಿ 21,199 ಪ್ರಕರಣಗಳು ವರದಿಯಾಗಿವೆ. ಬಳ್ಳಾರಿ (1,156), ಮೈಸೂರು (2,750) ಹಾಗೂ ತುಮಕೂರಿನಲ್ಲಿ (1,302) ಸಾವಿರಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ. ಬೆಂಗಳೂರು ಗ್ರಾಮಾಂತರ (286) ಮತ್ತು ಮಂಡ್ಯದಲ್ಲಿ (653) ಗಣನೀಯ ಪ್ರಮಾಣದ ಇಳಿಕೆ ಕಂಡಿದೆ. ಶಿವಮೊಗ್ಗ (620), ಉತ್ತರ ಕನ್ನಡ (538), ರಾಯಚೂರು (445) ಜಿಲ್ಲೆಗಳಲ್ಲೂ ಸೋಂಕಿತರ ಸಂಖ್ಯೆ ತಗ್ಗಿದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 64 ಮಂದಿ ಸತ್ತಿದ್ದಾರೆ. ಬಳ್ಳಾರಿ (18), ಚಾಮರಾಜನಗರ (15), ಹಾಸನ (11), ಶಿವಮೊಗ್ಗ (12) ಮತ್ತು ತುಮಕೂರಿನಲ್ಲಿ (13) ಅಧಿಕ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರು ಹಾಗೂ ರಾಮನಗರದಲ್ಲಿ ತಲಾ ಎಂಟು, ಕಲಬುರ್ಗಿ ಮತ್ತು ಉತ್ತರ ಕನ್ನಡದಲ್ಲಿ ತಲಾ ಏಳು, ಬೀದರ್‌ನಲ್ಲಿ ಆರು, ಬೆಂಗಳೂರು ಗ್ರಾಮಾಂತರ, ಕೋಲಾರ, ಕೊಪ್ಪಳ ಮತ್ತು ಮಂಡ್ಯದಲ್ಲಿ ತಲಾ ಐದು ಜನ ಸಾವಿಗೀಡಾಗಿದ್ದಾರೆ. ಇದರೊಂದಿಗೆ ಮೃತರ ಒಟ್ಟು ಸಂಖ್ಯೆ 16,011ಕ್ಕೆ ತಲುಪಿದೆ. ಸತ್ತವರ ಪೈಕಿ ಅಧಿಕ ಮಂದಿ ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದರು ಎಂಬುದು ಗೊತ್ತಾಗಿದೆ.

ಕೋವಿಡ್ ಪೀಡಿತರ ಪೈಕಿ ಭಾನುವಾರ 21,149 ಮಂದಿ ಚೇತರಿಸಿಕೊಂಡಿದ್ದಾರೆ. ಹೀಗಾಗಿ ಗುಣಮುಖರ ಒಟ್ಟು ಸಂಖ್ಯೆ 11.64 ಲಕ್ಷಕ್ಕೆ ಹೆಚ್ಚಿದೆ.

ಆರು ಜಿಲ್ಲೆಗಳಿಗೆ ‘ಉಸ್ತುವಾರಿ’ ಸಚಿವರ ನೇಮಕ

ಬೆಂಗಳೂರು: ಕೋವಿಡ್ ಎರಡನೇ ಅಲೆ ತೀವ್ರವಾಗುತ್ತಿರುವ ಬೆನ್ನಲ್ಲೇ ಆರು ಜಿಲ್ಲೆಗಳ ಉಸ್ತುವಾರಿ ಸಚಿವ ಸ್ಥಾನವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಭಾನುವಾರ ಮರುಹಂಚಿಕೆ ಮಾಡಿದ್ದಾರೆ.

ಸಚಿವ ಸ್ಥಾನಕ್ಕೆ ರಮೇಶ ಜಾರಕಿಹೊಳಿ ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಬೆಳಗಾವಿ ಜಿಲ್ಲಾ ‘ಉಸ್ತುವಾರಿ’ ಹೊಣೆಯನ್ನು ಉಪ ಮುಖ್ಯಮಂತ್ರಿಯೂ ಆಗಿರುವ ಲೋಕೋಪಯೋಗಿ ಸಚಿವ ಗೋವಿಂದ ಎಂ. ಕಾರಜೋಳ ಅವರಿಗೆ ನೀಡಲಾಗಿದೆ.

ಕಾರಜೋಳ ಅವರ ಬಳಿ ಇದ್ದ ಬಾಗಲಕೋಟೆ ಮತ್ತು ಕಲಬುರ್ಗಿ ಉಸ್ತುವಾರಿಯನ್ನು ಕ್ರಮವಾಗಿ ಆಹಾರ ಸಚಿವ ಉಮೇಶ ಕತ್ತಿ ಮತ್ತು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ್ ನಿರಾಣಿಗೆ ಅವರಿಗೆ ವಹಿಸಲಾಗಿದೆ.

ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅವರಿಗೆ ಬೀದರ್ ಜಿಲ್ಲೆಯ ಹೊಣೆ ನೀಡಲಾಗಿದೆ. ಬೀದರ್ ಉಸ್ತುವಾರಿಯನ್ನು ಈ ಹಿಂದೆ ಪಶುಸಂಗೋಪನೆ ಸಚಿವ ಪ್ರಭು ಚೌಹಾಣ್ ಅವರಿಗೆ ನೀಡಲಾಗಿತ್ತು.

ಪೌರಾಡಳಿತ ಮತ್ತು ಸಕ್ಕರೆ ಸಚಿವ ಎಂಟಿಬಿ ನಾಗರಾಜ್ ಅವರನ್ನು ಕೋಲಾರ ಹಾಗೂ ಮೀನುಗಾರಿಕೆ ಸಚಿವ ಎಸ್. ಅಂಗಾರ ಅವರನ್ನು ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿ ನೇಮಿಸಲಾಗಿದೆ.

ಉಪ ಚುನಾವಣೆ ಫಲಿತಾಂಶದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರ ಬದಲಾವಣೆ ಮಾಡುವುದಾಗಿ ಮುಖ್ಯಮಂತ್ರಿ ಈ ಹಿಂದೆ ಹೇಳಿದ್ದರು. ಫಲಿತಾಂಶ ಪ್ರಕಟವಾದ ದಿನವೇ ಬದಲಾವಣೆ ಮಾಡಿರುವುದು ಕುತೂಹಲ ಕೆರಳಿಸಿದೆ.

ಉಚಿತ ಲಸಿಕೆ: 13 ವಿರೋಧ ಪಕ್ಷಗಳ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಪಿಡುಗಿನ ಈ ಸಂದರ್ಭದಲ್ಲಿ ದೇಶದ ಪ್ರತಿಯೊಬ್ಬರಿಗೂ ಉಚಿತವಾಗಿ ಕೋವಿಡ್ ಲಸಿಕೆ ನೀಡಬೇಕು. ಎಲ್ಲ ಆಸ್ಪತ್ರೆಗಳಿಗೆ ನಿರಂತರ ಆಮ್ಲಜನಕ ಪೂರೈಕೆಗೆ ಕ್ರಮ ಕೈಗೊಳ್ಳಬೇಕು ಎಂದು 13 ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ಭಾನುವಾರ ಒತ್ತಾಯಿಸಿವೆ.

ಐದು ರಾಜ್ಯಗಳ ವಿಧಾಸಭೆಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದ ಬೆನ್ನಲ್ಲೆ ವಿರೋಧ ಪಕ್ಷಗಳ ಮುಖಂಡರು ಈ ಕುರಿತು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಸೇರಿದಂತೆ 13 ಜನ ಮುಖಂಡರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ಪ್ರಸ್ತುತ ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಕೈಗೊಳ್ಳುವ ನಿರ್ಧಾರಗಳು, ರೂಪಿಸುವ ನೀತಿಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಲು ವಿರೋಧ ಪಕ್ಷಗಳು ಈ ಜಂಟಿ ಪ್ರಕಟಣೆ ಬಿಡುಗಡೆಯ ತಂತ್ರ ಅನುಸರಿಸಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ಲಸಿಕೆ ಕಾರ್ಯಕ್ರಮಕ್ಕಾಗಿ ಬಜೆಟ್‌ನಲ್ಲಿ ₹ 35,000 ಕೋಟಿ ಘೋಷಿಸಲಾಗಿತ್ತು. ಈ ಹಣವನ್ನೇ ಬಳಸಿ ಎಲ್ಲರಿಗೂ ಉಚಿತ ಲಸಿಕೆ ನೀಡಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ, ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ, ಜೆಎಂಎಂನ ಹೇಮಂತ್ ಸೊರೇನ್, ಎನ್‌ಸಿ ವರಿಷ್ಠ ಫಾರೂಕ್ ಅಬ್ದುಲ್ಲಾ, ಬಿಎಸ್‌ಪಿ ನಾಯಕಿ ಮಾಯಾವತಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಡಿಎಂಕೆ ನಾಯಕ ಎಂ.ಕೆ.ಸ್ಟಾಲಿನ್, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಹಾಗೂ ಸಿಪಿಐನ ಡಿ.ರಾಜಾ, ಸಿಪಿಎಂ ಮುಖಂಡ ಸೀತಾರಾಂ ಯೆಚೂರಿ ಸಹಿ ಹಾಕಿದ್ದಾರೆ.

ಕೋವಿಡ್: ಸರ್ಕಾರ ಎಡವಿದ್ದೆಲ್ಲಿ?

ಬೆಂಗಳೂರು: ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಿಕೆ ತಡೆಯುವಲ್ಲಿ ಸರ್ಕಾರ ಎಡವಿದ್ದೆಲ್ಲಿ? ಈಗ ತುರ್ತಾಗಿ ಏನು ಮಾಡಬೇಕಿದೆ? ಆರೋಗ್ಯ ವ್ಯವಸ್ಥೆಯಲ್ಲಿ ಆಗಬೇಕಿರುವ ಸುಧಾರಣೆಗಳೇನು? ಎಂಬುದರ ಕುರಿತು ಜನಾಭಿಪ್ರಾಯಕ್ಕೆ ‘ಪ್ರಜಾವಾಣಿ’ ವೇದಿಕೆ ಕಲ್ಪಿಸಿದೆ. ಇದಕ್ಕೆ ಸ್ಪಂದಿಸಿರುವ ಓದುಗರು ಸಲಹೆ ನೀಡಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಆಸ್ಪತ್ರೆ ಮಾಫಿಯಾ ನಿಲ್ಲಲಿ

ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಲ್ಲಿ ಚುನಾವಣಾ ಆಯೋಗದಿಂದ ಚುನಾವಣೆ ಘೋಷಣೆಯಾಗಿದ್ದು ಮೊದಲ ಎಡವಟ್ಟು. ಜನ ಪ್ರತಿನಿಧಿಗಳೂ ಜನರ ಜೀವಕ್ಕೆ ಬೆಲೆ ಕೊಡದೆ, ಮತಕ್ಕೆ ಆದ್ಯತೆ ನೀಡಿದರು. ಜನ ಗುಂಪು ಸೇರಲು ಎಲ್ಲ ರೀತಿಯ ಅವಕಾಶ ನೀಡಿದ್ದರಿಂದ ಕೊರೊನಾ ಆವರಿಸಿದೆ. ಖಾಸಗಿ ಆಸ್ಪತ್ರೆಗಳ ಮಾಫಿಯಾಗೆ ಕಡಿವಾಣ ಹಾಕಬೇಕು.

ಎ.ಆರ್.ಗೋವಿಂದ ಸ್ವಾಮಿ, ರಂಗತಜ್ಞ, ಬೆಂಗಳೂರು

ಭಟ್ಟಂಗಿಗಳು ಕಾರಣ



ಉತ್ಪ್ರೇಕ್ಷಿತ ಪ್ರಶಂಸಾ ವರದಿಗಳನ್ನು ನಂಬಿ, ಕಠೋರ ವಾಸ್ತವವನ್ನು ಜಾಣ ಕಿವುಡಿನಿಂದ ಮರೆತಿರುವುದೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಡವಲು ಮುಖ್ಯ ಕಾರಣ. ರಚನಾತ್ಮಕ ಟೀಕೆಗಳನ್ನು ಪೂರ್ವಾಗ್ರಹವಿಲ್ಲದೆ ಸ್ವೀಕರಿಸುವ ಗುಣ ಎರಡೂ ಸರ್ಕಾರಗಳಿಗೆ ಇಲ್ಲದಿರುವುದು, ಪ್ರಶ್ನೆ ಮಾಡಿದವರನ್ನೆಲ್ಲ ವಿರೋಧಿಗಳೆಂದು ಪರಿಗಣಿಸುವುದರ ಫಲವೇ ಅರಾಜಕತೆ ಮತ್ತು ಭ್ರಷ್ಟಾಚಾರ. ನಾಳೆಯ ದಿನಗಳಲ್ಲಿ ವಿವಿಧ ಮೂಲಗಳಿಂದ ಆಮ್ಲಜನಕ, ಮತ್ತಿತರ ವಸ್ತುಗಳು ಬಂದು ಬೀಳಬಹುದು. ಆದರೆ, ತುರ್ತು ಅಗತ್ಯವಾಗಿರುವ ವೈದ್ಯರು ಮತ್ತು ದಾದಿಯರನ್ನು ಎಲ್ಲಿಂದ ಮತ್ತು ಹೇಗೆ ‘ಉತ್ಪಾದಿಸುತ್ತೀರಿ’?

ನಾಗತಿಹಳ್ಳಿ ಚಂದ್ರಶೇಖರ್, ಸಿನಿಮಾ ನಿರ್ದೇಶಕ

ಮೂರ್ಖತನಕ್ಕೆ ಇದುವೇ ಉತ್ತರ

ಕಳೆದ ಲಾಕ್‌ಡೌನ್ ಮುಗಿದ ತಕ್ಷಣವೇ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ನಡೆಸಿತು. ಚುನಾವಣೆ ಪ್ರಚಾರ, ಜಾತ್ರೆ ಸೇರಿದಂತೆ ಜನಸಂದಣಿ ಸೇರುವ ಕಡೆಗೆ ಕಠಿಣ ಕ್ರಮ ಕೈಗೊಳ್ಳಲಿಲ್ಲ. ಕೊರೊನಾ ಇಲ್ಲ ಎಂಬಂತೆ ಮಾಸ್ಕ್ ಧರಿಸದೆ, ಗುಂಪುಗೂಡಿದರು. ಈಗ ಎರಡನೇ ಅಲೆ ವಕ್ಕರಿಸಿದೆ. ಕೊಳ್ಳೆ ಹೋದ ಮೇಲೆ ಕೋಟೆ ಬಾಗಿಲು ಹಾಕುವ ಯತ್ನ ನಡೆಯುತ್ತಿದೆ. ಮುಂದಿನ ಅಪಾಯವನ್ನಾದರೂ ತಡೆಯಿರಿ.

ರಾಜೇಶ್ವರಿ, ಹಾಸನ

ಮೈಮರೆತ ಸರ್ಕಾರ

ಕೋವಿಡ್ ಹರಡುತ್ತಿದೆ ಎಂದು ತಿಳಿದ ಕೂಡಲೇ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿತ್ತು. ಈಗಿನ ಕರ್ಫ್ಯೂ ಈ ಹಿಂದೆಯೇ ಆಗಬೇಕಿತ್ತು. ಪ್ರತಿದಿನ ಇಷ್ಟು ಸಾವುಗಳನ್ನು ನೋಡುತ್ತಿದ್ದರೆ, ಸರ್ಕಾರದ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದು ತಿಳಿಯುತ್ತಿದೆ. ಈ ಹತ್ಯಾಕಾಂಡಕ್ಕೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ. ಜನರೇ ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

ಹೊನ್ನುಶ್ರೀ, ಮಂಡ್ಯ

‘ಮತ’ ಮಾರಿ, ನಿಂದನೆ ಸಲ್ಲ

ದುರ್ಮಾರ್ಗದಿಂದ ಅಧಿಕಾರ ಹಿಡಿಯಲು ನಾಯಕರು ಚೆಲ್ಲಿದ ಭಿಕ್ಷೆಯ ಪುಡಿಗಾಸಿಗೆ ಮತದ ಹಕ್ಕು ಮಾರಿಕೊಂಡವರು, ಈಗ ತಮ್ಮ ಕಷ್ಟಕ್ಕೆ ಸರ್ಕಾರ ಆಗುತ್ತಿಲ್ಲ ಎಂದು ನಿಂದಿಸುತ್ತಿರುವುದು ಆಕಾಶಕ್ಕೆ ಮುಖ ಮಾಡಿ ಉಗುಳಿದಂತೆ. ಸರ್ಕಾರ ಪಾದರಕ್ಷೆ ಇದ್ದಂತೆ. ಅದನ್ನು ನಾವು ನಮ್ಮ ರಕ್ಷಣೆಗಾಗಿ ತೊಡುತ್ತೇವೆ. ಪಾದಗಳನ್ನು ರಕ್ಷಿಸುವ ಸಂಪೂರ್ಣ ಹೊಣೆಯನ್ನು ಪಾದರಕ್ಷೆ ಹೊರುವುದಿಲ್ಲ. ಆರೋಗ್ಯ ಸೇವೆಗಳು ಮನೆ ಬಾಗಿಲಿಗೆ ಬಂದರೆ ಬಿಕ್ಕಟ್ಟಿನ ನಿಯಂತ್ರಣ ಸಾಧ್ಯವಾಗಬಹುದು.

ಯೋಗೀಶ್, ಬೆಂಗಳೂರು

ಲಾಕ್‌ಡೌನ್‌ಗೆ ಆಸ್ಪದ ಬೇಡ

ಕೋವಿಡ್ ಸರಪಳಿಯನ್ನು ತುಂಡರಿಸುವಲ್ಲಿ ಈಗ ಸಾರ್ವಜನಿಕರ ಪಾತ್ರವೇ ಹೆಚ್ಚು. ಸರ್ಕಾರವನ್ನು ನಿಂದಿಸುವುದನ್ನು ಬಿಟ್ಟು, ಮಾಸ್ಕ್, ಸ್ಯಾನಿಟೈಸರ್, ಅಂತರ ಕಾಯ್ದುಕೊಳ್ಳಬೇಕು. ಅವ್ಯವಸ್ಥೆಯುಳ್ಳ ಆರೋಗ್ಯ ಕ್ಷೇತ್ರವನ್ನು ಸುವ್ಯವಸ್ಥೆ ಮಾಡಲು ಜನರೂ ಸಹಕಾರ ನೀಡಬೇಕು. ಇಲ್ಲದಿದ್ದರೆ, ಲಾಕ್‌ಡೌನ್ ಮುಂದುವರಿಯುವ ಅನಿವಾರ್ಯತೆ ಎದುರಾಗಬಹುದು.

ಬಸವರಾಜ, ಯಾದಗಿರಿ

ಎಲ್ಲದಕ್ಕೂ ಸರ್ಕಾರ ಹೊಣೆಯಲ್ಲ

ನಮ್ಮ ಆರೋಗ್ಯವನ್ನು ನಾವೇ ಕಾಪಾಡಿಕೊಳ್ಳುವುದು ಬಿಟ್ಟು, ಸರ್ಕಾರವನ್ನು ಹೊಣೆ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಹೊರಗಡೆ ಹೋದರೆ ಮಾಸ್ಕ್ ಧರಿಸಿ, ಅಂತರ ಕಾಯ್ದುಕೊಳ್ಳಿ ಎಂದರೂ ಪಾಲನೆಯಿಲ್ಲ. ಆಮ್ಲಜನಕದ ಮಹತ್ವ ಜನರಿಗೆ ಈಗ ತಿಳಿಯುತ್ತಿದೆ. ಪಾಠ ಕಲಿತಾದರೂ ಹೆಚ್ಚು ಮರಗಳನ್ನು ಬೆಳೆಸಿ. ಜವಾಬ್ದಾರಿ ಇದ್ದರೆ ಎಂತಹ ರೋಗವನ್ನಾದರೂ ಓಡಿಸಬಹುದು.

ಮುತ್ತಣ್ಣ ಕಡಗದ, ಗದಗ

ಸಂಕ್ಷಿಪ್ತ ಸುದ್ದಿ

ನಿಷೇಧಾಜ್ಞೆ ಉಲ್ಲಂಘನೆ: ಟಿಕಾಯತ್ ವಿರುದ್ಧ ಪ್ರಕರಣ

ಅಂಬಾಲಾ (ಹರಿಯಾಣ) (ಪಿಟಿಐ): ಸೆಕ್ಷನ್ 144 ನಿಷೇಧಾಜ್ಞೆಯನ್ನು ಉಲ್ಲಂಘಿಸಿದ ಆರೋಪದ ಮೇಲೆ ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ ಮತ್ತು ಇತರ 12 ಮಂದಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಟಿಕಾಯತ್ ಸೇರಿದಂತೆ ಬಿಕೆಯು ನಾಯಕರು ಕಳೆದ ಶನಿವಾರ ದುರಲಿ ಗ್ರಾಮದಲ್ಲಿ ‘ಕಿಸಾನ್ ಮಜ್ದೂರ್ ಮಹಾ ಪಂಚಾಯತ್’ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

‘ಜಿಲ್ಲೆಯಲ್ಲಿ ಸೆಕ್ಷನ್ 144 ಜಾರಿಯಲ್ಲಿರುವುದರಿಂದ ‘ಮಹಾ ಪಂಚಾಯತ್’ ನಡೆಸದ್ದಂತೆ ಬಿಕೆಯು ಮುಖಂಡರಿಗೆ ಪೊಲೀಸರು ಎಚ್ಚರಿಕೆ ನೀಡಿದ್ದರು. ಆದರೂ, ಎಚ್ಚರಿಕೆಯನ್ನು ಪರಿಗಣಿಸದೆ ಅವರು ಕಾರ್ಯಕ್ರಮ ಆಯೋಜಿಸಿದ್ದಾರೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹರಿಯಾಣದಲ್ಲಿ ಇಂದಿನಿಂದ ಒಂದು ವಾರ ಲಾಕ್‌ಡೌನ್

ಚಂಡೀಗಢ (ಪಿಟಿಐ): ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಹರಿಯಾಣ ಸರ್ಕಾರವು ಮೇ 3ರಿಂದ ಒಂದು ವಾರ ಕಾಲ ರಾಜ್ಯದಲ್ಲಿ ಸಂಪೂರ್ಣ ಲಾಕ್‌ಡೌನ್ ಘೋಷಿಸಿದೆ.

ಈ ಹಿಂದೆ ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಲಾಗಿತ್ತು.

‘ಮೇ 3ರಿಂದ ರಾಜ್ಯದಲ್ಲಿ 7 ದಿನಗಳ ಲಾಕ್‌ಡೌನ್ ಇರುತ್ತದೆ’ ಎಂದು ಹರಿಯಾಣದ ಗೃಹ ಮತ್ತು ಆರೋಗ್ಯ ಸಚಿವ ಅನಿಲ್ ವಿಜ್ ಅವರು ಭಾನುವಾರ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಹರಿಯಾಣದಲ್ಲಿ ಶನಿವಾರ ಕೋವಿಡ್‌ನಿಂದ 125 ಮಂದಿ ಸಾವಿಗೀಡಾಗಿದ್ದಾರೆ. ಕೋವಿಡ್‌ನಿಂದಾಗಿ ರಾಜ್ಯದಲ್ಲಿ ಇದುವರೆಗೆ ಒಟ್ಟು 4,341 ಮಂದಿ ಮೃತಪಟ್ಟಿದ್ದಾರೆ. 13,588 ಹೊಸ ಪ್ರಕರಣಗಳು ವರದಿಯಾಗಿದ್ದು, ಒಟ್ಟು ದೃಢಪಟ್ಟವರ ಸಂಖ್ಯೆ 5,01,566ಕ್ಕೆ ಏರಿದೆ.

ಒಡಿಶಾ: ಮೇ 5ರಿಂದ 14 ದಿನಗಳ ಲಾಕ್‌ಡೌನ್

ಭುವನೇಶ್ವರ: ಒಡಿಶಾ ಸರ್ಕಾರವು ಕೋವಿಡ್ ಪ್ರಸರಣವನ್ನು ತಡೆಯಲು ಮೇ 5ರಿಂದ 14 ದಿನಗಳ ಕಾಲ ಲಾಕ್‌ಡೌನ್ ಘೋಷಿಸಿದೆ.

‘ಮೇ 5ರಿಂದ ಮೇ19ರ ಬೆಳಿಗ್ಗೆ 5 ಗಂಟೆಯ ತನಕ ರಾಜ್ಯದಲ್ಲಿ ಲಾಕ್‌ಡೌನ್ ಜಾರಿಯಲ್ಲಿ ಇರಲಿದೆ. ಈ ಎರಡು ವಾರಗಳ ಲಾಕ್‌ಡೌನ್ ಅವಧಿಯಲ್ಲಿ ವಾರಾಂತ್ಯಗಳನ್ನು ಹೊರತುಪಡಿಸಿ ಇತರೆ ದಿನಗಳಲ್ಲಿ ಅಗತ್ಯ ಸೇವೆಗಳು ಲಭ್ಯವಿರಲಿವೆ’ ಎಂದು ಒಡಿಶಾದ ಮುಖ್ಯ ಕಾರ್ಯದರ್ಶಿ ಎಸ್.ಸಿ ಮೊಹಾಪಾತ್ರ ತಿಳಿಸಿದ್ದಾರೆ.

‘ಜನರು ತಮ್ಮ ಮನೆಯಿಂದ 500 ಮೀಟರ್ ವ್ಯಾಪ್ತಿಯಲ್ಲಿ ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೆ ಅಗತ್ಯ ವಸ್ತುಗಳನ್ನು ಖರೀದಿಸಬಹುದು. ಆದರೆ ವಾರಾಂತ್ಯದಲ್ಲಿ ಕೇವಲ ವೈದ್ಯಕೀಯ ಸೇವೆಗಳು ಮಾತ್ರ ಇರಲಿವೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮಾರ್ಗಸೂಚಿ ಪಾಲನೆ: ಮಮತಾ ಕ್ರಮ ಶ್ಲಾಘನೆ

ಕೋಲ್ಕತ್ತ (ಪಿಟಿಐ): ಕೋವಿಡ್–19 ಮಾರ್ಗಸೂಚಿಗಳನ್ನು ಪಾಲಿಸುವ ಕುರಿತಾಗಿ ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಅವರ ಕ್ರಮವನ್ನು ಶ್ಲಾಘಿಸಿ ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧನಕರ್ ಅವರು ಭಾನುವಾರ ಟ್ವೀಟ್ ಮಾಡಿದ್ದಾರೆ.

‘ಪ್ರಜಾಪ್ರಭುತ್ವವು ಜನರನ್ನು ಗೌರವಿಸುವುದಾಗಿದೆ. ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಜಾಗವಿಲ್ಲ. ಕೋವಿಡ್ ಮಾರ್ಗಸೂಚಿ ಮತ್ತು ಶಾಂತಿ ಪರಿಪಾಲನೆ ಬಗ್ಗೆ ಮಮತಾ ಅವರ ನಿಲುವು ಶ್ಲಾಘನೀಯ’ ಎಂದು ಟ್ವೀಟ್ ಮಾಡಿರುವ ಧನಕರ್ ಅವರು, ಅದನ್ನು ಮಮತಾ ಅವರ ಟ್ವೀಟ್‌ಗೆ ಟ್ಯಾಗ್ ಮಾಡಿದ್ದಾರೆ.

‘ರಾಜ್ಯದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಿಕೊಳ್ಳಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಿ’ ಎಂದು ರಾಜ್ಯದ ಗೃಹಸಚಿವರು, ಪೊಲೀಸರು ಮತ್ತು ಕೋಲ್ಕತ್ತದ ಪೊಲೀಸರಿಗೆ ಟ್ವೀಟ್ ಮಾಡಿದ್ದಾರೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು – ಕೋಲ್ಕತ್ತ ನೈಟ್ ರೈಡರ್ಸ್ ಹಣಾಹಣಿ ಇಂದು

ಸೋಲು ಮರೆತು ಗೆಲುವಿನತ್ತ ಸಾಗುವ ಛಲ

ಅಹಮದಾಬಾದ್ (ಪಿಟಿಐ): ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿಯ ಐಪಿಎಲ್‌ನ ಮೊದಲ ಸುತ್ತಿನಲ್ಲಿ ಹತ್ತು ಅಂಕ ಗಳಿಸಿದೆ.

ಏಳು ಪಂದ್ಯಗಳಲ್ಲಿ ಐದು ಗೆಲುವು, ಎರಡು ಸೋಲುಂಡಿರುವ ತಂಡವು ಸೋಮವಾರ ಎರಡನೇ ಸುತ್ತಿನ ಹೋರಾಟ ಆರಂಭಿಸಲಿದೆ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವಿರುದ್ಧ ಆಡಲಿದೆ. ಪ್ರಥಮ ಸುತ್ತಿನಲ್ಲಿ ಏಯಾನ್ ಮಾರ್ಗನ್ ನಾಯಕತ್ವದ ಕೋಲ್ಕತ್ತ ಎದುರು ಕೊಹ್ಲಿ ಬಳಗವು ಗೆದ್ದಿತ್ತು.

ಎರಡು ದಿನಗಳ ಹಿಂದೆ ಕೊಹ್ಲಿ ಬಳಗವು ಪಂಜಾಬ್ ವಿರುದ್ಧ ಸೋತಿತ್ತು. ಬ್ಯಾಟಿಂಗ್‌ನಲ್ಲಿ ವೈಫಲ್ಯ ಅನುಭವಿಸಿತ್ತು. ಪ್ರಮುಖ ಬ್ಯಾಟ್ಸ್‌ಮನ್‌ಗಳಾದ ಎಬಿ ಡಿವಿಲಿಯರ್ಸ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ದೇವದತ್ತ ಪಡಿಕ್ಕಲ್ ಅವರು ಎರಡಂಕಿ ಗಳಿಸುವಲ್ಲಿ ವಿಫಲರಾಗಿದ್ದರು.

ಕೊಹ್ಲಿ ಮತ್ತು ರಜತ್ ಪಾಟೀದಾರ್ ಅವರಿಬ್ಬರೂ ನಿಧಾನಗತಿಯಲ್ಲಿ ರನ್ ಗಳಿಸಿದ್ದರು. ಹರ್ಷಲ್ ಪಟೇಲ್ ಮತ್ತು ಕೈಲ್ ಜೆಮಿಸನ್ ಅವರು ಕೊನೆಯ ಹಂತದಲ್ಲಿ ಬ್ಯಾಟಿಂಗ್‌ನಲ್ಲಿ ಮಿಂಚಿದ್ದರು. ಆದರೆ ಹರ್ಷಲ್ ಬೌಲಿಂಗ್‌ನಲ್ಲಿ ದುಬಾರಿಯಾಗಿದ್ದರು.

ಜೆಮಿಸನ್ ಹೆಚ್ಚು ರನ್ ಕೊಟ್ಟರೂ ಎರಡು ವಿಕೆಟ್ ಗಳಿಸಿದ್ದರು. ಮೊಹಮ್ಮದ್ ಸಿರಾಜ್, ಶಾಬಾಜ್ ಅಹಮದ್ ಮತ್ತು ಡೇನಿಯಲ್ ಸ್ಯಾಮ್ಸ್ ಅವರು ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರೆ ಎದುರಾಳಿ ಬ್ಯಾಟಿಂಗ್ ಬಲವನ್ನು ಕಟ್ಟಿಹಾಕುವುದು ಸುಲಭವಾಗಬಹುದು.

ಅದರೆ ಆಡಿದ ಏಳು ಪಂದ್ಯಗಳಲ್ಲಿ ಐದರಲ್ಲಿ ಸೋತಿರುವ ಕೋಲ್ಕತ್ತ ತಂಡಕ್ಕೆ ಮುಂದಿನ ಹಂತವು ಪ್ರಮುಖವಾಗಲಿದೆ. ಉಳಿದಿರುವ ಪಂದ್ಯಗಳಲ್ಲಿ ಕನಿಷ್ಠ ಆರರಲ್ಲಿ ಜಯಿಸಿದರೆ ಪ್ಲೇ ಆಫ್ ಕನಸು ಜೀವಂತವಾಗಿಡಬಹುದು.

ಅದಕ್ಕಾಗಿ ಸ್ವತಃ ನಾಯಕ ಮಾರ್ಗನ್, ಆ್ಯಂಡ್ರೆ ರಸೆಲ್, ನಿತೀಶ್ ರಾಣಾ ಮತ್ತು ರಾಹುಲ್ ತ್ರಿಪಾಠಿ ಅವರು ತಮ್ಮ ಬ್ಯಾಟಿಂಗ್ ಲಯ ಕಂಡುಕೊಳ್ಳುವುದು ಅವಶ್ಯಕ. ಪ್ಯಾಟ್ ಕಮಿನ್ಸ್ ಆಲ್‌ರೌಂಡರ್ ಆಗಿ ತಮ್ಮ ಕಾರ್ಯವನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಉಳಿದ ಬೌಲರ್‌ಗಳು ಅವರಿಗೆ ತಕ್ಕ ಜೊತೆ ನೀಡಿದರೆ ಕೊಹ್ಲಿ ಪಡೆಗೆ ದಿಟ್ಟ ಸವಾಲೊಡ್ಡಬಹುದು.

ಉಭಯ ತಂಡಗಳಲ್ಲಿರುವ ಯುವ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ದೇವದತ್ತ ಪಡಿಕ್ಕಲ್ ಮತ್ತು ಶುಭಮನ್ ಗಿಲ್ ಅವರ ಮೇಲೂ ಎಲ್ಲರ ಗಮನ ನೆಟ್ಟಿದೆ.

ವಿರಾಟ್ ಕೊಹ್ಲಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್



ಪಂದ್ಯ ಆರಂಭ: ರಾತ್ರಿ 7.30
ಸ್ಥಳ: ಅಹಮದಾಬಾದ್
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	380
ಕೆ.ಎಲ್.ರಾಹುಲ್	ಪಂಜಾಬ್	331
ಫಫ್ ಡು ಪ್ಲೆಸಿ	ಚೆನ್ನೈ	320

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	17
ಆವೇಶ್ ಖಾನ್	ಡೆಲ್ಲಿ	14
ಕ್ರಿಸ್ ಮೋರಿಸ್	ರಾಜಸ್ಥಾನ್	14

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	8	6	2	-	-	12
ಚೆನ್ನೈ ಸೂಪರ್ ಕಿಂಗ್ಸ್	7	5	2	-	-	10
ಬೆಂಗಳೂರು	7	5	2	-	-	10
ಮುಂಬೈ ಇಂಡಿಯನ್ಸ್	7	4	3	-	-	8
ರಾಜಸ್ಥಾನ	7	3	4	-	-	6
ಪಂಜಾಬ್	8	3	5	-	-	6
ಕೋಲ್ಕತ್ತ	7	2	5	-	-	4
ಹೈದರಾಬಾದ್	7	1	6	-	-	2

* ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಕೋವಿಡ್: ಹೋರಾಟಕ್ಕೆ ಕೈಜೋಡಿಸಿದ ಆರ್‌ಸಿಬಿ

ಅಹಮದಾಬಾದ್ (ಪಿಟಿಐ): ಆರ್‌ಸಿಬಿ ತಂಡವು ಕೋವಿಡ್–19 ವಿರುದ್ಧದ ಹೋರಾಟಕ್ಕೆ ಭಾಗಿಯಾಗಲಿದ್ದು ಆಕ್ಸಿಜನ್ ಸೌಲಭ್ಯಗಳಿಗಾಗಿ ಹಣಕಾಸು ನೆರವು ನೀಡುವ ಭರವಸೆ ನೀಡಿದೆ. ಒಂದು ಪಂದ್ಯದಲ್ಲಿ ವಿಶೇಷ ಪೋಷಾಕು ಧರಿಸಿ, ಬಳಿಕ ಅವುಗಳನ್ನು ಹರಾಜು ಹಾಕಿ ಹಣ ಸಂಗ್ರಹ ಮಾಡಲಿದೆ.

ಟ್ವಿಟರ್ ಖಾತೆಯಲ್ಲಿ ವಿಡಿಯೊವೊಂದನ್ನು ಹಂಚಿಕೊಂಡಿದ್ದು, ನಾಯಕ ವಿರಾಟ್ ಕೊಹ್ಲಿ ಈ ವಿಷಯ ತಿಳಿಸಿದ್ದಾರೆ.

‘ಬೆಂಗಳೂರು ಮತ್ತು ಇತರ ನಗರ ಗಳಲ್ಲಿ ಆಮ್ಲಜನಕದ ನೆರವಿಗೆ ಸಂಬಂಧಿಸಿದ ಆರೋಗ್ಯ ಮೂಲಸೌಕರ್ಯಗಳ ಪೈಕಿ ಆರ್‌ಸಿಬಿ ತಕ್ಷಣವೇ ಅಗತ್ಯವಿರುವ ಪ್ರಮುಖ ಸೌಲಭ್ಯಗಳನ್ನು ಗುರುತಿಸಿದೆ ಮತ್ತು ಈ ನಿಟ್ಟಿನಲ್ಲಿ ದೇಣಿಗೆ ನೀಡಲಿದೆ‘ ಎಂದು ಕೊಹ್ಲಿ ತಿಳಿಸಿದ್ದಾರೆ.

ಕೋವಿಡ್ ವಿರುದ್ಧದ ಹೋರಾಟಕ್ಕೆ ಹಣಸಂಗ್ರಹ ಮಾಡಲಿದೆ ಎಂದೂ ತಿಳಿಸಿದರು. ‘ವಿಶೇಷ ಪೋಷಾಕು ಧರಿಸಿ ಕಣಕ್ಕಿಳಿಯುವ ಮೂಲಕ ಕೋವಿಡ್ ವಿರುದ್ಧ ಪಿಪಿಇ ಕಿಟ್ ಧರಿಸಿ ಹೋರಾಡಿದ ಯೋಧರಿಗೆ ಗೌರವ ಸಲ್ಲಿಸುವ ಸಂದೇಶ ಸಾರಲಿದ್ದೇವೆ. ಪೋಷಾಕು ಹರಾಜಿಗೆ ಹಾಕಿ ಅದರಿಂದ ಬಂದ ಹಣವನ್ನು ಆರೋಗ್ಯ ಮೂಲಸೌಕರ್ಯ ಒದಗಿಸಲು ನೀಡಲಾಗುವುದು‘ ಎಂದಿದ್ದಾರೆ.

ವಿಶೇಷ ಪೋಷಾಕಿನೊಂದಿಗೆ ವಿರಾಟ್ ಕೊಹ್ಲಿ– ಆರ್‌ಸಿಬಿ ಟ್ವಿಟರ್ ಚಿತ್ರ

ನಿಧಿ ಸಂಗ್ರಹ ಟೂರ್ನಿ ರದ್ದು

ಕೊಲಂಬೊ: ಕೋವಿಡ್ ವಿರುದ್ಧದ ಸಮರಕ್ಕೆ ನೆರವಾಗಲು ಹಣ ಸಂಗ್ರಹಿಸುವುದಕ್ಕಾಗಿ ಆಯೋಜಿಸಿದ್ದ ಕ್ರಿಕೆಟ್ ಟೂರ್ನಿ ಕೋವಿಡ್ ನಿಂದಾಗಿಯೇ ರದ್ದಾಗಿದೆ. ಈ ವಿಷಯವನ್ನು ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ತಿಳಿಸಿದೆ.

ಪಲ್ಲೆಕೆಲೆಯಲ್ಲಿ ನಡೆಯುತ್ತಿರುವ ಶ್ರೀಲಂಕಾ ಮತ್ತು ಬಾಂಗ್ಲಾದೇಶ ತಂಡಗಳ ನಡುವಿನ ಎರಡನೇ ಟೆಸ್ಟ್ ಪಂದ್ಯ ಮುಗಿದ ಮರುದಿನ, ಮಂಗಳವಾರ ಪಂದ್ಯ ನಡೆಸಲು ಉದ್ದೇಶಿಸಲಾಗಿತ್ತು. ಶ್ರೀಲಂಕಾ ಗ್ರೇಟ್ಸ್ ಇಲೆವನ್ ಮತ್ತು ಟೀಮ್ ಶ್ರೀಲಂಕಾ ನಡುವೆ ಹಣಾಹಣಿ ನಡೆಯಬೇಕಾಗಿತ್ತು.

ಆದರೆ ಮಾಜಿ ಟೆಸ್ಟ್ ಆಟಗಾರ ಉಪುಲ್ ತರಂಗ ಅವರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಕಾರಣ ಪಂದ್ಯ ರದ್ದುಗೊಂಡಿದೆ. ಶ್ರೀಲಂಕಾ ಗ್ರೇಟ್ಸ್ ಇಲೆವನ್ ತಂಡದಲ್ಲಿ ಸನತ್ ಜಯಸೂರ್ಯ ಮತ್ತು ಅರವಿಂದ ಡಿ ಸಿಲ್ವಾ ಅವರಂಥ ಸ್ಫೋಟಕ ಬ್ಯಾಟ್ಸ್‌ಮನ್‌ಗಳು ಇದ್ದಾರೆ.

ಡಿಡಿಸಿಎ ಕೊಡುಗೆ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಕೊರೊನಾ ಸೋಂಕಿತರ ಚಿಕಿತ್ಸೆಗೆ ನೆರವಾಗಲು ಮುಂದಾಗಿರುವ ಡೆಲ್ಲಿ ಆ್ಯಂಡ್ ಡಿಸ್ಟ್ರಿಕ್ಟ್ ಕ್ರಿಕೆಟ್ ಅಸೋಸಿಯೇಷನ್ (ಡಿಡಿಸಿಎ) ತಲಾ 100 ವೆಂಟಿಲೇಟರ್‌ಗಳು ಮತ್ತು ಆಮ್ಲಜನಕ ಪೂರೈಕೆ ಉಪಕರಣ ಒದಗಿಸುವುದಾಗಿ ತಿಳಿಸಿದೆ.

‘ಡಿಡಿಸಿಎಯ ಅಪೆಕ್ಸ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಉಪಕರಣಗಳನ್ನು ಸರ್ಕಾರದ ಅಧಿಕಾರಿಗಳಿಗೆ ಹಸ್ತಾಂತರಿಸುವರು’ ಎಂದು ಪ್ರಕಟಣೆ ತಿಳಿಸಿದೆ. ಸಂಸ್ಥೆಯ ಸದಸ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಗತ್ಯವಿದ್ದರೆ ಬಳಸಲು 25 ಆಮ್ಲಜನಕ ಪೂರೈಕೆ ಉಪಕರಣಗಳನ್ನು ಒದಗಿಸಲಾಗುವುದು ಎಂದು ಕೂಡ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಜಾವಾಣಿ
ಕ್ಯಾಚ್ ಇಟ್.. ಕ್ರೀಡಾ ಕಥೆಗಳು

ಮನೀಷ್ ಪಾಂಡೆ ಕನ್ನಡ ಪ್ರೀತಿ

ಕ್ರಿಕೆಟಿಗ ಮನೀಷ್ ಪಾಂಡೆ ಹುಟ್ಟಿದ್ದು ನೈನಿತಾಲ್‌ನಲ್ಲಿ. ಮನೆಭಾಷೆ ಹಿಂದಿ. ಶಾಲೆ ಕಲಿತದ್ದು ಇಂಗ್ಲಿಷ್ ಮಾಧ್ಯಮದಲ್ಲಿ. ಕರ್ನಾಟಕದ ಕ್ರಿಕೆಟ್ ಅಂಗಳದಲ್ಲಿ ಕಾಲಿಟ್ಟಿದ್ದೇ ತಡ. ಕ್ರಿಕೆಟ್ ಜೊತೆಗೆ ಕನ್ನಡವನ್ನೂ ಕಲಿತಿದ್ದಾರೆ. ಅಷ್ಟೇ ಅಲ್ಲ. ಕನ್ನಡ ಹಾಡುಗಳೆಂದರೆ ಅಚ್ಚುಮೆಚ್ಚು. ಈ ಕನ್ನಡ ಪ್ರೀತಿ ಅವರಲ್ಲಿ ಬೆಳೆದಿದ್ದು ಹೇಗೆ? ಇಲ್ಲಿದೆ ನೋಡಿ..

QR ಕೋಡ್ ಸ್ಕ್ಯಾನ್ ಮಾಡಿ

ಸಂಕ್ಷಿಪ್ತ ಸುದ್ದಿಗಳು

ಕೆ.ಎಲ್.ರಾಹುಲ್‌ಗೆ ಅಪೆಂಡಿಸೈಟಿಸ್

ಅಹಮದಾಬಾದ್ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡದ ನಾಯಕ ಕೆ.ಎಲ್.ರಾಹುಲ್ ಅವರಿಗೆ ಅಪೆಂಡಿಸೈಟಿಸ್ ಸಮಸ್ಯೆ ಕಾಣಿಸಿಕೊಂಡಿದ್ದು, ಶಸ್ತ್ರ ಚಿಕಿತ್ಸೆಗೆ ಒಳಗಾಗಲಿದ್ದಾರೆ. ಇದರಿಂದಾಗಿ ಕನಿಷ್ಠ ಎರಡು ವಾರ ಟೂರ್ನಿಯಲ್ಲಿ ಆಡಲು ಸಾಧ್ಯವಿಲ್ಲ. ಮಯಂಕ್ ಅಗರವಾಲ್ ಅವರಿಗೆ ತಂಡದ ನಾಯಕತ್ವ ವಹಿಸಲಾಗಿದೆ.

‘ರಾಹುಲ್ ಅವರಿಗೆ ಶನಿವಾರ ರಾತ್ರಿ ತೀವ್ರ ಹೊಟ್ಟೆನೋವು ಕಾಣಿಸಿಕೊಂಡಿತ್ತು. ಔಷಧಿಗಳಿಗೆ ಸ್ಪಂದಿಸದ ಕಾರಣ ಅವರನ್ನು ಹೆಚ್ಚಿನ ಪರೀಕ್ಷೆಗೆ ಒಳಪಡಿಸಲಾಯಿತು. ಈ ವೇಳೆ ಅಪೆಂಡಿಸೈಟಿಸ್ ಸಮಸ್ಯೆ ಇರುವುದು ಗೊತ್ತಾಗಿದೆ. ಇದನ್ನು ಶಸ್ತ್ರಚಿಕಿತ್ಸೆ ಮೂಲಕ ಗುಣಪಡಿಸಬಹುದು. ಸುರಕ್ಷತೆಯ ದೃಷ್ಟಿಯಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ‘ ಎಂದು ತಂಡದ ಪ್ರಕಟಣೆ ತಿಳಿಸಿದೆ.

ಡೆಲ್ಲಿ ತಂಡದ ಪ್ರತಿಭಾ ಶೋಧಕ್ಕೆ ಕರೀಂ

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ವಿಕೆಟ್ ಕೀಪರ್ ಹಾಗೂ ರಾಷ್ಟ್ರೀಯ ಆಯ್ಕೆ ಸಮಿತಿ ಸದಸ್ಯ ಸಾಬಾ ಕರೀಂ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಪ್ರತಿಭಾ ಶೋಧದ ಮುಖ್ಯಸ್ಥರಾಗಿ ಭಾನು ವಾರ ನೇಮಕಗೊಂಡಿದ್ದಾರೆ.

ಕರೀಂ ಅವರು ಜನವರಿಯವರೆಗೆ ಬಿಸಿಸಿಐನ ಮುಖ್ಯ ವ್ಯವಸ್ಥಾಪಕ (ಕ್ರಿಕೆಟ್ ಕಾರ್ಯಚಟುವಟಿಕೆಗಳು) ಆಗಿದ್ದರು.

ಹಾರ್ಸ್ ರೈಡರ್ ಗುಲಾಂ ಮೊಹಮ್ಮದ್ ಖಾನ್ ನಿಧನ

ಜೈಪುರ (ಪಿಟಿಐ): 1982ರ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಹಾರ್ಸ್ ರೈಡರ್ ಕರ್ನಲ್ (ನಿವೃತ್ತ) ಗುಲಾಂ ಮೊಹಮ್ಮದ್ ಖಾನ್ (74) ಶನಿವಾರ ಪುಣೆಯಲ್ಲಿ ನಿಧನರಾದರು.

ಗುಲಾಂ ಅವರು 1973ರಲ್ಲಿ ಭಾರ ತೀಯ ಸೇನಾ ಅಕಾಡೆಮಿ ಸೇರಿದ್ದರು. ಒಂದು ವರ್ಷದ ಬಳಿಕ ಅತ್ಯುತ್ತಮ ರೈಡರ್ ಎಂಬ ಶ್ರೇಯ ಪಡೆದರು. 1980–90ರ ಅವಧಿಯಲ್ಲಿ ಅವರು ನಾಯಕತ್ವ ವಹಿಸಿದ್ದ ಎಎಸ್‌ಸಿ ತಂಡ ಆರು ಬಾರಿ ರಾಷ್ಟ್ರೀಯ ಪ್ರಶಸ್ತಿ ಜಯಿಸಿತ್ತು. ಇವೆಂಟಿಂಗ್ ವೈಯಕ್ತಿಕ ವಿಭಾಗದಲ್ಲಿ ಗುಲಾಂ ನಾಲ್ಕು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದರು.

ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲಿ ಗುಲಾಂ ಇದ್ದರು.

ಕೋವಿಡ್‌ನಿಂದ ಕಿಶನ್ ರುಂಗ್ಟಾ ಸಾವು

ನವದೆಹಲಿ (ಪಿಟಿಐ): ಕ್ರಿಕೆಟ್ ಆಡಳಿತಗಾರ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಆಯ್ಕೆ ಸಮಿತಿ ಮಾಜಿ ಸದಸ್ಯ ಕಿಶನ್ ರುಂಗ್ಟಾ (88) ಕೋವಿಡ್ ನಿಂದಾಗಿ ಜೈಪುರದ ಆಸ್ಪತ್ರೆಯೊಂದರಲ್ಲಿ ಶನಿವಾರ ರಾತ್ರಿ ನಿಧನರಾದರು.

ರಾಜಸ್ಥಾನ ಕ್ರಿಕೆಟ್ ತಂಡದ ನಾಯಕರೂ ಆಗಿದ್ದ ರುಂಗ್ಟಾ ಅವರಿಗೆ ಕಳೆದ ವಾರ ಸೋಂಕು ದೃಢಪಟ್ಟಿತ್ತು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಅವರು 59 ಪ್ರಥಮ ದರ್ಜೆ ಪಂದ್ಯಗಳನ್ನಾಡಿದ್ದು 2,717 ರನ್ ಗಳಿಸಿದ್ದಾರೆ.

ನಾಯಕತ್ವ ಬದಲಾದರೂ ಉದಯಿಸದ ಸನ್‌ರೈಸರ್ಸ್ ಹೈದರಾಬಾದ್

ಬಟ್ಲರ್ ಶತಕದ ರಂಗು; ರಾಯಲ್ಸ್ ವಿಜಯ

ನವದೆಹಲಿ(ಪಿಟಿಐ): ಅಬ್ಬರದ ಶತಕ ಬಾರಿಸಿದ ಜೋಸ್ ಬಟ್ಲರ್ ಆಟದ ಬಲದಿಂದ ರಾಜಸ್ಥಾನ್ ರಾಯಲ್ಸ್ ತಂಡವು ಐಪಿಎಲ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ರಾಜಸ್ಥಾನ್ ತಂಡವು 55 ರನ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಗೆದ್ದಿತು. ಕೇನ್ ವಿಲಿಯಮ್ಸನ್ ನಾಯಕತ್ವ ವಹಿಸಿದ ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಗೆಲುವಿನ ಹಾದಿಗೆ ಮರಳುವಲ್ಲಿ ವಿಫಲವಾಯಿತು.

ಟಾಸ್ ಗೆದ್ದ ಕೇನ್ ವಿಲಿಯಮ್ಸನ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮೂರನೇ ಓವರ್‌ನಲ್ಲಿಯೇ ರಶೀದ್ ಖಾನ್ ಎಸೆತದಲ್ಲಿ ಯಶಸ್ವಿ ಜೈಸ್ವಾಲ್ ಔಟಾದರು. ಆದರೆ, 64 ಎಸೆತಗಳಲ್ಲಿ 124 ಗಳಿಸಿದ ಬಟ್ಲರ್ ಮತ್ತು ನಾಯಕ ಸಂಜು ಸ್ಯಾಮ್ಸನ್ (48; 33ಎ) ಜೊತೆಗೂಡಿ 150 ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 220 ರನ್ ಗಳಿಸಿತು. ಅದಕ್ಕುತ್ತರವಾಗಿ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 165 ರನ್ ಗಳಿಸಲು ಮಾತ್ರ ಶಕ್ತವಾಯಿತು.

ಇಂಗ್ಲೆಂಡ್‌ನ ಬಟ್ಲರ್ ಐದನೇ ಓವರ್‌ನಲ್ಲಿ ತಮಗೆ ಸಿಕ್ಕ ಜೀವದಾನವನ್ನು ಸಮರ್ಥವಾಗಿ ಬಳಸಿಕೊಂಡರು. ಬೌಲರ್‌ಗಳ ಬೆವರಿಳಿಯುವಂತೆ ಆಡಿದರು. ಯಾವುದೇ ಎಸೆತಗಳಿಗೂ ಜಗ್ಗಲಿಲ್ಲ. 11 ಬೌಂಡರಿ ಮತ್ತು ಎಂಟು ಸಿಕ್ಸರ್ ಬಾರಿಸಿದರು.

56 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ಅದರಲ್ಲಿ ಹತ್ತು ಬೌಂಡರಿ ಮತ್ತು ಐದು ಸಿಕ್ಸರ್‌ಗಳಿದ್ದವು. ಈ ಸಲದ ಟೂರ್ನಿಯಲ್ಲಿ ಶತಕ ಬಾರಿಸಿದ ಮೂರನೇ ಮತ್ತು ರಾಜಸ್ಥಾನ್ ತಂಡದ ಎರಡನೇ ಆಟಗಾರನಾದರು.ಈ ಆವೃತ್ತಿಯಲ್ಲಿ ಮೊದಲ ಶತಕ ಬಾರಿಸಿದ್ದ ಸಂಜು ಈ ಪಂದ್ಯದಲ್ಲಿ ಎರಡು ರನ್‌ಗಳ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು.

ದೊಡ್ಡ ಮೊತ್ತವನ್ನು ಬೆನ್ನಟ್ಟಿದ ಸನ್‌ರೈಸರ್ಸ್ ತಂಡಕ್ಕೆ ಮುಸ್ತಫಿಜುರ್ ರೆಹಮಾನ್ ಮತ್ತು ಕ್ರಿಸ್ ಮೊರಿಸ್ ಕಾಡಿದರು. ಇಬ್ಬರು ತಲಾ ಮೂರು ವಿಕೆಟ್ ಗಳಿಸಿ ಕಡಿವಾಣ ಹಾಕಿದರು. ಸನ್‌ರೈಸರ್ಸ್ ತಂಡದ ಇನಿಂಗ್ಸ್ ಆರಂಭಿಸಿದ ಕನ್ನಡಿಗ ಮನೀಷ್ ಪಾಂಡೆ (31; 20ಎ) ಮತ್ತು ಜಾನಿ ಬೆಸ್ಟೊ (30; 21ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 57 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಆದರೆ, ಉಳಿದ ಬ್ಯಾಟ್ಸ್‌ಮನ್‌ಗಳಿಂದ ದೊಡ್ಡ ಮೊತ್ತದ ಕಾಣಿಕೆ ಬರಲಿಲ್ಲ.

ವಾರ್ನರ್ ಡ್ರಿಂಕ್ಸ್: ಹೋದ ಪಂದ್ಯದವರೆಗೂ ಸನ್‌ರೈಸರ್ಸ್ ತಂಡದ ನಾಯಕತ್ವ ವಹಿಸಿದ್ದ ಡೇವಿಡ್ ವಾರ್ನರ್ ಭಾನುವಾರದ ಪಂದ್ಯದಲ್ಲಿ 12ನೇ ಆಟಗಾರನಾದರು. ಅವರು ಟೈಮ್ ಔಟ್‌ನಲ್ಲಿ ಆಟಗಾರರಿಗೆ ತಂಪು ಪಾನೀಯ ಕೊಡುವ ಕಾರ್ಯ ಮಾಡಿದರು.

ಶತಕ ಬಾರಿಸಿದ ಜೋಸ್ ಬಟ್ಲರ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ್ ರಾಯಲ್ಸ್ 3ಕ್ಕೆ 220 (20 ಓವರ್‌ಗಳಲ್ಲಿ)
ಬಟ್ಲರ್ ಬಿ ಸಂದೀಪ್ 124 (64ಎ, 4X11, 6X8), ಯಶಸ್ವಿ ಎಲ್‌ಬಿಡಬ್ಲ್ಯು ಬಿ ರಶೀದ್ 12 (13ಎ, 4X2), ಸ್ಯಾಮ್ಸನ್ ಸಿ ಸಮದ್ ಬಿ ವಿಜಯ್ 48 (33ಎ, 4X4, 6X2), ಪರಾಗ್ ಔಟಾಗದೆ 15 (8ಎ, 6X1), ಮಿಲ್ಲರ್ ಔಟಾಗದೆ 7 (3ಎ, 6X1)
ಇತರೆ (ಲೆಗ್‌ಬೈ 5, ನೋಬಾಲ್ 1, ವೈಡ್ 8) 14
ವಿಕೆಟ್ ಪತನ: 1–17 (ಯಶಸ್ವಿ ಜೈಸ್ವಾಲ್, 2.6), 2–167 (ಸಂಜು ಸ್ಯಾಮ್ಸನ್, 16.4), 3–209 (ಜೋಸ್ ಬಟ್ಲರ್, 18.6)
ಬೌಲಿಂಗ್: ಭುವನೇಶ್ವರ ಕುಮಾರ್ 4–0–37–0, ಸಂದೀಪ್ ಶರ್ಮಾ 4–0–50–1, ರಶೀದ್ ಖಾನ್ 4–0–24–1, ಖಲೀಲ್ ಅಹಮದ್ 4–0–41–0, ವಿಜಯ್ ಶಂಕರ್ 3–0–42–1, ಮೊಹಮ್ಮದ್ ನಬಿ 1–0–21–0

ಸನ್‌ರೈಸರ್ಸ್ ಹೈದರಾಬಾದ್ 8ಕ್ಕೆ 165 (20 ಓವರ್‌ಗಳಲ್ಲಿ)
ಮನೀಷ್ ಬಿ ಮುಸ್ತಫಿಜುರ್ 31 (20ಎ, 4X3, 6X2), ಬೆಸ್ಟೊ ಸಿ ಅನುಜ್ ಬಿ ತೆವಾಟಿಯಾ 30 (21ಎ, 4X4, 6X1), ವಿಲಿಯಮ್ಸನ್ ಸಿ ಮೊರಿಸ್ ಬಿ ತ್ಯಾಗಿ 20 (21ಎ, 4X1), ವಿಜಯ್ ಸಿ ಮಿಲ್ಲರ್ ಬಿ ಮೊರಿಸ್ 8 (8ಎ, 4X1), ಕೇದಾರ್ ಬಿ ಮೊರಿಸ್ 19 (19ಎ, 6X1), ನಬಿ ಸಿ ಅನುಜ್ ಬಿ ಮುಸ್ತಫಿಜುರ್ 17 (5ಎ, 4X1, 6X2), ಸಮದ್ ಸಿ ಅನುಜ್ ಬಿ ಮೊರಿಸ್ 10 (8ಎ, 6X1), ರಶೀದ್ ಸಿ ಮೊರಿಸ್ ಬಿ ಮುಸ್ತಫಿಜುರ್ 0 (2ಎ), ಭುವನೇಶ್ವರ ಔಟಾಗದೆ 14 (10ಎ, 4X2), ಸಂದೀಪ್ ಔಟಾಗದೆ 8 (6ಎ, 4X1).
ಇತರೆ (ಲೆಗ್‌ಬೈ 1, ವೈಡ್ 7) 8
ವಿಕೆಟ್ ಪತನ: 1–57 (ಮನೀಷ್ ಪಾಂಡೆ, 6.1), 2–70 (ಜಾನಿ ಬೆಸ್ಟೊ, 7.6), 3–85 (ವಿಜಯ್ ಶಂಕರ್, 10.4), 4–105 (ಕೇನ್ ವಿಲಿಯಮ್ಸನ್, 12.5), 5–127(ಮೊಹಮ್ಮದ್ ನಬಿ, 14.2), 6–142 (ಅಬ್ದುಲ್ ಸಮದ್, 16.3), 7–142 (ಕೇದಾರ್ ಜಾಧವ್, 16.6), 8–143 (ರಶೀದ್ ಖಾನ್, 17.2)
ಬೌಲಿಂಗ್: ಕಾರ್ತಿಕ್ ತ್ಯಾಗಿ 4–0–32–1, ಮುಸ್ತಫಿಜುರ್ ರೆಹಮಾನ್ 4–0–20–3, ಚೇತನ್ ಸಕಾರಿಯಾ 4–0–38–0, ಕ್ರಿಸ್ ಮೊರಿಸ್ 4–0–29–3, ರಾಹುಲ್ ತೆವಾಟಿಯಾ 4–0–45–1

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 55 ರನ್‌ಗಳ ಜಯ

ಮಯಂಕ್ ಆಟ ವ್ಯರ್ಥ; ಡೆಲ್ಲಿ ಜಯಭೇರಿ

ಅಹಮದಾಬಾದ್: ಗೆಳೆಯ ಕೆ.ಎಲ್. ರಾಹುಲ್ ಅವರಿಂದ ನಾಯಕತ್ವದ ಹೊಣೆ ಹೊತ್ತುಕೊಂಡ ಮಯಂಕ್ ಅಗರವಾಲ್ ಬ್ಯಾಟಿಂಗ್‌ನಲ್ಲಿ ಮಿಂಚಿದರು. ಆದರೆ ಅವರ ಭರ್ಜರಿ ಆಟ ವ್ಯರ್ಥವಾಯಿತು; ಡೆಲ್ಲಿ ಕ್ಯಾಪಿಟಲ್ಸ್ ಸುಲಭ ಜಯ ಗಳಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಐಪಿಎಲ್ ಪಂದ್ಯದಲ್ಲಿ ಕೇವಲ ಒಂದು ರನ್ ಅಂತರದಿಂದ ಶತಕ ತಪ್ಪಿಸಿಕೊಂಡ ಮಯಂಕ್ (ಔಟಾಗದೆ 99; 58ಎಸೆತ, 8ಬೌಂಡರಿ, 4 ಸಿಕ್ಸರ್) ಏಕಾಂಗಿ ಹೋರಾಟ ಮಾಡಿದರು. ಅದರಿಂದಾಗಿ ಪಂಜಾಬ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ ಆರು ವಿಕೆಟ್‌ಗಳಿಗೆ 166 ರನ್ ಗಳಿಸಿತು.

ಗುರಿ ಬೆನ್ನತ್ತಿದ ಡೆಲ್ಲಿ ತಂಡ 17.4 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಜಯದ ದಡ ಸೇರಿತು.

ಮಯಂಕ್ ಅಗರವಾಲ್ ಬ್ಯಾಟಿಂಗ್ ವೈಭವ –ಪಿಟಿಐ ಚಿತ್ರ

ಪೃಥ್ವಿ ಶಾ ಮತ್ತು ಶಿಖರ್ ಧವನ್ (ಔಟಾಗದೆ 69; 47 ಎ, 6 ಬೌಂ, 2 ಸಿ) ಮೊದಲ ವಿಕೆಟ್‌ಗೆ 63 ರನ್ ಸೇರಿಸಿದರು. ಶಾ ಔಟಾದ ನಂತರ ಸ್ಟೀವನ್ ಸ್ಮಿತ್, ರಿಷಭ್ ಪಂತ್ ಮತ್ತು ಶಿಮ್ರಾನ್ ಹೆಟ್ಮೆಯರ್ ಅವರು ಶಿಖರ್‌ಗೆ ಉತ್ತಮ ಸಹಕಾರ ನೀಡಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್: 20 ಓವರ್‌ಗಳಲ್ಲಿ 6ಕ್ಕೆ 166 (ಮಯಂಕ್ ಅಗರವಾಲ್ ಔಟಾಗದೆ 99, ಕ್ರಿಸ್ ಗೇಲ್ 13, ಡೇವಿಡ್ ಮಲಾನ್ 26; ಕಗಿಸೊ ರಬಾಡ 36ಕ್ಕೆ3, ಆವೇಶ್ ಖಾನ್ 39ಕ್ಕೆ1, ಅಕ್ಷರ್ ಪಟೇಲ್ 21ಕ್ಕೆ1); **ಡೆಲ್ಲಿ ಕ್ಯಾಪಿಟಲ್ಸ್:** 17.4 ಓವರ್‌ಗಳಲ್ಲಿ 167 (ಪೃಥ್ವಿ ಶಾ 39, ಶಿಖರ್ ಧವನ್ ಔಟಾಗದೆ 69, ಸ್ಟೀವನ್ ಸ್ಮಿತ್ 24, ರಿಷಭ್ ಪಂತ್ 14, ಶಿಮ್ರಾನ್ ಹೆಟ್ಮೆಯರ್ ಔಟಾಗದೆ 16; ಹರ ಪ್ರೀತ್ ಬ್ರಾರ್ 19ಕ್ಕೆ1). **ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್‌ಗೆ 7 ವಿಕೆಟ್‌ಗಳ ಜಯ.